ಶುಕ್ರವಾರ, ಜೂನ್ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 163 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಲಿಂಗತ್ವ ಅಸಮಾನತೆ ಸೂಚ್ಯಂಕದಲ್ಲಿ ಕುಸಿತ



ಆಳ–ಅಗಲ ವಿಮಾನ ಅಪಘಾತ ಹೇಗಾಗುತ್ತವೆ?

ಹಣದುಬ್ಬರ 6 ವರ್ಷದ ಕನಿಷ್ಠ 10

ಕಾಲ್ತುಳಿತ ಘಟನೆ: ಹೈಕೋರ್ಟ್‌ಗೆ ವರದಿ ಸಲ್ಲಿಕೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,691	24,888	₹1.02 ಲಕ್ಷ (ಬೆಂಗಳೂರು)	₹1.12 ಲಕ್ಷ (ಬೆಂಗಳೂರು)	85.52



ವಿಮಾನ ದುರಂತ: ಕನಿಷ್ಠ 265 ಸಾವು

ದೇಶದ ಇತಿಹಾಸದಲ್ಲೇ ಅತಿದೊಡ್ಡ ವಿಮಾನ ಅವಘಡಗಳಲ್ಲೊಂದು: ಟೇಕಾಫ್ ಆದ 25 ಸೆಕೆಂಡುಗಳಲ್ಲಿ ಪತನ • ಅಹಮದಾಬಾದ್‌ನಲ್ಲಿ ಅಪಘಾತ • ಲಂಡನ್‌ಗೆ ಹೊರಟಿದ್ದ ವಿಮಾನ • ಸುಮಾರು 800 ಅಡಿ ಎತ್ತರಕ್ಕೇರಿದ್ದ ವಿಮಾನ • ವಿಮಾನ ಅಪ್ಪಳಿಸಿದ ಕಟ್ಟಡದಲ್ಲಿದ್ದ ಹಲವರು ಬಲಿ • ಮೃತರಲ್ಲಿ ಗುಜರಾತ್‌ನ ಮಾಜಿ ಸಿ.ಎಂ ವಿಜಯ್ ರೂಪಾನಿ • ಅವಘಡ ನಡೆದ ಸ್ಥಳಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ

ಪ್ರಜಾವಾಣಿ ವಾರ್ತೆ/ ಪಿಟಿಐ/ ರಾಯಿಟರ್ಸ್/ ಎಎಫ್‌ಪಿ

ಅಹಮದಾಬಾದ್: ಅಹಮದಾಬಾದ್‌ನಿಂದ ಲಂಡನ್‌ಗೆ ಹೊರಟಿದ್ದ ಏರ್ ಇಂಡಿಯಾ ವಿಮಾನವು ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಪತನಗೊಂಡು, ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಸೇರಿದಂತೆ ಕನಿಷ್ಠ 265 ಮಂದಿ ಮೃತಪಟ್ಟಿದ್ದಾರೆ.

ವಿಶ್ವದಲ್ಲಿ ಸಂಭವಿಸಿದ ಅತಿದೊಡ್ಡ ವಿಮಾನ ದುರಂತಗಳ ಸಾಲಿಗೆ ಸೇರ್ಪಡೆಯಾದ ಈ ಅವಘಡವು ಗುರುವಾರ ಮಧ್ಯಾಹ್ನ 1.39ರ ಸುಮಾರಿಗೆ ಸಂಭವಿಸಿದೆ. ದೇಶದ ಇತಿಹಾಸದಲ್ಲಿ ಅತ್ಯಂತ ಭೀಕರ ವಿಮಾನ ದುರಂತಗಳಲ್ಲಿ ಇದೂ ಒಂದು.

ಪ್ರಯಾಣಿಕರು ಮತ್ತು ಸಿಬ್ಬಂದಿ ಸೇರಿ 242 ಮಂದಿಯನ್ನು ಹೊತ್ತ ವಿಮಾನವು ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿದ ಕೆಲವೇ ಸೆಕೆಂಡುಗಳಲ್ಲಿ ಇಲ್ಲಿನ ಬಿ.ಜೆ. ವೈದ್ಯಕೀಯ ಕಾಲೇಜು ಸಂಕೀರ್ಣಕ್ಕೆ ಅಪ್ಪಳಿಸಿದೆ.

'ರಕ್ಷಣಾ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ಅವಶೇಷಗಳಡಿಯಿಂದ ತಡರಾತ್ರಿ ವರೆಗೆ 265 ಮೃತದೇಹಗಳನ್ನು ಹೊರತೆಗೆದಿದ್ದಾರೆ. ಮೃತರಲ್ಲಿ ವಿಮಾನ ಬಿದ್ದ ಕಟ್ಟಡದಲ್ಲಿದ್ದವರೂ ಸೇರಿದ್ದಾರೆ' ಎಂದು ಅಹಮದಾಬಾದ್ ನಗರ ಪೊಲೀಸ್ ಕಮಿಷನರ್ ಹೇಳಿದ್ದಾರೆ.

'ವಿಮಾನದ 11ಎ ಸೀಟಿನಲ್ಲಿದ್ದ ವ್ಯಕ್ತಿ ಬದುಕುಳಿದಿರುವುದನ್ನು ಪೊಲೀಸರು ದೃಢಪಡಿಸಿದ್ದಾರೆ. ಇನ್ನೂ ಹೆಚ್ಚಿನ ಮಂದಿ ಬದುಕುಳಿದಿರುವ ಸಾಧ್ಯತೆಯಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ವಿಧಿ ಚೌಧರಿ ಮಾಹಿತಿ ನೀಡಿದ್ದಾರೆ.

ಬದುಕುಳಿದ ಪ್ರಯಾಣಿಕನನ್ನು ವಿಶ್ವಾಸ್ ಕುಮಾರ್ ರಮೇಶ್ ಎಂದು ಗುರುತಿಸಲಾಗಿದೆ. ಮೃತರ ಮತ್ತು ಬದುಕುಳಿದವರ ನಿಖರ ಮಾಹಿತಿ ತಿಳಿದುಬಂದಿಲ್ಲ.

ಬೋಯಿಂಗ್ ಕಂಪನಿಯ ವಿಮಾನ (787-8 ಡ್ರೀಮ್‌ಲೈನರ್) ಪೂರ್ಣವಾಗಿ ಮೇಲಕ್ಕೇರಲು ವಿಫಲವಾಗಿ ನೆಲಕ್ಕೆ ಅಪ್ಪಳಿಸಿ ಬೆಂಕಿಯ ಉಂಡೆಯಾಗಿ ಸಿಡಿಯಿತು. ದಟ್ಟ ಹೊಗೆ ಎದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಉದ್ಯೋಗ, ಕುಟುಂಬ ಸದಸ್ಯರನ್ನು ಸೇರಿಕೊಳ್ಳಲು ಮತ್ತು ಪ್ರವಾಸ ಸೇರಿದಂತೆ ವಿವಿಧ ಉದ್ದೇಶದಿಂದ ವಿಮಾನವೇರಿದವರ ಕನಸುಗಳು ಕ್ಷಣಾರ್ಧದಲ್ಲಿ ಬೆಂಕಿಯ ಜ್ವಾಲೆಯಲ್ಲಿ ಕರಟಿ ಹೋದವು.

ವಿಮಾನ ನಿಲ್ದಾಣದ ಸಮೀಪದ ಮೇಘಾನಿ ನಗರದಲ್ಲಿನ ಬಿ.ಜೆ ವೈದ್ಯಕೀಯ ಕಾಲೇಜಿನ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ದಾದಿಯರ ವಸತಿ ನಿಲಯ ಸಮುಚ್ಚಯದ ಮೇಲೆ ವಿಮಾನ ಬಿದ್ದಿದೆ. ಅಲ್ಲಿನ ಕಟ್ಟಡದಲ್ಲಿದ್ದ ಹಲವರು ವೈದ್ಯಕೀಯ ವಿದ್ಯಾರ್ಥಿಗಳು ಮೃತಪಟ್ಟಿರುವುದಾಗಿ ವರದಿಯಾಗಿದೆ.

9ನೇ ಪುಟ ನೋಡಿ

ವಿಶೇಷ ಪುಟಗಳು 7, 8 ಮತ್ತು 9

ಅಹಮದಾಬಾದ್‌ನಲ್ಲಿ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಪತನಗೊಂಡು ಕಟ್ಟಡಕ್ಕೆ ಅಪ್ಪಳಿಸಿದ ಏರ್ ಇಂಡಿಯಾ ವಿಮಾನದ ಅವಶೇಷ –ಪಿಟಿಐ ಚಿತ್ರ

ಗುರುವಾರ ಮಧ್ಯಾಹ್ನ 1.39 ಟೇಕಾಫ್ ಸಮಯ

ಎಷ್ಟು ಮಂದಿಯಿದ್ದರು?

- 230 ಪ್ರಯಾಣಿಕರು
- 10 ಸಿಬ್ಬಂದಿ
- 2 ಪೈಲಟ್/ ಸಹ ಪೈಲಟ್
- 11 ವಿಮಾನದಲ್ಲಿದ್ದ ಮಕ್ಕಳು

ಯಾವ ದೇಶದವರು?

- 169 ಭಾರತ
- 53 ಬ್ರಿಟನ್
- 7 ಪೋರ್ಚುಗಲ್
- 1 ಕೆನಡಾ

ಟಾಟಾ ಸಮೂಹದಿಂದ ₹1 ಕೋಟಿ ಪರಿಹಾರ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ ಪ್ರತಿ ವ್ಯಕ್ತಿಯ ಕುಟುಂಬಕ್ಕೆ ಟಾಟಾ ಸಮೂಹವು ₹1 ಕೋಟಿ ಪರಿಹಾರ ನೀಡಲಿದೆ.

'ಈ ಹೊತ್ತಿನಲ್ಲಿ ನಮಗೆ ಆಗಿರುವ ಶೋಕವನ್ನು ಸರಿಯಾಗಿ ವಿವರಿಸಲು ಯಾವ ಪದವೂ ಸಿಗುತ್ತಿಲ್ಲ. ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳ ಕ್ಷೇಮಕ್ಕಾಗಿ, ಗಾಯಗೊಂಡವರ ಕ್ಷೇಮಕ್ಕಾಗಿ ನಾವು ಪ್ರಾರ್ಥಿಸುತ್ತೇವೆ' ಎಂದು ಟಾಟಾ ಸಮೂಹ ಹಾಗೂ ಏರ್ ಇಂಡಿಯಾ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ದುರಂತದಲ್ಲಿ ಗಾಯಗೊಂಡವರ ವೈದ್ಯಕೀಯ ವೆಚ್ಚಗಳನ್ನು ಕೂಡ ಟಾಟಾ ಸಮೂಹವು ಭರಿಸಲಿದೆ, ಅವರು ಎಲ್ಲ ಅಗತ್ಯ ನೆರವು ಪಡೆಯುವುದನ್ನು ಖಾತರಿಪಡಿಸಲಿದೆ ಎಂದು ಅವರು ಹೇಳಿದ್ದಾರೆ.

ಬಿ.ಜೆ. ಮೆಡಿಕಲ್ಸ್‌ನ ವಿದ್ಯಾರ್ಥಿ ನಿಲಯದ ನಿರ್ಮಾಣಕ್ಕೆ ನೆರವು ಒದಗಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಏರ್ ಇಂಡಿಯಾ ಟಾಟಾ ಸಮೂಹಕ್ಕೆ ಸೇರಿದೆ.

- ವಿಮಾನವು ಟೇಕಾಫ್ ಆದ ಕೆಲವೇ ಸೆಕೆಂಡುಗಳಲ್ಲಿ, 625 ಅಡಿ ಎತ್ತರದಲ್ಲಿದ್ದಾಗ ತುರ್ತುಸ್ಥಿತಿಯ ಸಂದೇಶ ರವಾನೆಯಾಯಿತು ಎಂದು 'ಫ್ಲೈಟ್‌ರೇಡಾರ್24' ತಿಳಿಸಿತು
- ಮತ್ತಷ್ಟು ಮೇಲೇರಲು ಸಾಧ್ಯವಾಗದೆ ವಿಮಾನವು ಭೂಮಿಯತ್ತ ಕುಸಿಯಲಾರಂಭಿಸಿತು
- ಅಹಮದಾಬಾದ್ ಸಿವಿಲ್ ಆಸ್ಪತ್ರೆ ಕಟ್ಟಡಕ್ಕೆ ಅಪ್ಪಳಿಸಿದ ತಕ್ಷಣವೇ ಬೆಂಕಿಯ ದೊಡ್ಡ ಉಂಡೆ ಮೂಡಿತು, ದಟ್ಟ ಹೊಗೆ ಆವರಿಸಿತು
- ವಿಮಾನದಲ್ಲಿ 1.25 ಲಕ್ಷ ಲೀಟರ್ ಇಂಧನ ತುಂಬಿಸಿಕೊಳ್ಳಲಾಗಿತ್ತು

ಅಹಮದಾಬಾದ್ ವಿಮಾನ ದುರಂತ ನನ್ನನ್ನು ದಿಗ್ಭ್ರಾಂತನನ್ನಾಗಿಸಿದೆ. ಇದು ಪದಗಳಲ್ಲಿ ಹೇಳಲಾಗದ, ಹೃದಯವಿದ್ರಾವಕ ಘಟನೆ. ಗಾಸಿಗೊಂಡವರಿಗಾಗಿ ಈ ನೋವಿನ ಸಮಯದಲ್ಲಿ ಪ್ರಾರ್ಥಿಸುವೆ. ಅವರ ಕುಟುಂಬ ಸದಸ್ಯರ ಜತೆಗೆ ನಾನಿದ್ದೇನೆ
ನರೇಂದ್ರ ಮೋದಿ, ಪ್ರಧಾನಿ

ಏರ್ ಇಂಡಿಯಾ ವಿಮಾನ ದುರಂತ ಹೃದಯವಿದ್ರಾವಕವಾಗಿದೆ. ಪ್ರಯಾಣಿಕರು ಮತ್ತು ವಿಮಾನದ ಸಿಬ್ಬಂದಿಯ ಕುಟುಂಬಗಳ ನೋವು ಊಹಿಸಲಾಗದು. ಸಂಕಷ್ಟದ ಸಮಯದಲ್ಲಿ ಅವರೆಲ್ಲರಿಗೂ ದುಃಖ ಭರಿಸುವ ಶಕ್ತಿ ದೊರಕಲಿ
ರಾಹುಲ್ ಗಾಂಧಿ,
ಲೋಕಸಭೆ ವಿರೋಧ ಪಕ್ಷದ ನಾಯಕ

ರಾಜ್ಯದ ವಿವಿಧೆಡೆ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಮಂಗಳೂರು: ರಾಜ್ಯದ ಹಲವು ಭಾಗಗಳಲ್ಲಿ ಬುಧವಾರ ರಾತ್ರಿ ಮತ್ತು ಗುರುವಾರ ಭಾರಿ ಮಳೆಯಾಗಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಕಳೆದ 24 ಗಂಟೆಗಳಲ್ಲಿ ಕಾರವಾರದಲ್ಲಿ ರಾಜ್ಯದಲ್ಲೇ ಗರಿಷ್ಠ 26 ಸೆಂ.ಮೀ ಮಳೆ ಸುರಿದಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಳೆ ಸಂಬಂಧಿತ ಅವಘಡಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಯುವಕ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ. ಹುಬ್ಬಳ್ಳಿಯಲ್ಲಿ ಒಬ್ಬರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹಂಚಿನಾಳ-ದೇವನೂರ ಮಧ್ಯದ ಹಳ್ಳದಲ್ಲಿ ಟ್ರ್ಯಾಕ್ಟರ್ ಪಲ್ಟಿಯಾಗಿ ಶಿವಯ್ಯ ವಾಟ್ನಾಳಮಠ (29) ಸಾವಿಗೀಡಾಗಿದ್ದರೆ, ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಚಿಕ್ಕನಂದಿ ಗ್ರಾಮದಲ್ಲಿ ಮನೆ ಕುಸಿದುಬಿದ್ದು ಫಕ್ಕೀರವ್ವ ಲಕ್ಷ್ಮಣ ಹಾವೇರಿ (65) ಎಂಬವರು ಮೃತಪಟ್ಟಿದ್ದಾರೆ.

ಹುಬ್ಬಳ್ಳಿಯ ಗಣೇಶನಗರದಲ್ಲಿ ಕಸಬಾಪೇಟೆಯ ಬಿರಬಂದ್ ಕಾಲೊನಿ ನಿವಾಸಿ ಮೊಹಮ್ಮದ್ ಹುಸೇನಸಾಬ್ ಕಳಸ (54) ಎಂಬವರು ನೀರಿನಲ್ಲಿ ಕೊಚ್ಚಿ ಹೋಗಿದ್ದು, ಅವರ ಪತ್ತೆಗೆ ಶೋಧ ಮುಂದುವರೆದಿದೆ.

ಹುಬ್ಬಳ್ಳಿ, ಧಾರವಾಡ, ಗದಗ, ಬಾಗಲಕೋಟೆ, ವಿಜಯನಗರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ ಭಾರಿ ಮಳೆಯಾಗಿದೆ. ಹಲವೆಡೆ ಜನಜೀವನ ಅಸ್ತವ್ಯಸ್ತವಾಗಿದೆ.

ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಸುಮಾರು ಎರಡು ಗಂಟೆ ಕಾಲ ಸುರಿದ ಮಳೆಯಿಂದಾಗಿ ಗಂವ್ಹಾರ ಗ್ರಾಮದ ಹಲವು ಮನೆಗಳು ಜಲಾವೃತಗೊಂಡಿವೆ. ಮಳೆ ನೀರು ಮನೆಯೊಳಗೆ ನುಗ್ಗಿದ್ದರಿಂದ ದಿನಬಳಕೆ ವಸ್ತು, ವಿದ್ಯುತ್ ಉಪಕರಣಗಳು ಹಾಳಾಗಿವೆ. ಗಂವ್ಹಾರದಿಂದ ಮಾರಡಗಿ ಗ್ರಾಮಕ್ಕೆ ತೆರಳುವ ರಸ್ತೆ ಮೇಲೆ ನೀರು ನಿಂತ ಪರಿಣಾಮ ಮೂರು ಗಂಟೆಗೂ ಅಧಿಕ ಕಾಲ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಕೊಡಗು ಜಿಲ್ಲೆಯ ಹಲವೆಡೆ ನಿರಂತರವಾಗಿ ಜಿಟಿಜಿಟಿ ಮಳೆ ಸುರಿಯಿತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮತ್ತೊಮ್ಮೆ ಜಾತಿವಾರು ಸಮೀಕ್ಷೆಗೆ ನಿರ್ಧಾರ

ಬೆಂಗಳೂರು: ಎರಡು ವರ್ಷಗಳಿಂದ ರಾಜಕೀಯ ತಿಕ್ಕಾಟಕ್ಕೆ ಕಾರಣವಾಗಿದ್ದ 10 ವರ್ಷ ಹಳೆಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಅಂತಿಮವಾಗಿ ಕೈಬಿಡಲು ತೀರ್ಮಾನಿಸಿರುವ ರಾಜ್ಯ ಸರ್ಕಾರ ಹೊಸದಾಗಿ ಜಾತಿವಾರು ಸಮೀಕ್ಷೆ ನಡೆಸಲು ನಿರ್ಧರಿಸಿದೆ. ಕೆಲ ದಿನಗಳ ಹಿಂದೆ, ಹೊಸ ಸಮೀಕ್ಷೆ ನಡೆಸುವಂತೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದ ಬೆನ್ನಲ್ಲೇ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಚ್. ಕಾಂತರಾಜ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಗೆ ತೆರೆ ಎಳೆಯಲಾಯಿತು. 4

ಜಾಹೀರಾತು

ಮಂಡಿನೋವಿಗೆ ಸರ್ಜರಿ ಇಲ್ಲದೇ ಉಪಶಮನ

12000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ನೀಡಿದೆ ಅಲಿವಿಯೇಟ್

ಮೊಣಕಾಲು ನೋವಿನ ಉಪಶಮನಕ್ಕೆ ಪ್ಲೇಟ್ಲೆಟ್ ಪ್ಲಾಸ್ಮಾ ಚಿಕಿತ್ಸೆ ಚುಚ್ಚುಮದ್ದು

ಅಲಿವಿಯೇಟ್ ನಲ್ಲಿ ನೀಡುವ ಚಿಕಿತ್ಸೆಯ 4 ಲಾಭಗಳು
- 30-60 ನಿಮಿಷದ ವಿಧಾನ
- 48 ಗಂಟೆಗಳಲ್ಲಿ ಕೆಲಸಕ್ಕೆ ತೆರಳಬಹುದು
- ಆಸ್ಪತ್ರೆ ವಾಸವಿಲ್ಲ
- ಕೈಗೆಟಕುವ ದರ

ಬೆಂಗಳೂರಿನ ನಿವಾಸಿ ಸುರೇಶ್ ಆರ್ ಎಸ್ ಎಂಬುವವರಿಗೆ ತೀವ್ರ ಮೊಣಕಾಲು ನೋವು ಕಾಣಿಸಿಕೊಂಡಿದ್ದು, ಇದರಿಂದ ಮೂಲಭೂತ ಕೆಲಸಗಳನ್ನು ಮಾಡುವುದು ಕೂಡ ಕಷ್ಟಕರವಾಗಿತ್ತು. ಸಂಧಿವಾತದ ವಿರುದ್ಧದ ಹೋರಾಟದಲ್ಲಿ, ಅವರು ಹಲವಾರು ವೈದ್ಯರನ್ನು ಭೇಟಿಯಾದರು, ವಿವಿಧ ವೈದ್ಯಕೀಯ ವಿಧಾನಗಳಲ್ಲಿ ವಿಫಲರಾಗಿದ್ದರಿಂದ ಅವರ ಹುಡುಕಾಟ ಮುಂದುವರೆಯಿತು.

ಒಮ್ಮೆ ದಿನಪತ್ರಿಕೆಯ ಲೇಖನವನ್ನು ನೋಡಿದ ಅವರು ಕೂಡಲೇ ಬೆಂಗಳೂರಿನ 'ಅಲಿವಿಯೇಟ್ ಪೇನ್ ಕ್ಲಿನಿಕ್' ನಲ್ಲಿ ಹೆಸರಾಂತ ನೋವು ತಜ್ಞ **ಡಾ. ಸ್ವಾಗತೇಶ್ ಬಸ್ತಿಯಾ** ಅವರನ್ನು ಭೇಟಿಯಾದರು.

ಅಲ್ಲಿ ನೋವಿನ ಉಪಶಮನದ ಬಗ್ಗೆ ನಿರ್ಣಯ ಮಾಡಿದ ಅಲಿವಿಯೇಟ್‌ನ ವೈದ್ಯರು, ನಂತರ ಅವರ ಮೊಣಕಾಲುಗಳ ಹಾನಿಯ ಸ್ಥಿತಿಗೆ ಲಭ್ಯವಿರುವ ಕಾರ್ಯವಿಧಾನಗಳ ಅಗತ್ಯತೆ ಮತ್ತು ಪ್ರಕಾರದ ಬಗ್ಗೆ ಆಳವಾಗಿ ವಿವರಿಸಿದರು. ಇತ್ತೀಚಿಗೆ ಲಭ್ಯವಿರುವ ಸಾಬೀತಾದ ಅಂತರರಾಷ್ಟ್ರೀಯ ಪ್ರಗತಿಗಳ ಪ್ರಕಾರ ವೈದ್ಯರು ಅತ್ಯುತ್ತಮ ಚಿಕಿತ್ಸೆಯನ್ನು ನೀಡುವುದಾಗಿ ಭರವಸೆ ಕೊಟ್ಟರು.

ನಂತರ ಅವರಿಗೆ **ಸ್ಟೆಮ್ ಸೆಲ್ ಥೆರಪಿ + ಪಿ ಆರ್ ಪಿ + ಪ್ರೊಲೋಥೆರಪಿ** ಚಿಕಿತ್ಸೆಯನ್ನು ನೀಡಲಾಯಿತು.

ಇದಾದ ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಅವರು ಹಿಂದಿನ ದಿನಗಳಂತೆ ತಮ್ಮ ಸಕ್ರಿಯ, **ನೋವು ಮುಕ್ತ** ಜೀವನಶೈಲಿಗೆ ಮರಳಿದರು. ಸುರೇಶ್‌ರವರು ಈಗ ಹೊಸ ಜೀವನ ಮತ್ತು ಚಲನಶೀಲತೆಯ ಎರಡನೇ ಇನ್ನಿಂಗ್ಸ್ ಸಂತೋಷದಿಂದ ಆನಂದಿಸುತ್ತಿದ್ದಾರೆ.

ಅಲಿವಿಯೇಟ್‌ನಲ್ಲಿ ನೀಡುವ ಕೆಲವು ಪ್ರಭಾವಕಾರಿ ಚಿಕಿತ್ಸೆಗಳು ಹೀಗಿವೆ:

ಸ್ಟೆಮ್ ಸೆಲ್ ಥೆರಪಿ: ಹಾನಿಗೊಳಗಾದ ಮಂಡಿಯ ಅಂಗಾಂಶ ಪುನರುತ್ಪಾದಿಸಲು, ರೋಗಿಯ ಸ್ವಂತ ಮೂಳೆ ಮಜ್ಜೆ ಅಥವಾ ಕೊಬ್ಬಿನಿಂದ ಹೊರತೆಗೆಯಲಾದಂತಹ ಗುಣಪಡಿಸುವ ಸಾಮರ್ಥ್ಯವಿರುವ ಕಾಂಡಕೋಶಗಳನ್ನು ಮಂಡಿಯ ಜಂಟಿಗೆ ಚುಚ್ಚಲಾಗುತ್ತದೆ.

ಪಿಆರ್‌ಪಿ: ಈ ಕಾರ್ಯವಿಧಾನದಲ್ಲಿ, ಗುಣಪಡಿಸುವಿಕೆಯನ್ನು ಉತ್ತೇಜಿಸಲು ಮತ್ತು ಉರಿಯೂತವನ್ನು ಕಡಿಮೆ ಮಾಡಲು ನಿಮ್ಮ ಸ್ವಂತ ರಕ್ತದಿಂದ ಕೇಂದ್ರೀಕೃತ ಪ್ಲೇಟ್‌ಲೆಟ್‌ಗಳನ್ನು ಬಳಸಲಾಗುತ್ತದೆ.

ಪ್ರೊಲೋಥೆರಪಿ: ಗಾಯಗೊಳಗಾದ ಕಾರ್ಟಿಲೆಜ್ ಅಥವಾ ಸ್ನಾಯುರಜ್ಜುಗೆ ಗ್ಲೂಕೋಸ್ ಅನ್ನು ಇಂಜೆಕ್ಟ್ ಮಾಡುವುದರಿಂದ ಗುಣಪಡಿಸುವಿಕೆಯನ್ನು ಉತ್ತೇಜಿಸುತ್ತದೆ ಮತ್ತು ಸಡಿಲವಾದ ಕೀಲುಗಳನ್ನು ಬಿಗಿಗೊಳಿಸುತ್ತದೆ.

ನೀವು ಅಸ್ಥಿಸಂಧಿವಾತದಿಂದ ಬಳಲುತ್ತಿರುವ ರೋಗಿಗಳಲ್ಲಿ ಒಬ್ಬರಾಗಿದ್ದರೆ, ಚಿಂತಿಸಬೇಡಿ. ನಿಮ್ಮ ಸಕ್ರಿಯ ಜೀವನಶೈಲಿಯನ್ನು ಮರಳಿ ತರಲು ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ

ಅಲಿವಿಯೇಟ್ ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

CALL NOW 81475 50855 | 080 23614888

ನೀವು ಮಾನ್ಸೂನ್‌ಗೆ ಸಿದ್ಧರಿದ್ದೀರಾ?

ಪೂರ್ಣ ದೇಹದ ಆರೋಗ್ಯ ತಪಾಸಣೆಯೊಂದಿಗೆ ಕಂಡುಹಿಡಿಯಿರಿ.

ಈಗ @65% ರಿಯಾಯಿತಿಗೆ!



Free Smart Report

ಜನ ಸೇವಾ ಪ್ಲಸ್

85 ಪರೀಕ್ಷೆಗಳು

RADIOLOGY TESTS 3

- ✓ ಆಬ್ಡೊಮಿನ್ ಮತ್ತು ಪೆಲ್ವಿಕ್ ಅಂಗಗಳಿಗಾಗಿ ಅಲ್ಟ್ರಾಸೌಂಡ್ ಸ್ಕ್ಯಾನ್
- ✓ ಇಸಿಜಿ
- ✓ ಎಕ್ಸ್-ರೇ

LAB TESTS 82

- ✓ ಥೈರಾಯಿಡ್ ಪರೀಕ್ಷೆ (TSH)
- ✓ ಲಿಪಿಡ್ ಪ್ರೊಫೈಲ್
- ✓ ಚುಕ್ಕಾಣಿ ಪರಿಕ್ಷೆ - ಈ ಎಸ್ ಆರ್
- ✓ ಪೂರ್ಣ ರಕ್ತ ಪರೀಕ್ಷೆ
- ✓ ಹೆಚ್‌ಬಿಎ1ಸಿ ಮೂಲಕ ಮಧುಮೇಹ ಪರೀಕ್ಷೆಗಳು
- ✓ ಲಿವರ್ ಫಂಕ್ಷನ್ ಟೆಸ್ಟ್‌ಗಳ
- ✓ ಮೂತ್ರಪಿಂಡ ಕಾರ್ಯಕ್ಷಮತೆ ಪರೀಕ್ಷೆಗಳು
- ✓ ಪೂರ್ಣ ಮೂತ್ರ ಪರೀಕ್ಷೆ

Scan to Book

60% OFF ~~₹4250~~ ₹1699

ಜನ ಸೇವಾ ಗೋಲ್ಡ್

93 ಪರೀಕ್ಷೆಗಳು

ಪೂರ್ಣ ಜನ ಸೇವಾ ಪ್ಲಸ್
+

- ✓ **ಸಿಟಿ ಕ್ಯಾಲ್ಸಿಯಂ ಸ್ಕೋರಿಂಗ್**
  ಹೃದಯಾಘಾತದ ಅಪಾಯ ಅಂಕೆ
- ✓ **ವಿಟಮಿನ್ B12**
  ತಗ್ಗ ಕಾರ್ಯಕ್ಕೆ ಅಗತ್ಯವಿರುವ ಹೆಚ್ಚುನಿತ್ಯವಿತ್ರಾವಳಿ
- ✓ **ವಿಟಮಿನ್ D**
  ಎಲುಬು ಶಕ್ತಿಗೆ ಅಗತ್ಯ
- ✓ **ಕ್ಯಾನ್ಸರ್ ಸ್ಕ್ರೀನಿಂಗ್**
  ಪುರುಷ - ಪ್ರೊಸ್ಟೇಟ್ - ಪಿ ಎಸ್ ಎ ಒಟ್ಟು
  ಈನಿಂಗ - ಓವರೀಸ್ - ಸಿ ಎ 125
  ಕೋಶ, ಯಕೃತ್, ಪ್ಯಾಂಕ್ರಿಯಾಸ್ - ಸಿಇಎ
- ✓ **ಪೂರ್ಣ ಥೈರಾಯ್ಡ್ ಪರೀಕ್ಷೆ**
  T3 T4 TSH

Scan to Book

65% OFF ~~₹14285~~ ₹4999

This pictorial representation of the map of India does not purport to be the political map of India

Offer valid till 15th June 2025

ಕೈ ಗೆಟುಕುವ ದರದಲ್ಲಿ ರಕ್ತ ಪರೀಕ್ಷೆ ಮತ್ತು ಸ್ಕ್ಯಾನ್ಸ್ ವರ್ಷವಿಡಿ

	ಮಾರುಕಟ್ಟೆ ದರ	Starting From
MRI ಸ್ಕ್ಯಾನ್ MRI Brain/Each Spine	~~₹7500~~	₹2900
CT ಸ್ಕ್ಯಾನ್ CT Brain/PNS	~~₹3500~~	₹1250

ರಕ್ತ ಪರೀಕ್ಷಣೆಯಲ್ಲಿ **50%** ಕಡಿಮೆ ದರದಲ್ಲಿ

ಮನೆಯಿಂದಲೇ ರಕ್ತ ಸಂಗ್ರಹ ಮಾಡಲಾಗುವುದು

37 ವರ್ಷಗಳು ನಂಬಿಕೆ

12 ರಾಜ್ಯಗಳು & 250 + ಶಾಖೆಗಳು

1 ಕುಟುಂಬದಿಂದ 7 ವೈದ್ಯರು ನಡೆಸಲಾಗುತ್ತಿದೆ

ಆರ್ತಿ ಸ್ಕ್ಯಾನ್ಸ್ & ಲ್ಯಾಬ್ಸ್
Ethical & Affordable Diagnostics

70224 70224

Cashless Facility for CGHS & ECHS

1.7 ಕೋಟಿಗೂ ಹೆಚ್ಚು ಜನರ ವಿಶ್ವಾಸ

ಜಯ ನಗರ · ಇಂದಿರಾ ನಗರ · ರಾಜಾಜಿನಗರ · ಪದ್ಮನಾಭ ನಗರ · ಕೋರಮಂಗಲ · ಮಾರತಹಳ್ಳಿ
ಜೆಪಿ ನಗರ · ಕೆ.ಆರ್ . ಪುರಂ · ಹೆಬ್ಬಾಳ · ಇನ್ ಫ್ಯಾಂಟ್ರಿ ರೋಡ್ (ಶಿವಾಜಿನಗರ) · ಹೆಣ್ಣೂರು · ನಾಗರಭಾವಿ

For Franchise Enquiry - 99401 10520

ಬೆಂಗಳೂರು ಮುಂಬೈ ನವ ದೆಹಲಿ ಚೆನ್ನೈ ಹೈದರಾಬಾದ್ ಕೋಲ್ಕತ್ತಾ ಗುರ್ಗಾಂವ್ ಪುಣೆ ಅಹಮದಾಬಾದ್ ತಿರುವನಂತಪುರ ಪಾಂಡಿಚೇರಿ

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಾಲಿಕೆ ಮಾಜಿಸದಸ್ಯ ವಿ.ವಿ.ಪಾರ್ತಿಬರಾಜನ್ ಉಪಸ್ಥಿತರಿದ್ದರು

ಸಸಿನೆಡುವ ಕಾರ್ಯಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ವಿಶ್ವಪರಿಸರ ದಿನಾಚರಣೆ ಪ್ರಯುಕ್ತ ಕುವೆಂಪುನಗರ ವಾರ್ಡ್ ವ್ಯಾಪ್ತಿಯ ಸಿಂಗಾಪುರ ಕೆರೆ ಆವರಣದಲ್ಲಿ ಆಯೋಜಿಸಿದ್ದ ವನಮಹೋತ್ಸವದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಸಸಿನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಕೆರೆಯ ಪರಿವೀಕ್ಷಣೆ ನಡೆಸಿದ ಅವರು, ನಡಿಗೆ ಪಥದ ಒಂದು ಭಾಗದಲ್ಲಿ ಜಾಗ ಬಿಟ್ಟಿರುವುದರಿಂದ ಸಾರ್ವಜನಿಕರು ಕೆರೆಯ ಒಂದು ಸುತ್ತು ಹಾಕಲು ಸಂಪರ್ಕವಿಲ್ಲದಂತಾಗಿದೆ. ಈ ಸ್ಥಳದಲ್ಲಿ ಪೈಪ್, ಸ್ಲ್ಯಾಬ್ ಅಳವಡಿಸಿ, ಮಣ್ಣಿನಿಂದ ಮುಚ್ಚಿದರೆ ಕೆರೆಯನ್ನು ಒಂದು ಸುತ್ತು ಹಾಕಬಹುದು. ಈ ಸಮಸ್ಯೆ ಬಗೆಹರಿಸುವಂತೆ ಹಲವು ಬಾರಿ ಹೇಳಿದರೂ ಕೇಳಿಲ್ಲಎಂದು ಸಚಿವರು ಬಿಬಿಎಂಪಿ ಕೆರೆ ವಿಭಾಗದ ಎಂಜಿನಿಯರ್‌ಗಳನ್ನು ತರಾಟೆಗೆ ತೆಗೆದುಕೊಂಡರು.

ಸೈಕಲ್‌ಗೆ ಕೆರೆಯ ಆವರಣದಲ್ಲಿ ಪ್ರತ್ಯೇಕಮಾರ್ಗ ನಿರ್ಮಿಸಬೇಕು. ಜಾಲಿಮರಗಳನ್ನು ತೆರವುಗೊಳಿಸಿ, ಜಾಗವನ್ನು ಸಾರ್ವಜನಿಕರ ಅನುಕೂಲಕ್ಕೆ ಬಳಸಬೇಕು. ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಕಾಮಗಾರಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆ ಮಾಜಿ ಸದಸ್ಯ ವಿ.ವಿ. ಪಾರ್ತಿಬರಾಜನ್ ಮಾತನಾಡಿ, ‘ಒಟ್ಟು 65 ಎಕರೆ ವಿಸ್ತೀರ್ಣದ ಕೆರೆಯ ಒಂದು ಭಾಗದಲ್ಲಿ ನಡಿಗೆ ಪಥ, ಸಸಿಗಳನ್ನು ನೆಡುವುದು ಸೇರಿ ₹4.50 ಕೋಟಿ ವೆಚ್ಚದಲ್ಲಿ ಹಲವು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ಕೆರೆಯ ಅಂಗಳದಲ್ಲಿ 500 ಗಿಡಗಳನ್ನು ನೆಡಲಾಗಿದ್ದು, ಮತ್ತೊಂದು ಭಾಗದಲ್ಲಿ ಮಕ್ಕಳ ಆಟಿಕೆಗಳು, ಹಿರಿಯ ನಾಗರಿಕರ ವಿಶ್ರಾಂತಿಗಾಗಿ ಆಸನಗಳ ಅಳವಡಿಕೆ, ಭದ್ರತಾ ಸಿಬ್ಬಂದಿಗೆ ಮೂಲಸೌಲಭ್ಯ ಕಲ್ಪಿಸಲಾಗುವುದು’ ಎಂದರು.

ಕಾಂಗ್ರೆಸ್ ಮುಖಂಡರಾದ ಸಂತೋಷ್ ರಾಜನ್, ಮಹಾಂತೇಶ್ವರ ಸ್ವಾಮಿ, ಎಂ.ಮುನಿರಾಜು, ರಾಜಣ್ಣ, ಮುನಿಯಪ್ಪ, ನಾಗಿಲ, ಪುಷ್ಪಾ, ಅನಿತ, ವಾಸಂತಿ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಯೋಗ ದಿನ, ಉಚಿತ ಯೋಗ ಸಮಾವೇಶ: ಅತಿಥಿಗಳು: ಎಚ್.ಕೆ. ಪಾಟೀಲ, ಟಿ.ಬಿ. ಜಯಚಂದ್ರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಆಯುಷ್ ಸಚಿವಾಲಯ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 8.30ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, ರಕ್ತದಾನ ಶಿಬಿರ: ಉದ್ಘಾಟನೆ: ಎಚ್. ಸಿ. ಮಹದೇವಪ್ಪ, ಅತಿಥಿಗಳು: ಮೂಡ್ನಾಕೂಡು ಚಿನ್ನಸ್ವಾಮಿ, ಎಸ್. ಎಂ. ಜಯಕರ, ಶೇಖ್ ಲತೀಫ್, ಉಪಸ್ಥಿತಿ: ಸೋಮಶೇಖರ್, ಶಿವಪ್ಪ, ಅಧ್ಯಕ್ಷತೆ: ನವೀನ್ ಕುಮಾರ್, ಆಯೋಜನೆ: ವಿಶ್ವಜ್ಞಾನಿ ಜನಜಾಗೃತಿ ವೇದಿಕೆ, ಬೆಂಗಳೂರು ವಿಶ್ವವಿದ್ಯಾಲಯ ಎಸ್‌ಸಿ, ಎಸ್‌ಟಿ ಬೋಧಕೇತರ ನೌಕರರ ಸಂಘ, ಸ್ಥಳ: ಸೆನೆಟ್ ಭವನ ಆಡಳಿತ ಕಚೇರಿ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10ರಿಂದ

ಮೂಡ್ನಾಕೂಡು ಚಿನ್ನಸ್ವಾಮಿ

ವಿಶ್ವ ವಯೋವೃದ್ಧ ದುರುಪಯೋಗದ ಅರಿವು ದಿನ: ಅತಿಥಿ: ಸಿ. ಬಲರಾಮ್, ಎಚ್.ಎನ್. ಸುಬ್ರಹ್ಮಣ್ಯ, ನಟರಾಜ ಎಸ್., ಡಾ. ಇಂದಿರಾ ಜೈ ಪ್ರಕಾಶ್, ವಿ. ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣ್‌ಕುಮಾರ್, ಆಯೋಜನೆ: ಹೆಲ್ಪ್‌ಏಜ್ ಇಂಡಿಯಾ, ಸ್ಥಳ: ನ್ಯಾಷನಲ್ ಕಾಲೇಜಿನ ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10.30

ಬೆಂಗಳೂರು ನಾಣ್ಯಗಳ ಪ್ರದರ್ಶನ: ಆಯೋಜನೆ: ಫಾಲ್ಕನ್ ನಾಣ್ಯಗಳ ಗ್ಯಾಲರಿ, ಸ್ಥಳ: ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 11ರಿಂದ

ಹರಿದಾಸ ಮಂಜರಿ: ಗಾಯನ: ಲಾವಣ್ಯ ವೆಂಕಟೇಶ್, ಕಿರಣ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ಕಂಭದ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

‘ಡಿಸಿಇಟಿ ದಾಖಲೆ ಪರಿಶೀಲನೆ: ಕಿರಿಕಿರಿ’

ಗೊಂದಲದ ಗೂಡಾದ ಹಲವು ಕೇಂದ್ರಗಳು: ವಿದ್ಯಾರ್ಥಿಗಳು, ಪೋಷಕರ ಅಳಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 37 ಕಾಲೇಜುಗಳ ಪಟ್ಟಿ ಬಿಡುಗಡೆ ಮಾಡಿದ್ದ ಕೆಇಎ
- ಜೂ.10ಕ್ಕೆ ಪರಿಶೀಲನೆ ಆರಂಭಗೊಂಡಿತ್ತು

ಬೆಂಗಳೂರು: ಎರಡನೇ ವರ್ಷದ ಎಂಜಿನಿಯರಿಂಗ್ (ಡಿಸಿಇಟಿ) ಪ್ರವೇಶ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನಾ ಕಾರ್ಯ ನಡೆಯುತ್ತಿದ್ದು, ಕೆ.ಆರ್. ವೃತ್ತದ ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್ ಸೇರಿದಂತೆ ಬೆಂಗಳೂರಿನ ಕೆಲ ಕೇಂದ್ರಗಳಲ್ಲಿ ಗೊಂದಲದ ಗೂಡಾಗಿತ್ತು ಎಂದು ವಿದ್ಯಾರ್ಥಿಗಳು ಹಾಗೂ ಪೋಷಕರು ದೂರಿದರು.

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಜೂನ್ 10ರಿಂದ ಪರಿಶೀಲನೆ ನಡೆಯುತ್ತಿದ್ದು, 37 ಕಾಲೇಜುಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿತ್ತು. ಅಭ್ಯರ್ಥಿಗಳು ಮುಂಗಡವಾಗಿ ದಿನಾಂಕ ನಿಗದಿ ಮಾಡಿಕೊಂಡು ಆಯಾ ಕಾಲೇಜುಗಳಿಗೆ ಭೇಟಿ ನೀಡಿದರೂ, ಸಮಯಕ್ಕೆ ಸರಿಯಾಗಿ ಪರಿಶೀಲನೆ ಮಾಡದ ಕಾರಣ ಸರದಿ ಸಾಲಿನಲ್ಲಿ ದಿನವಿಡೀ ನಿಲ್ಲಬೇಕಾಯಿತು ಎಂದು ಪೋಷಕರಾದ ರಾಮೇಶ್ವರಪ್ಪ ಹೇಳಿದರು.

‘ಡಿಪ್ಲೊಮಾ ಕೋರ್ಸ್‌ಗಳ ಅಂಕ ಪಟ್ಟಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆ ಸಮಯಕ್ಕೆ ಸರಿಯಾಗಿ ನೀಡಿಲ್ಲ. ದಾಖಲಾತಿ ಪರಿಶೀಲನಾ ಕಾರ್ಯ ಆರಂಭವಾದ ನಂತರ ವಿತರಣೆ ಮಾಡಿದ್ದಾರೆ. ಅವುಗಳ ನಕಲು ಪ್ರತಿ ತಗೆದುಕೊಂಡು, ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿಕೊಂಡು ಪರಿಶೀಲನೆಗೆ ಹೋಗುವ ರಲ್ಲಿ ಹಲವು ವಿದ್ಯಾರ್ಥಿಗಳಿಗೆ ವಿಳಂಬವಾಗಿದೆ. ಹಾಗಾಗಿ, ಜೂನ್ 10ಕ್ಕೆ ಸಮಯ ಪಡೆದವರೂ 12ರಂದು ಬಂದಿದ್ದಾರೆ. ಇದು ದಟ್ಟಣೆಗೆ ಕಾರಣವಾಗಿದೆ. ಸಣ್ಣ ಜಾಗದಲ್ಲಿ ಅಷ್ಟೊಂದು ವಿದ್ಯಾರ್ಥಿಗಳು ಕುರಿಯಂತೆ ತುಂಬಿದ್ದರು’ ಎಂದು ಹಲವು ಪೋಷಕರು ಆರೋಪಿಸಿದರು.

‘ತಾಂತ್ರಿಕ ಶಿಕ್ಷಣ ಇಲಾಖೆ ಡಿಸಿಇಟಿ ಫಲಿತಾಂಶ ಬರುವ ಮೊದಲೇ ಅಂಕಪಟ್ಟಿ ನೀಡಬೇಕು. ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಣ ಕಡ್ಡಾಯ ಮಾಡಬಾರದು. ನಿಯಮದಂತೆ ಸ್ವಯಂ ದೃಢೀಕರಣಕ್ಕೆ ಅವಕಾಶ ನೀಡಬೇಕು. ಆಯಾ ಕಾಲೇಜುಗಳಲ್ಲೇ ದಾಖಲಾತಿ ಪರಿಶೀಲನೆಗೆ ವ್ಯವಸ್ಥೆ ಮಾಡಬೇಕು. ಬೆಳಿಗ್ಗೆ ಮತ್ತು ಮಧ್ಯಾಹ್ನ ಎಂದು ಆಯ್ಕೆ ನೀಡುವ ಬದಲು ನಿಗದಿತ ಸಮಯ ನೀಡಬೇಕು’ ಎಂದು ಪೋಷಕರಾದ ಎಂ. ನರಸಿಂಹ ಗ್ರಹಿಸಿದರು.

ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲ ಶೈಕ್ಷಣಿಕ ಮೂಲ ದಾಖಲೆಗಳನ್ನು ಮತ್ತು ವಿಶೇಷ ಪ್ರವರ್ಗದ (ಎನ್‌ಸಿಸಿ, ಕ್ರೀಡೆ, ಸೈನಿಕರು, ಮಾಜಿ ಸೈನಿಕರು, ಮಾಜಿ-ಸಿಎಪಿಎಫ್, ಸಿಎಪಿಎಫ್,- ಕ್ಲೇಮ್ ಮಾಡಿದ ದಾಖಲೆಗಳು) ಕಡ್ಡಾಯವಾಗಿ ಪ್ರಮಾಣ ಪತ್ರ ಪರಿಶೀಲನಾ ಕಾರ್ಯ ಜೂನ್ 13ರವರೆಗೆ ನಡೆಯಲಿದೆ.

ಉತ್ತರೋತ್ತಮ ಉತ್ಸವ ನಾಳೆ

ಬೆಂಗಳೂರು: ಹೋಟೆಲ್ ನಳಪಾಕ, ವಂದೇ ಕರ್ನಾಟಕ ಹಾಗೂ ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್ ಜಂಟಿಯಾಗಿ ಇದೇ 14 ರಂದು ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ಕೋಣನಕುಂಟೆಯ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ‘ಉತ್ತರೋತ್ತಮ ಉತ್ಸವ’ ಹಮ್ಮಿಕೊಂಡಿದೆ.

ಉತ್ತರ ಕರ್ನಾಟಕದ ಹಾಡು, ಕುಣಿತ, ನಾಟಕ, ಸಿನೆಮಾ ಮತ್ತ ಊಟ ಒಂದೇ ಸೂರಿನಡಿಯಲ್ಲಿ ದೊರೆಯಲಿದೆ. ಈ ಸಾಂಸ್ಕೃತಿಕ ಉತ್ಸವದಲ್ಲಿ ಐಶ್ವರ್ಯ ದೇಸಾಯಿ ಅವರಿಂದ ಹಿಂದೂಸ್ಥಾನಿ ಗಾಯನ, ಯಶವಂತ ಸರದೇಶಪಾಂಡೆ ನಿರ್ದೇಶನ ಮತ್ತು ಅಭಿನಯದ ನಾಟಕ ‘ಅಮರ ಮಧುರ ಪ್ರೇಮ’, ಸ್ಫೂರ್ತಿ ಜೋಶಿಯವರ ಕಥಕ್ ನೃತ್ಯ, ಸಂಗೀತ ಕಟ್ಟಿ ಕುಲಕರ್ಣಿ ಅವರಿಂದ ಸಂಗೀತ ವೈವಿಧ್ಯ ಕಾರ್ಯಕ್ರಮ ನಡೆಯಲಿದೆ.

ಯಶವಂತ ಸರದೇಶಪಾಂಡೆ

ಗುರು ಇನ್‌ಸ್ಟಿಟ್ಯೂಟ್‌ನಿಂದ ‘ರಾಶಿಚಕ್ರ’ ಏಕವ್ಯಕ್ತಿ ಹಾಸ್ಯ ರಂಗಪ್ರಯೋಗ ಇರಲಿದೆ. ಅತಿಥಿಗಳಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ನಟರಾದ ರವಿಚಂದ್ರನ್, ದೊಡ್ಡಣ್ಣ, ವಾಗ್ಮಿ ಗುರುರಾಜ ಕರಜಗಿ, ವೈದ್ಯ ಡಾ. ವಿವೇಕ ಜವಳಿ, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್, ಉದ್ಯಮಿಗಳಾದ ಅಶೋಕ ಖೇಣಿ, ಗೋವಿಂದ ಜೋಶಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Associate Sponsors: Prestige | Freedom Healthy Cooking Oils | Honda | Vi 5G | ಸದ್ಗುರು ಆಯುರ್ವೇದ GRAM FLOUR SOAP | ESTD: 1907 The Bangalore City Co-operative Bank Limited | The Janatha Co-operative Bank Ltd., Malleshwaram, Bangalore

Mobility Partner: Akshaya Motors

Banking Partner: ಕೆನರಾ ಬ್ಯಾಂಕ್ Canara Bank, Together We Can

Style Partner: BSC ಬಿ.ಎಸ್.ಚನ್ನಬಸಪ್ಪ & ಸನ್ಸ್ ದಾವಣಗೆರೆ & ಬೆಳಗಾವಿ

Travel Partner: travelmart

Wardrobe Partner: neuMen From the house of P N Rao

Knowledge Partners: InsightsIAS | GITAM Bengaluru

Insurance Partner: National Insurance

Telecast Partner: Z ಕನ್ನಡ

Audit Partner: EY

ಕಾಮಗಾರಿಗೆ ಅಡ್ಡಿ: ಭೂ ಮಾಲೀಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಕಾಮಗಾರಿಗೆ ಅಡ್ಡಿ ಪಡಿಸಿದ್ದ ಆರೋಪದ ಅಡಿ ಭೂಮಾಲೀಕರು ಹಾಗೂ ಅವರ ಪುತ್ರನ ವಿರುದ್ಧ ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗದ (2ನೇ ಉಪ ವಿಭಾಗ) ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಎಚ್. ಬಾಗಿ ಅವರು ನೀಡಿದ ದೂರಿನ ಮೇರೆಗೆ ಭೂಮಾಲೀಕ ವೆಂಕಟೇಶಯ್ಯ ಹಾಗೂ ಅವರ ಪುತ್ರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಬಡಾವಣೆಯ ಮುಖ್ಯ ಸಂಪರ್ಕ ರಸ್ತೆಗೆ ಅಂತಿಮ ಅಧಿಸೂಚನೆಯಾಗಿದ್ದು, ಸೂಲಿಕೆರೆ ಗ್ರಾಮದ ಸರ್ವೆ ನಂ.43/1ರ ಜಮೀನಿನಲ್ಲಿ ಕಾಮಗಾರಿ ನಡೆಯುತ್ತಿತ್ತು. ಕಾಮಗಾರಿ ವೇಳೆ ಆರೋಪಿಗಳು ತಡೆ ಒಡ್ಡಿದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಕೋರ್ಟ್‌ನಲ್ಲಿಯೂ ಬಿಡಿಎ ಪರವಾಗಿ ಪ್ರಕರಣ ಇತ್ಯರ್ಥಗೊಂಡಿದೆ. ಜೂನ್ 11ರಂದು ಸ್ಥಳದಲ್ಲಿ ಕಾಮಗಾರಿ ಆರಂಭಿಸಲಾಯಿತು. ಆಗ ವೆಂಕಟೇಶಯ್ಯ ಹಾಗೂ ಅವರ ಪುತ್ರ ಸ್ಥಳಕ್ಕೆ ಬಂದು ಕಾಮಗಾರಿಗೆ ಅಡ್ಡಿ ಪಡಿಸಿದರು’ ಎಂದು ದೂರು ನೀಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–21/1241/2025–26 ದಿನಾಂಕ: 11.06.2025

ಪ್ರಕಟಣೆ

(ಕ.ನ & ಗ್ರಾ.ಯೋ. ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 540 ಬೆಂಆಸೇ 2004, ದಿನಾಂಕ 22/06/2007 ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2)ರ ಅಡಿಯಲ್ಲಿ ಪ್ರಶ್ನಿತ ಜಮೀನುಗಳು ಸಾರಿಗೆ–ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69 (4) ರನ್ವಯ ಈ ಕೆಳಕಂಡ ಜಮೀನುಗಳನ್ನು ವಸತಿ ಉಪಯೋಗಕ್ಕೆ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ /ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಡಿ.ಸಂಜೀವಯ್ಯ	ಬೆಂಗಳೂರು ಪೂರ್ವ	ಕೆ.ಆರ್.ಪುರ	ಸಾದರಮಂಗಲ	11ರ ಪೈಕಿ	2–12	ಸಾರಿಗೆ ಸಂಪರ್ಕ	ವಸತಿ
2					12/1ರ ಪೈಕಿ	0–26		

ಸಹಿ/– ನಗರ ಯೋಜಕ ಸದಸ್ಯರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಚರಂಡಿಗೆ ಬಿದ್ದು ಯುವಕನಿಗೆ ಗಾಯ • ಗುತ್ತಿಗೆದಾರ, ಬಿಬಿಎಂಪಿ, ಜಲಮಂಡಳಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿ ಪೈಪ್ ಅಳವಡಿಸಲು ತೆಗೆದಿದ್ದ ಚರಂಡಿಗೆ ಆಯತಪ್ಪಿ ಬಿದ್ದು ಯುವಕನೊಬ್ಬ ಗಂಭೀರವಾಗಿ ಗಾಯಗೊಂಡಿದ್ದು, ಘಟನೆಗೆ ಸಂಬಂಧಿಸಿದಂತೆ ಬಿಬಿಎಂಪಿ, ಜಲಮಂಡಳಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆ.ಪಿ. ನಗರದ 24ನೇ ಮುಖ್ಯ ರಸ್ತೆ, ನಾಲ್ಕನೇ ಕ್ರಾಸ್ ನಿವಾಸಿ ಗಣೇಶ್ ಅವರು ನೀಡಿದ ದೂರಿನ ಮೇರೆಗೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 125(ಎ), 281ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಜೂನ್ 4ರಂದು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಗಣೇಶ್ ಅವರ ಪುತ್ರ ಬಿ.ಜಿ.ಮಂಜುನಾಥ್ (28) ಅವರು ರಾಜ್‌ಕುಮಾರ್ ರಸ್ತೆಯ ಕಾಫಿ ಡೇ ಎದುರು ಕಾಮಗಾರಿಗಾಗಿ ತೆಗೆಯಲಾಗಿದ್ದ ಚರಂಡಿಗೆ ಬಿದ್ದು ಗಾಯಗೊಂಡಿದ್ದರು.

‘ಪ್ರಜ್ಞಾಹೀನ ಸ್ಥಿತಿಯಲ್ಲಿ ಪುತ್ರನಿದ್ದು, ಸುಗುಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಕಾಮಗಾರಿಗಾಗಿ ಚರಂಡಿ ತೆಗೆದು ಹಾಗೆಯೇ ಬಿಡಲಾಗಿತ್ತು. ಅಲ್ಲಲ್ಲಿ ಪೈಪ್‌ಗಳು ಬಿದ್ದಿದ್ದವು. ಈ ಮಾರ್ಗದಲ್ಲಿ ಸಾರ್ವಜನಿಕರು ಓಡಾಟಕ್ಕೂ ತೊಂದರೆ ಆಗಿತ್ತು. ಪುತ್ರ ತೆರಳುವಾಗ ಆಯತಪ್ಪಿ ಚರಂಡಿಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾನೆ. ಕಳಪೆ ಹಾಗೂ ಅವೈಜ್ಞಾನಿಕ ಕಾಮಗಾರಿಯೇ ಘಟನೆಗೆ ಕಾರಣ. ಬಿಬಿಎಂಪಿ, ಜಲಮಂಡಳಿ ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಗಣೇಶ್ ಅವರು ದೂರಿನಲ್ಲಿ ಕೋರಿದ್ದಾರೆ.

‘ಜೂನ್ 4ರಂದು ಘಟನೆ ನಡೆದಿತ್ತು. ಗಾಯಾಳು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದರಿಂದ ಪೋಷಕರು ದೂರು ನೀಡುವುದು ವಿಳಂಬವಾಗಿತ್ತು. ಜೂನ್ 9ರಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ. ಸಂಬಂಧಿಸಿದವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

ಸ್ಥಳೀಯರ ಆಕ್ರೋಶ: ಚರಂಡಿ ತೆಗೆದು ಹಾಗೆಯೇ ಬಿಡಲಾಗಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿಲ್ಲ. ಬಸ್ ಹಾಗೂ ಸರಕು ಸಾಗಣೆ ವಾಹನಗಳು ಸಂಚರಿಸುವಾಗ ಜನರ ಓಡಾಟಕ್ಕೂ ತೊಂದರೆ ಆಗುತ್ತಿದೆ. ಸಂಚಾರ ಮಾರ್ಗದ ಬದಲಾವಣೆಯ ಕುರಿತು ಮಾಹಿತಿಯನ್ನೂ ನೀಡುತ್ತಿಲ್ಲ ಎಂದು ಸ್ಥಳೀಯ ನಿವಾಸಿ ಶ್ರೀಧರ್ ಕಶ್ಯಪ್ ದೂರಿದರು.

ರಾಜ್‌ಕುಮಾರ್ ರಸ್ತೆಯಲ್ಲಿ ಪೈಪ್ ಅಳವಡಿಸಲು ತೆಗೆಯಲಾಗಿದ್ದ ಚರಂಡಿ

ಅಪಘಾತ: ನಿವೃತ್ತ ಹೆಡ್ ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ದ್ವಿಚಕ್ರ ವಾಹನ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ನಿವೃತ್ತ ಹೆಡ್‌ಕಾನ್‌ಸ್ಟೆಬಲ್‌ವೊಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಬಾಣಾವರ ಬಳಿಯ ಚಕ್ಕಸಂದ್ರ ನಿವಾಸಿ ಹನುಮಂತರಾಯಪ್ಪ (71) ಮೃತಪಟ್ಟವರು. ಬುಧವಾರ ಮಧ್ಯಾಹ್ನ ಅಪಘಾತ ಸಂಭವಿಸಿತ್ತು.

ಹನುಮಂತರಾಯಪ್ಪ ಅವರು ನಗರ ಸಶಸ್ತ್ರ ಮೀಸಲು (ಸಿಎಆರ್) ಪೊಲೀಸ್ ಪಡೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ಹನುಮಂತರಾಯಪ್ಪ ಅವರು ರಾಜ್‌ಕುಮಾರ್ ರಸ್ತೆ ಮಾರ್ಗವಾಗಿ ಮನೆಗೆ ತೆರಳುತ್ತಿದ್ದರು. ಕೆಎಸ್‌ಆರ್‌ಟಿಸಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ತಾಗಿತ್ತು. ಈ ವೇಳೆ ನಿಯಂತ್ರಣ ತಪ್ಪಿ ಬಲ ಭಾಗಕ್ಕೆ ಬಿದ್ದಿದ್ದ ಹನುಮಂತರಾಯಪ್ಪ ಅವರ ಮೇಲೆ ಬಸ್‌ನ ಹಿಂದಿನ ಚಕ್ರ ಹರಿದಿತ್ತು. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಹನುಮಂತರಾಯಪ್ಪ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಬೆಂಗಳೂರಿನಿಂದ ಮೂಡಿಗೆರೆಗೆ ಬಸ್ ಹೋಗುತ್ತಿತ್ತು. ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ರಾಜಾಜಿನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ತೂರು ಠಾಣೆಯ ಪೊಲೀಸರ ಕಾರ್ಯಾಚರಣೆ

ಮೃತದೇಹ ಚರಂಡಿಗೆ ಎಸೆದಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಬಂಧಿಯ ಕೊಲೆ ಮಾಡಿ ಮೃತದೇಹವನ್ನು ಚರಂಡಿಗೆ ಎಸೆದು, ತಲೆಮರೆಸಿಕೊಂಡಿದ್ದ ಆರೋಪಿಯನ್ನು ವರ್ತೂರು ಠಾಣೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ವಿಕಾಸ್

ನೇಪಾಳದ ದೀಪಕ್ ಬಹದ್ದೂರು ಕೊಲೆಯಾದ ವ್ಯಕ್ತಿ.

ದೀಪಕ್ ಅವರ ಪತ್ನಿ ಸುಷ್ಮಾ ಗುರಂಗ್ ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ, ವಿಕಾಸ್ ಬಹದ್ದೂರು ಅಲಿಯಾಸ್ ಇಂದ್ರ ಬಿಸ್ತಾ (25) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ವರ್ತೂರು ಠಾಣಾ ವ್ಯಾಪ್ತಿಯ ಚಿಕ್ಕಬೆಳ್ಳಂದೂರು ಗ್ರಾಮದ 100 ಅಡಿ ರಸ್ತೆಯ ಚರಂಡಿಯಲ್ಲಿ ಮೇ 1ರಂದು ಸುಮಾರು 35 ವರ್ಷದ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಬಿಎನ್‌ಎಸ್‌ಎಸ್ ಸೆಕ್ಷನ್ 194(3) ಅಡಿ ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಿದ್ದರು. ಈ ಮಧ್ಯೆ ನೇಪಾಳದ ಸುಷ್ಮಾ ಗುರಂಗ್ ಅವರು ಮೃತದೇಹವನ್ನು ಪರಿಶೀಲಿಸಿದ್ದರು. ತನ್ನ ಪತಿ ದೀಪಕ್ ಬಹದ್ದೂರ್ ಬಾಟ್ ಮೃತದೇಹ ಎಂಬುದಾಗಿ ತಿಳಿಸಿದ್ದರು.

ದೀಪಕ್

ಸಂಬಂಧಿಯೇ ಕೊಲೆ ಮಾಡಿರುವ ಅನುಮಾನ ವ್ಯಕ್ತಪಡಿಸಿದ್ದರು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಮೂಲಗಳು ತಿಳಿಸಿವೆ.

‘ದೀಪಕ್ ದಂಪತಿ ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಕೌಟುಂಬಿಕ ಕಾರಣಕ್ಕೆ ದಂಪತಿ ಮಧ್ಯೆ ಗಲಾಟೆ ನಡೆಯುತ್ತಿತ್ತು. ಈ ವಿಚಾರವನ್ನು ಸುಷ್ಮಾ ಅವರು ತಮ್ಮ ಸಂಬಂಧಿಯೂ ಆಗಿರುವ ಆರೋಪಿ ವಿಕಾಸ್‌ಗೆ ತಿಳಿಸಿದ್ದರು. ಮನೆಗೆ ಬಂದಿದ್ದ ವಿಕಾಸ್, ಇಬ್ಬರಿಗೂ ಬುದ್ಧಿಮಾತು ಹೇಳಿದ್ದ. ಕೆಲವು ದಿನಗಳು ಕಳೆದ ಬಳಿಕ ದೀಪಕ್‌ನನ್ನು ಕರೆದೊಯ್ದು ಆರೋಪಿ ಹಲ್ಲೆ ನಡೆಸಿದ್ದ. ಹಲ್ಲೆಯಿಂದ ದೀಪಕ್ ಮೃತಪಟ್ಟಿದ್ದರು. ಮೃತದೇಹವನ್ನು ಚರಂಡಿಗೆ ಎಸೆದು ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಕೃತ್ಯ ನಡೆದ ಸ್ಥಳಗಳ ಸುತ್ತಮುತ್ತಲ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಪತ್ತೆ ಮಾಡಿ ವಶಕ್ಕೆ ಪಡೆದುಕೊಳ್ಳಲಾಯಿತು’ ಎಂದು ಪೊಲೀಸರು ಹೇಳಿದರು.

ಅಡ್ಡಾದಿಡ್ಡಿ ಸಂಚಾರ, ಅಶ್ಲೀಲ ಸನ್ನೆ

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ 4ರ ನೆಲಮಂಗಲ ಟೋಲ್ ಬಳಿ ದ್ವಿಚಕ್ರ ವಾಹನವೊಂದರಲ್ಲಿ ಮೂವರು ಕುಳಿತುಕೊಂಡು ಅಡ್ಡಾದಿಡ್ಡಿ ವಾಹನ ಚಾಲನೆ ಮಾಡು ತ್ತಿದ್ದ ದೃಶ್ಯವು ಮೊಬೈಲ್‌ನಲ್ಲಿ ಸೆರೆಯಾಗಿದೆ. ಹಿಂಬದಿಯ ವಾಹನ ಸವಾರರು, ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದಾರೆ.

ಅಡ್ಡಾದಿಡ್ಡಿ ಚಾಲನೆ ಮಾಡುತ್ತಿರುವುದು, ನಂಬರ್ ಪ್ಲೇಟ್ ಕಾಣದಂತೆ ಹಿಂಬದಿ ಸವಾರ ಕೈಯಲ್ಲಿ ಮರೆ ಮಾಡಿರುವುದು ಹಾಗೂ ಅಶ್ಲೀಲ ಸನ್ನೆ ತೋರಿಸುತ್ತಿರುವುದು ದೃಶ್ಯದಲ್ಲಿ ಸೆರೆಯಾಗಿದೆ. ಮೂವರು ಯುವಕರು ಒಂದೇ ಬೈಕ್‌ನಲ್ಲಿ ಅಕ್ಕಪಕ್ಕದ ವಾಹನ ಸವಾರರಿಗೆ ಭಯ ಹುಟ್ಟಿಸುವಂತೆ ಹಾಗೂ ಅಪಘಾತಕ್ಕೆ ದಾರಿ ಮಾಡಿಕೊಡುವಂತೆ ಜಿಗ್ ಜ್ಯಾಗ್ ಮಾದರಿಯಲ್ಲಿ ವಾಹನ ಚಲಾಯಿಸುತ್ತಿದ್ದರು. ಇದನ್ನು ಹಿಂದಿನ ವಾಹನ ಸವಾರರು, ಚಿತ್ರೀಕರಣ ಮಾಡಲು ಪ್ರಾರಂಭಿಸಿದಾಗ ಅವರಿಗೆ ನಿಂದನಾತ್ಮಕ ಸನ್ನೆಗಳನ್ನು ತೋರಿಸಿದ್ದಾರೆ. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ.

ನೆಲಮಂಗಲ ಸಂಚಾರ ಪೊಲೀಸರು ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಹಿಂಬದಿ ಸವಾರ ವಾಹನದ ನಂಬರ್ ಪ್ಲೇಟ್ ಕಾಣದಂತೆ ಕೈಯಲ್ಲಿ ಮರೆ ಮಾಡಿರುವುದು

ಹೆಡ್ ಕಾನ್‌ಸ್ಟೆಬಲ್ ಅಮಾನತು

ಬೆಂಗಳೂರು: ಶೂ ಧರಿಸಿದ್ದ ಕಾಲಿನಿಂದ ಮಹಿಳಾ ಕಾನ್‌ಸ್ಟೆಬಲ್‌ಗೆ ಒದ್ದು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಪ್ರಕರಣದಲ್ಲಿ ಉಪ್ಪಾರಪೇಟೆಯ ಹೆಡ್ ಕಾನ್‌ಸ್ಟೆಬಲ್ ಬಿ.ಜಿ.ಗೋವಿಂದರಾಜು ಅವರನ್ನು ಅಮಾನತು ಮಾಡಲಾಗಿದೆ.

ರೇಣುಕಾ ಅವರು ನೀಡಿದ ದೂರು ಆಧರಿಸಿ ಉಪ್ಪಾರಪೇಟೆ ಠಾಣೆಯಲ್ಲಿ ಗೋವಿಂದರಾಜು ಅವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

‘ಜೂನ್ 10ರಂದು ಘಟನೆ ನಡೆದ ಸಂದರ್ಭದಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗಿದೆ. ರೇಣುಕಾ ಅವರಿಗೆ ಅವಾಚ್ಯ ಪದಗಳಿಂದ ನಿಂದಿಸಿ ಶೂ ಧರಿಸಿದ್ದ ಕಾಲಿನಿಂದ ಒದ್ದು ದೌರ್ಜನ್ಯ ಎಸಗಿರುವುದು ದೃಢಪಟ್ಟಿದೆ. ಹೀಗಾಗಿ, ಗೋವಿಂದರಾಜು ಅವರನ್ನು ಅಮಾನತು ಮಾಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐಐಎಸ್‌ಸಿ ಸಹಾಯಕ ಪ್ರಾಧ್ಯಾಪಕರ ವಿರುದ್ಧದ ದೂರು

ಪೋಕ್ಸೊ ಪ್ರಕರಣ ರದ್ದುಗೊಳಿಸಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಆರೋಪದ ಪ್ರಕರಣಗಳಲ್ಲಿ ಗಣನೀಯ ಪುರಾವೆಗಳು ಲಭ್ಯವಿದ್ದರೆ, ಪ್ರಾಸಿಕ್ಯೂಷನ್ ವೈದ್ಯಕೀಯ ಪರೀಕ್ಷೆಯ ಕೊರತೆಯನ್ನು ಮುಂದುಮಾಡಿ ಪ್ರಕರಣವನ್ನು ಅಮಾನ್ಯಗೊಳಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

ಎಂಟು ಪುಟ್ಟ ಬಾಲಕಿಯರ ಜೊತೆ ಅಸಭ್ಯವಾಗಿ ವರ್ತಿಸಿದ ಆರೋಪದಡಿ ಪೋಕ್ಸೊ ಪ್ರಕರಣ ಎದುರಿಸುತ್ತಿರುವ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಹಾಯಕ ಪ್ರಾಧ್ಯಾಪಕರೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ನಿರಾಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ; ‘ಪೋಕ್ಸೊ ಕಾಯ್ದೆಯಡಿ ವಿಚಾರಣೆಗೆ ಅರ್ಹವಾದ ಒಂದೇ ಒಂದು ವಿಶ್ವಾಸಾರ್ಹ ವಿವರಣೆ ಇದ್ದರೂ ಸಾಕು ಪ್ರಕರಣವನ್ನು ನಿಃಸ್ಸಂಶಯವಾಗಿ ವಿಚಾರಣೆಗೆ ಒಳಪಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬಹುದು’ ಎಂದು ಸ್ಪಷ್ಟಪಡಿಸಿದೆ.

ಐಐಎಸ್‌ಸಿಯಲ್ಲಿ ಬೋಧನೆ ಮಾಡುತ್ತಿರುವ 44 ವರ್ಷದ ಸಹಾಯಕ ಪ್ರಾಧ್ಯಾಪಕರೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಪ್ರಕಟಿಸಿರುವ ನ್ಯಾಯಪೀಠ, ಪ್ರಕರಣದಲ್ಲಿ ಆರೋಪಿಯ ಅನುಚಿತ ವರ್ತನೆಯ ಬಗ್ಗೆ ಎಂಟು ಮಕ್ಕಳು ಏಕರೂಪದ ಹೇಳಿಕೆಗಳನ್ನು ನೀಡಿರುವುದನ್ನು ಗಂಭೀರವಾಗಿ ಪರಿಗಣಿಸಿದೆ. ‘ಈ ಹೇಳಿಕೆಗಳು ಇಡೀ ಪ್ರಕರಣದ ಪೂರ್ಣ ವಿಚಾರಣೆಯ ಅಗತ್ಯವನ್ನು ಒತ್ತಿಹೇಳುತ್ತದೆ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಆರೋಪಿಯ ಮಗಳ ಹುಟ್ಟುಹಬ್ಬವನ್ನು ಅವರ ಮನೆಯಲ್ಲಿ 2018ರ ಸೆ. 30ರಂದು ಆಚರಿಸಲಾಗಿತ್ತು. ಅಂದು ನಡೆದ ಪಾರ್ಟಿಯಲ್ಲಿ ಕತ್ತಲೆ ಕೋಣೆಯಲ್ಲಿ ‘ಘೋಸ್ಟ್ ಹೌಸ್’ (ಭೂತದ ಮನೆ) ಆಟ ಆಯೋಜಿಸಲಾಗಿತ್ತು. ‘ಈ ಆಟ ಆಡುವಾಗ ಸಹಾಯಕ ಪ್ರಾಧ್ಯಾಪಕರು 7ರಿಂದ 8 ಬಾಲಕಿಯರ ಜೊತೆ ಅನುಚಿತವಾಗಿ ವರ್ತಿಸಿದ್ದಾರೆ’ ಎಂದು ಆರೋಪಿಸಿ ಒಬ್ಬ ಬಾಲಕಿಯ ಪೋಷಕರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಬೆಂಗಳೂರು ವಿಶ್ವವಿದ್ಯಾಲಯ
ಕುಲಸಚಿವರ ಕಛೇರಿ, ಜ್ಞಾನಭಾರತಿ, ಬೆಂಗಳೂರು – 56

ನಂ.: ಬಿಯು/ಇ–ಆಡಳಿತ/ಟೆಂಡರ್–ಜಾಹಿರಾತು–02/2025–26 ದಿನಾಂಕ: 12.06.2025

ಇ–ಟೆಂಡರ್ ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯದಿಂದ ಈ ಕೆಳಕಂಡ ಟೆಂಡರ್ ಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ದೊರಕುತ್ತವೆ. ಬಿಡ್ ದಾಖಲೆಗಳನ್ನು https://kppp.karnataka.gov.in ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕು. ಟೆಂಡರ್‌ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧ ರಾಗಿರಲು ಬಿಡ್‌ದಾರರಲ್ಲಿ ವಿನಂತಿಸಲಾಗಿದೆ.

ಕ್ರ.ಸಂ.	ಟೆಂಡರ್‌ಗಳ ವಿವರ
1	ಜ್ಞಾನಭಾರತಿ ಆವರಣದಲ್ಲಿರುವ L-03 ಕ್ವಾರ್ಟರ್ಸ್‌ಗೆ ವಾಟರ್ ಪ್ರೂಫಿಂಗ್, ಬಾಗಿಲುಗಳ ಬದಲಿ ಮತ್ತು ವಿದ್ಯುತ್ ದುರಸ್ತಿ ಕಾರ್ಯಗಳನ್ನು ಒದಗಿಸುವ ಬಗ್ಗೆ. (Call-2)
2	ಜ್ಞಾನ ಭಾರತಿ ಆವರಣದಲ್ಲಿರುವ ಡೇ ಕೇರ್ ಸೆಂಟರ್‌ಗೆ ವಾಟರ್ ಪ್ರೂಫಿಂಗ್ ಮತ್ತು ಇತರ ದುರಸ್ತಿ ಕಾರ್ಯಗಳನ್ನು ಒದಗಿಸುವುದು (Call-2)
3	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಣಿ ಸಂಸ್ಕರಣಾ ಕೊಠಡಿಯಲ್ಲಿ ಹಾನಿಗೊಳಗಾದ ಬಾಗಿಲುಗಳ ಬದಲಾವಣೆ, ಪೇಂಟಿಂಗ್ ಮತ್ತು ಮೊದಲ ಮಹಡಿಯಲ್ಲಿ ಎಲೆಕ್ಟ್ರಿಕಲ್ ರಿಪೇರಿ ಕೆಲಸ ಗಳನ್ನು ಒದಗಿಸುವ ಬಗ್ಗೆ (Call-2)
4	ಜ್ಞಾನಭಾರತಿ ಆವರಣದಲ್ಲಿ ಹಳೆಯದಾದ HT ಮತ್ತು LT ವಿದ್ಯುತ್ ಪ್ರಸರಣ ಮಾರ್ಗಗಳು, RCC ಕಂಬಗಳು, ಪಿನ್ ಮತ್ತು ಡಿಸ್ಕ್ ನಿರೋಧಕಗಳನ್ನು ಬದಲಾಯಿಸುವ ಬಗ್ಗೆ (Call-2)
5	60ನೇ ವಾರ್ಷಿಕ ಘಟಿಕೋತ್ಸವಕ್ಕೆ ಚಿನ್ನದ ಪದಕಗಳ ಪೂರೈಕೆ (Call-2)

ವಾಸಸಂಇ/ವಾ.ಪ್ರ/1207/ಎಸ್‌ಎಸ್‌ಸಿ/2025–26 ಸಹಿ/– ಕುಲಸಚಿವರು

‘ಐ.ಟಿ ದಾಳಿಯೇ ಕೇಂದ್ರದ ಸಾಧನೆ’

ಆನೇಕಲ್: ಕೇಂದ್ರ ಸರ್ಕಾರವು ಅಧಿಕಾರಕ್ಕೆ ಬಂದು 11 ವರ್ಷಗಳಲ್ಲಿ ಕೇಂದ್ರ ಸರ್ಕಾರವು ವಿಪಕ್ಷ ನಾಯಕರ ಮೇಲೆ ದುರುದ್ದೇಶ ಪೂರ್ವಕವಾಗಿ ಐ.ಟಿ, ಇ.ಡಿ ದಾಳಿ ನಡೆಸಿರುವುದೇ ದೊಡ್ಡ ಸಾಧನೆಯಾಗಿದೆ. ಈ 11 ವರ್ಷದಲ್ಲಿ ಬಿಜೆಪಿ ನೀಡಿದ್ದ ಯಾವುದೇ ಆಶ್ವಾಸನೆಯನ್ನು ಈಡೇರಿಸಲಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಹೆಬ್ಬಗೋಡಿಯಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಸರ್ಕಾರ ಇರುವ ರಾಜ್ಯಗಳಲ್ಲಿ ಅಕ್ರಮ ಪತ್ತೆ ಮಾಡುತ್ತಿಲ್ಲ. ಈ ಬಗ್ಗೆ ಐ.ಟಿ, ಇ.ಡಿ ಗಮನ ವಹಿಸಬೇಕು ಎಂದರು.

ವಿದೇಶದಲ್ಲಿರುವ ಕಪ್ಪು ಹಣ ವಾಪಸ್ ತರಲಿಲ್ಲ. ಉದ್ಯೋಗ ಸೃಷ್ಟಿ ಮಾಡಲಿಲ್ಲ. ಅಗತ್ಯ ವಸ್ತುಗಳ ಬೆಲೆ, ಡಿಸೇಲ್, ಪೆಟ್ರೋಲ್ ಮತ್ತು ಗ್ಯಾಸ್ ಸಿಲಿಂಡರ್ ಸೇರಿದಂತೆ ಎಲ್ಲಾ ಬೆಲೆಗಳು ಗಗನಕ್ಕೇರಿವೆ. ಗಾಳಿ ಬೆಳಕು ಬಿಟ್ಟು ಉಳಿದ ಎಲ್ಲಾ ಪದಾರ್ಥಕ್ಕೂ ಜಿಎಸ್‌ಟಿ ಹಾಕಿದ ಕೀರ್ತಿ ಕೇಂದ್ರ ಸರ್ಕಾರಕ್ಕೆ ಸಲ್ಲುತ್ತದೆ ಲೇವಡಿ ಮಾಡಿದರು.

ಉದ್ಯೋಗ ನೀಡುತ್ತೇವೆ ಎಂದು ಅಧಿಕಾರಕ್ಕೆ ಬಂದ ಬಿಜೆಪಿಯ ಅವಧಿಯಲ್ಲಿ ನಿರುದ್ಯೋಗ ಸೃಷ್ಟಿದ್ದೇ ಹೆಚ್ಚು. ಜೊತೆಗೆ ಹಲವು ಸಾರ್ವಜನಿಕ ಕ್ಷೇತ್ರಗಳ ಉದ್ಯೋಗಿಗಳು ಕೆಲಸ ಕಳೆದುಕೊಂಡರು. ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿದೆ ಎಂದರು.

ವಿಮಾನ ನಿಲ್ದಾಣ, ರೈಲು ಸೇರಿದಂತೆ ಹಲವಾರು ಸರ್ಕಾರಿ ಸ್ವಾಮ್ಯವನ್ನು ಮಾರಾಟ ಮಾಡಿದ್ದು ಮತ್ತೊಂದು ಸಾಧನೆಯಾಗಿದೆ ಎಂದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

[illegible]

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರಗಳು)

[illegible]

ಸಹಿ/– ಶ್ರೀ ಶ್ರೀನಿವಾಸ್ ಬಿ.ಆರ್., ಪಾಲುದಾರರು
ಡಿ.ಎಸ್.ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ,
ನಂ.7/1 & 7/7, ಬ್ರಂಟನ್ ರಸ್ತೆ,
ಬೆಂಗಳೂರು–560025 ದೂ.ಸಂ. 080-69548770

ದಿನಾಂಕ:12.06.2025
ಬೆಂಗಳೂರು

ಸಾರ್ವಜನಿಕ ಪ್ರಕಟಣೆ

[illegible]

CONNECT

BUSES FOR SALE

REG NO.	MAKE	MODEL	FC	PERMMIT	CAPACITY	INSURANCE	TAX
KA 01 D 9028	SWARAJ MAZDA	2010	Expired	30-06-2025	32 + 1	02-08-2025	31-05-2025
KA 03 D 8834	SWARAJ MAZDA	2010	06-06-2025	10-04-2026	42 + 1	20-08-2025	31-05-2025
KA 03 D 8835	SWARAJ MAZDA	2010	06-06-2025	10-04-2026	32 + 1	01-08-2025	31-03-2025
KA 01 D 3926	SWARAJ MAZDA	2009	Expired	Expired	22	Expired	Expired

For details & Vehicle Inspection please contact:
The Principal
BISHOP COTTON BOY'S SCHOOL
Residency Road, Bangalore-560 025
ROUNAQH

EDUCATIONAL

Tuitions

SRI YNES conducts tuitions, counselling and study skills for students class1-10. Contact: 9449711661/9449711662.

PERSONAL

Lost

DOCUMENT LOST
I, Shashank K S/o Kumar D, Residing at #569, C Sector, Amrut Nagar, Bengaluru - 92, have lost my Home Sale deed copy Document No./ Identification No./ 94.c/n.a/Yelahanka 3/ cir-2284-04-05. If found please contact: 8892719176

Change of Name

I, KAMALAKSHAMMA. T.R., Residing at #1148 8th cross, Maheshwarinagar T.Dasarahalli, Bangalore-57 have changed my name as KAMALA. T.R., vide affidavit dated 10/06/2025 before Notary V.Anjanappa, Bangalore

I, SHAMANTHA KUMAR BASAVAPATNA NARAYANASHETTY R/o, #86, 2nd Main, Mallige Thota Cholurpalya, Magadi Road, Bengaluru-23 have changed my name as SHAMANTH KUMAR BASAVAPATNA NARAYANASHETTY Vide affidavit dated 5/6/2025 before Notary H.S. Sakalesh Aradhya, Bangalore

ADMISSION CORNER

SRI KRISHNA GROUP OF INSTITUTIONS
ITI Layout, (Near Vidya peeta) Banasahankkari 3rd Stage, Bengaluru-85
Contact : 080-26796020, 9844784320
ADMISSIONS OPEN 2025-26
PUC Science & Commerce
UG Degree Courses (Day) B.Com, BBA & BCA
UG Degree Course (Evening) B.Com
PG Degree Courses M.Com & MBA
Hurry Up
ONLY FEW SEATS ARE AVAILABLE
- Admission for Nominal Fees
- Excellent atmosphere for study
Websites:
School - www.skies.org.in,
PUC - www.skpuc.edu.in,
Degree/MCom www.skdc.edu.in,
PG-www.skibsbschool.edu.in
KG to PG @ SKIES

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

House

Banashankari

SALE RESIDENTIAL Independent Bungalow in BSK 2nd Stage 36X85, Built-up 10,000sft, West facing, Basement 4 Carparking, G+3 floors with terrace Garden & lift, Ready to Move Verna Developers, Barton Center MG Road 9353128035/ 9916310226 (Brokers excuse)

JOB OPPORTUNITIES

Drivers

DRIVERS WANTED with Yellow Badge and Good Experience Preferred Staying in and around Basavanagudi: 9019282328

HRD & Admin

WANTED FIELD / recruitment officers for a reputed Facilities & Security Management company. Salary-35K-50K Contact - 8050290580/8310882699

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN *Conditions apply
www.dhclassifieds.com
BOOK NOW
For more details contact:
9845114560
9886213331

ನವೀಕೃತ ವೆಂಕಟಪ್ಪ ಚಿತ್ರಶಾಲೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್

ಶಾಲೆಗಳಲ್ಲಿ ಚಿತ್ರಕಲಾ ಸ್ಪರ್ಧೆಗೆ ₹ 25 ಕೋಟಿ

ಪ್ರಜಾವಾಣಿ ವಾರ್ತೆ

ನವೀಕೃತ ವೆಂಕಟಪ್ಪ ಚಿತ್ರಶಾಲೆಯಲ್ಲಿ ಇರುವ ವೆಂಕಟಪ್ಪ ಅವರ ವೀಣೆಗಳನ್ನು ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ ಸೇರಿದಂತೆ ಅತಿಥಿಗಳು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಕಲೆಗೆ ಪ್ರೋತ್ಸಾಹ ನೀಡುವುದಕ್ಕಾಗಿ ರಾಜ್ಯದ ಶಾಲಾ, ಕಾಲೇಜುಗಳ ಮಟ್ಟದಲ್ಲಿ ಮತ್ತು ಸಾರ್ವಜನಿಕರಿಗೆ ಚಿತ್ರಕಲಾ ಸ್ಪರ್ಧೆಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಅದಕ್ಕೆ ₹ 25 ಕೋಟಿ ಅನುದಾನ ಒದಗಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಗುರುವಾರ ನಡೆದ ನವೀಕೃತ ವೆಂಕಟಪ್ಪ ಚಿತ್ರಶಾಲೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮ್ಮ ಸಂಸ್ಕೃತಿಯೇ ದೇಶದ ಆಸ್ತಿ. ಕಲೆ, ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮ ಜವಾಬ್ದಾರಿ. ಅದಕ್ಕಾಗಿ ಸ್ಪರ್ಧೆಗಳನ್ನು ನಡೆಸಲಾಗುವುದು. ಸ್ಪರ್ಧೆಯ ರೂಪುರೇಷೆಗಳನ್ನು ತಯಾರು ಮಾಡಲು ಶಿಕ್ಷಣ ಸಚಿವರೊಂದಿಗೆ ಚರ್ಚಿಸಲಾಗುವುದು. ಡಿಸೆಂಬರ್‌ನಲ್ಲಿ ಸ್ಪರ್ಧೆ ನಡೆಸಲು ವ್ಯವಸ್ಥೆ ಮಾಡಲಾಗುವುದು' ಎಂದರು.

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಮಾತನಾಡಿ, 'ವೆಂಕಟಪ್ಪ ಚಿತ್ರ ಗ್ಯಾಲರಿಯ ನವೀಕರಣಕ್ಕೆ ಸರ್ಕಾರ ಒಂದು ಪೈಸೆಯೂ ಖರ್ಚು ಮಾಡಿಲ್ಲ. ಎಲ್ಲವನ್ನೂ ಬ್ರಿಗೇಡ್ ಫೌಂಡೇಷನ್ ಭರಿಸಿದೆ. ಇದರ ನೆಲಮಹಡಿಯಲ್ಲಿರುವ ಗ್ಯಾಲರಿಯನ್ನು ಬ್ರಿಗೇಡ್ ಗ್ಯಾಲರಿಯನ್ನಾಗಿ ಮಾಡಲು ಅವಕಾಶ ಮಾಡಿಕೊಡುವಂತೆ ಬ್ರಿಗೇಡ್ ಫೌಂಡೇಷನ್ ಕೇಳಿದೆ. ಈ ಬಗ್ಗೆ ಪ್ರವಾಸೋದ್ಯಮ ಇಲಾಖೆಯಿಂದ ಪ್ರಸ್ತಾವವನ್ನು ಸರ್ಕಾರದ ಮುಂದೆ ಇಡಲಾಗುವುದು' ಎಂದು ತಿಳಿಸಿದರು.

'ಯಾವುದೇ ಕೆಲಸಕ್ಕೆ ಶಂಕುಸ್ಥಾಪನೆ ಮಾಡಿದರೆ, ಕಾಮಗಾರಿ ಮುಗಿದು ಉದ್ಘಾಟನೆಗೆ ಸಿದ್ಧವಾಗುವ ಹೊತ್ತಿಗೆ ನಮ್ಮ ಅಧಿಕಾರಾವಧಿ ಮುಗಿದಿರುತ್ತಿತ್ತು. ಇನ್ಯಾರೋ ಉದ್ಘಾಟಿಸುತ್ತಿದ್ದರು. ಆದರೆ, ವೆಂಕಟಪ್ಪ ಗ್ಯಾಲರಿ ನವೀಕರಣ ಕೆಲಸವನ್ನು ಬ್ರಿಗೇಡ್‌ನವರು ಕೇವಲ ಒಂದೂವರೆ ವರ್ಷದ ಒಳಗೆ ಮುಗಿಸಿದ್ದಾರೆ. ಸರ್ಕಾರ ಮತ್ತು ಖಾಸಗಿಯವರು ಪ್ರಾಮಾಣಿಕವಾಗಿ ಕೈಜೋಡಿಸಿದಾಗ ಇದು ಸಾಧ್ಯವಾಗಲಿದೆ' ಎಂದು ಬಣ್ಣಿಸಿದರು.

ಲಕ್ಕುಂಡಿಯಲ್ಲಿ ಪ್ರಾಚ್ಯಕಲೆಗಳನ್ನು ಹೊಂದಿರುವ ಅನೇಕ ಗುಡಿಗಳು ಮಣ್ಣಿನಲ್ಲಿ ಮುಚ್ಚಿ ಹೋಗುತ್ತಿವೆ. ಇದರ ಕಡೆಗೆ ಕೂಡ ಬ್ರಿಗೇಡ್ ಫೌಂಡೇಷನ್ ಗಮನಹರಿಸಬೇಕು. ನಾಲ್ಕೈದು ಗುಡಿಗಳನ್ನು ಇದೇ ರೀತಿ ಅಭಿವೃದ್ಧಿಪಡಿಸಬೇಕು. ಇಲ್ಲಿಯ ರೀತಿಯಲ್ಲಿ ಕೋಟ್ಯಂತರ ರೂಪಾಯಿ ಅಲ್ಲಿ ಬೇಕಾಗಿಲ್ಲ. ಕೆಲವೇ ಲಕ್ಷ ರೂಪಾಯಿ ಸಾಕಾಗುತ್ತದೆ ಎಂದು ಹೇಳಿದರು.

ವೆಂಕಟಪ್ಪ ಬಗ್ಗೆ ವಿ.ಎಫ್. ಚುಳಕಿ, ಕೆ.ಕೆ. ಹೆಬ್ಬಾರ್ ಬಗ್ಗೆ ರಜನಿ ಹೆಬ್ಬಾರ್, ರುಮಾಲೆ ಚನ್ನಬಸವಯ್ಯ ಬಗ್ಗೆ ಸಂಜಯ್ ಕಬೆ ಮಾತನಾಡಿದರು. ಬ್ರಿಗೇಡ್ ಗ್ರೂಪ್ ಚೇರ್‌ಮನ್ ಎಂ.ಆರ್. ಜೈಶಂಕರ್, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್, ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ.ಫಹೀಮ್, ನಿರ್ದೇಶಕ ರಾಜೇಂದ್ರ, ಪುರಾತತ್ವ ಇಲಾಖೆಯ ಆಯುಕ್ತ ದೇವರಾಜು ಎ., ನಿರ್ದೇಶಕಿ ಸ್มิತಾ ಡಿ. ಉಪಸ್ಥಿತರಿದ್ದರು.

ಇಂದು ಫೋರಂನಿಂದ ಗ್ಯಾಲರಿ ಪ್ರವೇಶ

ನವೀಕೃತ ವೆಂಕಟಪ್ಪ ಚಿತ್ರಶಾಲೆಯ ಉದ್ಘಾಟನೆ ಕಾರ್ಯಕ್ರಮಕ್ಕೆ ಕಲಾವಿದರನ್ನು ಕರೆಯದೇ ನಿರ್ಲಕ್ಷಿಸಿರುವುದನ್ನು ವಿರೋಧಿಸಿರುವ ವೆಂಕಟಪ್ಪ ಆರ್ಟ್ ಗ್ಯಾಲರಿ ಫೋರಂ ಕಾರ್ಯಕ್ರಮವನ್ನು ಬಹಿಷ್ಕರಿಸಿದೆ. ಅಲ್ಲದೇ ಜೂನ್ 13ರಂದು ಬೆಳಿಗ್ಗೆ 11.30ಕ್ಕೆ 'ವೆಂಕಟಪ್ಪ ಆರ್ಟ್ ಗ್ಯಾಲರಿ ಪ್ರವೇಶ ಕಾರ್ಯಕ್ರಮ ಹಮ್ಮಿಕೊಂಡಿದೆ. ವೆಂಕಟಪ್ಪ ಗ್ಯಾಲರಿಯನ್ನು ಉಳಿಸಲು ಫೋರಂ ಹೋರಾಟ ನಡೆಸಿತ್ತು. ನವೀಕರಣದ ಸಂದರ್ಭದಲ್ಲಿ ಪ್ರವಾಸೋದ್ಯಮ, ಪುರಾತತ್ವ ಇಲಾಖೆಯೊಂದಿಗೆ ಸಂವಹನ ನಡೆಸಿಕೊಂಡು ಬಂದಿತ್ತು. ಉದ್ಘಾಟನೆಗೆ ಕೇವಲ ರಾಜಕಾರಣಿಗಳನ್ನು ಆಹ್ವಾನಿಸಿ, ಕಲಾವಿದರನ್ನು ಹೊರಗಿಡುವ ಮೂಲಕ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಫೋರಂ ತಿಳಿಸಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮಾಜಿ ಅಧ್ಯಕ್ಷ ಡಾ.ಎಸ್.ಸೋಮನಾಥ್ ಅವರು ಚಾಣಕ್ಯ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ ಗುರುವಾರ ಅಧಿಕಾರ ಸ್ವೀಕರಿಸಿದರು

ಚಾಣಕ್ಯ ವಿ.ವಿ ಕುಲಾಧಿಪತಿಯಾಗಿ ಸೋಮನಾಥ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಡಾ.ಎಸ್.ಸೋಮನಾಥ್ ಅವರು ಚಾಣಕ್ಯ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ ಗುರುವಾರ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಮಾತನಾಡಿದ ಸೋಮನಾಥ್, 'ವಿಶ್ವವಿದ್ಯಾಲಯದ ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಶಿಕ್ಷಕರು ಗುರುತಿಸಿ, ಪ್ರೋತ್ಸಾಹಿಸಬೇಕು. ಚಾಣಕ್ಯ ವಿ.ವಿ ಭವಿಷ್ಯದ ಸವಾಲುಗಳಿಗೆ ಸ್ಪಂದಿಸುವ ಆಧುನಿಕ ನಳಂದ ಅಥವಾ ತಕ್ಷಶಿಲಾ ವಿ.ವಿಯಾಗಿ ರೂಪುಗೊಳ್ಳಬೇಕು' ಎಂದರು.

ವಿಶ್ವವಿದ್ಯಾಲಯವು ಹೆಚ್ಚಿನ ಪರಿಣಾಮ ಬೀರುವ, ಉದ್ಯಮಕ್ಕೆ ಸಂಬಂಧಿಸಿದ ನಾವೀನ್ಯತೆಗೆ ಮುಂದಾಳತ್ವ ವಹಿಸುವಂತಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಕುಲಾಧಿಪತಿ ಪ್ರೊ. ಎಂ. ಕೆ. ಶ್ರೀಧರ್, ಸಮ ಕುಲಾಧಿಪತಿ ಪ್ರೊ. ಎಂ. ಪಿ. ಕುಮಾರ್, ಕುಲಪತಿ ಪ್ರೊ. ಯಶವಂತ ಡೊಂಗ್ರೆ, ಸಮಕುಲಪತಿ ಪ್ರೊ. ಎಚ್. ಎಸ್. ಸುಬ್ರಮಣ್ಯ, ಮುಖ್ಯ ಕಾರ್ಯಾಚರಣೆ ಅಧಿಕಾರಿ ನಾಗರಾಜ್ ರೆಡ್ಡಿ, ಕುಲಸಚಿವರು, ಡೀನ್, ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೋಮುಲ್: ಇಂದಿನಿಂದ ನಾಮಪತ್ರ ಸಲ್ಲಿಕೆ

ಕೋಲಾರ: ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ (ಕೋಮುಲ್) ಆಡಳಿತ ಮಂಡಳಿಯ 13 ನಿರ್ದೇಶಕರ ಚುನಾವಣೆಗೆ ದಿನಗಣನೆ ಆರಂಭವಾಗಿದ್ದು, ಶುಕ್ರವಾರ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಚಿರಸ್ಮರಣೆ

ಶ್ರೀ ಚಿಕ್ಕಪುಟ್ಟಯ್ಯ
ನಿಧನ: 13.06.2000
ನೀವು ನಮ್ಮನ್ನಗಲಿ ಇಂದಿಗೆ 25 ವರ್ಷಗಳು ಉರುಳಿವೆ.
ನಿಮ್ಮ ಆದರ್ಶಮಯ ಜೀವನ ಪ್ರೀತಿ ವಾತ್ಸಲ್ಯ ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿ ಉಳಿದಿದೆ.
ಸದಾ ನಿಮ್ಮ ನೆನಪಿನಲ್ಲಿ
ಮಕ್ಕಳು, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ

ಸಂಕ್ಷಿಪ್ತ ಸುದ್ದಿ

ಇದೇ 14ರಂದು ಬಾಲಪ್ರತಿಭೆಗಳ ಪ್ರದರ್ಶನ

ಬೆಂಗಳೂರು: ಪರಂಪರಾ ಕಲ್ಚರಲ್ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ 'ಬಾಲಕಲಾ ಕಾರಂಜಿ' ಪ್ರತಿಭಾಶೋಧದಲ್ಲಿ ಆಯ್ಕೆಯಾದ ಬಾಲಪ್ರತಿಭೆಗಳ ಪ್ರತಿಭಾ ಪ್ರದರ್ಶನ ಜೂನ್ 14ರಂದು ಮಧ್ಯಾಹ್ನ 2.30ಕ್ಕೆ ನಯನ ಸಭಾಂಗಣದಲ್ಲಿ ನಡೆಯಲಿದೆ.

ಮಕ್ಕಳ ಹೃದ್ರೋಗತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎನ್. ದೇವರಾಜ, ಬೆಂಗಳೂರು ಪೂರ್ವ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ನಿರ್ದೇಶಕ ಇ. ರಾಜಪ್ಪ ಮೊದಲಾದವರು ಪಾಲ್ಗೊಳ್ಳಲಿದ್ದಾರೆ ಎಂದು ಪರಂಪರಾ ಕಲ್ಚರಲ್ ಫೌಂಡೇಷನ್ ಅಧ್ಯಕ್ಷ ಜಿ.ಪಿ. ರಾಮಣ್ಣ ತಿಳಿಸಿದ್ದಾರೆ.

ಗಾಯನ, ವಾದನ, ನರ್ತನ, ವಾಚನ, ಯಕ್ಷಗಾನ, ಜಾದೂ-ಹೀಗೆ ವಿವಿಧ ಪ್ರಕಾರಗಳಲ್ಲಿ ನೈಪುಣ್ಯ ಸಾಧಿಸಿರುವ ಮಕ್ಕಳು ರಾಜ್ಯದ ವಿವಿಧ ಭಾಗಗಳಿಂದ ಈ ಪ್ರತಿಭಾ ಶೋಧದಲ್ಲಿ ಪಾಲ್ಗೊಂಡಿದ್ದರು. 30 ಬಾಲಪ್ರತಿಭೆಗಳ ಪ್ರದರ್ಶನಕ್ಕೆ ಜೂನ್ 14ರಂದು ಅವಕಾಶ ಮಾಡಿಕೊಡಲಾಗಿದೆ. ಉಳಿದವರಿಗೆ ಪರಂಪರಾ ಕಲ್ಚರಲ್ ಫೌಂಡೇಷನ್‌ನ ಮುಂಬರುವ ಕಾರ್ಯಕ್ರಮಗಳಲ್ಲಿ ಅವಕಾಶ ನೀಡಲಾಗುತ್ತದೆ.

17ರವರೆಗೆ ಕಥಾ ಪ್ರವಚನ

ಬೆಂಗಳೂರು: ರಾಮ ಭದ್ರಾಚಾರ್ಯ ಜಿ. ಮಹಾರಾಜ್ ಅವರಿಂದ ಶ್ರೀಮದ್ ವಾಲ್ಮೀಕಿ ರಾಮಾಯಣ ಕಥಾ ಪ್ರವಚನ ಜೂನ್ 9ರಂದು ಬೆಂಗಳೂರು ಅರಮನೆ ಮೈದಾನದಲ್ಲಿ (9ನೇ ಗೇಟ್) ಆರಂಭವಾಗಿದ್ದು ಜೂನ್ 17ರವರೆಗೆ ನಡೆಯಲಿದೆ. ಶ್ರೀರಾಮ ಪರಿವಾರ್ ದುರ್ಗಾ ಪೂಜಾ ಸಮಿತಿ ಹಮ್ಮಿಕೊಂಡಿರುವ ಈ ಪ್ರವಚನವು ಪ್ರತಿದಿನ ಮಧ್ಯಾಹ್ನ 3 ರಿಂದ ಸಂಜೆ 6ರ ವರೆಗೆ ಇರಲಿದೆ. ಮಾಹಿತಿಗೆ ಮೊಬೈಲ್: 8073190711 ಸಂಪರ್ಕಿಸಬಹುದು ಎಂದು ಸಂಘಟಕರು ತಿಳಿಸಿದ್ದಾರೆ.

'ನವ ಮೈಸೂರು ನಿರ್ಮಾಣಕ್ಕೆ ಚಿಂತನೆ'

ಬೆಂಗಳೂರು: 'ಮೈಸೂರು ಸುತ್ತ-ಮುತ್ತಲಿನ ಪ್ರದೇಶಗಳನ್ನು ನಗರ ವ್ಯಾಪ್ತಿಗೆ ತಂದು ಸಮಗ್ರ ಅಭಿವೃದ್ಧಿ ಸಾಧಿಸಲು 'ನವ ಮೈಸೂರು ನಿರ್ಮಾಣ ಯೋಜನೆ' ರೂಪಿಸುವ ಬಗ್ಗೆ ಚಿಂತನೆ ನಡೆದಿದೆ' ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಅವರು ಹೇಳಿದರು.

ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಜತೆಗೆ ಗುರುವಾರ ನಡೆಸಿದ ಸಭೆಯಲ್ಲಿ ಅವರು ಈ ವಿಚಾರ ಕುರಿತು ಚರ್ಚಿಸಿದರು.

'ಬೆಂಗಳೂರಿನಂತೆಯೇ ಮೈಸೂರು ಸಹ ವೇಗವಾಗಿ ಬೆಳೆಯುತ್ತಿರುವ ನಗರ. ಇಲ್ಲಿ ಐಟಿ, ಬಿಟಿ, ಕೈಗಾರಿಕೆಗಳು ಮತ್ತು ವಸತಿ ಯೋಜನೆಗಳು ಹೆಚ್ಚಾಗುತ್ತಿವೆ. ಜತೆಗೆ ನಗರವೂ ವಿಸ್ತರಣೆಯಾಗುತ್ತಿದೆ. ಇದಕ್ಕೆ ಪೂರಕವಾಗಿ ಸಮಗ್ರ ಯೋಜನೆ ರೂಪಿಸಲು ನಮ್ಮ ಸರ್ಕಾರ ಗಮನ ಹರಿಸಿದೆ' ಎಂದು ಹೇಳಿದರು.

'ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಯೋಚನೆ ಇದೆ' ಎಂದು ಸಚಿವರು ಮಾಹಿತಿ ನೀಡಿದರು.

ಗ್ರಾಮಸಭೆ: ಅಧ್ಯಕ್ಷೆ, ಪಿಡಿಒ ವಿರುದ್ಧ ಬೇಸರ

ಪ್ರಜಾವಾಣಿ ವಾರ್ತೆ

ಗ್ರಾಮ ಪಂಚಾಯಿತಿ ಸಭೆ ನಡೆಯುವ ವೇಳೆ ಅಸಮಾಧಾನಗೊಂಡ ಸದಸ್ಯರು ವೇದಿಕೆ ಹತ್ತದೆ ಅಧ್ಯಕ್ಷರ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದಲ್ಲಿ ಆಯೋಜಿಸಿದ್ದ ಗ್ರಾಮಸಭೆಗೆ ಸರಿಯಾದ ಆಹ್ವಾನ ನೀಡಿಲ್ಲ ಎಂದು ಆರೋಪಿಸಿ ಕನ್ನಮಂಗಲ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಸದಸ್ಯರು ಬೇಸರ ವ್ಯಕ್ತಪಡಿಸಿದರು.

ಕನ್ನಮಂಗಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಉದ್ಘಾಟಿಸಿ, ತೆರಳಿದರು. 16 ಸದಸ್ಯರ ಪೈಕಿ 11 ಸದಸ್ಯರು ಕಾರ್ಯಕ್ರಮಕ್ಕೆ ಗೈರು ಹಾಜರಾದರು.

'ಸಭೆಗೆ ಮುಂಚಿತವಾಗಿ ಆಹ್ವಾನ ನೀಡಿಲ್ಲ, ಕಾಟಾಚಾರಕ್ಕೆ ಕರೆಯಲಾಗಿದೆ. ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ' ಎಂದು ಅಧ್ಯಕ್ಷೆ ಪವಿತ್ರಾ ರವಿಕುಮಾರ್ ಮತ್ತು ಪಿಡಿಒ ಶ್ರೀಧರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಏಳು ತಿಂಗಳಿನಿಂದಲೂ ಸಭೆ ನಡೆಸಿಲ್ಲ. ಪಂಚಾಯಿತಿ ವ್ಯಾಪ್ತಿಗೆ ಬರುವ ಕಾಜಿಸೊಣ್ಣೆನಹಳ್ಳಿಯಲ್ಲಿ ಸಮರ್ಪಕ ಕುಡಿಯುವ ನೀರಿಲ್ಲ. ರಸ್ತೆ ಡಾಂಬರೀಕರಣವಾಗಿಲ್ಲ. ಅಧ್ಯಕ್ಷೆ ಪವಿತ್ರ ಬದಲಾವಣೆ ಮಾಡಬೇಕು' ಎಂದು ಸದಸ್ಯರಾದ ಸೋಮಶೇಖ್, ಯಲ್ಲಪ್ಪ ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರದ್ದು ಶೂನ್ಯ ಸಾಧನೆ

ಕೋಲಾರ: 'ಇಡೀ ದೇಶದಲ್ಲಿ ಶೂನ್ಯ ಸಾಧನೆ ಮಾಡಿದ ಯಾವುದಾದರೂ ರಾಜ್ಯ ಸರ್ಕಾರವಿದ್ದರೆ ಅದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ. ದೇಶದಲ್ಲಿ ಇಂಥ ಕೆಟ್ಟ ಸರ್ಕಾರ ಮತ್ತೊಂದಿಲ್ಲ. ಆದರೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರದ್ದು ಶೂನ್ಯ ಸಾಧನೆ ಎಂದು ಹೇಳಿರುವ ಸಿದ್ದರಾಮಯ್ಯ ರಾಜ್ಯಕ್ಕೆ ಅವಮಾನ ಮಾಡಿದ್ದಾರೆ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ವಾಗ್ದಾಳಿ ನಡೆಸಿದರು. ಅವರು ಸುದ್ದಿಗಾರರ ಜತೆ ಮಾತನಾಡಿದರು.

ಪುರಸಭಾ ಕಾರ್ಯಾಲಯ, ಬಿಡದಿ

ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ – 562109
ದೂರವಾಣಿ : 080–27282572
e-mail: itstaff_ulb_bidadi@yahoo.co.in / tmcbidadi@gmail.com
website: http://www.bidaditown.mrc.gov.in

ಸಂಖ್ಯೆ: ಪುಕಾಬಿ/ಆ.ಶಾ/ಸಿಆರ್/01/2025–26 ದಿನಾಂಕ: 12.06.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ಬಿಡದಿ ಪುರಸಭೆಯ 2025–26ನೇ ಸಾಲಿನ ಪುರಸಭಾ ನಿಧಿಯಡಿ ಶೇ.24.10 ಅನುದಾನ ಹಾಗೂ ಪುರಸಭಾ ನಿಧಿ ಅನುದಾನದಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ.	ಟೆಂಡರ್ ವಿವರ	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ
1	ಬಿಡದಿ ಪುರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳಿಗೆ ಮಾಸ್ಟರ್ ಹೆಲ್ತ್ ಚೆಕ್ ಅಪ್	12,000.00	ಅರ್ಹ ದರ್ಜೆ ಗುತ್ತಿಗೆದಾರರು

ಸೂಚನೆ: 1) ಟೆಂಡರ್ ಡಾಕ್ಯುಮೆಂಟ್ ಪಡೆಯಲು ಕೊನೆಯ ದಿನಾಂಕ : 19.06.2025 ಸಂಜೆ 5.30 ಗಂಟೆವರೆಗೆ. 2) ಬಿಡ್ ತೆರೆಯುವ ದಿನಾಂಕ : 20.06.2025ರ ಸಂಜೆ 4.00 ಗಂಟೆ ನಂತರ. 3) ಇ.ಎಂ.ಡಿ. ಮೊತ್ತವನ್ನು ಚೆಕ್/ಡಿಡಿ ಮೂಲಕ Chief Officer, TMC Bidadi ರವರ ಹೆಸರಿಗೆ ಸಲ್ಲಿಸಬಹುದು.

ಷರತ್ತುಗಳು : ಹೆಚ್ಚಿನ ವಿವರಗಳಿಗೆ ಕಚೇರಿಯ ವೇಳೆಯಲ್ಲಿ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯಾಧಿಕಾರಿಗಳು ಪುರಸಭೆ, ಬಿಡದಿ
ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ಬಿಡದಿ

DIPR/BSD/161/SA/2025-26

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ–563 103
Email:bnuregevl@karnataka.gov.in
web:www.bnu.karnataka.gov.in

ದಿನಾಂಕ: 11.06.2025

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 5ನೇಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಕ್ರಿಯೆಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂದಿಸಿದಂತೆ ಗೋಲ್ಡ್ ಮೆಡಲ್ ಸರಬರಾಜು ಮಾಡುವ ಬಗ್ಗೆ.
ಟೆಂಡರ್ ನಂ: BNU/2025-26/ IND0047

ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ಟೆಂಡರ್ ದಾಖಲೆಗಳನ್ನು **ದಿನಾಂಕ: 11.06.2025** ರಿಂದ **http://kppp.karnataka.gov.in** ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/–
ಕುಲಸಚಿವರು (ಮೌ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ–563103

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:118/ಕೆಎಸ್‌ಎಂಸಿಎ/2025–26

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು(ಡಿಆರ್‌ಟಿ -2)
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು – 560 001.

ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))
ಡಿಮ್ಯಾಂಡ್ ನೋಟೀಸು
ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್
ಆರ್‌ಸಿ ನಂ. **378/2022** . ಟಿ. ಎ. ನಂ. 617/2017
ಕರ್ನಾಟಕ ಬ್ಯಾಂಕ್ ಲಿಮಿಟೆಡ್ V/s ಮುನಿಬೈರೇಗೌಡ ಬಿ ಮತ್ತು ಇತರರು

ಇವರಿಗೆ: (ಸಿಹೆಚ್‌ಬಿ) **ಕರ್ನಾಟಕ ಬ್ಯಾಂಕ್ ಲಿಮಿಟೆಡ್,** ನಂ. 5006/5011, ಲಕ್ಷ್ಮಿ ಕಾಂಪ್ಲೆಕ್ಸ್, ಬಿ. ಹೆಚ್. ರಸ್ತೆ, ಸುಭಾಷ್ ನಗರ, ನೆಲಮಂಗಲ ಬೆಂಗಳೂರು ಗ್ರಾಮಾಂತರ ...... **ಸರ್ಟಿಫಿಕೇಟ್ ಹೋಲ್ಡರ್**
ವಿರುದ್ಧ
(ಸಿಡಿ 1) **ಶ್ರೀ ಮುನಿಬೈರೇಗೌಡ ಬಿ.** S/o. ಶ್ರೀ ಬೈರಣ್ಣ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
(ಸಿಡಿ 2) **ಮಂಜುನಾಥ ಎಸ್. ಎಂ.** S/o. ಮುನಿಬೈರೇಗೌಡ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
(ಸಿಡಿ 3) **ಹರೀಶ್ ಎಸ್. ಎಂ.** S/o. ಮುನಿಬೈರೇಗೌಡ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
(ಸಿಡಿ 4) **ರವಿಪ್ರಕಾಶ್ ಎಸ್. ಎಂ.** S/o. ಮುನಿಬೈರೇಗೌಡ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
(ಸಿಡಿ 5) **ಭೈರಹನುಮೇಗೌಡ ಎಸ್. ಎಂ.** S/o. ಮುನಿಬೈರೇಗೌಡ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
(ಸಿಡಿ 6) **ಶಿವಕುಮಾರ್ ಎಸ್. ಎಂ.** S/o. ಮುನಿಬೈರೇಗೌಡ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
(ಸಿಡಿ 7) **ಮಂಗಳಮ್ಮ @ ಸರ್ವಮಂಗಳ ಎಸ್. ಎಂ.** D/o. ಮುನಿಬೈರೇಗೌಡ, ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ.
... **ಪ್ರತಿವಾದಿಗಳು/ಸರ್ಟಿಫಿಕೇಟ್ ಡೆಟರ್ಸ್**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ–2) ಇವರು, ಟಿ.ಎ. ನಂ./617/2017ರಂತೆ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.7886200/-** (ರೂಪಾಯಿ ಎಪ್ಪತ್ತೆಂಟು ಲಕ್ಷ ಎಂಬತ್ತಾರು ಸಾವಿರದ ಇನ್ನೂರು ಮಾತ್ರ) ಜೊತೆಗೆ ದಿನಾಂಕ 29.04.2015 ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ಶೇ.15.50% ರಂತೆ ಸರಳ ಬಡ್ಡಿ, ಮತ್ತು ವೆಚ್ಚ ನಿಮ್ಮಿಂದ (ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ) ಬಾಕಿ ಇರುತ್ತದೆ.(2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸ ಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ.4. ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸು ನೀಡಿದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು.5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ) ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲ ವಸೂಲಾತಿ ಮಾಡುವಲ್ಲಿ ತಗಲುವ ಎಲ್ಲಾ ಖರ್ಚು ಮತ್ತು ವೆಚ್ಚಗಳು.
ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **14.06.2023** ರಂದು ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ–2)

ವಸೂಲಾತಿ ಅಧಿಕಾರಿಯವರ ಕಚೇರಿ 1/2
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ -2)
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು – 560 001.

ಪ್ರತಿವಾದಿ ನಂ. 4 ಆದ ಲೇಟ್ ಎಸ್. ಎಂ. ರವಿಪ್ರಕಾಶ್ ಇವರ ಕಾನೂನುಬದ್ಧವಾರಸುದಾರರಿಗೆ ನೋಟೀಸು
ಆರ್‌ಸಿ ನಂ. **378/2022** . ಟಿ. ಎ. ನಂ. 617/2017

ನಡುವೆ: ಕರ್ನಾಟಕ ಬ್ಯಾಂಕ್ ಲಿಮಿಟೆಡ್, ನೆಲಮಂಗಲ ನಂ. 5006/5011, ಲಕ್ಷ್ಮಿ ಕಾಂಪ್ಲೆಕ್ಸ್, ಬಿ. ಹೆಚ್. ರಸ್ತೆ, ಸುಭಾಷ್ ನಗರ, ನೆಲಮಂಗಲ ಬೆಂಗಳೂರು ಗ್ರಾಮಾಂತರ ...... **ಸರ್ಟಿಫಿಕೇಟ್ ಹೋಲ್ಡರ್**
ವಿರುದ್ಧ
ಶ್ರೀ ಮುನಿಬೈರೇಗೌಡ ಬಿ. ಮತ್ತು ಇತರರು ...**ಸರ್ಟಿಫಿಕೇಟ್ ಡೆಟರ್ಸ್**
ಸಿಡಿಆರ್ ನಂ. 4 ಲೇಟ್ ಎಸ್. ಎಂ. ರವಿಪ್ರಕಾಶ್ ಇವರ ಕಾನೂನುಬದ್ಧ ವಾರಸುದಾರರು
1. **ಶ್ರೀಮತಿ ನಾಗರತ್ನ** (ವಯಸ್ಸು 40 ವರ್ಷ) W/o. ಲೇಟ್ ಎಸ್. ಎಂ. ರವಿಪ್ರಕಾಶ್ ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ
2. **ಕುಮಾರಿ ಹರ್ಷಿತಾ** (ವಯಸ್ಸು 22 ವರ್ಷ) D/o ಲೇಟ್ ಎಸ್. ಎಂ. ರವಿಪ್ರಕಾಶ್ ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ
3. **ಕುಮಾರಿ ಯುಕ್ತಾ** (ವಯಸ್ಸು 19 ವರ್ಷ) D/o ಲೇಟ್ ಎಸ್. ಎಂ. ರವಿಪ್ರಕಾಶ್ ನಂ. 79, ಸಕಲದೇವನಪುರ, ಮದುರೆ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ

ಆದಾಗ್ಯೂ, ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು ಟಿ ಎ. ನಂ. 617/2017 ರಲ್ಲಿನ ವಸೂಲಾತಿ ಸರ್ಟೀಫಿಕೇಟ್ ನಂ.378/2022, ಅನ್ನು ಜಾರಿ ಮಾಡಿ ಕೆಳಸಹಿದಾರರಿಗೆ, ಸರ್ಟಿಫಿಕೇಟ್ ಡೆಟರ್ಸ್‌ರವರಿಂದ ಬಾಕಿ ಇರುವ ಮೊತ್ತ **ರೂ.7886200/-** (ರೂಪಾಯಿ ಎಪ್ಪತ್ತೆಂಟು ಲಕ್ಷ ಎಂಬತ್ತಾರು ಸಾವಿರದ ಇನ್ನೂರು ಮಾತ್ರ) ಜೊತೆಗೆ ಅನ್ವಯವಾಗಿ ಬಡ್ಡಿ ಪೀನಲ್ ಬಡ್ಡಿ ವಸೂಲಿಗಾಗಿ ಕಳುಹಿಸಿರುತ್ತಾರೆ ಮತ್ತು ಪ್ರಿಸೈಡಿಂಗ್ ಆಫೀಸರ್ ರವರು ಆರ್‌ಡಿಬಿ ಆಕ್ಟ್ 1993ರ ನಿಯಮ 19(22)ರ ಅಡಿಯಲ್ಲಿ ಸರ್ಟಿಫಿಕೇಟ್‌ನ ಪ್ರಮಾಣೀಕೃತ ಪ್ರತಿಯನ್ನು ಕೆಳಸಹಿದಾರರಿಗೆ ಕಳುಹಿಸಿ ಮೇಲ್ಕಂಡ ಮೊತ್ತವನ್ನು ಪ್ರತಿವಾದಿ/ಸರ್ಟಿಫಿಕೇಟ್ ಡೆಟರ್ಸ್‌ರವರಿಂದ ವಸೂಲಿ ಮಾಡಲು ಸೂಚಿಸಿರುತ್ತಾರೆ. ಆದರೆ ಸದರಿ ಸರ್ಟಿಫಿಕೇಟ್ ಡೆಟರ್ (ಡಿ–4) ಎಸ್. ಎಂ. ರವಿಪ್ರಕಾಶ್ ಇವರು ನಿಧನಹೊಂದಿರುತ್ತಾರೆ. ನಂ. 1 ರಿಂದ 3 ಇವರನ್ನು ಕಾನೂನುಬದ್ಧ ವಾರಸದಾರರಾಗಿ ಬಿಟ್ಟು ಹೋಗಿರುತ್ತಾರೆ . ಆರ್ ಸಿ ಪ್ರಕಾರ ಮೇಲ್ಕಂಡ 4 ಜನ ಡಿಆರ್‌ಸಿ/ಟಿಆರ್‌ಸಿಯ ಪೂರ್ತಿ ಬಾಕಿ ಮೊತ್ತವನ್ನು ಪಾವತಿಸಲು ಹೊಣೆಗಾರರಾಗಿರುತ್ತಾರೆ. ಸರ್ಟಿಫಿಕೇಟ್ ಹೋಲ್ಡರ್ ಬ್ಯಾಂಕ್ ಅದರ ಅಫಿಡವಿಟ್‌ನಲ್ಲಿ ಸೂಚಿಸಿರುವಂತೆ ದಿನಾಂಕ 31.07.2024ರಂತೆ ಬರಬೇಕಾದ ಬಾಕಿ ಮೊತ್ತ ರೂ.1,92,91,030.00 (ರೂಪಾಯಿ ಒಂದು ಕೋಟಿ ತೊಂಬತ್ತೆರಡು ಲಕ್ಷ ತೊಂಬತ್ತೊಂದು ಸಾವಿರದ ಮೂವತ್ತು ಮಾತ್ರ) ಈ ಮೊತ್ತವು ಪ್ರತಿವಾದಿಗಳಾದ ಡಿ1, ಡಿ2, ಡಿ3, ಡಿ5, ಡಿ6 ಮತ್ತು ಡಿ7 ಇವರಿಂದ ಬಾಕಿ ಇರುತ್ತದೆ (ದಾಖಲೆಗಳಲ್ಲಿ ಇರುವಂತೆ)
ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ, ಆರ್‌ಡಿಡಿಬಿಎಫ್‌ಐ ಆಕ್ಟ್ 1993ರ ಸೆಕ್ಷನ್ 25 ಮತ್ತು 28ರ ಅಡಿಯಲ್ಲಿ ಇನ್‌ಕಂ ಟ್ಯಾಕ್ಸ್‌ಆಕ್ಟ್ 1961ರ ಷೆಡ್ಯೂಲ್ IIನ್ನು ಓದಿಕೊಂಡಂತೆ , ನಿಮ್ಮಿಂದ ಸದರಿ ಮೊತ್ತನ್ನು ಪಾವತಿಸಬೇಕಾದ ಬಡ್ಡಿಯೊಂದಿಗೆ ಮತ್ತು ವಾರಂಟ್ ನೀಡಲು ಮತ್ತು ಇತರ ಕ್ರಮಗಳಿಗೆ ಮತ್ತು ನಿಗದಿತ ಮೊತ್ತವನ್ನು ವಸೂಲಿಮಾಡಲು ನಡೆಸಿದ ಇತರ ಎಲ್ಲಪ್ರಕ್ರಿಯಗೆಳಿಗೆ ತಗಲುವ ವೆಚ್ಚ ವನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ನಿಮಗೆ ಈ ಮೂಲಕ ಸೂಚಿಸಿವುದೇನೆಂದರೆ ಆರ್ (ಡಿಆರ್‌ಸಿ) ಪ್ರಕಾರ ಇರುವ ಬಾಕಿ ಮೊತ್ತ ಮುಂದಿನ ಬಡ್ಡಿ ದಿನಾಂಕ ಮತ್ತು ಈವರೆಗೆ ತಗುಲಿರುವ ಇತರ ಖರ್ಚು,ವೆಚ್ಚಗಳನ್ನು ಈ ನೋಟೀಸು ಜಾರಿಮಾಡಿದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ಸದರಿ ವಿಷಯವನ್ನು ನಿಮ್ಮ ಅನುಪಸ್ಥಿತಿಯಲ್ಲಿ ತೀರ್ಮಾನಿಸಲಾಗುವುದು.
ನನ್ನ ಕೈಯಿಂದ ಮತ್ತು ಈ ಪ್ರಾಧಿಕಾರದ ಮುದ್ರೆಯ ಅಡಿಯಲ್ಲಿ **29.08.2024 ರಂದು** ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ-2
ಡಿಆರ್‌ಟಿ–2, ಬೆಂಗಳೂರು

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ: 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

PUBLIC NOTICE

NOTICE is hereby given that, our client intends to transact with the lands situated in Jigani Village, Jigani Hobli, Anekal Taluk, Bangalore Urban District, measuring 19 acre 33 gunta excluding 15 guntas kharab from the respective owners, which is more fully described in the Schedule hereunder and hereinafter referred to as the **"Schedule Property"**.

Any person having any subsisting claim, right, title or interest, in respect of the Schedule Property or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance howsoever **("Claim")**, are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

SL NO	SY NO	OWNER	EXTENT				BOUNDARIES			
			ACRES	GUNTAS	KHARABH "A"	KHARABH "B"	EAST BY	WEST BY	NORTH BY	SOUTH BY
1.	348/1	K.R. Kodhandarama Reddy, K.R. Rajashekar Reddy, R. Ravindranath Reddy	1	2	0	1	Sy. No. 348/2	Sy. No. 351/1	Sy. No 353 & 347	Sy. No. 349/1
2.	349/1	K.R. Kodhandarama Reddy, K.R. Rajashekar Reddy, R. Ravindranath Reddy	1	3	0	0	Sy. No. 349/2	Sy. No. 351/1 & 351/2	Sy. No. 348/1	Sy. No. 350/1 & 350/2
3.	350/1	K.R. Kodhandarama Reddy, K.R. Rajashekar Reddy, R. Ravindranath Reddy	1	2	0	0	Sy. No. 350/2 & 350/3	Sy. No. 351/2	Sy. No. 349/1	Sy. No. 407
4.	351/1	S. Shashikumar, J S Sandeep s/o. P. Srinivasaiah	0	23	1	0	Sy. No. 348/1 & 349/1	Sy. No. 352	Sy. No. 353	Sy. No. 351/2
5.	352	Vijayakumar s/o. Gundappa	0	5	1	0	Sy. No. 351/1 & 351/2	Sy. Nos. 357, 358 & 359	Sy. Nos. 353 & 354	Sy. No. 405
		Raghunath s/o. Gundappa	0	5						
		Prakash s/o. Gundappa	0	5						
		Paapanna @ Papaiah @ Thimmaiah, Gowramma	0	7						
		P. Venkatesh	0	7						
		P. Mamatha	0	8						
		P. Varalakshmi	0	8						
		P. Jayasheela	0	7						
6.	357	M. Jagannath Reddy s/o. Late. B. Accha Reddy	2	23	2	0	Sy. No. 352	Sy. No. 365	Sy. Nos. 366, 356, 355, 354	Sy. Nos. 362, 361/1, 361/2, 358
7.	362	Jagannath J M s/o late. Munireddy	0	5	0	0	Sy. No. 361/1	Sy. No. 363	Sy. No. 365	Sy. No. 363
8.	364/1	Srinivasa Reddy s/o. late. Chikkamuniswamy Reddy	0	20	0	0	Sy. No. 364/2	Sy. No. 380	Sy. No. 365	Sy. Nos. 388 & 391
		Prasad s/o. Muninarasimhaiah	0	20						
		K.R. Kodhandarama Reddy, K.R. Rajashekar Reddy, R. Ravindranath Reddy	0	2						
9.	364/3	K.R. Kodhandarama Reddy, K.R. Rajashekar Reddy, R. Ravindranath Reddy	0	6	0	0	Sy. No. 363/1 & 363/2	Sy. No. 364	Sy. No. 365	Sy. No. 393
10.	365	M. Jagannath Reddy s/o. late. B. Achha Reddy	1	36	2	0	Sy. No. 357	Sy. No. 380	Sy. Nos. 366 & 367	Sy. Nos. 364/1, 364/2, 364/3 & 362
11.	369/1	Jagannath J M s/o. late. Munireddy	0	13	1	0	Sy. No. 369/2B	Sy. No. 372/2	Sy. No. 374	Sy. Nos. 370/1 & 370/2A
12.	369/2A	Lalithamma, A.S. Prasad, A. Narendra Babu	0	18	1	0	Sy. No. 368	Sy. No. 369/2B	Sy. No. 374	Sy. Nos. 370/2A & 380
13.	369/2B	P. Lakshmidevamma w/o. late. B. Munireddy	0	12	0	0	Sy. No. 369/2A	Sy. No. 369/1	Sy. No. 374	Sy. No. 370/2A
14.	370/1	Jagannath J M s/o. late. Munireddy	1	0	1	0	Sy. No. 370/2B	Sy. No. 371	Sy. Nos. 369/1 & Sy. No. 370/2A	Sy. Nos. 370/2A & 370/2B
15.	370/2A	A. Sridhar s/o. late. Ajja Reddy	0	4	0	0	Sy. No. 380	Sy. No. 370/1	Sy. Nos. 369/1, 369/2A & 369/2B	Sy. Nos. 370/1 & 370/2B
16.	370/2B	A. Sridhar s/o. late. Ajja Reddy	0	30	0	0	Sy. No. 380	Sy. No. 370/1	Sy. No. 370/2A	Sy. No. 379/1
17.	372/2	T. Vijayalakshmi w/o. Srinivasa Reddy	0	26	1	0	Sy. No. 369/1 & 370/1	Sy. No. 372/1	Sy. No. 373	Sy. No. 371
18.	377/2C3	Akbar s/o. Baba Jaan	0	15	0	0	Sy. No. 371	Road	Sy. No. 377/2C2	Sy. No. 377/3
19.	377/3	Mandava Venugopal Naidu s/o. Chinnasubba Naidu	1	2	0	0	Sy. No. 378, 382 & 383/1	Road	Sy. No. 377/2C3	Road and Sy. No. 384
20.	379/1	Lalithamma, A.S. Prasad, A. Narendra Babu	1	12	2	0	Sy. No. 380	Sy. No. 371 & 378	Sy. No. 370/1 & 370/2B	Sy. No. 379/2
21.	379/2	P. Lakshmidevamma w/o. late. B. Munireddy	0	11	0	0	Sy. No. 380	Sy. Nos. 378 & 382	Sy. No. 379/1	Sy. No. 381/2B
22.	381/1	Divya. N w/o. Bhaskar	0	3	0	0	Sy. No. 380	Sy. No. 383/2	Sy. No. 381/2A	Sy. Nos. 385 & 386
23.	381/2A	Lalithamma, A.S. Prasad, A. Narendra Babu	0	11	0	0	Sy. No. 380	Sy. No. 383/2	Sy. No. 381/2B	Sy. No. 381/1
24.	381/2B	A.Amarnath s/o. late. Ajja Reddy	0	17	0	0	Sy. No. 380	Sy. No. 382 & 383/2	Sy. No. 379/2	Sy. No. 381/2A
25.	381/3	M. Anitha w/o. late. Venkatesh Reddy	0	5	0	0	Sy. No. 380	Sy. No. 383/2	Sy. No. 381/1	Sy. No. 381/4
26.	381/4	Amaravathi w/o. Nagraj Reddy	0	3	0	0	Sy. No. 380	Sy. No. 383/2	Sy. No. 381/3	Sy. Nos. 385 & 386
27.	383/1	A.Amarnath & A. Sridhar s/o. late. Ajja Reddy	0	30	1	0	Sy. No. 383/2	Sy. No. 377/3	Sy. No. 382	Sy. No. 384
28.	383/2	Y. Prashanth s/o. Yallappa	0	27	1	0	Sy. Nos. 381/1, 381/2A & 381/2B	Sy. No. 383/1	Sy. No. 382	Sy. No. 384

Dated this 13th day of June 2025

Pavithra Thammaiah
Khaitan & Co LLP
Embassy Quest, 3rd Floor, 45/1, Magrath Road
Bengaluru-560 025
T: +91 80 43397000

ಜಲಾವೃತವಾದ ರಸ್ತೆಗಳಲ್ಲಿ ಗುಂಡಿ ಕಾಣದೆ ವಾಹನ ಸವಾರರ ಪರದಾಟ

ನೀರು ತುಂಬಿದ ಗುಂಡಿ: ಸಂಕಷ್ಟದಲ್ಲಿ ಬಂಡಿ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಮಳೆ ಬಂದಾಗ ಜಲಾವೃತವಾಗುವ ರಸ್ತೆಗಳು, ವಾಹನ ಸವಾರರ ಪ್ರಾಣಕ್ಕೇ ಸಂಚಕಾರ ತಂದೊಡ್ಡುತ್ತಿವೆ. ನೀರಿನಿಂದ ತುಂಬಿದ ಗುಂಡಿಗಳು ಕಾಣದೆ ದ್ವಿಚಕ್ರ ವಾಹನ ಸವಾರರು ಅಪಘಾತಕ್ಕೊಳಗಾಗುತ್ತಿದ್ದಾರೆ.

ರಸ್ತೆಯಲ್ಲಿ ಮಳೆನೀರು ನಿಂತಾಗ ಗುಂಡಿ ಇರುವ ಬಗ್ಗೆ ಅಥವಾ ಅಲ್ಲಿರುವ ಗುಂಡಿಯ ಆಳದ ಅಂದಾಜು ವಾಹನ ಸವಾರರಿಗೆ ಇರುವುದಿಲ್ಲ. ಮಳೆಯಲ್ಲಿ ನೆಂದು ಸಾಗುವ ಜೊತೆಗೆ, ರಸ್ತೆಯಲ್ಲಿನ ನೀರು ತಮ್ಮ ಮೇಲೆ ಎರಚದಂತೆ ಸವಾರಿ ಮಾಡುವ ಸಂದರ್ಭದಲ್ಲಿ, ಗುಂಡಿಗೆ ವಾಹನ ಇಳಿದರೆ ನಿಯಂತ್ರಣ ತಪ್ಪುತ್ತದೆ. ಮಳೆ ಬಂದ ಸಂದರ್ಭದಲ್ಲಿ ಹೀಗೆ ನಿಯಂತ್ರಣ ತಪ್ಪಿ, ನೂರಾರು ದ್ವಿಚಕ್ರ ವಾಹನಗಳ ಸವಾರರು ಸಂಕಷ್ಟಕ್ಕೀಡಾಗುತ್ತಿದ್ದಾರೆ.

ಮಳೆ ಇಲ್ಲದ ಸಂದರ್ಭದಲ್ಲೂ ಗುಂಡಿಗಳಿಂದಾಗಿ ಹಲವು ರಸ್ತೆಗಳಲ್ಲಿ ಅವಘಡಗಳು ಸಂಭವಿಸುತ್ತಲೇ ಇವೆ. ಎಲ್ಲ ಪ್ರಕರಣಗಳೂ ಪೊಲೀಸ್ ಠಾಣೆ ಮೆಟ್ಟಿಲೇರುವುದಿಲ್ಲ. ರಸ್ತೆ ಗುಂಡಿ ತಪ್ಪಿಸಲು ಹೋಗಿ ಅಥವಾ ಗುಂಡಿಯಿಂದಾಗುವ ಅಪಘಾತ ಎಂದು ನಮೂದಾಗುವುದು ವಿರಳ. ರಸ್ತೆ ಗುಂಡಿಯಿಂದ ಆಗುವ ನೂರಾರು ಅಪಘಾತ ಪ್ರಕರಣಗಳು ಜಗಳಗಳಲ್ಲೇ ಮುಕ್ತಾಯವಾಗುತ್ತವೆ.

‘ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲಾಗುತ್ತಿದೆ, ನಿತ್ಯವೂ ಕೆಲಸ ಮಾಡುತ್ತಿದ್ದೇವೆ’ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಹೇಳುತ್ತಿದ್ದರೂ, ಗುಂಡಿ ಇಲ್ಲದ ರಸ್ತೆಯನ್ನು ಕಾಣದ ಸ್ಥಿತಿ ನಗರದಲ್ಲಿದೆ. ಗುಂಡಿಗಳಿಂದ ದ್ವಿಚಕ್ರ ವಾಹನಗಳು ಅತಿಹೆಚ್ಚು ಅಪಘಾತಕ್ಕೆ ಒಳಗಾಗುತ್ತಿವೆ. ಗುಂಡಿ ತಪ್ಪಿಸುವ ಅಥವಾ ಅನಿವಾರ್ಯವಾಗಿ ಅದರೊಳಗೆ ಇಳಿದ ದ್ವಿಚಕ್ರ ವಾಹನದ ಚಾಲಕ ನಿಯಂತ್ರಣ ಕಳೆದುಕೊಂಡು ಬೀಳುವ ಪ್ರಕರಣಗಳು ಹೆಚ್ಚಿವೆ. ಒಬ್ಬ ವಾಹನ ಸವಾರ ಬೀಳುವುದರಿಂದ ಹಲವು ಸಂದರ್ಭದಲ್ಲಿ ಇನ್ನೊಂದು ಅಥವಾ ಇನ್ನಷ್ಟು ವಾಹನಗಳ ಸವಾರರು ಬೀಳುತ್ತಾರೆ. ಸರಣಿ ಅಪಘಾತಗಳೂ ಸಂಭವಿಸುತ್ತಿವೆ.

ಆಟೊ ಚಾಲಕರಿಗೂ ರಸ್ತೆ ಗುಂಡಿಗಳು ಸಿಂಹಸ್ವಪ್ನವಾಗಿವೆ. ಮುಂದಿನ ಚಕ್ರ ಅಥವಾ ಹಿಂದಿನ ಒಂದು ಚಕ್ರ ಗುಂಡಿಯಲ್ಲಿ ಇಳಿದರೆ, ನಿಯಂತ್ರಣ ಕಷ್ಟಸಾಧ್ಯ. ಅದರಿಂದ ಆಟೊ ಪಲ್ಟಿಯಾಗುವ ಅಥವಾ ಪಕ್ಕದ ವಾಹನದ ಮೇಲೆ ಬೀಳುವ ಪ್ರಕರಣಗಳೂ ನಿತ್ಯ ನಗರದ ಹಲವು ಪ್ರದೇಶಗಳಲ್ಲಿ ಆಗುತ್ತಿವೆ.

‘ಎಸ್‌ಜೆಪಿ ಪಾರ್ಕ್ ರಸ್ತೆ, ಕೆ.ಆರ್. ಮಾರ್ಕೆಟ್‌ನಲ್ಲಿ ಸಣ್ಣದೊಂದು ಮಳೆಯಾದರೂ ರಸ್ತೆಯಲ್ಲೇ ನೀರಿರುತ್ತದೆ. ಈ ರಸ್ತೆಗಳಲ್ಲಿ ಗುಂಡಿಗಳು ಎಲ್ಲಿವೆ, ಎಲ್ಲಿಲ್ಲ ಎಂದು ಹೇಳಲು ಅಸಾಧ್ಯ. ಪ್ರತಿ ಬಾರಿ ಮಳೆ ಬಂದಾಗಲೂ ಮಳೆನೀರು ತುಂಬಿದ ರಸ್ತೆ-ಗುಂಡಿಗೆ ವ್ಯತ್ಯಾಸವೇ ಇರುವುದಿಲ್ಲ. ಪ್ರತಿ ಬಾರಿ ಮಳೆ ಬಂದಾಗಲೂ ಆಟೊ, ದ್ವಿಚಕ್ರ ವಾಹನಗಳ ಸವಾರರು ಗುಂಡಿ ಕಾಣದೆ ಬೀಳುತ್ತಲೇ ಇರುತ್ತಾರೆ’ ಎಂದು ವ್ಯಾಪಾರಿ ಮೊಹಮದ್ ಶೇಖ್ ಹೇಳಿದರು.

‘ಹಳೇ ಮದ್ರಾಸ್ ರಸ್ತೆಯಲ್ಲಿ ನಿತ್ಯ ಎಲ್ಲ ಸಮಯದಲ್ಲೂ ವಾಹನ ದಟ್ಟಣೆ ಇದ್ದೇ ಇರುತ್ತದೆ. ಬಸ್, ಲಾರಿಗಳ ಮಧ್ಯೆ ದ್ವಿಚಕ್ರ ವಾಹನಗಳು ಸಂಚರಿಸುವುದು ಕಷ್ಟಕರ. ಮಳೆ ಬಂದಾಗ ನೀರು ತುಂಬಿದ ಗುಂಡಿಗಳಿಂದ ಹಲವು ಬಾರಿ ಬಿದ್ದಿದ್ದೇನೆ. ನನ್ನ ಸ್ನೇಹಿತರೂ ಇಂತಹ ಅಪಘಾತಗಳಿಗೆ ಒಳಗಾಗಿದ್ದಾರೆ’ ಎಂದು ಇಂದಿರಾನಗರದ ನಿವಾಸಿ ರಘು ತಿಳಿಸಿದರು.

ಟ್ರಿನಿಟಿ ಜಂಕ್ಷನ್‌ನಿಂದ ಹಳೆ ವಿಮಾನ ನಿಲ್ದಾಣ ರಸ್ತೆಯ ಸಿಗ್ನಲ್‌ನಲ್ಲಿರುವ ಗುಂಡಿ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪುರಭವನದ ಬಳಿ ರಸ್ತೆಯಲ್ಲಿನ ಗುಂಡಿಯಿಂದಾಗಿ ಪ್ರಯಾಸಪಡುವ ವಾಹನ ಸವಾರರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.
ವಾಟ್ಸ್ ಆ್ಯಪ್: **9606038256**

ನಗರದ ವಿದ್ಯಾಪೀಠ ವೃತ್ತದಿಂದ ತ್ಯಾಗರಾಜನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ.
ವಿ.ಎಸ್. ಕುಮಾರ್, ಬನಶಂಕರಿ


ನಾಗರಬಾವಿಯ ಎರಡನೇ ಹಂತದ 9ನೇ ಬ್ಲಾಕ್‌ನ 10 ಮತ್ತು 11ನೇ ಮುಖ್ಯರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ
ಎಸ್. ರಾಜು, ನಾಗರಬಾವಿ

ಹೆಬ್ಬಾಳದ ಚೋಳ ನಗರದಲ್ಲಿರುವ ಜಿ.ಆರ್. ಬಡಾವಣೆಯ ಮೂರನೇ ಕ್ರಾಸ್‌ನ ಸಾಯಿಬಾಬಾ ಮಂದಿರದ ಮುಂಭಾಗದ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು
ಮಂಜುನಾಥ್ ಅಯ್ಯರ್, ಹೆಬ್ಬಾಳ

ಬಿಜೆಪಿ ಪ್ರತಿಭಟನೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆಯನ್ನು ಬಿಜೆಪಿ ಮುಂದೂಡಿದೆ.

ಅಹಮದಾಬಾದ್‌ನಲ್ಲಿ ವಿಮಾನ ಪತನದ ಘಟನೆಯಿಂದಾಗಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

‘ಉಚಿತ ವಸತಿ ನಿಲಯ ಬಳಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಆರಂಭಿಸಿರುವ ಉದ್ಯೋಗಸ್ಥ ಮಹಿಳೆಯರ ಉಚಿತ ವಸತಿ ನಿಲಯ ಶಿಶುಪಾಲನಾ ಕೇಂದ್ರಕ್ಕೆ ಶಾಸಕ ಎಸ್. ಮುನಿರಾಜು ಪರಿಶೀಲಿಸಿ, ನಿಲಯದ ಅಧಿಕಾರಿಗಳೊಂದಿಗೆ ಚರ್ಚಿಸಿದರು.

‘ಬೆಂಗಳೂರಿನಲ್ಲಿ ಅಸಂಘಟಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್.ಸಿ, ಎಸ್.ಟಿ ಮತ್ತು ಅಲ್ಪಸಂಖ್ಯಾತ ಉದ್ಯೋಗಸ್ಥ ಮಹಿಳೆಯರಿಗೆ ಉಚಿತ ಊಟ-ವಸತಿ ಕಲ್ಪಿಸಲಾಗುತ್ತಿದೆ. ಮಾಸಿಕ ₹50 ಸಾವಿರಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವವರು ಈ ಸೌಲಭ್ಯದ ಅವಕಾಶ ಪಡೆಯಬಹುದು. ಸದರಿ ವಸತಿ ನಿಲಯದಲ್ಲಿ 50 ಮಹಿಳೆಯರಿಗೆ ವಸತಿ ಸೌಲಭ್ಯವಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಸುದ್ದಿ 2 ನಿಮಿಷ

‘ಜನ ಸಂದಣಿ ನಿರ್ವಹಣೆಗೆ ನೀತಿ’

ಬೆಂಗಳೂರು: ಆರ್‌ಸಿಬಿ ತಂಡದ ವಿಜಯೋತ್ಸವ ಸಂದರ್ಭದಲ್ಲಿ ಕಾಲ್ತುಳಿತದಿಂದ 11 ಮಂದಿ ಮೃತಪಟ್ಟ ಬೆನ್ನಲ್ಲೇ, ಜನಸಂದಣಿ ನಿರ್ವಹಣೆಗೆ ನೀತಿಯೊಂದನ್ನು ಜಾರಿಗೆ ತರಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿಂತನೆ ನಡೆಸಿದ್ದಾರೆ.

‘ರಾಜ್ಯದಲ್ಲಿ ಜನಸಂದಣಿ ನಿರ್ವಹಣೆಗೆ ನೀತಿಯೊಂದನ್ನು ಜಾರಿ ಮಾಡುವಂತೆ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರಲ್ಲಿ ಮನವಿ ಮಾಡಿದ್ದೇನೆ. ಮುಂದಿನ 2-3 ಸಚಿವ ಸಂಪುಟ ಸಭೆಗಳಲ್ಲಿ ಈ ನೀತಿಯ ರೂಪುರೇಷೆ ಹೊರ ತರಲಾಗುವುದು. ಇಂತಹದ್ದೊಂದು ನೀತಿ ಅಗತ್ಯವಾಗಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕಾಲ್ತುಳಿತದ ಘಟನೆ ಬಳಿಕ ಗೃಹ ಸಚಿವ ಜಿ.ಪರಮೇಶ್ವರ್ ಅವರು ಮಾತನಾಡಿ, ಜನ ಸಂದಣಿಯನ್ನು ನಿಭಾಯಿಸಲು ಪ್ರಮಾಣೀಕೃತ ಕಾರ್ಯಾಚರಣೆ ನಿಯಮಗಳು ಜಾರಿ ತರಲಾಗುವುದು ಎಂದು ಪ್ರಕಟಿಸಿದ್ದರು.

‘ಹೊಸ ಸಮೀಕ್ಷೆ; ರಾಜಕೀಯ ಕುತಂತ್ರ’

ಬೆಂಗಳೂರು: ‘ಕೇಂದ್ರ ಸರ್ಕಾರ ಈಗಾಗಲೇ ಜಾತಿವಾರು ಜನ ಗಣತಿ ನಡೆಸುವುದಾಗಿ ಘೋಷಿಸಿರುವಾಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹೊಸ ಸಮೀಕ್ಷೆ ನಡೆಸಲು ಮುಂದಾಗಿರುವುದು ರಾಜಕೀಯ ಕುತಂತ್ರ’ ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್‌ಸಿಂಗ್ ಸಿರೋಯಾ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಅವರು ನಿಜವಾಗಿ ಯಾವುದನ್ನು ನಿರ್ಧರಿಸುತ್ತಾರೆ? ಯಾವುದನ್ನು ನಿರ್ಧರಿಸುವುದಿಲ್ಲ ಎಂಬುದನ್ನು ಕೇಳುವ ಸಮಯ ಬಂದಿದೆ ಎಂದಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳದೇ, ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ. ಜಾತಿ ಗಣತಿ, ಆರ್‌ಸಿಬಿ ವಿಜಯೋತ್ಸವ ವೇಳೆ ನಡೆದ ಕಾಲ್ತುಳಿತ, ಮುಡಾ ನಿವೇಶನ ಹಗರಣ ಇದಕ್ಕೆ ಉದಾಹರಣೆಗಳು’ ಎಂದಿದ್ದಾರೆ.

‘ಮುಖ್ಯಮಂತ್ರಿಯವರ ಆಪ್ತರಾಗಿದ್ದ ಎಲ್.ಕೆ.ಅತೀಕ್ ಅವರ ಹಠಾತ್ ನಿರ್ಗಮನದ ವಿಚಾರ ತಮಗೆ ತಿಳಿದಿಲ್ಲ, ಮಾಹಿತಿ ಇಲ್ಲ ಎನ್ನುತ್ತಿದ್ದಾರೆ. ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಮುಖ್ಯಮಂತ್ರಿಯವರ ನಿಲುವು ಕಳವಳವನ್ನು ಹುಟ್ಟುಹಾಕುತ್ತದೆ’ ಎಂದು ಲಹರ್‌ಸಿಂಗ್ ಹೇಳಿದ್ದಾರೆ.

‘ಬಾಲಕಾರ್ಮಿಕರು ಕಂಡರೆ ಕರೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆದ್ದಾರಿ ಬದಿಯ ಡಾಬಾ, ಹೋಟೆಲ್, ಗ್ಯಾರೇಜ್‌ಗಳಲ್ಲಿ ಮಕ್ಕಳಿಂದ ಕೆಲಸ ಮಾಡಿಸುತ್ತಿರುತ್ತಾರೆ. ಅಂತಹದ್ದು ಯಾರ ಗಮನಕ್ಕೆ ಬಂದರೂ, 1098 ಸಹಾಯವಾಣಿಗೆ ಕರೆ ಮಾಡಿ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಕರೆ ನೀಡಿದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಕಾರ್ಮಿಕ ಇಲಾಖೆಯು ನಗರದ ಎಂ.ಜಿ.ರಸ್ತೆಯ ಗಾಂಧಿ ವೃತ್ತದಿಂದ ಕೆ.ಆರ್.ವೃತ್ತದವರೆಗೆ ಆಯೋಜಿಸಿದ್ದ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಮಕ್ಕಳು ಬಾಲಕಾರ್ಮಿಕರಾಗುವುದನ್ನು ತಡೆಯಲು ಕಾರ್ಮಿಕ ಇಲಾಖೆ ಹಲವು ಕ್ರಮ ಕೈಗೊಂಡಿದೆ. ಆದರೂ ಹಲವು ಮಕ್ಕಳು ಓದುವುದನ್ನು ಬಿಟ್ಟು, ದುಡಿಮೆಯಲ್ಲಿ ತೊಡಗಿದ್ದಾರೆ. ಅವರೆಲ್ಲಾ ಮತ್ತೆ ಶಾಲೆಗೆ ಹೋಗುವಂತಾಗಬೇಕು. ಈ ಗುರಿ ಸಾಧನೆಯಲ್ಲಿ ಸಾರ್ವಜನಿಕರೂ ಸರ್ಕಾರದೊಂದಿಗೆ ಕೈ ಜೋಡಿಸಬೇಕು’ ಎಂದು ಕೋರಿದರು.

ನಟಿ ಅದಿತಿ ಪ್ರಭುದೇವ, ‘ಮಕ್ಕಳು ಕಾರ್ಮಿಕರಾಗುವುದನ್ನು ತಡೆಯುವ ಹೊಣೆಗಾರಿಕೆ ನಮ್ಮೆಲ್ಲರ ಮೇಲೂ ಇದೆ. ಬಡತನಕ್ಕೂ ಬಾಲಕಾರ್ಮಿಕ ಪದ್ಧತಿಗೂ ಸಂಬಂಧವಿದೆ. ಬಡತನ ಹೋಗಲಾಡಿಸಿದರೆ, ಈ ಸಮಸ್ಯೆಯೂ ನಿವಾರಣೆಯಾಗಲಿದೆ. ಮಕ್ಕಳನ್ನು ಓದಿಸಲಾಗದ ಪರಿಸ್ಥಿತಿಯಲ್ಲಿ ಎಷ್ಟೋ ಪೋಷಕರು ಇದ್ದಾರೆ. ನಾವು ಸಣ್ಣ ಸಹಾಯ ಮಾಡಿದರೆ ಎಷ್ಟೋ ಮಕ್ಕಳು ಬಾಲ ಕಾರ್ಮಿಕರಾಗುವುದು ತಪ್ಪಲಿದೆ’ ಎಂದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ, ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ವಿ.ಪ್ರಸಾದ್, ಇಲಾಖೆ ಆಯುಕ್ತ ಎಚ್. ಎನ್.ಗೋಪಾಲಕೃಷ್ಣ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಿ. ಭಾರತಿ ಜಾಥಾದಲ್ಲಿ ಭಾಗಿಯಾಗಿದ್ದರು.

ಜಾಥಾ ಕಾರ್ಯಕ್ರಮದಲ್ಲಿ ಸಂತೋಷ್ ಲಾಡ್ ಮತ್ತು ಕಾರ್ಮಿಕ ಇಲಾಖೆ ಅಧಿಕಾರಿಗಳು ಬಾಲಕಾರ್ಮಿಕ ಪದ್ಧತಿ ತಡೆ ಪ್ರತಿಜ್ಞೆ ಸ್ವೀಕರಿಸಿದರು

‘ದಲಿತರನ್ನು ಗುಲಾಮರನ್ನಾಗಿಸಲು ಹುನ್ನಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಎಸ್‌ಎಸ್ ಹಾಗೂ ವಿಶ್ವ ಹಿಂದೂ ಪರಿಷತ್, ದಲಿತರನ್ನು ಗುಲಾಮರನ್ನಾಗಿಸುವ ಹುನ್ನಾರ ನಡೆಸುತ್ತಿವೆ’ ಎಂದು ಕನ್ನಡಪರ ಹೋರಾಟಗಾರ ಜಾಣಗೆರೆ ವೆಂಕಟರಾಮಯ್ಯ ಹೇಳಿದರು.

ಭೀಮ ಸಂಘಟನೆಗಳ ಮಹಾ ಒಕ್ಕೂಟ (ಬಿಎಸ್‌ಎಂಒ) ಮಂಗಳವಾರ ಆಯೋಜಿಸಿದ್ದ ಡಾ.ಬಿ. ಆರ್. ಅಂಬೇಡ್ಕರ್ ಅವರ ಜಯಂತಿ ಹಾಗೂ ಬಿಎಸ್‌ಎಂಒದ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಆರ್‌ಎಸ್‌ಎಸ್ ಮತ್ತು ವಿಶ್ವ ಹಿಂದೂ ಪರಿಷತ್‌ನಂತಹ ಸಂಘಟನೆಗಳು ದಲಿತರನ್ನು ದಮನಿಸುವ ಕೆಲಸ ಮಾಡುತ್ತಿವೆ. ಈಗಾಗಲೇ ಮುಸ್ಲಿಂ ಸಮುದಾಯವನ್ನು ಬಹಿರಂಗವಾಗಿ ದ್ವೇಷಿಸುತ್ತಿವೆ. ಇದನ್ನು ನಾವು ಖಂಡಿಸಬೇಕು’ ಎಂದು ಹೇಳಿದರು.

‘ಅಸ್ಪೃಶ್ಯತೆ, ಜಾತಿಯತೆ ವಿರುದ್ಧ ಡಾ.ಬಿ.ಆರ್. ಅಂಬೇಡ್ಕರ್ ಹೋರಾಟ ನಡೆಸಿದರು. ಸಂವಿಧಾನ ರಚನೆ ಮಾಡುವುದರ ಮೂಲಕ ಎಲ್ಲ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕೊಡಿಸುವ ಪ್ರಯತ್ನ ಮಾಡಿದ್ದಾರೆ’ ಎಂದು ಹೇಳಿದರು.

‘ವಿಶ್ವದ ಬೇರೆ-ಬೇರೆ ದೇಶಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತಿದೆ. ಆದರೆ, ನಮ್ಮ ದೇಶದಲ್ಲಿ ಅಂಬೇಡ್ಕರ್ ಅವರ ಪ್ರತಿಮೆಗಳನ್ನು ವಿರೂಪಗೊಳಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಸಂವಿಧಾನ ಹಾಗೂ ಮೀಸಲಾತಿ ಸೌಲಭ್ಯವನ್ನು ರದ್ದುಗೊಳಿಸುವ ಹುನ್ನಾರ ನಡೆಯುತ್ತಿದೆ. ಇದಕ್ಕೆ ನಾವು ಅವಕಾಶ ನೀಡಬಾರದು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಎಸ್‌ಎಂಒ ಅಧ್ಯಕ್ಷ ಕೆ. ಮರಿಯಪ್ಪ, ಹೆಬ್ಬಾಳ ವೆಂಕಟೇಶ್ ಹಾಗೂ ಜಾನಪದ ಗಾಯಕ ಬಾನಂದೂರು ಕೆಂಪಯ್ಯ ಉಪಸ್ಥಿತರಿದ್ದರು.

ನಗರದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅರಿವು ಮಕ್ಕಳ ಧಾಮ ಶಾಲೆಯ ವಿದ್ಯಾರ್ಥಿಗಳು ತಮಟೆ ಬಾರಿಸಿದರು
–ಪ್ರಜಾವಾಣಿ ಚಿತ್ರ

ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ್ ರಾವ್ ಹೇಳಿಕೆ

‘ಪ್ಲಾಸ್ಟಿಕ್ ಬಳಕೆ: ಜೀವೈವಿಧ್ಯತೆಗೆ ಹಾನಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಯು, ಜಲ ಮಾಲಿನ್ಯ ಸೇರಿದಂತೆ ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಹಾಗೂ ಜೀವ ವೈವಿಧ್ಯತೆಗೆ ಹಾನಿಯಾಗುತ್ತಿದೆ’ ಎಂದು ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ್ ರಾವ್ ಹೇಳಿದರು.

ಕರ್ನಾಟಕ ಹೈಕೋರ್ಟ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ವಿಶ್ವದಾದ್ಯಂತ ಪ್ಲಾಸ್ಟಿಕ್ ಬಳಕೆ ಪ್ರಮಾಣ ಹೆಚ್ಚುತ್ತಿದೆ. 1950ರಲ್ಲಿ 20 ಲಕ್ಷ ಟನ್ ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿ ಆಗಿತ್ತು. 2024ರಲ್ಲಿ ಅದರ ಪ್ರಮಾಣ 400 ದಶಲಕ್ಷ ಟನ್‌ಗೆ ಏರಿಕೆಯಾಗಿದೆ. 2060ರ ವೇಳೆಗೆ 1200 ದಶಲಕ್ಷ ಟನ್ ಆಗುವ ಸಾಧ್ಯತೆ ಇದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಈ ಬಾರಿಯ ವಿಶ್ವ ಪರಿಸರ ದಿನವನ್ನು ಪ್ಲಾಸ್ಟಿಕ್ ಬಳಕೆ ಅಂತ್ಯಗೊಳಿಸೋಣ ಎಂಬ ಘೋಷ ವ್ಯಾಕ್ಯದಡಿ ಆಚರಿಸಲಾಗುತ್ತಿದೆ. ನಾವು ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಪರಿಸರ ಸಂರಕ್ಷಿಸಬೇಕು. 2016ರಿಂದ ಕರ್ನಾಟಕದಲ್ಲಿ ಪ್ಲಾಸ್ಟಿಕ್ ಉತ್ಪನ್ನಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ. ಇದನ್ನು ದೇಶದಾದ್ಯಂತ ಜಾರಿಗೊಳಿಸಬೇಕು. ಶಾಲಾ–ಕಾಲೇಜುಗಳ ಪಠ್ಯಕ್ರಮದಲ್ಲಿ ಪರಿಸರ ಸಂರಕ್ಷಿಸುವ ಕುರಿತು ಪಠ್ಯಗಳನ್ನು ಅಳವಡಿಸಬೇಕು. ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು’ ಎಂದು ಕರೆ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್ ಸಸಿಗೆ ನೀರು ಹಾಕಿದರು. ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್, ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಕೆ.ಎಸ್. ಭರತ್ ಕುಮಾರ್, ಹೈಕೋರ್ಟ್ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್, ಅರಣ್ಯ ಪಡೆಯ ಮುಖ್ಯಸ್ಥೆ ಮೀನಾಕ್ಷಿ ನೇಗಿ ಮತ್ತು ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ನಾವು ಬಳಕೆ ಮಾಡುತ್ತಿರುವ ಪ್ಲಾಸ್ಟಿಕ್‌ನ ಶೇಕಡ 10ರಷ್ಟು ಮಾತ್ರ ಮರುಬಳಕೆ ಆಗುತ್ತಿದೆ. ಈ ಪ್ರಮಾಣ ಹೆಚ್ಚಾಗಬೇಕು.
ವಿ. ಕಾಮೇಶ್ವರ್ ರಾವ್, ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ

ನಕ್ಷತ್ರ ಮಂದಿರಗಳ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿಜ್ಞಾನ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶದಿಂದ ದೊಡ್ಡಬಳ್ಳಾಪುರ ಹಾಗೂ ತುಮಕೂರಿನಲ್ಲಿ ಶಾಶ್ವತ ನಕ್ಷತ್ರ ಮಂದಿರಗಳನ್ನು ನಿರ್ಮಿಸಲಾಗುವುದು ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಅಧ್ಯಕ್ಷ ಹುಲಿಕಲ್ ನಟರಾಜ್ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘₹2.5 ಕೋಟಿಯಿಂದ ₹3 ಕೋಟಿವರೆಗೆ ಸಿಎಸ್‌ಆರ್ ನಿಧಿ ಬಳಸಿಕೊಂಡು ದೊಡ್ಡ ಬಳ್ಳಾಪುರದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಆ್ಯನಿ ಬೆಸೆಂಟ್ ಉದ್ಯಾನ, ತುಮಕೂರಿನ ಸಿದ್ದಾರ್ಥ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶಾಶ್ವತ ನಕ್ಷತ್ರ ಮಂದಿರಗಳನ್ನು ನಿರ್ಮಿಸಲಾಗುವುದು. ಇದರಲ್ಲಿ 85ರಿಂದ 100 ಆಸನ ಗಳ ಸಾಮರ್ಥ್ಯ ಇರಲಿವೆ’ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಹಾಯಕ ಆಯುಕ್ತ ಮೋಹನ್ ಕೊಂಡಜ್ಜಿ ಇದ್ದರು.

ಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ ಬೇಸರ

‘ಭೋಗದ ವಸ್ತುಗಳ ಮೇಲೆ ಹೆಚ್ಚುತ್ತಿರುವ ಆಸಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನುಷ್ಯರು ಭೋಗದ ವಸ್ತುಗಳ ಮೇಲೆ ಹೆಚ್ಚು ಆಸಕ್ತಿ ಹೊಂದಿರುವುದರಿಂದ ಕೃಷಿ ಮತ್ತು ಅರಣ್ಯಗಳ ಸ್ವರೂಪ ಬದಲಾಗುತ್ತಿದೆ. ಕೆರೆಗಳನ್ನೇ ಕೊಂಡುಕೊಳ್ಳುವವರಿದ್ದು, ಅವರೊಂದಿಗೆ ನಾವು ಸ್ಪರ್ಧಿಸಲು ಸಾಧ್ಯವಿಲ್ಲ’ ಎಂದು ಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ ಹೇಳಿದರು.

ಅ.ನ. ಯಲ್ಲಪ್ಪ ರೆಡ್ಡಿಯವರ ‘ಕರ್ನಾಟಕ ಪ್ರಕೃತಿ: ವಿಕೋಪಗಳು– ಆತಂಕಗಳು’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಸೀತಾರಾಂ, ‘ಮನುಷ್ಯ ಪ್ರಕೃತಿ ನಾಶ ಮಾಡೋದು ಜನ್ಮಸಿದ್ಧ ಹಕ್ಕು ಎಂದುಕೊಂಡಿದ್ದಾನೆ. ಪ್ರಕೃತಿಯೇ ಬದುಕು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಹಳ್ಳಿಗಳಲ್ಲಿ ಕೆರೆಗಳನ್ನು ಉಳಿಸಿಕೊಳ್ಳುವ ಕೆಲಸವಾಗುತ್ತಿಲ್ಲ. ನಾನು ದಶಕದ ಹಿಂದೆ ನೋಡಿದ್ದ ಕೆರೆ ಈಗಿಲ್ಲ. ಸ್ಥಳೀಯರನ್ನು ಕೇಳಿದರೆ ತೋಟದ ಜೊತೆಗೆ ಕೆರೆಗಳಲ್ಲಿಯೂ ನಿವೇಶನಗಳನ್ನು ಮಾಡಲಾಗಿದೆ ಎನ್ನುತ್ತಾರೆ. ‘ನಿಮ್ಮ ಮುಂದಿನ ಜನಾಂಗಕ್ಕೆ ಏನು ಸಿಗುತ್ತೆ’ ಎಂದು ಕೇಳಿದರೆ, ‘30 ವರ್ಷದ ನಂತರ ನಾನೇ ಇರೊಲ್ಲ ಬಿಡಣ್ಣ’ ಅನ್ನುತ್ತಿದ್ದಾರೆ. ಹೀಗಾಗಿ ಪರಿಸರವನ್ನು ಉಳಿಸಿಕೊಳ್ಳುವ ಬದ್ಧತೆ ಕಡಿಮೆಯಾಗುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಬೆಂಗಳೂರು ಹವಾನಿಯಂತ್ರಿತ ನಗರ ಎಂದು ಬೀಗುವ ಕಾಲ ಇದಲ್ಲ. ದೆಹಲಿ ನಂತರ ವಾಯುಮಾಲಿನ್ಯ ಹೆಚ್ಚಿರುವ ನಗರ ನಮ್ಮದಾಗುತ್ತಿದೆ. ಕನಸಿನ ಬೆಂಗಳೂರು ನರಕವಾಗುತ್ತಿದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಶುದ್ಧ ಗಾಳಿ, ನೀರು ಸಿಗುತ್ತಿಲ್ಲ’ ಎಂದರು.

‘ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಕರ್ನಾಟಕದ ಮಣ್ಣನ್ನು ಉಳಿಸುವಂತಹ ಚಾರಿತ್ರಿಕ ತೀರ್ಪುಗಳನ್ನು ನೀಡಿದ್ದಾರೆ. ಯಲ್ಲಪ್ಪ ರೆಡ್ಡಿಯವರು ಪರಿಸರ ಸಂರಕ್ಷಣೆಯಲ್ಲಿ ಎಲ್ಲರಿಗೂ ಮಾದರಿಯಾಗಿದ್ದಾರೆ’ ಎಂದು ಶ್ಲಾಘಿಸಿದರು.

‘ಯಲ್ಲಪ್ಪರೆಡ್ಡಿ ಅವರ ಒತ್ತಾಸೆಯಿಂದಲೇ ಮರ ಸಂರಕ್ಷಣಾ ಕಾಯ್ದೆ ಜಾರಿಯಾಗಿದೆ. ಮರಗಳನ್ನು ಉಳಿಸಲು ಕಾಯ್ದೆಯಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸುವ ಅಗತ್ಯವಿದೆ’ ಎಂದು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಪರಿಸರ ತಜ್ಞ ಅ.ನ. ಯಲ್ಲಪ್ಪ ರೆಡ್ಡಿ, ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ, ನ್ಯಾಷನಲ್ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ವೆಂಕಟಶಿವಾ ರೆಡ್ಡಿ, ಬುಕ್‌ಬ್ರಹ್ಮ ಕನ್ನಡದ ದೇವು ಪತ್ತಾರ್, ಜನ ಪ್ರಕಾಶನದ ಬಿ. ರಾಜಶೇಖರ್ ಮೂರ್ತಿ, ಕೃತಿ ನಿರೂಪಕ ನಿರಂಜನ ಪರಾಂಜಪೆ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ‘ಕರ್ನಾಟಕ ಪ್ರಕೃತಿ: ವಿಕೋಪಗಳು– ಆತಂಕಗಳು’ ಪುಸ್ತಕ ಬಿಡುಗಡೆ
- ನರಕವಾಗುತ್ತಿರುವ ಬೆಂಗಳೂರು ನಗರ: ಕಳವಳ
- ಹಳ್ಳಿಗಳಲ್ಲಿ ಕೆರೆಗಳನ್ನು ಉಳಿಸಿಕೊಳ್ಳುವ ಕೆಲಸ ಆಗುತ್ತಿಲ್ಲ: ಬೇಸರ


ಸಮಾರಂಭದಲ್ಲಿ ಟಿ.ಎನ್. ಸೀತಾರಾಂ ಅವರು ಸಂತೋಷ್ ಹೆಗ್ಡೆ ಅವರೊಂದಿಗೆ ಮಾತುಕತೆ ನಡೆಸಿದರು. ಅ.ನ. ಯಲ್ಲಪ್ಪ ರೆಡ್ಡಿ, ದೇವು ಪತ್ತಾರ್ ಉಪಸ್ಥಿತರಿದ್ದರು

ಪಾರಿತೋಷಕದೊಂದಿಗೆ ಬೆಂಗಳೂರು ಎನ್‌ಸಿಸಿ ಎ ಗುಂಪಿನ ಕೆಡಟ್‌ಗಳು

ಕ್ರೀಡಾ ಶೂಟಿಂಗ್: ಎನ್‌ಸಿಸಿ ‘ಎ’ ಗುಂಪಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಭಾರತೀಯ ಕ್ರೀಡಾ ಪ್ರಾಧಿಕಾರದ(ಸಾಯ್) ಕ್ರೀಡಾ ಶೂಟಿಂಗ್ ರೇಂಜ್‌ನಲ್ಲಿ ನಡೆದ ‘ವಾರ್ಷಿಕ ಅಂತರ ಗುಂಪು ಕ್ರೀಡಾ ಶೂಟಿಂಗ್ ಚಾಂಪಿಯನ್‌ಶಿಪ್ (ಐಜಿಎಸ್‌ಎಸ್‌ಸಿ)– 2025’ರಲ್ಲಿ ಬೆಂಗಳೂರಿನ ಎನ್‌ಸಿಸಿ ‘ಎ’ ಗುಂಪು ಜಯಗಳಿಸಿದೆ.

ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಆಶ್ರಯದಲ್ಲಿ ಬೆಂಗಳೂರಿನ 1ನೇ ಕರ್ನಾಟಕ ಬೆಟಾಲಿಯನ್ ಮತ್ತು 1 ನೇ ಕರ್ನಾಟಕ ಸಿಗ್ನಲ್ ಎನ್‌ಸಿಸಿ ಜಂಟಿಯಾಗಿ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ ಆರು ಎನ್‌ಸಿಸಿ ಗುಂಪುಗಳ ಕರ್ನಾಟಕ ಮತ್ತು ಗೋವಾದ 100ಕ್ಕೂ ಹೆಚ್ಚು ಕೆಡೆಟ್‌ಗಳು ಭಾಗವಹಿಸಿದ್ದರು.

ಬೆಂಗಳೂರಿನ ಎನ್‌ಸಿಸಿ ಎ ಗುಂಪು ಎಂಟು ಚಿನ್ನ, ಆರು ಬೆಳ್ಳಿ, ಒಂದು ಕಂಚಿನ ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆಯಿತು. ಎನ್‌ಸಿಸಿ 'ಬಿ' ಗುಂಪು ಎರಡು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ ಎರಡನೇ ಸ್ಥಾನ ಹಾಗೂ ಬೆಳಗಾವಿಯ ಎನ್‌ಸಿಸಿ ಗುಂಪು ಎರಡು ಕಂಚಿನ ಪದಕಗಳೊಂದಿಗೆ ಮೂರನೇ ಸ್ಥಾನ ಪಡೆಯಿತು.

ನಗರದ ಆರ್‌ವಿಇಸಿಇ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭ ದಲ್ಲಿ ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯದ ಡಿಡಿಜಿ ಏರ್ ಕಮಾಂಡರ್ ಎಸ್. ಬಿ. ಅರುಣ್ ಕುಮಾರ್ ಅವರು ವಿಜೇತರಿಗೆ ‘ಐಜಿಎಸ್ ಎಸ್‌ಸಿ 2025’ ಪಾರಿತೋಷಕ ಮತ್ತು ಪದಕಗಳನ್ನು ಪ್ರದಾನ ಮಾಡಿದರು.

ಸಂಪೂರ್ಣ ವಾಹನ ನಿಲುಗಡೆಗೆ ಮೀಸಲಿಡುವ ನಿಯಮ ಜಾರಿಗೆ ಅಧಿಸೂಚನೆ

ನೆಲ ಅಂತಸ್ತು ಪಾರ್ಕಿಂಗ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ನೆಲ ಅಂತಸ್ತನ್ನು 'ಸ್ಟಿಲ್ಟ್ ಫ್ಲೋರ್' ಆಗಿ ಪರಿಗಣಿಸಿ, ಸಂಪೂರ್ಣವಾಗಿ ವಾಹನ ನಿಲುಗಡೆಗೆ ಮೀಸಲಿಡುವ ನಿಯಮವನ್ನು ಜಾರಿ ಮಾಡಲು ನಗರಾಭಿವೃದ್ಧಿ ಇಲಾಖೆ ಕರಡು ಅಧಿಸೂಚನೆ ಹೊರಡಿಸಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ ಸೆಕ್ಷನ್ 13-ಇಗೆ ತಿದ್ದುಪಡಿ ತಂದು, ಪರಿಷ್ಕೃತ ಮಾಸ್ಟರ್ ಪ್ಲಾನ್-2015ರ ವಲಯ ನಿಯಮಗಳಿಗೆ 'ಬೆಂಗಳೂರು ಸ್ಥಳೀಯ ಯೋಜನಾ ಪ್ರಾಧಿಕಾರ (ತಿದ್ದುಪಡಿ) ನಿಯಮಗಳು-2025' ಜಾರಿಗೆ ತರಲು ತೀರ್ಮಾನಿಸಿದೆ. ಆಕ್ಷೇಪ ಸಲ್ಲಿಸಲು 30 ದಿನ ಅವಕಾಶ ನೀಡಲಾಗಿದೆ.

ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ನಿರ್ಮಿಸಿರುವ, ನಿರ್ಮಾಣ ಹಂತದಲ್ಲಿರುವ ಹಾಗೂ ಮುಂದೆ ನಿರ್ಮಾಣವಾಗಲಿರುವ ಕಟ್ಟಡಗಳಲ್ಲಿನ ನೆಲ ಅಂತಸ್ತನ್ನು 'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಎಂದು ಪರಿಗಣಿಸಿ, ಅದರ ಎತ್ತರವನ್ನು 4.5 ಮೀಟರ್‌ಗೆ ನಿಗದಿಪಡಿಸಲಾಗಿದೆ. ಈ 'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಅನ್ನು ಪಾರ್ಕಿಂಗ್‌ಗೆ ಬಳಸುವುದರಿಂದ ಕಟ್ಟಡದ ಒಟ್ಟಾರೆ ಎತ್ತರದಲ್ಲಿ ಪರಿಗಣಿಸಬಾರದು. ಅದರಂತೆಯೇ ನಕ್ಷೆ ಅನುಮೋದನೆ ಅಥವಾ ಬದಲಾವಣೆಗೆ ಹೊಸ ನಿಯಮಗಳು ಅವಕಾಶ ಮಾಡಿಕೊಡಲಿವೆ.

ನೆಲ ಅಂತಸ್ತನ್ನು ಪಾರ್ಕಿಂಗ್‌ಗೆ ಮೀಸಲಿಟ್ಟ ಕಟ್ಟಡಕ್ಕೆ, ಸೆಟ್‌ಬ್ಯಾಕ್‌ನಲ್ಲಿ ರಿಯಾಯಿತಿ ನೀಡಿ ನಾಲ್ಕನೇ ಅಂತಸ್ತನ್ನು (ಜಿ + 4) ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಈಗಾಗಲೇ ಜಿ + 3 ಕಟ್ಟಡ ನಿರ್ಮಿಸಿರುವವರು, ನೆಲ ಅಂತಸ್ತನ್ನು ಸಂಪೂರ್ಣವಾಗಿ ಪಾರ್ಕಿಂಗ್‌ಗೆ ಮೀಸಲಿಟ್ಟರೆ, ಅವರಿಗೆ ಇನ್ನೊಂದು ಅಂತಸ್ತು ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಪಾರ್ಕಿಂಗ್ ಅಂತಸ್ತನ್ನು ಬೇರೆ ರೀತಿಯಲ್ಲಿ ಬಳಕೆ ಮಾಡಿದರೆ, ಬೆಸ್ಕಾಂ, ಜಲಮಂಡಳಿ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ. ವಾಣಿಜ್ಯ ಕಟ್ಟಡಗಳಿಗೆ ಉದ್ದಿಮೆ ಪರವಾನಗಿ ರದ್ದುಗೊಳಿಸಲಾಗುತ್ತದೆ.

'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಅವಕಾಶ ಜಾರಿಯಾಗುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ಜೂನ್ 3ರಂದು ವರದಿ ಪ್ರಕಟವಾಗಿತ್ತು.

'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಕಟ್ಟಡಗಳಿಗೆ ಸೆಟ್‌ಬ್ಯಾಕ್

ಕಟ್ಟಡದ ಎತ್ತರ	ಮುಂದೆ	ಹಿಂದೆ	ಅಕ್ಕಪಕ್ಕ
11.5 ಮೀಟರ್‌ನಿಂದ 15 ಮೀಟರ್ (4 ಸಾವಿರ ಚದರ ಮೀಟರ್‌ವರೆಗಿನ ನಿವೇಶನ)	1.5 ಮೀ	1 ಮೀ	1 ಮೀ
4 ಸಾವಿರ ಚ. ಮೀ. ಗೂ ಹೆಚ್ಚಿನ ನಿವೇಶನ	ಸುತ್ತಲೂ 5 ಮೀ		
'ಸ್ಟಿಲ್ಟ್ ಪಾರ್ಕಿಂಗ್ ಫ್ಲೋರ್' ಇಲ್ಲದ 11.5 ಮೀಟರ್‌ನಿಂದ 15 ಮೀಟರ್‌ವರೆಗಿನ ಕಟ್ಟಡ	ಸುತ್ತಲೂ 5 ಮೀ		
15 ಮೀಟರ್‌ನಿಂದ 18 ಮೀಟರ್	ಸುತ್ತಲೂ 6 ಮೀ		
18 ಮೀಟರ್‌ನಿಂದ 21 ಮೀಟರ್	ಸುತ್ತಲೂ 7 ಮೀ		
21 ಮೀಟರ್‌ನಿಂದ 24 ಮೀಟರ್	ಸುತ್ತಲೂ 8 ಮೀ		
24 ಮೀಟರ್‌ನಿಂದ 27 ಮೀಟರ್	ಸುತ್ತಲೂ 9 ಮೀ		
27 ಮೀಟರ್‌ನಿಂದ 30 ಮೀಟರ್	ಸುತ್ತಲೂ 10 ಮೀ		
30 ಮೀಟರ್‌ನಿಂದ 35 ಮೀ	ಸುತ್ತಲೂ 11 ಮೀ		
35 ಮೀಟರ್‌ನಿಂದ 40 ಮೀಟರ್	ಸುತ್ತಲೂ 12 ಮೀ		
40 ಮೀಟರ್‌ನಿಂದ 45 ಮೀಟರ್	ಸುತ್ತಲೂ 13 ಮೀ		
45 ಮೀಟರ್‌ನಿಂದ 50 ಮೀಟರ್	ಸುತ್ತಲೂ 14 ಮೀ		
50 ಮೀಟರ್‌ಗೂ ಹೆಚ್ಚು	ಸುತ್ತಲೂ 16 ಮೀ		

ಎಂ.ಎ.ಟಿ. ಆಚಾರ್ಯ ಶೀಲ್ಡ್ ಗೆದ್ದ ಸೆಂಚುರಿ ಕ್ರಿಕೆಟರ್ಸ್ ತಂಡ. (ನಿಂತವರು) ಎಡದಿಂದ: ರಿಷವ್ ಅಪ್ಪಚ್ಚು ಮನವತೀರ, ಮಹೇಶ್ ಕುಮಾರ್ ಬಂಗೇರಾ, ಇಗ್ನಿಷಿಯಸ್ ಸೆಬಾಸ್ಟಿಯನ್, ಮಾಧವ್ ಪಿ. ಬಜಾಜ್, ಲಿಖಿತ್ ಗೌಡ, ಹರಿ ರಾಜೀವ್, ಧೀಮಂತ್ ಬಿ., ಆದೇಶ್ ಡಿ. ಅರಸ್, ಗಗನ್ ರಾವ್, ದಿಶಾನ್, ಅಭಿರತ್, ಹರ್ಷಿತ್ ಗೌಡ, ಹರ್ಷವರ್ಧನ್ ಖೂಬಾ, (ಕುಳಿತವರು) ಶಿಶಿರ್ ಬಿ., ಕೆ.ಬಿ. ಪವನ್, ಕಾರ್ಯದರ್ಶಿ ರಾಹುಲ್ ಬಿ., ಕೋಚ್ ಯೋಗೇಶ್ ಪಿ., ಮಿತ್ರಕಾಂತ್ ಸಿಂಗ್ ಯಾದವ್

ಸೆಂಚುರಿ ಕ್ರಿಕೆಟರ್ಸ್‌ಗೆ ಆಚಾರ್ಯ ಶೀಲ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಂಚುರಿ ಕ್ರಿಕೆಟರ್ಸ್ ತಂಡ, ಕೆಎಸ್‌ಸಿಎ ಎರಡನೇ ಡಿವಿಷನ್ (ಒಂದನೇ ಗುಂಪು) ಕ್ರಿಕೆಟ್ (ಲೀಗ್ ಕಮ್ ನಾಕೌಟ್) ಟೂರ್ನಿಯ ಡ್ರಾ ಆದ ಫೈನಲ್ ಪಂದ್ಯದಲ್ಲಿ ವಿಜಯ ಕ್ರಿಕೆಟರ್ಸ್ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಚಾಂಪಿಯನ್ ಪಟ್ಟಕ್ಕೇರಿತು. ತಂಡವು ಎಂಎಟಿ ಆಚಾರ್ಯ ಶೀಲ್ಡ್ ಗೆದ್ದುಕೊಂಡಿತು.

ಆಲೂರು ಕ್ರೀಡಾಂಗಣದಲ್ಲಿ ಮಂಗಳವಾರ ಮುಕ್ತಾಯಗೊಂಡ ಪಂದ್ಯದಲ್ಲಿ ಸೆಂಚುರಿ ಕ್ರಿಕೆಟರ್ಸ್ ತಂಡವು ರಿಷವ್ ಅಪ್ಪಚ್ಚು ಮನವತೀರ (104) ಅವರ ಶತಕದ ನೆರವಿನಿಂದ ಮೊದಲ ಇನಿಂಗ್ಸ್‌ನಲ್ಲಿ 4ಕ್ಕೆ 367 ರನ್ ಗಳಿಸಿತ್ತು.

ಅದಕ್ಕೆ ಉತ್ತರವಾಗಿ ವಿಜಯ ಕ್ರಿಕೆಟ್ ಕ್ಲಬ್ ತಂಡವು ಹರ್ಷಿತ್ ಬಿ. ಗೌಡ ಅವರ ಬೌಲಿಂಗ್ ದಾಳಿಗೆ (29ಕ್ಕೆ 4) ತತ್ತರಿಸಿ 155 ರನ್‌ಗೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಸೆಂಚುರಿ ಕ್ರಿಕೆಟರ್ಸ್: ಮೊದಲ ಇನಿಂಗ್ಸ್ 90 ಓವರ್‌ಗಳಲ್ಲಿ 4ಕ್ಕೆ 367 (ಧೀಮಂತ್ ಬಿ. 48, ಹರ್ಷವರ್ಧನ ಖೂಬಾ 85, ರಿಷವ್ ಅಪ್ಪಚ್ಚು ಮನವತೀರ 104, ಶಿಶಿರ್ ಬಿ. 60, ಸಚಿನ್ ಶಿಂದೆ 74ಕ್ಕೆ 2); ವಿಜಯ ಕ್ರಿಕೆಟ್ ಕ್ಲಬ್: 46.5 ಓವರ್‌ಗಳಲ್ಲಿ 155 (ರಾಹುಲ್ ವರ್ನೇಕರ್ 57, ಹರ್ಷಿತ್ ಬಿ. ಗೌಡ 29ಕ್ಕೆ 4, ಮಾಧವ್ ಪಿ. ಬಜಾಜ್ 25ಕ್ಕೆ 3).

ಬೆಂಗಳೂರಿಗೆ ತುಮಕೂರು ಸೇರ್ಪಡೆ ಚಿಂತನೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣದ ಮಾಡಿದ ರೀತಿ ತುಮಕೂರನ್ನು ಬೆಂಗಳೂರಿನಲ್ಲಿ ಸೇರಿಸುವ ಚಿಂತನೆ ಒಪ್ಪಲಾಗದು. ತುಮಕೂರಿಗೆ ಅದರದ್ದೇ ಆದ ಇತಿಹಾಸವಿದೆ. ಜನರನ್ನು ಅನಗತ್ಯವಾಗಿ ದಾರಿ ತಪ್ಪಿಸುವ ಕೆಲಸ ನಡೆದಿದೆ' ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಆರೋಪಿಸಿದರು.

ವಿ.ಸೋಮಣ್ಣ

'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಲ್ಲಿ ಒಗ್ಗಟ್ಟು ಇಲ್ಲ ಎಂಬುದು ರಾಜ್ಯದ ಆಡಳಿತ ವೈಖರಿಯಲ್ಲಿ ಗೊತ್ತಾಗುತ್ತಿದೆ' ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಆಡಳಿತಕ್ಕೆ ಶೂನ್ಯ ಅಂಕ ಕೊಡುವೆ' ಎಂದು ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಾವು ನೋಡಿದಂತಹ ಸಿದ್ದರಾಮಯ್ಯ ಈಗಿಲ್ಲ. ಬದಲಾಗಿದ್ದಾರೆ' ಎಂದರು.

ಅಂತರ ರಾಷ್ಟ್ರೀಯ ಮಾದಕವಸ್ತು ದುರುಪಯೋಗ, ಅಕ್ರಮ ಸಾಗಣೆ ವಿರೋಧಿ ದಿನಾಚರಣೆ

ನಶೆ ಮುಕ್ತ ಸಮಾಜ ನಿರ್ಮಿಸಿ: ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತುಗಳ ಬಳಕೆ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವ ಮೂಲಕ ನಶೆ ಮುಕ್ತ ಸಮಾಜ ನಿರ್ಮಿಸಬೇಕು. ಶಾಲಾ, ಕಾಲೇಜುಗಳ ಆವರಣದಲ್ಲಿ ನಶೆ ಮುಕ್ತ ಭಾರತ ಅಭಿಯಾನದೊಂದಿಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಅಂತರ ರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾದಕವಸ್ತುಗಳ ಬಳಕೆಯಿಂದ ಹಲವರು ಹಾಳುಗುತ್ತಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯವೂ ಮಸಕಾಗುತ್ತದೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇದರ ನಿಯಂತ್ರಣಕ್ಕೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು.

ಯುವ ಜನತೆಯಿಂದಲೇ ದೇಶದ ಅಭಿವೃದ್ಧಿ ಸಾಧ್ಯ. ಯೋಗ, ಧ್ಯಾನದ ಮೂಲಕ ದುಶ್ಚಟಗಳಿಂದ ದೂರ ಇರಲು ಸಾಧ್ಯ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಆರೋಗ್ಯಯುತ ಜೀವನಕ್ಕೆ ಯೋಗಾಭ್ಯಾಸ ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಬಿ.ಸಿ.ಭಗವಾನ್ ಮಾತನಾಡಿ, ದೇಶದಲ್ಲಿ ಸುಮಾರು 27 ಕೋಟಿ ಜನರು ನೇರ ಹಾಗೂ ಪರೋಕ್ಷವಾಗಿ ಮಾದಕ ವಸ್ತು ಸೇವನೆ ಮಾಡುತ್ತಿದ್ದಾರೆ. ಈ ಪೈಕಿ 4 ಕೋಟಿ ಜನರು ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಡ್ರಗ್ಸ್ ಮುಕ್ತ ಕ್ಯಾಂಪಸ್ ನಿರ್ಮಿಸಲಾಗುವುದು ಎಂದು ತಿಳಿಸಿದರು.

ಮಾದಕ ವಸ್ತುಗಳ ನಿಯಂತ್ರಣ ಮಂಡಳಿಯ ವಲಯ ನಿರ್ದೇಶಕ ಸಚಿನ್ ಘೋರ್ಪಡೆ ಮಾತನಾಡಿ, ವಿದೇಶಗಳಿಂದ ಮಾದಕವಸ್ತು ಅಕ್ರಮವಾಗಿ ಪೂರೈಕೆ ಆಗುತ್ತಿದೆ. ದೇಶದ ವಿದ್ಯಾರ್ಥಿಗಳು ಮತ್ತು ಯುವ ಜನರನ್ನು ಗುರಿಯಾಗಿಸಿಕೊಂಡು ಈ ರೀತಿ ಮಾಡಲಾಗುತ್ತಿದೆ ಎಂದರು.

ಎಸ್.ವ್ಯಾಸ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಆರ್.ನಾಗೇಂದ್ರ, ಜೂನ್ 21 ಯೋಗ ದಿನದಿಂದ ನಶೆ ಮುಕ್ತ ಭಾರತ ಅಭಿಯಾನ ಆರಂಭವಾಗಲಿದೆ ಎಂದರು.

ಭಾರತೀಯ ನರ್ಸಿಂಗ್ ಸಂಘದ ರಾಷ್ಟ್ರೀಯ ಅಧ್ಯಕ್ಷ ಕೆ.ಕೆ.ವಿಜಯ ಕುಮಾರ್, ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ, ನಟ ವಿದ್ಯುತ್ ಜಾಮ್ವಾಲ್ ಮಾತನಾಡಿದರು.

ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಾದಕವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನ ಕಾರ್ಯಕ್ರಮದಲ್ಲಿ ನಟ ವಿದ್ಯುತ್ ಜಾಮ್ವಾಲ್ ವಿದ್ಯಾರ್ಥಿಗಳೊಂದಿಗೆ ಸೆಲ್ಫಿ ತೆಗೆಸಿಕೊಂಡರು –ಪ್ರಜಾವಾಣಿ ಚಿತ್ರ

45 ವಿದ್ಯಾರ್ಥಿಗಳ ಬಂಧನ

ಎರಡು ತಿಂಗಳಲ್ಲಿ ಡ್ರಗ್ಸ್ ಮಾರಾಟ ಮತ್ತು ಸೇವನೆ ಪ್ರಕರಣದಲ್ಲಿ 45 ವಿದ್ಯಾರ್ಥಿಗಳು ಬಂಧಿತರಾಗಿದ್ದಾರೆ. ವಿದ್ಯಾರ್ಥಿಗಳಿಗೆ ವಿವಿಧ ಆಮಿಷವೊಡ್ಡಿ, ಅವರಿಂದಲೇ ಅಕ್ರಮ ದಂಧೆ ನಡೆಸುವಂತಹ ಪ್ರಕರಣಗಳು ಪತ್ತೆಯಾಗುತ್ತಿವೆ. ಇದರ ಬಗ್ಗೆ ಅರಿವು ಇಲ್ಲದ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಯಾರಿಗೂ ನೀಡಬಾರದು. ಇದನ್ನು ಬಳಸಿ ಡ್ರಗ್ಸ್ ವಹಿವಾಟು ಮಾಡಲಾಗುತ್ತದೆ. ಡ್ರಗ್ಸ್ ವ್ಯಾಪಾರದಲ್ಲಿ ಸಿಕ್ಕಿಬಿದ್ದರೆ ಹತ್ತು ವರ್ಷ ಜೈಲು ಶಿಕ್ಷೆಯಾಗಲಿದೆ ಎಂದು ಮಾದಕ ವಸ್ತುಗಳ ನಿಯಂತ್ರಣ ಮಂಡಳಿ ವಲಯ ನಿರ್ದೇಶಕ ಸಚಿನ್ ಘೋರ್ಪಡೆ ಎಚ್ಚರಿಸಿದರು.

'ಬಯಸಿದಂತೆ ಬಯಲು': ಸಹಭಾಗಿತ್ವಕ್ಕೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ, ಸುಧಾರಿಸುವ 'ಬಯಸಿದಂತೆ ಬಯಲು' ಅಭಿಯಾನಯಲ್ಲಿ ನಾಗರಿಕರ ಸಹಭಾಗಿತ್ವಕ್ಕೆ ಬಿಬಿಎಂಪಿ ಆಹ್ವಾನ ನೀಡಿದೆ.

ಸಾರ್ವಜನಿಕರ ಪ್ರದೇಶ ಅಥವಾ ಸ್ಥಳಗಳ ಕುರಿತು ಕಾಳಜಿ ಇರುವ ನಾಗರಿಕರು, ವಾಸ್ತು ಶಿಲ್ಪಿಗಳು ಮತ್ತು ನಗರ ವಿನ್ಯಾಸ ತಜ್ಞರನ್ನು ಈ ಅಭಿಯಾನದಲ್ಲಿ ಭಾಗವಹಿಸಲು ಆಹ್ವಾನಿಸಲಾಗುತ್ತಿದೆ. 'ಬಯಸಿದಂತೆ ಬಯಲು' ಒಂದು ಯೋಜನಾ ಪ್ರಕ್ರಿಯೆಯಲ್ಲ, ಸಹಭಾಗಿತ್ವದ ಹಾದಿ. ನಗರದ ನಾಗರಿಕರು ಸುತ್ತಲಿನ ಬೀದಿಯಲ್ಲಿ ಜಾಗವಿದ್ದಲ್ಲಿ ತಿಳಿಸಿದರೆ, ಅದನ್ನು ಪುನರುಜ್ಜೀವನಗೊಳಿಸಿ ಆಕರ್ಷಕವಾಗಿರುವಂತೆ ವಿನ್ಯಾಸಗೊಳಿಸಲಾಗುವುದು ಎಂದು ರಸ್ತೆ ಮೂಲ ಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ತಿಳಿಸಿದರು.

ಸಾರ್ವಜನಿಕ ಸ್ಥಳಗಳ ಪುನಶ್ಚೇತನಗೊಳಿಸುವ 'ಬಯಸಿದಂತೆ ಬಯಲು' ಅಭಿಯಾನ ಜೂನ್ 19ರಿಂದ ಪ್ರಾರಂಭವಾಗಲಿದೆ. ಸಮುದಾಯ ಗುಂಪುಗಳು, ವಾಸ್ತು ಶಿಲ್ಪಿಗಳು, ನಗರ ವಿನ್ಯಾಸಕಾರರು ಮತ್ತು ಶೈಕ್ಷಣಿಕ ಸಂಸ್ಥೆಗಳ ವಿನ್ಯಾಸ ತಜ್ಞರು https://www.blrpublicspace-revival.in/ ಮೂಲಕ ಅರ್ಜಿ ಸಲ್ಲಿಸಬಹುದು.

ನಾಲ್ಕು ಬಗೆಯ ಜಾಗಗಳು: ಸಾಮೂಹಿಕ ಜಾಗಗಳು: ವಿಶ್ರಾಂತಿಗೆ, ಪೂಜೆ ಮುಂತಾದವುಗಳಿಗೆ ಬಳಸುವ ಸ್ಥಳಗಳು (ಉದಾ: ಕಟ್ಟೆಗಳು, ಊರ ಹಿತ್ತಲ ಜಾಗಗಳು, ಬೀದಿ ಮೂಲೆಗಳು)

ಬಳಸದಿರುವ ಜಾಗಗಳು: ಮೇಲ್ಸೇತುವೆ/ ಮೆಟ್ರೊ ಮಾರ್ಗದ ಕೆಳಭಾಗ, ಉದ್ಯಾನ/ ಕೆರೆ/ ರಾಜಕಾಲುವೆಗಳ ಇಕ್ಕೆಲಗಳು, ಮೂಲಸೌಕರ್ಯಗಳ ಪಕ್ಕದ ಉಪಯೋಗವಿಲ್ಲದ ಜಾಗಗಳು

ಬಹುಪಯೋಗಿ ಬೀದಿಗಳು: ತಿನಿಸು ಬೀದಿಗಳು, ವ್ಯಾಪಾರ/ ಮಾರುಕಟ್ಟೆ ಬೀದಿಗಳು, ನಡೆಯಲು ಬಳಸುವ ಬೀದಿಗಳು, ಶಾಲೆಗಳ ಪ್ರವೇಶ ವಲಯಗಳು, ಹಲವಾರು ಉದ್ದೇಶಗಳಿಗೆ ಬಳಸುವ ಬೀದಿಗಳು

ಸಾರಿಗೆ ಮತ್ತು ಸಂಚಾರ ಜಾಗಗಳು: ಬಸ್ ನಿಲ್ದಾಣಗಳು, ಮೆಟ್ರೊ ನಿಲ್ದಾಣಗಳು, ರಸ್ತೆ ದ್ವೀಪಗಳು, ಪಾದಚಾರಿ ಮೇಲ್ಸೇತುವೆ/ ಕೆಳಸೇತುವೆ

'ಬಯಸಿದಂತೆ ಬಯಲು' ನೀಲನಕ್ಷೆ

ಗುರುತಿಸಿರುವ ಸಾರ್ವಜನಿಕ ಸ್ಥಳಗಳನ್ನು ಮೌಲ್ಯಮಾಪನ ಮಾಡ ಲಾಗುತ್ತದೆ. ಆಯ್ಕೆಯಾದ ಸ್ಥಳಗಳನ್ನು ಉಪಯೋಗವಿಲ್ಲದ ಜಾಗಗಳನ್ನು ನಗರಮಟ್ಟದ ಪಟ್ಟಿಯಲ್ಲಿ ಸೇರಿಸಲಾಗುತ್ತದೆ ಮತ್ತು ಕೆಲವೆಡೆ ಬಿಬಿಎಂಪಿಯು ಮುಂದಿನ ಐದು ವರ್ಷಗಳಲ್ಲಿ ಪುನರ್ ಅಭಿವೃದ್ಧಿ ಕಾರ್ಯ ಕೈಗೊಳ್ಳಲಿದೆ.

ಅಭಿವೃದ್ಧಿಪಡಿಸಲು ಗುರುತಿಸಿರುವ ಸ್ಥಳಗಳನ್ನು ಸಾರ್ವಜನಿಕರಿಗೆ, ವಿಶೇಷವಾಗಿ ಆ ಪ್ರದೇಶದಲ್ಲಿ ವಾಸಿಸುವ, ಕೆಲಸಮಾಡುವ ಅಥವಾ ಸಂಚರಿಸುವ ಜನರಿಗೆ ಲಾಭವಾಗಿರಬೇಕು. ಸ್ಥಳ ಸುಧಾರಣೆಯ ದೃಷ್ಟಿಕೋನದಲ್ಲಿ ಭದ್ರತೆ ಹೆಚ್ಚಿಸುವುದು, ಸಮುದಾಯ ಸಂವಹನಕ್ಕೆ ಸ್ಥಳ ಸೃಷ್ಟಿಸುವುದು, ವಿಶ್ರಾಂತಿ/ಆಟದ ಸ್ಥಳಗಳು, ನಡೆದು ಹೋಗುವ ಮತ್ತು ಸೈಕ್ಲಿಂಗ್ ಗೆ ಅವಕಾಶ ನೀಡುವುದು, ಮಹಿಳೆಯರು, ಮಕ್ಕಳು, ವೃದ್ಧರು ಮತ್ತು ಅಂಗವಿಕಲರಿಗೆ ಸುಲಭವಾದ ಪ್ರವೇಶ ಇತ್ಯಾದಿ ಉದ್ದೇಶಗಳನ್ನು ಒಳಗೊಂಡಿರಬಹುದು.

ಐಯುಡಿಐ ಸಸ್ಟೇನಬಲ್ ಮೊಬಿಲಿಟಿ ನೆಟ್‌ವರ್ಕ್ ಹಾಗೂ ಬೆಂಗಳೂರು ವಾರ್ಡ್ ಸಮಿತಿ ಬಳಗದ ಸಹಯೋಗದಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸಲಾಗಿದೆ.

140ಕ್ಕೂ ಹೆಚ್ಚು ಕಂಪನಿಗಳಿಂದ ಮಳಿಗೆಗಳ ಸ್ಥಾಪನೆ

ಆಹಾರ ತಯಾರಿಕೆ ಸಾಮಗ್ರಿ ಮೇಳ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ದಿನಗಳ ಅಂತರ ರಾಷ್ಟ್ರೀಯ ಆಹಾರ ತಯಾರಿಕಾ ಸಾಮಗ್ರಿಗಳ ಬೃಹತ್ ಮೇಳ ಗುರುವಾರ ಬಿಐಇಸಿಯಲ್ಲಿ ಆರಂಭವಾಯಿತು.

ಸ್ವಾವಲಂಬಿ ಭಾರತ ನಿರ್ಮಾಣ, ನವನವೀನ ತಂತ್ರಜ್ಞಾನ ಮೂಲಕ ಕೋಳಿ, ಹಸು ಸಾಕಣೆ, ಸಸ್ಯಾಹಾರ, ಮಾಂಸಾಹಾರ ತಯಾರಿಕೆಯ ದೊಡ್ಡ ಉಪಕರಣಗಳನ್ನು ಪ್ರದರ್ಶಿಸಲಾಗುತ್ತಿದೆ. ಬೃಹತ್ ಮಾರಾಟ ಮೇಳದ ಮೂಲಕ ಉದ್ಯೋಗ ದೊರಕಿಸಿಕೊಡಲು ಆದ್ಯತೆ ನೀಡಲಾಗಿದೆ ಎಂದು ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

ಅಖಿಲ ಭಾರತ ವ್ಯಾಪಾರ ಮಂಡಲದ ರಾಜ್ಯ ಘಟಕದ ಅಧ್ಯಕ್ಷ ಕೆ.ವಿ.ವೆಂಕಟೇಶ್, ಕಾಫಿ ಮಂಡಳಿ ಸದಸ್ಯ ವಿಷ್ಣು, ಮೀಡಿಯಾ ಡೇ ಮಾರ್ಕೆಟಿಂಗ್ ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಮುದಸ್ಸರ್, ಸಂಯೋಜಕ ರಾಮ್ ಸೋನಲಕ್ಕರ್ ಮೇಳಕ್ಕೆ ಚಾಲನೆ ನೀಡಿದರು.

'ಮೇಳದಲ್ಲಿ 140ಕ್ಕೂ ಹೆಚ್ಚು ಕಂಪನಿಗಳು ಮಳಿಗೆಗಳನ್ನು ತೆರೆದಿವೆ. ಈ ಪೈಕಿ ಟೀ, ಕಾಫಿ ತಯಾರಿಸುವ 30ಕ್ಕೂ ಅಧಿಕ ಮಳಿಗೆಗಳಿವೆ. ಮನುಷ್ಯ ಮಾಡುವ ಕೆಲಸಗಳನ್ನು ಬೃಹತ್ ಯಂತ್ರೋಪಕರಣಗಳು ಸುಲಭವಾಗಿ ಮಾಡುತ್ತಿದ್ದು, ಉದ್ಯಮ ಸ್ಥಾಪಿಸಲು ಬೇಕಾದ ಎಲ್ಲ ಮಾಹಿತಿ, ಸಲಕರಣೆಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ಸಿಗಲಿವೆ' ಎಂದು ಪಿ.ಸಿ. ರಾವ್ ಹೇಳಿದರು.

ಆಹಾರ ಮೇಳದಲ್ಲಿರುವ ಬೃಹತ್ ಉಪಕರಣಗಳನ್ನು ಆತಿಥಿಗಳು ವೀಕ್ಷಿಸಿದರು

'ಸುಧಾಮೂರ್ತಿ ಸಮಾಜಮುಖಿ ಕಾರ್ಯ ಶ್ಲಾಘನೀಯ'

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟಬಲ್ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರಿಗೆ 2025ನೇ ಸಾಲಿನ 'ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟಬಲ್ ಪ್ರತಿಷ್ಠಾನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್.ವಿನಯ್ ಹೆಗ್ಡೆ, 'ಸುಧಾಮೂರ್ತಿ ಅವರು, ಯುವ ಸಮುದಾಯಕ್ಕೆ ಮಾರ್ಗದರ್ಶಕರಾಗಿದ್ದಾರೆ. ಲೇಖಕಿಯಾಗಿ ಶಿಕ್ಷಕರ ಹೊಣೆಯನ್ನೂ ನಿರ್ವಹಿಸುತ್ತಿದ್ದಾರೆ. ನೈತಿಕತೆಯನ್ನು ರೂಢಿಸಿಕೊಳ್ಳಲು ಪ್ರೇರಣೆಯಾಗಿರುವ ಇವರಿಗೆ 'ಜಸ್ಟಿಸ್ ಕೆ.ಎಸ್. ಹೆಗ್ಡೆ ಅವರ ಸ್ಮರಣಾರ್ಥ ನೀಡಲಾಗುತ್ತಿರುವ ಪ್ರಶಸ್ತಿ ಸಂದಿರುವುದು ಸಂತಸ ತಂದಿದೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಮಾತನಾಡಿ, ದುರಾಸೆಯು ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ಬಹುದೊಡ್ಡ ರೋಗ. ಹಿಂದೆ ಸಮಾಜದಲ್ಲಿ ಸಾಧನೆಗಳನ್ನು ಮಾಡಿದವರನ್ನು ಸನ್ಮಾನಿಸುತ್ತಿದ್ದರು. ಆದರೆ ಈಗ ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗಿ ಬಂದವರನ್ನು ಸ್ವಾಗತಿಸಿ, ಸನ್ಮಾನಿಸುತ್ತಿರುವುದು ದುರಂತದ ಸಂಗತಿ. ಇಂಥವರ ನಡುವೆ ಸುಧಾಮೂರ್ತಿಯಂಥವರು ಮಾಡುತ್ತಿರುವ ಸಮಾಜಮುಖಿ ಕಾರ್ಯಗಳು, ಹತಾಶೆಯ ನಡುವೆ ಆಶಾಭಾವನೆ ಮೂಡಿಸುತ್ತಿವೆ' ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸುಧಾಮೂರ್ತಿ, ಬದುಕಿನಲ್ಲಿ ನಾವು ಧನಕನಕಗಳನ್ನು ಗಳಿಸಿದರೆ ಸಾಲದು. ದುಡಿದು ಸಂಪಾದನೆ ಮಾಡಿದ್ದನ್ನು ಸ್ವಲ್ಪವಾದರೂ ಸಮಾಜದ ಸಾರ್ಥಕ ಕಾರ್ಯಗಳಿಗೆ ವಿನಿಯೋಗ ಮಾಡಿದರೆ ಸಾಧನೆ ಎನಿಸಿಕೊಳ್ಳುತ್ತದೆ. ಕೆ.ಎಸ್.ಹೆಗ್ಡೆ ಅವರ ಕುಟುಂಬ ನೀಡುತ್ತಿರುವ ಈ ಪ್ರಶಸ್ತಿಯು ನನ್ನಲ್ಲಿ ಜೀವನೋತ್ಸಾಹವನ್ನು ಹೆಚ್ಚಿಸುವ ಮೂಲಕ ಮತ್ತಷ್ಟು ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳಲು ಪ್ರೇರೇಪಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಡಾ.ಎಂ.ಶಾಂತರಾಜು ಶೆಟ್ಟಿ, ಬೆಂಗಳೂರು ಕ್ಯಾಂಪಸ್‌ನ ಉಪಾಧ್ಯಕ್ಷ ಸಂದೀಪ್ ಶಾಸ್ತ್ರಿ, ಕುಲಪತಿ ಡಾ.ಎಂ.ಎಸ್.ಮೂಡಿತ್ತಾಯ, ಸಹ ಕುಲಾಧಿಪತಿ(ಆಡಳಿತ) ವಿಶಾಲ್ ಹೆಗ್ಡೆ, ನಿಟ್ಟೆ ಶಿಕ್ಷಣಸಂಸ್ಥೆಯ ಹಿರಿಯ ಸಲಹೆಗಾರ ಡಾ.ಎನ್.ಆರ್.ಶೆಟ್ಟಿ ಉಪಸ್ಥಿತರಿದ್ದರು.

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರಿಗೆ 'ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟಬಲ್ ಪ್ರತಿಷ್ಠಾನದ ಪ್ರಶಸ್ತಿ 2025' ನೀಡಿ ಗೌರವಿಸಲಾಯಿತು. ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿ ಎನ್.ವಿನಯ್ ಹೆಗ್ಡೆ, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ನಿಟ್ಟೆ ಶಿಕ್ಷಣ ಸಂಸ್ಥೆಯ ಹಿರಿಯ ಸಲಹೆಗಾರ ಡಾ.ಎನ್.ಆರ್.ಶೆಟ್ಟಿ ಪಾಲ್ಗೊಂಡಿದ್ದರು

ಕೃಷಿ ಜಾಗೃತಿ ಕಾರ್ಯಾಗಾರದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ

ಕೃಷಿ, ವ್ಯಾಪಾರ ಕ್ಷೇತ್ರ: ನಿರುದ್ಯೋಗ ನಿವಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಮತ್ತು ಕೃಷಿ ಉತ್ಪನ್ನಗಳ ಮಾರುಕಟ್ಟೆ ವಹಿವಾಟು ವ್ಯವಸ್ಥೆಯಲ್ಲಿ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಈ ಕ್ಷೇತ್ರಗಳು ಆಸರೆಯಾಗಿವೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಕೆಪೆಕ್ ಹಾಗೂ ಖೇತಿವಾಲ ಸಂಸ್ಥೆಗಳು ಗುರುವಾರ ಆಯೋಜಿಸಿದ್ದ ಕೃಷಿ ಜಾಗೃತಿ ಕಾರ್ಯಾಗಾರ ಮತ್ತು ಖೇತಿ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಾಂಪ್ರದಾಯಿಕ ಕೃಷಿಯೊಂದಿಗೆ ತಂತ್ರಜ್ಞಾನ, ವೈಜ್ಞಾನಿಕ ಪದ್ಧತಿ ಅಳವಡಿಸಿಕೊಂಡರೆ ಸಮಯ, ಶ್ರಮದ ಉಳಿತಾಯದ ಜೊತೆಗೆ ಆದಾಯ ಹೆಚ್ಚುತ್ತದೆ. ರೈತರು ತಮ್ಮ ಉತ್ಪನ್ನಗಳ ಮೌಲ್ಯವರ್ಧನೆಗೂ ಆದ್ಯತೆ ನೀಡಬೇಕು. ಮಾರುಕಟ್ಟೆಯ ಬಗ್ಗೆ ಜ್ಞಾನ ವಿಸ್ತಾರಗೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಪೆಕ್‌ನಲ್ಲಿ ಪಿಎಂಎಫ್‌ಎಂಇ ಯೋಜನೆಯಡಿ ಕಿರು ಆಹಾರ ಸಂಸ್ಕರಣೆ ಉದ್ಯಮ ಸ್ಥಾಪಿಸಲು ಅವಕಾಶವಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಒಟ್ಟು ₹ 15 ಲಕ್ಷ ಸಬ್ಸಿಡಿ ದೊರೆಯಲಿದೆ. ಇದಕ್ಕಾಗಿ ₹ 206 ಕೋಟಿ ಮೀಸಲಿಡಲಾಗಿದೆ ಎಂದು ವಿವರಿಸಿದರು.

ಕೆಪೆಕ್‌ನಲ್ಲಿ ಈ ವರ್ಷ 5 ಸಾವಿರ ಹೊಸ ಆಹಾರ ಉದ್ಯಮಗಳ ಸೃಷ್ಟಿಯ ಗುರಿ ಹೊಂದಲಾಗಿದೆ. ಕೃಷಿ ಇಲಾಖೆಯಲ್ಲಿ ಹಲವು ವಿನೂತನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ₹ 8 ಕೋಟಿ ಸಹಾಯಧನದಲ್ಲಿ 40 ನವೋದ್ಯಮಗಳನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ರೈತರನ್ನು ಯಾಂತ್ರಿಕವಾಗಿಯೂ ಸಬಲರನ್ನಾಗಿ ಮಾಡಲು ರಾಜ್ಯ ಸರ್ಕಾರ ₹ 900 ಕೋಟಿ ವೆಚ್ಚದಲ್ಲಿ ಈಗಾಗಲೇ ಕೃಷಿ ಯಂತ್ರೋಪಕರಣಗಳು, ₹ 1075 ಕೋಟಿ ವೆಚ್ಚದಲ್ಲಿ ಸೂಕ್ಷ್ಮ ನೀರಾವರಿ ಪರಿಕರಗಳನ್ನು ವಿತರಿಸಿದೆ ಎಂದು ಸಚಿವರು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಲಾನಯನ ಇಲಾಖೆ ನಿರ್ದೇಶಕರಾದ ಮೊಹಮ್ಮದ ಪರವೇಜ ಬಂಥನಾಳ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್, ನಬಾರ್ಡ್ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ವಿ.ಎನ್. ಶರ್ಮಾ, ಎಸ್‌ಎಲ್‌ಬಿಸಿ ಸಂಯೋಜಕ ಭಾಸ್ಕರ್ ಭಟ್ಟಾಚಾರ್ಯ ಉಪಸ್ಥಿತರಿದ್ದರು.

ಖೇತಿ ಪುರಸ್ಕಾರಕ್ಕೆ ಭಾಜನರಾದವರನ್ನು ಕೃಷಿ ಜಾಗೃತಿ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು

ಅರ್ಹರಿಗೆ ತಲುಪದ 'ಗ್ಯಾರಂಟಿ': ಆಕ್ಷೇಪ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕಡುಬಡವರು, ಕೂಲಿಕಾರ್ಮಿಕರಿಗೆ ಗ್ಯಾರಂಟಿ ಯೋಜನೆ ತಲುಪುತ್ತಿಲ್ಲ. ಕೆಲವರ ಬಿಪಿಎಲ್ ಕಾರ್ಡ್‌ಗಳು ರದ್ದಾಗಿವೆ. ಬಡವರಿಗೆ ಸರಿಯಾಗಿ ಪಡಿತರ ಸಿಗುತ್ತಿಲ್ಲ, ಆದರೆ, ಸಿರಿವಂತರು, ಸರ್ಕಾರಿ ಅಧಿಕಾರಿಗಳ ಕುಟುಂಬದವರು ಪಡಿತರ ಕಾರ್ಡ್‌ನ ಲಾಭ ಪಡೆಯುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತಾಲ್ಲೂಕಿನ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಸದಸ್ಯರಾದ ಟಿ.ಎಲ್.ಕೆಂಪೇಗೌಡ, ಎಚ್.ಈರಯ್ಯ , ಸಿ.ಎನ್.ಮೂರ್ತಿ, ರಾಮೋಹಳ್ಳಿ ರವಿಕುಮಾರ್, ಕೃಷ್ಣಪ್ಪ ಮತ್ತು ಕೆ.ಎಂ.ಮಹೇಶ್ ಕುಮಾರ್ ಈ ಬಗ್ಗೆ ವಿಷಯ ಪ್ರಸ್ತಾಪಿಸಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸಮಿತಿ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸದಸ್ಯರು, 'ಆಹಾರ ಇಲಾಖೆಯ ಯಡವಟ್ಟಿನಿಂದಾಗಿ ಬಡವರಿಗೆ ಎಪಿಎಲ್ ಕಾರ್ಡ್ ಸಿಗುವಂತಾಗಿದೆ. ಬಡವರು ಏನು ತಪ್ಪು ಮಾಡಿದ್ದಾರೆ' ಎಂದು ಪ್ರಶ್ನಿಸಿದರು.

'ದ್ವಿಚಕ್ರವಾಹನ, ಮನೆ ನಿರ್ಮಾಣಕ್ಕೆ ಬ್ಯಾಂಕ್‌ಗಳಲ್ಲಿ ಸಾಲ ಪಡೆಯುವ ಕೆಲ ಬಡ, ಮಧ್ಯಮ ವರ್ಗದವರನ್ನು ಆದಾಯ ತೆರಿಗೆ ಪಾವತಿದಾರರು ಎಂದು ಪರಿಗಣಿಸಿ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗುತ್ತಿದೆ. ಕೆಲವರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ತಲುಪುತ್ತಿಲ್ಲ' ಎಂದು ದೂರಿದರು.

'ಇಲಾಖೆಯ ಅಧಿಕಾರಿಗಳು ಆದಷ್ಟು ಬೇಗ ಈ ಸಮಸ್ಯೆಗಳನ್ನು ಬಗೆಹರಿಸಿ, ಬಡವರಿಗೆ ಸರ್ಕಾರದ ಯೋಜನೆಗಳು ತಲುಪುವಂತೆ ಮಾಡಬೇಕು ಎಂದರು.

'ಹೊಸದಾಗಿ ಬಿಪಿಎಲ್ ಕಾರ್ಡ್ ಮಾಡಿಸಲು, ಕಾರ್ಡ್‌ನಲ್ಲಿ ಮಕ್ಕಳ ಹೆಸರು ಸೇರಿಸಲು ನಾಲ್ಕೈದು ಸಾವಿರ ರೂಪಾಯಿ ಕೊಟ್ಟರೆ ನಾಲ್ಕೇ ದಿನದಲ್ಲಿ ಕೆಲಸ ಮಾಡಿಕೊಡುತ್ತಾರೆ. ಹಣ ಕೊಡದಿದ್ದರೆ ಸಬೂಬು ಹೇಳಿ ನಿಧಾನ ಮಾಡುತ್ತಾರೆ. ಕೆಲವು ಕಡೆ ಪಡಿತರ ಬಂದ ಎರಡೇ ದಿನಗಳಲ್ಲಿ ಖಾಲಿ ಆಗಿದೆ ಎಂದು ಹೇಳಿ ಕಳಿಸುತ್ತಾರೆ. ತೂಕದಲ್ಲೂ ಮೋಸ ಮಾಡುತ್ತಿದ್ದಾರೆ. ಆಹಾರ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ರಾಮೋಹಳ್ಳಿ ರವಿಕುಮಾರ್ ಆರೋಪಿಸಿದರು. ಉಳಿದ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

'ಈ ಅವ್ಯವಸ್ಥೆಯನ್ನು ಜಿಲ್ಲಾಧಿಕಾರಿ, ಆಹಾರ ಇಲಾಖೆ ಹಿರಿಯ ಅಧಿಕಾರಿಗಳು ತಕ್ಷಣವೇ ಸರಿಪಡಿಸಬೇಕು' ಎಂದು ಸದಸ್ಯರು ಒತ್ತಾಯಿಸಿದರು.

ಆಹಾರ ಇಲಾಖೆಯ ಶಿರಸ್ತೇದಾರ ಪುರುಷೋತ್ತಮ್ ಮಾತನಾಡಿ, 'ಹೊಸ ಅರ್ಜಿ ಹಾಗೂ ತಿದ್ದುಪಡಿಗೆ ₹ 50 ಪಡೆಯಲಾಗುತ್ತಿದೆ. ಪಡಿತರ ಅಂಗಡಿ ಮಾಲೀಕರು ಬೆದರಿಕೆ ಹಾಕುವುದು, ತೂಕದಲ್ಲಿ ಮೋಸ ಮಾಡುವುದು ಕಂಡುಬಂದರೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದರು.

ಸಭೆಯಲ್ಲಿ ಸಿಡಿಪಿಒ ಆರತಿ, ತಾ.ಪಂ. ಇಒ ಜಿ.ಬಿಂದು, ಸಮಿತಿ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್ ಹಾಜರಿದ್ದರು

ಕೆಎಸ್‌ಆರ್‌ಟಿಸಿ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ನೂತನ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರಿಗೆ ಗುರುವಾರ ಅಧಿಕಾರ ಹಸ್ತಾಂತರಿಸಿದರು.

ಎಚ್.ಎಂ. ರೇವಣ್ಣ ಪತ್ನಿ ವತ್ಸಲ ನಿಧನ

ಮಾಗಡಿ: ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ. ರೇವಣ್ಣ ಅವರ ಪತ್ನಿ ವತ್ಸಲ ರೇವಣ್ಣ (76) ಗುರುವಾರ ನಿಧನರಾದರು.

ಅವರಿಗೆ ಪತಿ, ಇಬ್ಬರು ಪುತ್ರರಿದ್ದಾರೆ.

ಚಾಮರಾಜಪೇಟೆಯ ಟಿ.ಆರ್. ಮಿಲ್ ಬಳಿ ಇರುವ ಹಿಂದೂ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾನ್ಯತೆ ಕಳೆದುಕೊಂಡ ಕಾಂತರಾಜ ವರದಿ • ಸಂಪುಟ ಸಭೆಯಲ್ಲಿ ನಿರ್ಧಾರ

ಮತ್ತೊಮ್ಮೆ ಜಾತಿವಾರು ಸಮೀಕ್ಷೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳಿಂದ ರಾಜಕೀಯ ತಿಕ್ಕಾಟಕ್ಕೆ ಕಾರಣವಾಗಿದ್ದ 10 ವರ್ಷ ಹಳೆಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಅಂತಿಮವಾಗಿ ಕೈಬಿಡಲು ತೀರ್ಮಾನಿಸಿರುವ ರಾಜ್ಯ ಸರ್ಕಾರ ಹೊಸದಾಗಿ ಜಾತಿವಾರು ಸಮೀಕ್ಷೆ ನಡೆಸಲು ನಿರ್ಧರಿಸಿದೆ.

ಈ ಸಮೀಕ್ಷೆಯ ವರದಿ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳಲು ಕಳೆದ ಮೂರು– ನಾಲ್ಕು ಸಂಪುಟ ಸಭೆಗಳಲ್ಲಿ ಪ್ರಸ್ತಾವವನ್ನು ಮಂಡಿಸಲಾಗಿತ್ತು. ಒಕ್ಕಲಿಗ– ಲಿಂಗಾಯತ ಸಮುದಾಯದ ಸಚಿವರ ವಿರೋಧದ ಕಾರಣ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಕೆಲ ದಿನಗಳ ಹಿಂದೆ, ಹೊಸ ಸಮೀಕ್ಷೆ ನಡೆಸುವಂತೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದ ಬೆನ್ನಲ್ಲೇ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಎಚ್. ಕಾಂತರಾಜ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಗೆ ತೆರೆ ಎಳೆಯಲಾಯಿತು.

ಈ ವರದಿಗೆ ಆರಂಭದಿಂದಲೂ ಒಕ್ಕಲಿಗ, ಲಿಂಗಾಯತ ಸಮುದಾಯದಿಂದ ವಿರೋಧ ವ್ಯಕ್ತವಾಗಿತ್ತು. ಅವೈಜ್ಞಾನಿಕ ವರದಿ ಮತ್ತು ಸಂಖ್ಯೆಯನ್ನು ಬೇಕಾಬಿಟ್ಟಿ ಬದಲಿಸಲಾಗಿದೆ ಎಂದು ಈ ಸಮುದಾಯಗಳು ಆರೋಪಿಸಿದ್ದವು. ಆದರೆ, ಹಿಂದುಳಿದ ವರ್ಗಗಳ ಮುಖಂಡರು ಸಮೀಕ್ಷೆ ವರದಿಯನ್ನು ಸಮರ್ಥಿಸಿಕೊಂಡಿದ್ದರಲ್ಲದೇ, ಸ್ವೀಕರಿಸಲೇಬೇಕು ಎಂಬ ಹಕ್ಕೊತ್ತಾಯ ಮಂಡಿಸಿದ್ದರು.

> **10 ವರ್ಷಗಳಲ್ಲಿ ಜನಸಂಖ್ಯೆ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿ ಬದಲಾಗಿರುತ್ತವೆ. ಅದರ ಜತೆಗೆ ಪಕ್ಷದ ವರಿಷ್ಠರೂ ಮಾರ್ಗದರ್ಶನ ಮಾಡಿದ್ದು, ಇಂದಿನ ಸಚಿವ ಸಂಪುಟದಲ್ಲಿ ಮರು ಸಮೀಕ್ಷೆಗೆ ತೀರ್ಮಾನಿಸಲಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, '10 ವರ್ಷದ ಹಿಂದೆ ನಡೆಸಿದ್ದ ಸಮೀಕ್ಷೆಯ ದತ್ತಾಂಶವು ಮಾನ್ಯತೆ ಕಳೆದುಕೊಂಡಿರುವುದರಿಂದ 90 ದಿನಗಳ ಕಾಲಮಿತಿಯಲ್ಲಿ ಹೊಸದಾಗಿ ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ' ಎಂದರು.

'ಹಿಂದುಳಿದ ವರ್ಗಗಳ ಆಯೋಗಕ್ಕೆ ಸಮೀಕ್ಷೆ ನಡೆಸುವ ಹೊಣೆ ವಹಿಸಲಾಗುವುದು. ಆಯೋಗಕ್ಕೆ ಮಧುಸೂದನ ನಾಯಕ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಕೆಲವೇ ದಿನಗಳಲ್ಲಿ ಸದಸ್ಯರ ನೇಮಕ ಮಾಡಲಾಗುವುದು' ಎಂದು ಹೇಳಿದರು.

'ಸಮೀಕ್ಷೆ ನಡೆಸಿ 10 ವರ್ಷ ಕಳೆದಿದ್ದರೆ, ಹೊಸ ಸಮೀಕ್ಷೆ ನಡೆಸಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ– 1995 ಸೆಕ್ಷನ್ 11 (2) ಸ್ಪಷ್ಟವಾಗಿ ಹೇಳಿದೆ. ಈ ಕಾಯ್ದೆಯ ತಿದ್ದುಪಡಿ ಮಸೂದೆ– 2014ರ ಸೆಕ್ಷನ್ 11 ಕಲಂ(1) ರಂತೆ ಸಮೀಕ್ಷೆ ನಡೆಸಿ 10 ವರ್ಷಗಳ ಅವಧಿ ಮುಗಿದರೆ, ಆ ಬಳಿಕ ಬರುವ ಪ್ರತಿ 10 ವರ್ಷಗಳು ಮುಕ್ತಾಯವಾದಾಗ ಹಿಂದುಳಿದ ವರ್ಗವಾಗಿ ಉಳಿಯದೇ ಇರುವ ಜಾತಿಯನ್ನು ಪಟ್ಟಿಯಿಂದ ತೆಗೆಯಬಹುದು ಅಥವಾ ಆ ಪಟ್ಟಿಗೆ ಸೇರಿಸಬಹುದು' ಎಂದು ಸಿದ್ದರಾಮಯ್ಯ ತಿಳಿಸಿದರು.

'ಇತ್ತೀಚೆಗೆ ಪಕ್ಷದ ನಾಯಕರು ನನ್ನನ್ನು ಮತ್ತು ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದರು. ಸಾಮಾಜಿಕ– ಶೈಕ್ಷಣಿಕ ಸಮೀಕ್ಷೆ ವರದಿಗೆ 10 ವರ್ಷ ಕಳೆದಿದೆ. ಸಾಕಷ್ಟು ಬದಲಾವಣೆ ಮತ್ತು ಬೆಳವಣಿಗೆಗಳು ಆಗಿದ್ದು, ಮರು ಪರಿಶೀಲಿಸಿ ಎಂದು ಸೂಚಿಸಿದ್ದರು. ಈ ಎಲ್ಲ ಕಾರಣಗಳಿಂದ ಹೊಸ ಸಮೀಕ್ಷೆಗೆ ತೀರ್ಮಾನಿಸಿದ್ದೇವೆ' ಎಂದು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡರು.

'ಕೇಂದ್ರ ಸರ್ಕಾರ ಜಾತಿ ಗಣತಿ ನಡೆಸುತ್ತಿರುವಾಗ ರಾಜ್ಯದಲ್ಲಿ ಮತ್ತೊಂದು ಹೊಸ ಸಮೀಕ್ಷೆ ಅಗತ್ಯವಿದೆಯೇ' ಎಂಬ ಪ್ರಶ್ನೆಗೆ, 'ಕೇಂದ್ರ ಸರ್ಕಾರ ಎಲ್ಲಿಯೂ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ನಡೆಸುತ್ತದೆ ಎಂದು ಹೇಳಿಲ್ಲ. ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ನಡೆಸುತ್ತೀರಾ ಎಂದು ಕೇಳಿದಾಗಲೂ ಅವರು ಉತ್ತರ ಕೊಡಲಿಲ್ಲ. ಆದ್ದರಿಂದ ನಾವು ಸಾಮಾಜಿಕ ನ್ಯಾಯ ನೀಡಲು ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದ್ದೇವೆ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾನೂನು ಸಚಿವ ಎಚ್.ಕೆ.ಪಾಟೀಲ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಇದ್ದರು.

'ಎಚ್‌ಡಿಕೆ ಬೆದರಿಕೆ ಹಾಕಿದ್ದರು'

'ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಇದ್ದಾಗ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಪಡೆಯದಂತೆ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಆಗಿನ ಹಿಂದುಳಿದ ವರ್ಗಗಳ ಸಚಿವ ಪುಟ್ಟರಂಗಶೆಟ್ಟಿ ಅವರಿಗೆ ಬೆದರಿಕೆ ಹಾಕಿದ್ದರು' ಎಂದು ಸಿದ್ದರಾಮಯ್ಯ ಆರೋಪಿಸಿದರು.

'ನಾನು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ವರದಿ ಮತ್ತು ಅದರ ಶಿಫಾರಸುಗಳು ಅಂತಿಮಗೊಂಡಿರಲಿಲ್ಲ. ಹೀಗಾಗಿ ವರದಿ ಪಡೆಯಲು ಸಾಧ್ಯವಾಗಿರಲಿಲ್ಲ. ಕುಮಾರಸ್ವಾಮಿ ಸರ್ಕಾರ ಬರುವ ವೇಳೆಗೆ ವರದಿ ಸಿದ್ಧವಾಗಿತ್ತು. ಆದರೆ, ಅವರ ಒತ್ತಡ, ಬೆದರಿಕೆಯಿಂದ ಸರ್ಕಾರಕ್ಕೆ ವರದಿ ಸ್ವೀಕರಿಸಲು ಸಾಧ್ಯವಾಗಲಿಲ್ಲ' ಎಂದರು.

'ಕಾಂತರಾಜ ಅವಧಿ ಮುಗಿದ ನಂತರ ಜಯಪ್ರಕಾಶ್ ಹೆಗ್ಡೆ ಅವರನ್ನು ಬಿಜೆಪಿ ಸರ್ಕಾರ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಸದಸ್ಯರೂ ಬಿಜೆಪಿಯವರೇ ಆಗಿದ್ದರು. ಜಯಪ್ರಕಾಶ್ ಹೆಗ್ಡೆಯವರು ಸಮೀಕ್ಷೆ ದತ್ತಾಂಶದ ಆಧಾರದ ಮೇಲೆ ಶಿಫಾರಸು ಮಾಡಿ 2024ರ ಫೆಬ್ರುವರಿ 29ಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು' ಎಂದು ಹೇಳಿದರು.

ಹಿಂದಿನ ಸಮೀಕ್ಷೆಗೆ ₹165 ಕೋಟಿ ವೆಚ್ಚ

ಎಚ್.ಕಾಂತರಾಜ ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ 54 ಮಾನದಂಡಗಳನ್ನು ಇಟ್ಟುಕೊಂಡು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ವರದಿ ತಯಾರಿಸಿತ್ತು. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 6.11 ಕೋಟಿ ಜನರಿದ್ದರು. ಈ ಜನಸಂಖ್ಯೆ 2015 ರ ವೇಳೆಗೆ 6.35 ಕೋಟಿ ಎಂದು ಅಂದಾಜಿಸಲಾಗಿತ್ತು. 5.98 ಕೋಟಿ ಜನರು ಸಮೀಕ್ಷೆಗೆ ಒಳಪಟ್ಟಿದ್ದರು. 2015 ರ ಏಪ್ರಿಲ್ 11ರಿಂದ 2015ರ ಮೇ 30ರವರೆಗೆ ಸಮೀಕ್ಷೆ ನಡೆದಿತ್ತು. 1.60 ಲಕ್ಷ ಸಿಬ್ಬಂದಿ ಮತ್ತು 1.33 ಲಕ್ಷ ಶಿಕ್ಷಕರು ಸಮೀಕ್ಷೆಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ಕೆ ₹165 ಕೋಟಿ ಖರ್ಚಾಗಿತ್ತು.

ವಿಪಕ್ಷಗಳಿಂದ ರಾಜಕೀಯ ಬಣ್ಣ: ಡಿಕೆಶಿ

ಬೆಂಗಳೂರು: 'ಜಾತಿವಾರು ಸಮೀಕ್ಷೆಯ ವಿಚಾರದಲ್ಲಿ ನಮಗೆ (ಕಾಂಗ್ರೆಸ್‌ಗೆ) ರಾಜಕೀಯ ಬಣ್ಣ ಬೇಡ. ಸಾಮಾಜಿಕ ನ್ಯಾಯ ಬೇಕು. ಈ ಕಾರಣಕ್ಕೆ ನಾವು ಮತ್ತೊಮ್ಮೆ ಸಮೀಕ್ಷೆ ಮಾಡಲು ತೀರ್ಮಾನಿಸಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಜಾತಿವಾರು ಮರು ಸಮೀಕ್ಷೆಗೆ ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವನ್ನು ಟೀಕಿಸುತ್ತಿರುವ ವಿರೋಧ ಪಕ್ಷದವರು ಹಿಂದೆ ಒಂದು, ಮುಂದೆ ಒಂದು ಮಾತನಾಡಿ ರಾಜಕೀಯಬಣ್ಣ ಲೇಪಿಸುತ್ತಿದ್ದಾರೆ' ಎಂದು ದೂರಿದರು.

'ಈ ಹಿಂದಿನ ವರದಿ ಬಗ್ಗೆ ಟೀಕೆ ಮಾಡಿದ್ದ ವಿರೋಧ ಪಕ್ಷದವರು ಈಗ ಉಲ್ಟಾ ಮಾತನಾಡುತ್ತಿದ್ದಾರೆ. ಅದರ ಬದಲು ಹಳೆಯದನ್ನೇ ಒಪ್ಪಿಕೊಳ್ಳುವಂತೆ ಒತ್ತಾಯಿಸಲಿ' ಎಂದರು.

'2015ರಲ್ಲಿ ನಡೆದ ಸಮೀಕ್ಷೆಗೆ 10 ವರ್ಷವಾಗಿದೆ ಎಂದು ಜನರು ನ್ಯಾಯಾಲಯದ ಮೆಟ್ಟಿಲೇರಿ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆ 1995 ಸೆಕ್ಷನ್ 11 (2)ರ ಅನುಸಾರ ತಡೆಯಾಜ್ಞೆ ತರಬಹುದು. ಹೀಗಾಗಿ, ನಾವು ಜನರು, ಶಾಸಕರ ಭಾವನೆ, ಅಭಿಪ್ರಾಯ ಅರಿತು ಜಾತಿವಾರು ಮರು ಸಮೀಕ್ಷೆಗೆ ಕಾನೂನಾತ್ಮಕವಾಗಿ ಒಪ್ಪಿಗೆ ನೀಡಿದ್ದೇವೆ' ಎಂದು ಸಮರ್ಥಿಸಿದರು.

ಲಿಂಗಾಯತ ಮತ್ತು ಒಕ್ಕಲಿಗರಿಂದ ಈ ಹಿಂದೆ ವಿರೋಧ ವ್ಯಕ್ತವಾದ ಬಗ್ಗೆ ಕೇಳಿದಾಗ, 'ಆ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಹೊಸ ಸಮೀಕ್ಷೆಯಲ್ಲಿ ಸಮಾಜದ ಎಲ್ಲರೂ ಒಳಗೊಳ್ಳುವಂತೆ ಮಾಡುವುದು ನಮ್ಮ ಉದ್ದೇಶ. ಹೊರನಾಡು ಕನ್ನಡಿಗರಿಗೆ ಸಮೀಕ್ಷೆಯಲ್ಲಿ ಭಾಗವಹಿಸಲು ಆನ್‌ಲೈನ್ ಮೂಲಕ ವ್ಯವಸ್ಥೆ ಕಲ್ಪಿಸಲಾಗುವುದು' ಎಂದರು.

ಸುದ್ದಿ 2 ನಿಮಿಷ

ಕೇರಳ ಮೃಗಾಲಯಕ್ಕೆ ಕರ್ನಾಟಕದ ತಾಂತ್ರಿಕ ನೈಪುಣ್ಯ ವಿನಿಮಯ

ಬೆಂಗಳೂರು: ಕೇರಳದ ತ್ರಿಶೂರ್ ಜಿಲ್ಲೆಯ ಪುಥೂರ್‌ನ ನೂತನ ಜೈವಿಕ ಉದ್ಯಾನದಲ್ಲಿ (ಮೃಗಾಲಯ) ವನ್ಯಜೀವಿ ಮತ್ತು ಪಕ್ಷಿಗಳ ನಿರ್ವಹಣೆಗೆ ಅಗತ್ಯವಾದ ತಾಂತ್ರಿಕ ನೈಪುಣ್ಯ ವಿನಿಮಯಕ್ಕೆ ಕರ್ನಾಟಕ ಅರಣ್ಯ ಇಲಾಖೆ ಸಮ್ಮತಿಸಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನಸೌಧದಲ್ಲಿ ತಮ್ಮನ್ನು ಭೇಟಿಯಾದ ಕೇರಳ ಅರಣ್ಯ ಸಚಿವ ಎ.ಕೆ. ಸಶೀಂದ್ರನ್ ಜತೆ ಮಾತುಕತೆ ನಡೆಸಿದ ನಂತರ ಅವರು ಮಾಹಿತಿ ನೀಡಿದರು.

'ವನ್ಯಜೀವಿಗಳ ನಿರ್ವಹಣೆಗೆ ತಾಂತ್ರಿಕ ನೈಪುಣ್ಯವನ್ನು ಹಂಚಿಕೊಳ್ಳುವಂತೆ ಕೇರಳ ಸಚಿವರು ಮನವಿ ಮಾಡಿದ್ದಾರೆ. ಕರ್ನಾಟಕದ ಮೃಗಾಲಯಗಳಲ್ಲಿ ಹೆಚ್ಚುವರಿಯಾಗಿರುವ ಕೆಲ ವನ್ಯಜೀವಿಗಳನ್ನು ನೀಡುವಂತೆಯೂ ಕೋರಿದ್ದಾರೆ. ಪರಿಭಾವಿತ ಅರಣ್ಯದ ಬಗ್ಗೆ ಕೈಗೊಂಡಿರುವ ಕ್ರಮಗಳು, ಕಸ್ತೂರಿ ರಂಗನ್ ವರದಿಯ ನಿರ್ಣಯಗಳ ಕುರಿತು ಸಮಾಲೋಚನೆ ನಡೆಸಿದೆವು' ಎಂದರು.

ಕೇರಳ ಸರ್ಕಾರ 136.8 ಎಕರೆಯಲ್ಲಿ ರಾಜ್ಯದ ಪ್ರಥಮ ಜೈವಿಕ ಉದ್ಯಾನ ಆರಂಭಿಸುತ್ತಿದೆ. ಮೃಗಾಲಯ ವಿನ್ಯಾಸಕಾರ ಆಸ್ಟ್ರೇಲಿಯಾದ ಜಾನ್ ಸಿಯೋ ವಿನ್ಯಾಸ ಮಾಡಿದ್ದಾರೆ. ಜನರಿಗೆ ಆಗಸ್ಟ್‌ನಿಂದ ಉದ್ಯಾನದ ಬಾಗಿಲು ತೆರೆಯಲಿದೆ ಎಂದು ಸಶೀಂದ್ರನ್ ಮಾಹಿತಿ ನೀಡಿದರು.

ಕೇರಳ ಅರಣ್ಯ ಇಲಾಖೆಯ ಮುಖ್ಯ ವನ್ಯಜೀವಿ ಪರಿಪಾಲಕ ಪ್ರಮೋದ್ ಜಿ ಕೃಷ್ಣನ್, ಕರ್ನಾಟಕ ಅರಣ್ಯ ಇಲಾಖೆ ಪ್ರಮುಖ ಅಧಿಕಾರಿಗಳಾದ ಮೀನಾಕ್ಷಿ ನೇಗಿ, ಸುಭಾಷ್ ಮಾಲ್ಕಡೆ, ಸುನೀಲ್ ಪನ್ವಾರ್, ಸೂರ್ಯ ಸೇನ್ ಇದ್ದರು.

ಅನುದಾನಿತ ಪೂರ್ವ ಪ್ರಾಥಮಿಕ ಶಿಕ್ಷಕರ ಪಿಂಚಣಿ ಹೆಚ್ಚಳ

ಬೆಂಗಳೂರು: ಅನುದಾನಿತ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕಿಯರು ಮತ್ತು ಸಹಾಯಕಿಯರ ನಿವೃತ್ತಿ ಪಿಂಚಣಿಯನ್ನು ಪರಿಷ್ಕರಿಸಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಶಿಕ್ಷಕಿಯರ ಪ್ರತಿ ತಿಂಗಳ ಪಿಂಚಣಿಯನ್ನು ₹19,000, ಸಹಾಯಕಿಯರ ಪಿಂಚಣಿಯನ್ನು ₹15,000ಕ್ಕೆ ನಿಗದಿ ಮಾಡಲಾಗಿದೆ. ಇದುವರೆಗೂ ಅವರು ಕ್ರಮವಾಗಿ ₹11,500 ಹಾಗೂ ₹ 9,000 ಪಡೆಯುತ್ತಿದ್ದರು. ಈ ಸೌಲಭ್ಯ ಏಪ್ರಿಲ್ 1984ರ ಪೂರ್ವದಲ್ಲಿ ಅನುದಾನಕ್ಕೆ ಒಳಪಟ್ಟಿರುವ ಸಂಸ್ಥೆಗಳಲ್ಲಿ ಕೆಲಸ ಮಾಡಿ, ನಿವೃತ್ತರಾದ ನೌಕರರಿಗೆ ಅನ್ವಯವಾಗುತ್ತದೆ ಎಂದು ಇಲಾಖೆ ಹೇಳಿದೆ.

ಕರ್ನಾಟಕ ರಾಜ್ಯ ಸರ್ಕಾರಿ ಅನುದಾನಿತ ಪೂರ್ವ ಪ್ರಾಥಮಿಕ ಶಾಲಾ ಸಿಬ್ಬಂದಿ ಸಂಘ 2018ರಲ್ಲಿ ನಿಗದಿ ಮಾಡಿದ ಹಳೇ ಪಿಂಚಣಿಯನ್ನು ಪರಿಷ್ಕರಣೆ ಮಾಡುವಂತೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಮಾಡಿತ್ತು.

ಕಾಲ್ತುಳಿತ ಘಟನೆ: ಹೈಕೋರ್ಟ್‌ಗೆ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟ ಘಟನೆಯ ಬಗೆಗಿನ ವಿಚಾರಣೆ ಮತ್ತು ಈ ತನಕದ ವಸ್ತುಸ್ಥಿತಿ ವರದಿಯನ್ನು ರಾಜ್ಯ ಸರ್ಕಾರವು, ಮುಚ್ಚಿದ ಲಕೋಟೆಯಲ್ಲಿ ಗುರುವಾರ ಹೈಕೋರ್ಟ್‌ಗೆ ಸಲ್ಲಿಸಿತು.

ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ಘಟನೆಗೆ ಸಂಬಂಧಿಸಿದಂತೆ ನ್ಯಾಯಪೀಠ ಈ ಹಿಂದಿನ ವಿಚಾರಣೆ ವೇಳೆ ಕೇಳಿದ್ದ 9 ಪ್ರಶ್ನೆಗಳಿಗೆ ಉತ್ತರ ನೀಡಿದ ಸರಿಸುಮಾರು 200 ಪುಟಗಳ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು.

'ಎಲ್ಲಾ ದಾಖಲೆಗಳು ಕನ್ನಡದಲ್ಲಿವೆ. ಅವುಗಳನ್ನು ಎರಡು ದಿನಗಳಲ್ಲಿ ಇಂಗ್ಲಿಷ್‌ಗೆ ಅನುವಾದಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಈ ವಿಷಯದಲ್ಲಿ ಸರ್ಕಾರ ಏನನ್ನೂ ಬಚ್ಚಿಡುವುದಿಲ್ಲ. ಭವಿಷ್ಯದಲ್ಲಿ ಇಂತಹ ದುರ್ಘಟನೆಗಳು ಸಂಭವಿಸದಂತೆ ಹೇಗೆ ತಡೆಯಬಹುದು ಎಂಬ ವಿಚಾರದಲ್ಲಿ ಸಂಪೂರ್ಣ ಪಾರದರ್ಶಕ ನಡೆ ಹೊಂದಿದೆ' ಎಂದರು.

ನಿರ್ದೇಶನ: 'ದುರಂತಕ್ಕೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರ, ಸಂವಹನಗಳನ್ನು (ಆಫ್‌ಲೈನ್ ಮತ್ತು ಆನ್‌ಲೈನ್, ವಾಟ್ಸ್ ಆ್ಯಪ್ ಸಂದೇಶವೂ ಸೇರಿದಂತೆ) ಮುಖ್ಯ ಕಾರ್ಯದರ್ಶಿ ವಶಕ್ಕೆ ಒಪ್ಪಿಸಬೇಕು. ಜಿಲ್ಲಾಧಿಕಾರಿ ನೇತೃತ್ವದ ಮ್ಯಾಜಿಸ್ಟೀರಿಯಲ್ ವಿಚಾರಣೆ ಮತ್ತು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ಅವರ ಏಕಸದಸ್ಯ ವಿಚಾರಣಾ ಆಯೋಗ, ಯಾವ ನಿರ್ದಿಷ್ಟ ಉದ್ದೇಶವನ್ನು ವಹಿಸಿಕೊಂಡು ಯಾವುದರ ಬಗ್ಗೆ ವಿಚಾರಣೆ ನಡೆಸಬೇಕು ಎಂಬ (ಟರ್ಮ್ಸ್ ಅಂಡ್ ರೆಫರೆನ್ಸ್) ಉಲ್ಲೇಖನಾ ನಿಯಮಗಳನ್ನು ಹೊಂದಿವೆ ಎಂಬುದನ್ನೂ ಇದರಲ್ಲಿ ಅಡಕಗೊಳಿಸಬೇಕು' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

ಮಧ್ಯಂತರ ಅರ್ಜಿಗಳು: ಇದೇ ವೇಳೆ ಪದಾಂಕಿತ ಹಿರಿಯ ವಕೀಲ ಎಂ.ಬಿ.ನರಗುಂದ ಅವರು, 'ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ ಸಾಕಷ್ಟು ಮಂದಿ ಮೃತಪಟ್ಟಿದ್ದರು. ಈ ಘಟನೆಯ ಮೇಲೆ ಹೈಕೋರ್ಟ್ ನಿಗಾ ಇಟ್ಟಿತ್ತು. ಈ ಪ್ರಕರಣದಲ್ಲೂ ಅದೇ ರೀತಿ ಮಾಡಬೇಕು' ಎಂದು ಸಲಹೆ ನೀಡಿದರು.

ಮಧ್ಯಂತರ ಅರ್ಜಿದಾರರಾಗಲು ಬಯಸಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ ಪರ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ್, 'ರಾಜ್ಯದಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ (ಎನ್‌ಡಿಆರ್‌ಎಫ್) ಮಾರ್ಗಸೂಚಿಗಳನ್ನು 2014ರಿಂದಲೂ ಪಾಲನೆ ಮಾಡಲಾಗುತ್ತಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದೇ ವೇಳೆ ನ್ಯಾಯಪೀಠ, 'ಮಧ್ಯಂತರ ಅರ್ಜಿದಾರರಾಗಲು ಬಯಸಿರುವವರ ಬಗ್ಗೆ ಈ ಹಂತದಲ್ಲಿ ಯಾವುದೇ ತೀರ್ಮಾನ ಪ್ರಕಟಿಸುವುದಿಲ್ಲ' ಎಂದು ಸ್ಪಷ್ಟಪಡಿಸಿತು. ಪ್ರಕರಣದಲ್ಲಿ ಮಧ್ಯಂತರ ಅರ್ಜಿದಾರರಾಗಲು ಬಯಸಿದ್ದವರ ಪರ ಹೈಕೋರ್ಟ್ ವಕೀಲರಾದ ಜಿ.ಆರ್. ಮೋಹನ್, ಎನ್.ಪಿ.ಅಮೃತೇಶ್, ರಂಗನಾಥ ರೆಡ್ಡಿ ಇದ್ದರು.

ನಾಲ್ವರ ಬಿಡುಗಡೆಗೆ ಹೈಕೋರ್ಟ್ ಆದೇಶ

ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಬಂಧಿಸಲಾಗಿದ್ದ ಆರ್‌ಸಿಬಿ ಮತ್ತು ಡಿಎನ್‌ಎ ಕಂಪನಿಯ ನಾಲ್ವರು ಪದಾಧಿಕಾರಿಗಳನ್ನು ಕೂಡಲೇ ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ.

'ನಮ್ಮನ್ನು ಬಿಡುಗಡೆ ಮಾಡಬೇಕು' ಎಂದು ಕೋರಿ ಆರ್‌ಸಿಬಿ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ, ಮೆಸರ್ಸ್ ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ದೇಶಕ ಆರ್.ಸುನಿಲ್ ಮ್ಯಾಥ್ಯೂ, ಎಸ್.ಕಿರಣ್ ಕುಮಾರ್ ಮತ್ತು ಎನ್.ಪಿ.ಶಮಂತ್ ಮಾವಿನಕೆರೆ ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಮಧ್ಯಂತರ ಜಾಮೀನು ಆದೇಶವನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

ಷರತ್ತುಗಳು: 'ಅರ್ಜಿದಾರರು ತಲಾ ₹1 ಲಕ್ಷ ಮೌಲ್ಯದ ವೈಯಕ್ತಿಕ ಬಾಂಡ್ ಮತ್ತು ಇಬ್ಬರ ಭದ್ರತೆ ಒದಗಿಸಬೇಕು. ಬಿಡುಗಡೆಯಾದ ಎರಡು ವಾರಗಳಲ್ಲಿ ತಮ್ಮ ಪಾಸ್‌ಪೋರ್ಟ್‌ಗಳನ್ನು ವಿಚಾರಣಾ ನ್ಯಾಯಾಲಯದ ವಶಕ್ಕೆ ಒಪ್ಪಿಸಬೇಕು. ನ್ಯಾಯಾಲಯದ ಅನುಮತಿ ಇಲ್ಲದೇ ಹೊರ ಹೋಗುವಂತಿಲ್ಲ. ಸಾಕ್ಷಿಗಳಿಗೆ ಪ್ರತ್ಯಕ್ಷ ಅಥವಾ ಪರೋಕ್ಷ ಬೆದರಿಕೆ ಹಾಕಬಾರದು. ಸಾಕ್ಷ್ಯಗಳನ್ನು ತಿರುಚಬಾರದು. ಮ್ಯಾಜಿಸ್ಟೀರಿಯಲ್ ಅಥವಾ ನ್ಯಾಯಾಂಗ ಆಯೋಗದ ವಿಚಾರಣೆಗೆ ಅರ್ಜಿದಾರರು ಸಹಕರಿಸಬೇಕು' ಎಂದು ನ್ಯಾಯಪೀಠ ಷರತ್ತು ವಿಧಿಸಿದೆ.

'ನಮ್ಮ ಬಂಧನ ಅಕ್ರಮ ಮತ್ತು ಕಾನೂನು ಬಾಹಿರ. ಕೂಡಲೇ ನಮ್ಮನ್ನು ಬಿಡುಗಡೆ ಮಾಡುವ ಮೂಲಕ ಮಧ್ಯಂತರ ಪರಿಹಾರ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ಮಾನವ ಹಕ್ಕು ಆಯೋಗಕ್ಕೆ ಪತ್ರ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತ ದುರಂತದ ಸಂತ್ರಸ್ತರಿಗೆ ನ್ಯಾಯ ಒದಗಿಸಲು ಮಧ್ಯ ಪ್ರವೇಶಿಸುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪತ್ರ ಬರೆದಿದ್ದಾರೆ.

₹24 ಸಾವಿರ ದಾಟಿದ ಉಂಡೆ ಕೊಬ್ಬರಿ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯ ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ಉಂಡೆ ಕೊಬ್ಬರಿ ಕ್ವಿಂಟಲ್‌ಗೆ ₹24,129ಕ್ಕೆ ಮಾರಾಟವಾಗಿದ್ದು, ಮತ್ತೊಂದು ದಾಖಲೆ ಬರೆದಿದೆ.

ಜೂನ್ 9ರಂದು ಕ್ವಿಂಟಲ್ ಗರಿಷ್ಠ ಬೆಲೆ ₹22,356ಕ್ಕೆ ಮಾರಾಟವಾಗಿತ್ತು. ನಂತರ ಅರಸೀಕೆರೆ ಎಪಿಎಂಸಿ ಮಾರುಕಟ್ಟೆಯಲ್ಲಿ ₹23 ಸಾವಿರಕ್ಕೆ ಏರಿಕೆಯಾಗಿತ್ತು.

ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ 3,028 ಕ್ವಿಂಟಲ್ (7,043 ಚೀಲ) ಉಂಡೆ ಕೊಬ್ಬರಿ ಆವಕವಾಗಿದ್ದು, ಕನಿಷ್ಠ ₹21 ಸಾವಿರ, ಮಾದರಿ ₹23,850ಕ್ಕೆ ಮಾರಾಟವಾಗಿದೆ.

ಮಾರ್ಚ್‌ನಿಂದ ಕೊಬ್ಬರಿ ಮತ್ತು ಉಂಡೆ ಕೊಬ್ಬರಿ ಧಾರಣೆ ಏರಿಕೆ ಮುಂದುವರಿದಿದೆ. ಮಾರುಕಟ್ಟೆಯಲ್ಲಿ ಕುಗ್ಗಿದ ಆವಕ, ಬೇಡಿಕೆ ಹೆಚ್ಚಳ, ಹರಾಜು ಪ್ರಕ್ರಿಯೆಯಲ್ಲಿ ತಂದ ಬದಲಾವಣೆಯಿಂದಾಗಿ ಬೆಲೆ ಹೆಚ್ಚಳವಾಗುತ್ತಿದೆ ಎನ್ನುತ್ತಾರೆ ಮಾರುಕಟ್ಟೆ ಅಧಿಕಾರಿಗಳು.

ಕುಸಿದ ಆವಕ

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಮಾರುಕಟ್ಟೆಯಲ್ಲಿ ಕೊಬ್ಬರಿ ಆವಕ ಕುಸಿದಿದೆ. 2024ರ ಜೂನ್‌ನಲ್ಲಿ ಸರಾಸರಿ 26,053 ಕ್ವಿಂಟಲ್, 2023ರಲ್ಲಿ 13,602 ಕ್ವಿಂಟಲ್, 2022ರಲ್ಲಿ 25,860 ಕ್ವಿಂಟಲ್, 2021ರಲ್ಲಿ 34,220 ಕ್ವಿಂಟಲ್ ಆವಕವಾಗಿತ್ತು.

ಈ ತಿಂಗಳ ವಹಿವಾಟಿನಲ್ಲಿ ಇಲ್ಲಿಯವರೆಗೆ ಸರಾಸರಿ ಮೂರು ಸಾವಿರ ಕ್ವಿಂಟಲ್ ಆವಕ ವಾಗುತ್ತಿದೆ. ಹಿಂದಿನ ವರ್ಷಗಳ ಆವಕಕ್ಕೆ ಹೋಲಿಸಿದಾಗ ಈ ಬಾರಿ ಇಳಿಕೆ ಆಗಿರುವುದು ಕಂಡು ಬರುತ್ತದೆ.

'ಬಿಜೆಪಿ ಟ್ವೀಟ್ ಆತುರದ ನಿರ್ಧಾರ'

ದಾವಣಗೆರೆ: 'ಆರ್‌ಸಿಬಿ ಸಂಭ್ರಮ ಆಚರಣೆಗೆ ಅವಕಾಶ ನೀಡುವಂತೆ ಬಿಜೆಪಿ ಟ್ವೀಟ್ ಮಾಡಿದ್ದು ಆತುರದ ನಿರ್ಧಾರವಾಗಿತ್ತು. ಈ ಸಂಬಂಧ ಪಕ್ಷ ಸಹ ತಪ್ಪು ಮಾಡಿದೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಭಿಮಾನದ ಅತಿರೇಕಕ್ಕೆ ಹೋಗಬೇಡಿ ಎಂದು ಜೂನ್ 2ರಂದು ಸಲಹೆ ನೀಡಿದ್ದೆ. ಅಂದು ಸಾಮಾಜಿಕ ಜಾಲತಾಣಗಳಲ್ಲಿ ನನ್ನನ್ನು ಅನೇಕರು ಟೀಕಿಸಿದ್ದರು' ಎಂದರು.

ನಿಧನ ವಾರ್ತೆ

ಕೋಡಿ ಕುಷ್ಟ ಗಾಣಿಗ

ಕುಂದಾಪುರ (ಉಡುಪಿ): ಯಕ್ಷಗಾನದ ತೆಂಕು, ಬಡಗು ತಿಟ್ಟುಗಳ ಸ್ತ್ರೀವೇಷಧಾರಿ ಕೋಡಿ ಕೃಷ್ಣ (ಕುಷ್ಟ) ಗಾಣಿಗ (78) ತಾಲ್ಲೂಕಿನ ಕೋಡಿಯ ಸ್ವಗೃಹದಲ್ಲಿ ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು, ಪುತ್ರಿ ಇದ್ದಾರೆ. ಅಂತ್ಯಸಂಸ್ಕಾರ ಶುಕ್ರವಾರ ಬೆಳಿಗ್ಗೆ 9ಕ್ಕೆ ಕೋಡಿಯಲ್ಲಿ ಜರುಗಲಿದೆ.

ಕೋಡಿ ಕುಷ್ಟ ಗಾಣಿಗ ಅವರು ಅಮೃತೇಶ್ವರೀ, ಮಾರಣಕಟ್ಟೆ, ಕಲಾವಿಹಾರ, ರಾಜರಾಜೇಶ್ವರೀ ಮೇಳ, ಕಟೀಲು ಮೇಳದಲ್ಲಿ ಮೂರೂವರೆ ದಶಕ ತಿರುಗಾಟವನ್ನು ಮಾಡಿದ್ದರು. ಹೆರಂಜಾಲು ವೆಂಕಟರಮಣ ಗಾಣಿಗರಿಂದ ಬಡಗುತಿಟ್ಟಿನ ಹೆಜ್ಜೆಗಾರಿಕೆಯನ್ನು ಹಾಗೂ ಪಡ್ರೆ ಚಂದು ಅವರಿಂದ ತೆಂಕುತಿಟ್ಟಿನ ನಾಟ್ಯಾಭ್ಯಾಸವನ್ನು ಕಲಿತಿದ್ದ ಅವರು, ದೇವಿ, ನಂದಿನಿ, ಸುಭದ್ರೆ, ಮಂಡೋದರಿ, ದ್ರೌಪದಿ, ಕಯಾದು, ಸೀತೆ, ಅಂಬೆ, ದಮಯಂತಿ ಪಾತ್ರಗಳನ್ನು ನಿರ್ವಹಿಸಿದ್ದರು.

ಸುಧಾ, ಮಯೂರ ಓದಿರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ ಮ.ಪ ಟೆಂಡರ.ಪ್ರ–04/2025–26/707 ದಿನಾಂಕ: 11.06.2025
ಮರು ಟೆಂಡರ್ (Call-2) ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ ಮಾತ್ರ)
ಉಲ್ಲೇಖ: 1) ಈ ಕಚೇರಿ ಪತ್ರ ಸಂಖ್ಯೆ :ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–04/ 2025–26/ 442 ದಿನಾಂಕ : 16.05.2025
ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2024–25 ನೇ ಸಾಲಿನ H/Ac 4059 Department Building ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Provision of furniture and other additional renovation works for the new circuit house being constructed in karwar taluka uttara kannada district. under H/Ac 4059 Department Building During 2024-25 PWD/2025-26/BD/WORK_ INDENT20908Call-2 ರೂ. 101.59 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 20–06–2025 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 21–06–2025 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 23–06–2025 17.00 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 26–06–2025 17.00 ಗಂಟೆವರೆಗೆ
ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/ADK/KSMCA/183/25-26 dt.12.06.2025

ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2025–26/570
ದಿನಾಂಕ:10.06.2025
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024–25 ನೇ ಸಾಲಿನ ಆಯ್.ಸಿ.ಎಇ.ಎಸ್./ ನರೇಗಾ ಯೋಜನೆಯೊಂದಿಗೆ ಸಂಯೋಜಿಸಿ ಅಂಗನವಾಡಿ ಕಟ್ಟಡ ನಿರ್ಮಾಣ ಅನುದಾನ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ** 4 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_ INDENT15680, 15683, 15642 & 15622) **ಪರಿಶಿಷ್ಟ ಪಂಗಡ ಗುತ್ತಿಗೆದಾರರ** 1 ಕಾಮಗಾರಿ (ಇಂಡೆಂಟ ನಂ. RDPR/2025-26/BD/WORK_INDENT15624) ಹೀಗೆ ಒಟ್ಟು 5 ಕಾಮಗಾರಿಗಳಿಗೆ 12.00 ಲಕ್ಷದವರೆಗೆ ಕೆ.ಡಬ್ಲ್ಯೂ–1 ಮತ್ತು 2 ರ ಪ್ರಕಾರ ಈ ಕಚೇರಿಯ ಟೆಂಡರ್ ಪ್ರಕಟಣೆ **ಸಂಖ್ಯೆ: 570 ದಿನಾಂಕ: 10.06.2025** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೊಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 25.06.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.
ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/123/ಕೆಎಸ್‌ಎಂಸಿಎ/2025–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್‌ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ
2025–26ನೇ ಸಾಲಿಗೆ UPSC ಮುಖ್ಯ ಪರೀಕ್ಷಾ ತರಬೇತಿ ಪಡೆಯಲು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ.
ಅರ್ಜಿ ಸಲ್ಲಿಕೆ
2025–26ನೇ ಸಾಲಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಬೆಂಗಳೂರಿನ ಹಜ್ ಭವನದಲ್ಲಿ ವಸತಿಯುತ ತರಬೇತಿ ಅಥವಾ ಶಿಷ್ಯ ವೇತನದೊಂದಿಗೆ ಪ್ರತಿಷ್ಠಿತ ಸಂಸ್ಥೆಯ ಮೂಲಕ (ಬೆಂಗಳೂರು ಹೊರತುಪಡಿಸಿ) 03 ತಿಂಗಳ UPSC ಮುಖ್ಯ ಪರೀಕ್ಷಾ ತರಬೇತಿ ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಪ್ರಾರಂಭ ದಿನಾಂಕ
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **13.06.2025.**
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.06.2025.**
ಅರ್ಹತೆಗಳು
- ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು. (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- ಅಭ್ಯರ್ಥಿಯು UPSC 2025 ಪೂರ್ವಭಾವಿ ಪರೀಕ್ಷೆ ಯಲ್ಲಿ ಉತ್ತೀರ್ಣರಾಗಿರಬೇಕು.
ಅರ್ಜಿದಾರರಿಗೆ ಸೂಚನೆಗಳು
- ಅರ್ಜಿದಾರರು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಾಲತಾಣ https://dom.karnataka.gov.in ಇಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಪಡೆದು ಮಾರ್ಗಸೂಚಿಗಳನ್ವಯ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: 8277799990 ಇವರನ್ನು ಸಂಪರ್ಕಿಸಬಹುದು.
ದಿನಾಂಕ : 13.06.2025
ಸ್ಥಳ : ಬೆಂಗಳೂರು
ಸಹಿ/– ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/1221/25–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–14/433/2025–26 ದಿನಾಂಕ: 12.06.2025
ಟೆಂಡರ್ ರದ್ದುಪಡಿಸಿ ಸೂಚನೆ
ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–14/343/2025–26 ದಿನಾಂಕ: 21.05.2025 ರಲ್ಲಿನ ಈ ಕೆಳಕಂಡ ಕಾಮಗಾರಿಯನ್ನು ರದ್ದುಗೊಳಿಸಲಾಗಿದೆ.
ಕಾಮಗಾರಿಯ ಹೆಸರು : (1) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಪೀಠೋಪಕರಣಗಳನ್ನು ಒದಗಿಸುವುದು ಮತ್ತು ಜಂಗಲ್ ಕ್ಲಿಯರೆನ್ಸ್ ಮಾಡುವ ಕಾಮಗಾರಿ. (ರಸ್ತೆ ಸಂ. 3,5,6,7,9,9ಬಿ&10). (3ನೇ ಕರೆ). (2) ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಬದನಗುಪ್ಪೆ–ಕೆಲ್ಲಂಬಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಪೀಠೋಪಕರಣಗಳನ್ನು ಒದಗಿಸುವುದು ಮತ್ತು ಜಂಗಲ್ ಕ್ಲಿಯರೆನ್ಸ್ ಮಾಡುವ ಕಾಮಗಾರಿ. (ರಸ್ತೆ ಸಂ. 8,1,2,&14). (3ನೇ ಕರೆ).
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/1214/Zen/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ–ದಕ್ಷಿಣ ವಲಯ ಕಚೇರಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 11.
ಸಂಖ್ಯೆ: ಕಾಪಾಅ(ದ)/ಕೆಪಿಪಿಪಿ/ಇ–ಪೋರ್ಟಲ್/02/2025–26 ದಿನಾಂಕ: 12.06.2025
ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಚಿಕ್ಕಪೇಟೆ ಕ್ಷೇತ್ರದಲ್ಲಿ ವಿಲ್ಸನ್ ಗಾರ್ಡನ್ ಸ್ಮಶಾನವನ್ನು ಸುಧಾರಣೆ ಮಾಡುವುದು. **ಅಂದಾಜು ಮೊತ್ತ ₹.100.00 ಲಕ್ಷಗಳು, ಇಎಂಡಿ: ₹.2,00,000/–**
2	ಚಿಕ್ಕಪೇಟೆ ಕ್ಷೇತ್ರದಲ್ಲಿ ವಿಲ್ಸನ್ ಗಾರ್ಡನ್ ಸ್ಮಶಾನವನ್ನು ಹೆಚ್ಚುವರಿ ಸುಧಾರಣೆ ಮಾಡುವುದು. **ಅಂದಾಜು ಮೊತ್ತ ₹.96.00 ಲಕ್ಷಗಳು, ಇಎಂಡಿ: ₹.1,92,000/–**

ಟೆಂಡರ್ ವೇಳಾಪಟ್ಟಿ: (1). ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **14.07.2025**ರ ಸಂಜೆ **5:30** ಗಂಟೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **25.06.2025**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **14.07.2025**ರ ಸಂಜೆ **5:30** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **16.07.2025**ರ ಸಂಜೆ **5:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ಅಥವಾ ದಿನಾಂಕ **18.07.2025**ರ ಸಂಜೆ **5:00** ಗಂಟೆಗೆ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು ಯೋಜನೆ ದಕ್ಷಿಣ, ದಕ್ಷಿಣ ವಲಯ

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ ಉಪ ವಿಭಾಗ, ಬೆಂಗಳೂರು 1ನೇ ಮುಖ್ಯ ರಸ್ತೆ, ಅರಕೆರೆ ಮೈಕೋ ಬಡಾವಣೆ, ದೊರೆಸಾನಿಪಾಳ್ಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
ದೂರವಾಣಿ: 080–26587663/26492218.
ಇ ಮೇಲ್ ಐಡಿ: ccfrbangalore@gmail.com
ಸಂಖ್ಯೆ: ಎಸ್‌ಎಎಸ್/ಹರಾಜು/ಸಿಆರ್–03/2025–26 ದಿನಾಂಕ: 12–06–2025
ಸಂಕ್ಷಿಪ್ತ ಟೆಂಡರ್ ಹಾಗೂ ಹರಾಜು ಪ್ರಕಟಣೆ
ವಿಷಯ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ ಬೆಂಗಳೂರು ಘಟಕಕ್ಕೆ ಸಂಬಂಧಿಸಿದ ಕಿರು ಅರಣ್ಯ ಉತ್ಪನ್ನಗಳನ್ನು 2025–26 ಮತ್ತು 2026–27 ನೇ ಸಾಲಿಗೆ ಟೆಂಡರ್–ಕಂ–ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.
ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ವೃತ್ತಕ್ಕೆ ಸಂಬಂಧಿಸಿದ ಸಂಶೋಧನಾ ವಲಯಗಳಲ್ಲಿನ ಸಂಶೋಧನ ಕೇಂದ್ರಗಳಲ್ಲಿನ ಕಿರು ಅರಣ್ಯ ಉತ್ಪನ್ನಗಳ ಫಸಲುಗಳನ್ನು 2025–26 ಮತ್ತು 2026–27 ನೇ ಸಾಲಿಗೆ ಅಂದರೆ ಟೆಂಡರ್ ಕಂ ಹರಾಜು ಒಪ್ಪಿಗೆಯಾಗಿ ಕರಾರು ಮಾಡಿಕೊಂಡ ದಿನದಿಂದ 2 ವರ್ಷಗಳ ಅವದಿಯವರೆಗೆ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ, ಬೆಂಗಳೂರು ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗಿನ ತಪ್ಸೀಲಿನಲ್ಲಿ ಸೂಚಿರುವ ಪ್ರಕಾರ ಟೆಂಡರ್–ಕಂ–ಹರಾಜಿನ ಮೂಲಕ ದಿನಾಂಕ: 19–06–2025 ರಂದು ಅಪರಾಹ್ನ 12.00 ಗಂಟೆಗೆ ಮಾರಾಟ ಮಾಡುವರು. ಅರಣ್ಯ ಗುತ್ತಿಗೆದಾರರು ಇದರಲ್ಲಿ ಭಾಗವಹಿಸಬಹುದು. ಇದರಲ್ಲಿ ಪ್ರಕಟಿಸಿರುವ ಅರಣ್ಯ ಉತ್ಪನ್ನವು ತಪ್ಸೀಲಿನಲ್ಲಿ ಸೂಚಿಸಿರುವ ಸಂಶೋಧನಾ ಕೇಂದ್ರಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಂಶೋಧನಾ ಉಪ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/1203/ಆಕಾರ್/2025–26

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 3ನೇ ಆವೃತ್ತಿ

prajavani.net/cinesamman/season3

‘ಕಾಸಾಗ್ರ್ಯಾಂಡ್’ ಪ್ರಸ್ತುತ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ 3ನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಈಗಾಗಲೇ ಆರು ವಿಭಾಗಗಳ ನಾಮನಿರ್ದೇಶಿತರನ್ನು ಘೋಷಿಸಲಾಗಿದ್ದು, ಇಂದು ಮೂರು ವಿಭಾಗಗಳ ನಾಮನಿರ್ದೇಶಿತರನ್ನು ಪ್ರಕಟಿಸಲಾಗುತ್ತಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

ನಿರ್ದೇಶಕರಲ್ಲಿ ಸಮ್ಮಾನ ಯಾರ ಮುಡಿಗೆ?

ಅತ್ಯುತ್ತಮ ನಿರ್ದೇಶನ

- ಸಂತೋಷ್ ಆನಂದರಾಮ್ — ಚಿತ್ರ: ಯುವ
- ಸಿಂಪಲ್ ಸುನಿ — ಚಿತ್ರ: ಒಂದು ಸರಳ ಪ್ರೇಮ ಕಥೆ
- ಪೃಥ್ವಿ ಕೊಣನೂರು — ಚಿತ್ರ: ಹದಿನೇಳೆಂಟು
- ಸಿದ್ದು ಪೂರ್ಣಚಂದ್ರ — ಚಿತ್ರ: ತಾರಿಣಿ
- ಎಂ.ಭರತ್ ರಾಜ್ — ಚಿತ್ರ: ಲಾಫಿಂಗ್ ಬುದ್ಧ
- ಜೈಶಂಕರ್ ಆರ್ಯರ್ — ಚಿತ್ರ: ಶಿವಮ್ಮ ಯರೇಹಂಚಿನಾಳ
- ಉತ್ಸವ್ ಗೋನವಾರ — ಚಿತ್ರ: ಫೋಟೋ
- ನರ್ತನ್ — ಚಿತ್ರ: ಭೈರತಿ ರಣಗಲ್

CASAGRAND building aspirations Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಅತ್ಯುತ್ತಮ ಚೊಚ್ಚಲ ನಿರ್ದೇಶನ

- ರಾಘವೇಂದ್ರ ಎಂ.ನಾಯಕ್ — ಚಿತ್ರ: ಮಾರಿಗೋಲ್ಡ್
- ಮಿಥಿಲೇಶ್ ಎಡವಲತ್ — ಚಿತ್ರ: ರೂಪಾಂತರ
- ಸಂದೀಪ್ ಸುಂಕದ್ — ಚಿತ್ರ: ಶಾಖಾಹಾರಿ
- ಶ್ರೀನಿಧಿ ಬೆಂಗಳೂರು — ಚಿತ್ರ: ಬ್ಲಿಂಕ್
- ಚಂದ್ರಜಿತ್ ಬೆಳ್ಳಿಪ್ಪ — ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ
- ನಾಗರಾಜ್ ಮಲ್ಲಿಗೇನಹಳ್ಳಿ, ರಘು ರಾಜ್ ಗೌಡ — ಚಿತ್ರ: ರಮೇಶ ಸುರೇಶ

ಅತ್ಯುತ್ತಮ ಸಂಗೀತ ನಿರ್ದೇಶನ

- ಅರ್ಜುನ್ ಜನ್ಯ — ಚಿತ್ರ: ಕೃಷ್ಣಂ ಪ್ರಣಯ ಸಖಿ
- ಅನೂಪ್ ಸೀಳಿನ್ — ಚಿತ್ರ: ಕಾಲಾಪತ್ಥರ್
- ವೀರ್ ಸಮರ್ಥ್ — ಚಿತ್ರ: ಒಂದು ಸರಳ ಪ್ರೇಮ ಕಥೆ
- ಅಜನೀಶ್ ಲೋಕನಾಥ್ — ಚಿತ್ರ: ಯುವ
- ಚರಣ್ ರಾಜ್ — ಚಿತ್ರ: ಭೀಮ
- ಗಗನ್ ಬಡೇರಿಯಾ — ಚಿತ್ರ: ಇಬ್ಬನಿ ತಬ್ಬಿದ ಇಳೆಯಲಿ
- ಮಯೂರ್ ಅಂಬೆಕಲ್ಲು — ಚಿತ್ರ: ಶಾಖಾಹಾರಿ
- ರಿತ್ವಿಕ್ ಕಾಯ್ಕಿಣಿ — ಚಿತ್ರ: ಕೆಂಡ

ಸಹ ಪ್ರಾಯೋಜಕರು: ಟಿಟಿಕೆ ಪ್ರೆಸ್ಟೀಜ್, ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್, ಹೋಂಡಾ, ಸದ್ಗುರು ಆಯುರ್ವೇದ, ದಿ ಬೆಂಗಳೂರ್ ಸಿಟಿ ಕೊ–ಆಪರೇಟಿವ್ ಬ್ಯಾಂಕ್, ದಿ ಜನತಾ ಕೊ–ಆಪರೇಟಿವ್ ಬ್ಯಾಂಕ್. **ಮೊಬಿಲಿಟಿ ಪಾರ್ಟ್‌ನರ್:** ಮರ್ಸಿಡೀಸ್ ಬೆಂಜ್–ಅಕ್ಷಯ್ ಮೋಟರ್ಸ್. **ಬ್ಯಾಂಕಿಂಗ್ ಪಾರ್ಟ್‌ನರ್:** ಕೆನರಾ ಬ್ಯಾಂಕ್. **ಸ್ಟೈಲ್ ಪಾರ್ಟ್‌ನರ್:** ಬಿ.ಎಸ್. ಚನ್ನಬಸಪ್ಪ ಆ್ಯಂಡ್ ಸನ್ಸ್. **ಟ್ರಾವೆಲ್ ಪಾರ್ಟ್‌ನರ್:** ಟ್ರಾವೆಲ್‌ಮಾರ್ಟ್. **ವಾರ್ಡ್‌ರೋಬ್ ಪಾರ್ಟ್‌ನರ್:** ನ್ಯುಮೆನ್. **ನಾಲೆಜ್ ಪಾರ್ಟ್‌ನರ್ಸ್:** ಇನ್‌ಸೈಟ್ಸ್‌ಐಎಎಸ್ ಮತ್ತು ಗೀತಂ ಬೆಂಗಳೂರು. **ಇನ್‌ಶ್ಯೂರೆನ್ಸ್ ಪಾರ್ಟ್‌ನರ್:** ನ್ಯಾಷನಲ್ ಇನ್‌ಶ್ಯೂರೆನ್ಸ್. **ಟೆಲಿಕಾಸ್ಟ್ ಪಾರ್ಟ್‌ನರ್:** ಜೀ ಕನ್ನಡ. **ಆಡಿಟ್ ಪಾರ್ಟ್‌ನರ್:** ಇ ಆ್ಯಂಡ್ ವೈ.

ಸಿನಿಪಯಣದಲ್ಲಿ ಶಿವರಾಜ್‌ಕುಮಾರ್ @40

1986ರಲ್ಲಿ ‘ಆನಂದ್’ ಸಿನಿಮಾ ಮೂಲಕ ಚಂದನವನದ ಪಯಣ ಆರಂಭಿಸಿದ್ದ ನಟ ಶಿವರಾಜ್‌ಕುಮಾರ್ ಅವರು ಸಿನಿಪಯಣದಲ್ಲಿ ಇದೀಗ 40ನೇ ವರ್ಷಕ್ಕೆ ಹೆಜ್ಜೆ ಇಟ್ಟಿದ್ದಾರೆ. ಹ್ಯಾಟ್ರಿಕ್ ಹೀರೋದಿಂದ ಸೆಂಚುರಿ ಸ್ಟಾರ್ ಆದ ಚಂದನವನದ ‘ಶಿವಣ್ಣ’ ಸದ್ಯ 125 ಸಿನಿಮಾಗಳನ್ನು ಪೂರೈಸಿ ಮುನ್ನಡೆಯುತ್ತಿದ್ದಾರೆ. ಕನಿಷ್ಠ ವರ್ಷಕ್ಕೊಂದು ಸಿನಿಮಾಗಳನ್ನು ನೀಡುತ್ತಿರುವ ಶಿವರಾಜ್‌ಕುಮಾರ್ ಕೈಯಲ್ಲಿ ಸದ್ಯ ಐದಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳಿವೆ. ಈ ಸಂದರ್ಭದಲ್ಲಿ ಅವರಿಗೆ ನಟರಾದ ಉಪೇಂದ್ರ, ಅಕ್ಕಿನೇನಿ ನಾಗಾರ್ಜುನ್, ನಾನಿ, ನಿರ್ದೇಶಕರಾದ ನೆಲ್ಸನ್, ‘ಜೋಗಿ’ ಪ್ರೇಮ್ ಸೇರಿದಂತೆ ಚಿತ್ರರಂಗದ ಹಲವರು ಶುಭಹಾರೈಸಿದ್ದಾರೆ...



ಶಿವರಾಜ್‌ಕುಮಾರ್

ನಿಮ್ಮ 40 ವರ್ಷಗಳ ಅದ್ಭುತ ಚಲನಚಿತ್ರ ಪ್ರಯಾಣದ ಒಂದು ಭಾಗವನ್ನು ಹತ್ತಿರದಿಂದ ನೋಡಿ, ಅನುಭವಿಸೋ ಅವಕಾಶ ಪಡೆದಿರುವುದು ನನಗೆ ಅತ್ಯಂತ ಗೌರವದ ವಿಷಯ. ನೀವು ಈ ಚಿತ್ರರಂಗಕ್ಕೆ ಕುಗ್ಗದ ಆಸಕ್ತಿ, ಅಪಾರ ಶ್ರಮ ಮತ್ತು ಘನತೆಯಿಂದ ಸೇವೆ ಸಲ್ಲಿಸಿದ್ದೀರಿ. ನೀವು ಸ್ಥಾಪಿಸಿದ ಮಾದರಿ ಭವಿಷ್ಯದಲ್ಲಿ ಹಲವು ಪೀಳಿಗೆಗಳಿಗೆ ಪ್ರೇರಣೆಯಾಗಲಿ. ನೀವು ಯಶಸ್ಸನ್ನು ಸದಾ ಸರಳವಾಗಿ ನಿಭಾಯಿಸಿದ್ದೀರಿ. ಎಲ್ಲಕ್ಕಿಂತ ಮಿಗಿಲಾಗಿ ನೀವು ಸದಾ ಒಬ್ಬ ಉತ್ತಮ ಮನುಷ್ಯರಾಗಿ ಬಾಳಿದ್ದೀರಿ. ನಿಮ್ಮ ಆರೋಗ್ಯ ಸದಾ ಉತ್ತಮವಾಗಿರಲಿ ಮತ್ತು ಇನ್ನೂ ಹಲವಾರು ವರ್ಷಗಳ ಕಾಲ ನಿಮ್ಮ ಅಭಿನಯದಿಂದ ನಮಗೆ ಮನರಂಜನೆ ದೊರೆಯಲಿ.

ಕಿಚ್ಚ ಸುದೀಪ್, ನಟ

ಮೊದಲಿಗೆ ಅಭಿನಂದನೆ. 40 ವರ್ಷ ಎಂದರೆ ದೊಡ್ಡ ಪಯಣ. ಸತತವಾಗಿ ಕೆಲಸ ಮಾಡಿ ಹಲವು ಪಾತ್ರಗಳನ್ನು ನಿಭಾಯಿಸಿದ್ದೀರಿ. ಇದರಲ್ಲಿ ದಾಖಲೆಯನ್ನೇ ಮಾಡಿದ್ದೀರಿ. ಹೊಸಬರ ಜೊತೆ, ಕಿರಿಯ ನಿರ್ದೇಶಕರ ಜೊತೆ ಕೆಲಸ ಮಾಡಿದ್ದೀರಿ. ಚಿತ್ರರಂಗಕ್ಕೆ ನೀವು ನೀಡಿದ ಕೊಡುಗೆ ನಮಗೆಲ್ಲರಿಗೂ ಸ್ಫೂರ್ತಿ. ಈ ಪಯಣದಲ್ಲಿ ನಿಮ್ಮ ಜೊತೆ ಒಂದೆರಡು ಹೆಜ್ಜೆ ಹಾಕುವ ಅವಕಾಶ ಸಿಕ್ಕಿದೆ, ಇದನ್ನು ಸಂಭ್ರಮಿಸಿದ್ದೇನೆ. 50 ವರ್ಷದ ಸಂಭ್ರಮವನ್ನು ಬಹಳ ಜೋರಾಗಿ ಆಚರಿಸೋಣ.

ಧನಂಜಯ, ನಟ

ನನ್ನ ವಯಸ್ಸು 35, ನೀವು ಈ ರಂಗಕ್ಕೆ ಬಂದು 40 ವರ್ಷವಾಗಿದೆ. ನಿಮ್ಮ ಅಭಿಮಾನಿಯಾಗಿ ಅಭಿನಂದನೆ ಸಲ್ಲಿಸುತ್ತಿದ್ದೇನೆ. ನಿಮಗೆ ಭಗವಂತ ಎನರ್ಜಿಯನ್ನು ಮೊದಲೇ ಕೊಟ್ಟಾಗಿದೆ, ಆರೋಗ್ಯ ಕೊಡಲಿ. ಹೊಸಬರಿಗೆ ನೀವು ಸ್ಫೂರ್ತಿ.

ಧ್ರುವ ಸರ್ಜಾ, ನಟ

ಕನ್ನಡ ಕಂಠೀರವ ವರನಟ ರಾಜ್‌ಕುಮಾರ್ ಅವರ ಜೊತೆ ನನಗೆ ವಿಶೇಷ ಸ್ನೇಹವಿತ್ತು. ಅವರಿಂದ ಸಿಕ್ಕ ಪ್ರೀತಿ ಅಗಾಧ. ಅವರ ಮನೆಗೆ ಭೇಟಿ ನೀಡಿದಾಗ ನನಗೆ ಪರಿಚಯವಾದವರು ಶಿವಣ್ಣ, ಅಪ್ಪು ಮತ್ತು ರಾಘವೇಂದ್ರ. ತದನಂತರ ಇವರೂ ನನ್ನ ಕುಟುಂಬದ ಭಾಗವಾದರು. ಶಿವಣ್ಣ ನಾಯಕನಾಗಿ ಹೆಜ್ಜೆ ಇಟ್ಟು ಸೂಪರ್‌ಸ್ಟಾರ್ ಆಗಿ ಬೆಳೆದ ಬಗೆ ಅದ್ಭುತ. ತಂದೆಯ ಹಾದಿಯಲ್ಲೇ ಹೆಜ್ಜೆ ಹಾಕಿ ತನ್ನದೇ ಅಭಿಮಾನಿ ಬಳಗವನ್ನು ಗಳಿಸಿದವರು, ಅವರಿಂದ ಪ್ರೀತಿ ಪಡೆದವರು. ಶಿವಣ್ಣನ ಈ ಮೈಲಿಗಲ್ಲು ನೋಡಿ ಖುಷಿಯಾಗುತ್ತಿದೆ.

ಚಿರಂಜೀವಿ, ನಟ

‘ಎಡಗೈಯೇ ಅಪಘಾತಕ್ಕೆ ಕಾರಣ’ ತೆರೆಗೆ

ನಟ ದಿಗಂತ್ ನಟನೆಯ ‘ಎಡಗೈಯೇ ಅಪಘಾತಕ್ಕೆ ಕಾರಣ’ ಸಿನಿಮಾ ತೆರೆಕಂಡಿದೆ. ಭಿನ್ನವಾದ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಸಮರ್ಥ್ ಬಿ. ಕಡಕೊಳ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಸಿನಿಮಾದ ಶೀರ್ಷಿಕೆ ಹೇಳುವಂತೆಯೇ ಎಡಗೈ ಬಳಸುವವರ ಕಷ್ಟಗಳ ಸುತ್ತ ಚಿತ್ರದ ಕಥೆಯಿದೆ. ಡಾರ್ಕ್ ಕಾಮಿಡಿ ಜಾನರ್‌ನಲ್ಲಿ ಚಿತ್ರದ ಕಥಾಹಂದರವಿದೆ. ಸಿನಿಮಾದಲ್ಲಿ ದಿಗಂತ್ ಜೊತೆ ನಿಧಿ ಸುಬ್ಬಯ್ಯ ಮತ್ತು ಧನು ಹರ್ಷ ನಟಿಸಿದ್ದು, ‘ಪಂಚರಂಗಿ’ ಸಿನಿಮಾ ಬಳಿಕ ದಿಗಂತ್ ಮತ್ತು ನಿಧಿ ಸುಬ್ಬಯ್ಯ ಮತ್ತೆ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ.

‘ಲೋಹಿತ್ ರಾಜೇಶ್’ ಎಂಬ ಪಾತ್ರದಲ್ಲಿ ದಿಗಂತ್ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಬಲವಂತವಾಗಿ ಬಲಗೈ ಬಳಸಲು ಹೋದಾಗ ನಡೆಯುವ ಘಟನೆಗಳೇ ಚಿತ್ರದ ಕಥೆ ಎಂದಿದೆ ಚಿತ್ರತಂಡ.

ಕಲರ್ಸ್ ಕನ್ನಡದಲ್ಲಿ ಪಕ್ಕಾ ಕಾಮಿಡಿ ಕುಕ್ಕಿಂಗ್ ಶೋ ‘ಕ್ವಾಟ್ಲೆ ಕಿಚನ್’ ಆರಂಭ

ಕಲರ್ಸ್ ಕನ್ನಡ, ಪ್ರೇಕ್ಷಕರ ಮನರಂಜನೆಗಾಗಿ ಅತ್ಯಂತ ವಿನೂತನ ಕಾರ್ಯಕ್ರಮಗಳನ್ನು ನೀಡುವ ಮೂಲಕ ಜನಪ್ರಿಯವಾಗಿದೆ.

ಇದೀಗ ‘ಕ್ವಾಟ್ಲೆ ಕಿಚನ್’ ಎಂಬ ಪಕ್ಕಾ ಕಾಮಿಡಿ ಕುಕ್ಕಿಂಗ್ ಶೋ ಅನ್ನು ಪ್ರೇಕ್ಷಕರಿಗೆ ತಲುಪಿಸುತ್ತಿದೆ. ‘ನನ್ನಮ್ಮ ಸೂಪರ್ ಸ್ಟಾರ್’, ‘ರಾಜ ರಾಣಿ’, ‘ಗಿಚ್ಚಿ ಗಿಲಿಗಿಲಿ’ಗಳಂಥ ಟಾಪ್ ರೇಟಿಂಗ್ ಶೋಗಳನ್ನು ಕೊಟ್ಟಿರುವ ಕಲರ್ಸ್ ಕನ್ನಡವು, ‘ಕ್ವಾಟ್ಲೆ ಕಿಚನ್’ ಎಂಬ ವಿನೂತನ ರಿಯಾಲಿಟಿ ಶೋವನ್ನು ಪರಿಚಯಿಸುತ್ತಿದೆ. ಜೂನ್ 14ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9 ಗಂಟೆಗೆ ಈ ಕಾರ್ಯಕ್ರಮ ಪ್ರಸಾರವಾಗಲಿದೆ.

ನೂರಕ್ಕೆ ನೂರು ಕಾಮಿಡಿ ಕುಕ್ಕಿಂಗ್ ಶೋ ‘ಕ್ವಾಟ್ಲೆ ಕಿಚನ್’

ಅಡುಗೆಯ ಜೊತೆ ನಗುವಿನ ಔತಣವನ್ನೂ ಉಣಬಡಿಸುವ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಜೋಡಿಗಳ ಜೊತೆಯಾಟವಿರುತ್ತದೆ. ಈ ಜೋಡಿಯಲ್ಲಿ ಒಬ್ಬರಿಗೆ ಅಡುಗೆ ಬರುತ್ತೆ. ಇನ್ನೊಬ್ಬರಿಗೆ ಪಾಕಶಾಸ್ತ್ರದ ಅ ಆ ಇ ಈ ಕೂಡಾ ತಿಳಿದಿಲ್ಲ. ಹತ್ತು ನಳಪಾಕ ಪ್ರವೀಣರಿಗೆ ಸಹಾಯಕರಾಗಿ ಹತ್ತು ನಗೆಪಾಕ ಪ್ರವೀಣರು ಇರುತ್ತಾರೆ.

‘ಕುಕ್’ ಮತ್ತು ‘ಕ್ವಾಟ್ಲೆ’ಗಳು ಸೇರಿ ಅಡುಗೆ ಮಾಡುವಾಗ ಹುಟ್ಟುವ ತಮಾಷೆ, ತರ್ಲೆಗಳೇ ಈ ಶೋನ ಬ್ಯೂಟಿ. ಚಕಚಕ ಅಡುಗೆ ಮಾಡಿ ಮುಗಿಸಲು ಹೊರಟ ಪಾಕಪ್ರವೀಣರಿಗೆ ಅಡ್ಡಗಾಲಾಗಿ ನಿಲ್ಲುವುದೇ ಈ ‘ಕ್ವಾಟ್ಲೆ’ ಸಹಾಯಕರು. ಟಾರ್ಚರ್ ಕೊಡಲಿಕ್ಕೆಂದೇ ಬಂದಿರುವ ಕ್ವಾಟ್ಲೆಗಳು ಸ್ವತಃ ಜೋಕರ್‌ಗಳಾಗುವ ಪರಿಹಾಸ್ಯವನ್ನು ನೋಡಿಯೇ ಆನಂದಿಸಬೇಕು.

ಈ ಶೋನ ವಿಶೇಷತೆ ಏನೆಂದರೆ- ಇಲ್ಲಿ ಕುಕ್‌ಗಳು ಎಲಿಮಿನೇಟ್ ಆಗುತ್ತಾರೆ. ಕ್ವಾಟ್ಲೆಗಳು ಮಾತ್ರ ಎಲಿಮಿನೇಟ್ ಆಗೋದಿಲ್ಲ! ಪ್ರತಿ ವಾರವೂ ಕುಕ್-ಕ್ವಾಟ್ಲೆಗಳ ಜೋಡಿ ಬದಲಾಗುತ್ತಿ ರುತ್ತದೆ. ಒಳ್ಳೆ ಸಹಾಯಕ ಬರಲಿ ಎಂದು ಕಾಯುತ್ತಿರುವ ಕುಕ್‌ಗಳಿಗೆ, ಬೆಳ್ಳುಳ್ಳಿ ಈರುಳ್ಳಿಯ ನಡುವೆ ವ್ಯತ್ಯಾಸವೇ ಗೊತ್ತಿರದ ‘ಕ್ವಾಟ್ಲೆ’ ಸಹಾಯಕರು ಸಿಕ್ಕು, ಉಂಟಾಗುವ ಪಜೀತಿ ನೋಡುಗರಿಗಂತೂ ಭರಪೂರ ಮನರಂಜನೆ ನೀಡುತ್ತದೆ!

ಕುಕ್‌ಗಳಾಗಿ- ಬೆಳ್ಳುಳ್ಳಿ ಕಬಾಬ್ ಚಂದ್ರು, ಆರ್.ಕೆ.ಚಂದನ್, ದಿಲೀಪ್ ಶೆಟ್ಟಿ, ರಾಘವೇಂದ್ರ, ಕೆಂಪಮ್ಮ, ಪ್ರೇರಣ ಕಂಬಮ್, ಕಾವ್ಯ ಗೌಡ, ಶಿಲ್ಪ ಕಾಮತ್, ಶರ್ಮಿತ ಗೌಡ, ಸೋನಿಯಾ ಪೊನ್ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಇವರಿಗೆ ಕ್ವಾಟ್ಲೆ ಕೊಡುವುದಕ್ಕೆಂದೇ ಲ್ಯಾಗ್ ಮಂಜು, ಧನರಾಜ್ ಆಚಾರ್, ತುಕಾಲಿ ಸಂತೋಷ್, ನಿವೇದಿತಾ ಗೌಡ, ಪ್ರಶಾಂತ್, ಸೂರಜ್, ಗಿಲ್ಲಿ ನಟ, ಸೋನಿ ಮುಲೆವ, ವಾಣಿ ಗೌಡ, ದೀಶಾ ಉಮೇಶ್ ಕಾರ್ಯಕ್ರಮದಲ್ಲಿ ಇರುತ್ತಾರೆ.

ಕಾರ್ಯಕ್ರಮದ ತೀರ್ಪುಗಾರರಾಗಿ ನಟಿ ಶ್ರುತಿ ಮತ್ತು ಕಳೆದ 25 ವರ್ಷಗಳಲ್ಲಿ ಪಾಕಶಾಸ್ತ್ರ ಮತ್ತು ಟೆಲಿವಿಶನ್‌ನ ಹಲವು ಪ್ರಸಿದ್ಧ ಶೋಗಳಲ್ಲಿ ಭಾಗವಹಿಸಿರುವ ಪ್ರಸಿದ್ಧ ಚೆಫ್ ಕೌಶಿಕ್ ಇರುವುದು ‘ಕ್ವಾಟ್ಲೆ ಕಿಚನ್’ಗೆ ಹೊಸ ಕಳೆಯನ್ನು ತರಲಿದೆ.

ಕಿಚನ್ ಸ್ಟಾರ್‌ಗಳು ಮತ್ತು ಕ್ವಾಟ್ಲೆಗಳ ಮೋಜು ಮಸ್ತಿಯ ಈ ಜಗಳಬಂದಿ ಕಾರ್ಯಕ್ರಮವನ್ನು ಅನುಪಮಾ ಗೌಡ ಮತ್ತು ಕುರಿ ಪ್ರತಾಪ್ ನಡೆಸಿಕೊಡಲಿದ್ದಾರೆ.

ಅಡುಗೆಯ ಔತಣ ಮತ್ತು ನಗುವಿನ ರಸದೌತಣಗಳನ್ನು ಒಟ್ಟೊಟ್ಟಿಗೇ ಬಡಿಸುವ ‘ಕ್ವಾಟ್ಲೆ ಕಿಚನ್’, ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗಿಸುವ ಹಾಗೆ ನಗಿಸುವುದಂತೂ ಗ್ಯಾರಂಟಿ.

ಪ್ರತಿ ಶನಿವಾರ, ಭಾನುವಾರ ಕಲರ್ಸ್ ಕನ್ನಡದಲ್ಲಿ ರಾತ್ರಿ 9 ಗಂಟೆಗೆ ಪ್ರಸಾರ ಆಗಲಿರುವ ಒಂದೂವರೆ ಗಂಟೆಯ ‘ಕ್ವಾಟ್ಲೆ ಕಿಚನ್’ನ ಮೊದಲ ಎಪಿಸೋಡ್‌ಗಳು ಜೂನ್ 14, 15 (ಶನಿವಾರ ಮತ್ತು ಭಾನುವಾರ) ರಾತ್ರಿ 9 ಗಂಟೆಗೆ ಪ್ರಸಾರ ಆಗಲಿದೆ. ನೋಡುವುದನ್ನು ಮರೆಯಬೇಡಿ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಸೆಪ್ಟೆಂಬರ್‌ನಲ್ಲಿ ಮಾರ್ನಮಿ

ಮಂಗಳೂರನ್ನೇ ವೇದಿಕೆಯಾಗಿಸಿಕೊಂಡು ನಡೆಯುವ ಕಥೆ ಹೊತ್ತ ಸಿನಿಮಾ

ಚೈತ್ರಾ, ರಿತ್ವಿಕ್

ರಿಶಿತ್ ಶೆಟ್ಟಿ ನಿರ್ದೇಶನದ ‘ಮಾರ್ನಮಿ’ ಚಿತ್ರ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಇತ್ತೀಚೆಗೆ ಚಿತ್ರದ ನಾಯಕ ರಿತ್ವಿಕ್ ಮಠದ್ ಜನ್ಮದಿನದಂದು ಇಂಟ್ರೊಡಕ್ಷನ್ ಟೀಸರ್ ಅನಾವರಣ ಮಾಡಿದೆ ಚಿತ್ರತಂಡ. ಸಿನಿಮಾ ಸೆಪ್ಟೆಂಬರ್‌ನಲ್ಲಿ ತೆರೆಕಾಣುವ ಸಾಧ್ಯತೆ ಇದೆ.

‘ಗಿಣಿರಾಮ’, ‘ನಿನಗಾಗಿ’ ಧಾರಾವಾಹಿಗಳ ಮೂಲಕ ಖ್ಯಾತಿ ಪಡೆದಿರುವ ರಿತ್ವಿಕ್ ಮಠದ್ ಈ ಸಿನಿಮಾದಲ್ಲಿ ರಗಡ್ ಅವತಾರವೆತ್ತಿದ್ದಾರೆ. ‘ಶೀಘ್ರದಲ್ಲೇ ಟ್ರೇಲರ್ ಬರಲಿದೆ. ಒಳ್ಳೆಯ ನಟರ ಜೊತೆಗೆ ಅದ್ಭುತ ತಂತ್ರಜ್ಞರ ತಂಡವಿದು. ಶೂಟಿಂಗ್ ಪೂರ್ಣಗೊಂಡು ಸಂಗೀತದ ಕೆಲಸಗಳು ನಡೆಯುತ್ತಿವೆ. ಸೆಪ್ಟೆಂಬರ್‌ನಲ್ಲಿ ರಿಲೀಸ್ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ’ ಎಂದು ನಿರ್ಮಾಪಕ ನಿಶಾಂತ್.

ರಿಶಿತ್ ಶೆಟ್ಟಿ ಮಾತನಾಡಿ, ‘ನನ್ನ ಸ್ನೇಹಿತ ಸುಧಿ ಬರೆದ ಕಥೆ ಇದು. ಆ ಕಥೆ ರಿತ್ವಿಕ್‌ಗೆ ಹೇಳಿದ ಬಳಿಕ ಈ ಪಯಣ ಪ್ರಾರಂಭವಾಯಿತು’ ಎಂದರು.

‘ಇವತ್ತು ಈ ಪಯಣ ನೋಡಿದಾಗ ಹೆಮ್ಮೆ ಅನಿಸುತ್ತದೆ. ಇಂತಹ ನಿರ್ಮಾಪಕರು ಚಿತ್ರರಂಗಕ್ಕೆ ಹಾಗೂ ಹೊಸಬರಿಗೆ ಬೇಕು. ಹೊಸಬರಿಗೆ ದುಡ್ಡು ಹಾಕಿ ಅದ್ಭುತ ಸಿನಿಮಾ ತೆಗೆಯುವುದು ಸುಲಭವಲ್ಲ’ ಎನ್ನುತ್ತಾರೆ ರಿತ್ವಿಕ್.

ಚಿತ್ರದಲ್ಲಿ ನಾಯಕಿಯಾಗಿ ನಟಿ ಚೈತ್ರಾ ಜೆ.ಆಚಾರ್ ನಟಿಸಿದ್ದಾರೆ. ಸಹ ನಿರ್ದೇಶಕ, ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ರಿಶಿತ್ ಶೆಟ್ಟಿ ಈ ಚಿತ್ರಕ್ಕೆ ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ಮೊದಲ ಬಾರಿಗೆ ನಿರ್ದೇಶನ ಮಾಡುತ್ತಿದ್ದಾರೆ. ಸುಮನ್ ತಲ್ವಾರ್, ಪ್ರಕಾಶ್ ತುಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಸ್ವರಾಜ್ ಶೆಟ್ಟಿ, ಮೈಮ್ ರಾಮದಾಸ್ ಹಾಗೂ ಚೈತ್ರಾ ಶೆಟ್ಟಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಶಿವಸೇನ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ಜುಲೈ 11ಕ್ಕೆ ದೂರ ತೀರ ಯಾನ

ಮಂಸೋರೆ ನಿರ್ದೇಶನದ ‘ದೂರ ತೀರ ಯಾನ’ ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗೆ ಬಿಡುಗಡೆಗೊಂಡಿದೆ. ಬೆಂಗಳೂರಿನಿಂದ ಗೋವಾದವರೆಗೂ ನಡೆಯುವ ಪಯಣದ ಕಥೆಯನ್ನು ಹೊಂದಿರುವ ಚಿತ್ರ ಜುಲೈ 11ರಂದು ತೆರೆಗೆ ಬರಲಿದೆ.

‘ಆರಂಭವೇ ತೋರಿದೆ ಮುಂದಿನ ದಾರಿ’ ಎಂಬ ಈ ಶೀರ್ಷಿಕೆ ಗೀತೆಗೆ ಕಿರಣ್ ಕಾವೇರಪ್ಪ ಸಾಹಿತ್ಯವಿದ್ದು, ಬಕ್ಕೇಶ್ ಹಾಗೂ ಕಾರ್ತಿಕ್ ಸಂಗೀತ ನೀಡಿದ್ದಾರೆ. ಬಕ್ಕೇಶ್ - ಇಶಾ ಸುಚಿ ದನಿಯಲ್ಲಿ ಹಾಡು ಮೂಡಿಬಂದಿದೆ. ಚಿತ್ರದಲ್ಲಿ ವಿಜಯ್ ಕೃಷ್ಣಗೆ ಪ್ರಿಯಾಂಕ ಕುಮಾರ್ ಜೋಡಿಯಾಗಿದ್ದು, ಚಿತ್ರಕ್ಕೆ ಡಿ.ಕ್ರಿಯೇಷನ್ಸ್ ಮೂಲಕ ದೇವರಾಜ್ ಆರ್. ಬಂಡವಾಳ ಹೂಡಿದ್ದಾರೆ.

ಪ್ರಿಯಾಂಕ ಕುಮಾರ್

‘ಚಿತ್ರದಲ್ಲಿ ಆರು ಹಾಡುಗಳು ಹಾಗೂ ಎರಡು ಮ್ಯೂಸಿಕಲ್ ಬಿಟ್ಸ್ ಇದೆ. ನಮ್ಮ ಸಿನಿಮಾದ ಹಾಡುಗಳಲ್ಲಿ ಒಂದೇ ಒಂದು ಇಂಗ್ಲಿಷ್ ಪದ ಕೂಡ ಬಳಸಿಲ್ಲ. ಈ ಶೀರ್ಷಿಕೆ ಗೀತೆ ನನ್ನ ಮೆಚ್ಚಿನ ಗೀತೆಯೂ ಹೌದು. ಲಾಂಗ್ ಡ್ರೈವ್ ಮಾಡುವ ಪಯಣಿಗರಿಗೆ ಸಿಕ್ಕ ಸುಮಧುರ ಗೀತೆ ಕೂಡ. ಇದು ಪ್ರೇಮ ಕಥೆಯಲ್ಲ. ಪ್ರೇಮದ ಕಥೆ’ ಎನ್ನುತ್ತಾರೆ ಮಂಸೋರೆ.

ಬೆಂಗಳೂರು, ಉಡುಪಿ, ಕುಂದಾಪುರ, ಗೋಕರ್ಣ, ಮುರುಡೇಶ್ವರ, ಕಾರವಾರ, ಯಲ್ಲಾಪುರ, ದಾಂಡೇಲಿ, ಗೋವಾದಲ್ಲಿ ಸಿನಿಮಾ ಚಿತ್ರೀಕರಣಗೊಂಡಿದೆ. ಪಿ.ಡಿ. ಸತೀಶ್‌ಚಂದ್ರ, ಪೂರ್ವಿ ಮುಂತಾದವರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ಶೇಖರ್ ಚಂದ್ರ ಛಾಯಾಚಿತ್ರಗ್ರಹಣ, ನಾಗೇಂದ್ರ ಕೆ. ಸಂಕಲನವಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಅರಸನಿಗೊಂದು, ಆಳಿಗೊಂದು ಧರ್ಮವಿಲ್ಲ.
-ತ.ರಾ.ಸು

ಸಿಬಿಎಸ್ಇ ಶಾಲೆಗಳಲ್ಲಿ ಸಕ್ಕರೆ ಫಲಕ ವಿನೂತನ ಕ್ರಮ, ಅನುಕರಣೀಯ

‘ಸಕ್ಕರೆ ಫಲಕ’ ಅಳವಡಿಸುವಂತೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್ಇ) ತನ್ನ ವ್ಯಾಪ್ತಿಯ ಎಲ್ಲ ಶಾಲೆಗಳಿಗೆ ಸೂಚನೆ ನೀಡುವ ತೀರ್ಮಾನ ತೆಗೆದುಕೊಂಡಿರುವುದು ಸಕಾರಾತ್ಮಕ ಹೆಜ್ಜೆ. ಇದು, ಆರೋಗ್ಯಕರವಾದ ಆಹಾರ ಸೇವಿಸುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಲು ನೆರವಾಗುತ್ತದೆ. ಸಿಬಿಎಸ್ಇ ವ್ಯಾಪ್ತಿಯ ಅಂದಾಜು 26,000 ಶಾಲೆಗಳು ತಮ್ಮ ಆವರಣದಲ್ಲಿ ‘ಸಕ್ಕರೆ ಫಲಕ’ವನ್ನು ಅಳವಡಿಸಿ, ಸಕ್ಕರೆ ಹೆಚ್ಚು ಇರುವ ಆಹಾರ ಸೇವನೆಯ ಅಪಾಯವನ್ನು ಮಕ್ಕಳಿಗೆ ತಿಳಿಸಬೇಕು. ಆರೋಗ್ಯಕರವಾದ ಆಹಾರ ಸೇವನೆಯ ಪ್ರಯೋಜನಗಳನ್ನು ಹೇಳಬೇಕು ಎಂದು ಮಂಡಳಿ ಹೇಳಿದೆ. ದೇಶದಲ್ಲಿ ಮಕ್ಕಳು ಮಧುಮೇಹಕ್ಕೆ ತುತ್ತಾಗುವ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ವರದಿಗಳ ಜೊತೆ ಈ ಕ್ರಮವನ್ನು ಕಂಡಾಗ, ಇದೊಂದು ಸಕಾಲಿಕವಾದ ಹೆಜ್ಜೆ ಎಂಬುದು ಗೊತ್ತಾಗುತ್ತದೆ. ವಿಶ್ವದ ಮಧುಮೇಹ ರಾಜಧಾನಿ ಎಂಬ ಕೆಟ್ಟ ಹಣೆಪಟ್ಟಿಯು ಭಾರತಕ್ಕೆ ಇದೆ, ವಿಶ್ವದ ಒಟ್ಟು ಮಧುಮೇಹಿಗಳಲ್ಲಿ ಭಾರತೀಯರ ಪಾಲು ಶೇಕಡ 25ಕ್ಕಿಂತ ಹೆಚ್ಚಾಗಿದೆ. ಇದು ಬಹಳ ಗಂಭೀರವಾದ ಆರೋಗ್ಯ ಸಮಸ್ಯೆ. ಮುಂದೆ ಈ ಸಮಸ್ಯೆಯು ಇನ್ನಷ್ಟು ತೀವ್ರವಾಗದಂತೆ ನೋಡಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಬೇಕಿದೆ.

ತಾವು ಸೇವಿಸುವ ಆಹಾರ ಪದಾರ್ಥಗಳ ಒಳಿತು, ಕೆಡುಕುಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕಿದೆ

ಮಕ್ಕಳಲ್ಲಿ ಸ್ಥೂಲಕಾಯ ಹಾಗೂ ಮಧುಮೇಹ (ಟೈಪ್ 2) ಹೆಚ್ಚಾಗುತ್ತಿದೆ ಎಂದು ಹಲವು ಅಧ್ಯಯನ ವರದಿಗಳು ಹೇಳಿವೆ. ಅದರಲ್ಲೂ ಮುಖ್ಯವಾಗಿ, ಹದಿಹರೆಯದ ಮಕ್ಕಳಲ್ಲಿ ಇದು ಹೆಚ್ಚಾಗಿದೆ. 2022ರಲ್ಲಿ 5 ವರ್ಷದಿಂದ 19 ವರ್ಷ ವಯಸ್ಸಿನ ನಡುವಿನ ಅಂದಾಜು 1.25 ಕೋಟಿ ಮಕ್ಕಳು ಸ್ಥೂಲಕಾಯ ಹೊಂದಿದ್ದರು. ಹದಿಹರೆಯದ ಹೆಣ್ಣುಮಕ್ಕಳಲ್ಲಿ ಶೇ 12ರಷ್ಟು ಮಂದಿ ಮಧುಮೇಹಕ್ಕೆ ತುತ್ತಾಗಿದ್ದರು. ಇದು ಗಂಡುಮಕ್ಕಳಲ್ಲಿ ಶೇ 8ರಷ್ಟಕ್ಕಿಂತ ಹೆಚ್ಚಾಗಿತ್ತು. ಇದಕ್ಕೆ ಒಂದು ಮುಖ್ಯ ಕಾರಣ ಆರೋಗ್ಯಕರ ವಲ್ಲದ ಆಹಾರ ಸೇವನೆ. ಈ ಸಮಸ್ಯೆಯ ನಿವಾರಣೆಗೆ ಸಿಬಿಎಸ್ಇ ಈಗ ಮುಂದಡಿ ಇರಿಸಿದೆ. ದಿನಕ್ಕೆ ಎಷ್ಟು ಪ್ರಮಾಣದಲ್ಲಿ ಸಕ್ಕರೆಯನ್ನು ಸೇವಿಸಬಹುದು ಹಾಗೂ ಹೆಚ್ಚು ಸಕ್ಕರೆ ಸೇವಿಸಿದಲ್ಲಿ ಆಗಬಹುದಾದ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಅದು ಹೇಳಿದೆ. ಸಾಮಾನ್ಯವಾಗಿ ಬಳಕೆ ಮಾಡುವ ತಿಂಡಿ, ಪಾನೀಯಗಳಲ್ಲಿ ಇರುವ ಸಕ್ಕರೆ ಪ್ರಮಾಣದ ಬಗ್ಗೆಯೂ ಮಾಹಿತಿ ಒದಗಿಸಬೇಕಿದೆ. ಈ ರೀತಿ ಮಾಡಿದಾಗ, ತಾವು ಸೇವಿಸುವ ಆಹಾರ ಪದಾರ್ಥಗಳ ಒಳಿತು, ಕೆಡುಕುಗಳ ಬಗ್ಗೆ ಮಕ್ಕಳಿಗೆ ಸರಿಯಾದ ಅರಿವು ಮೂಡುತ್ತದೆ. ಮಕ್ಕಳ ಕಲಿಕಾ ಶಕ್ತಿ ಹೆಚ್ಚಿರುತ್ತದೆ. ಹೀಗಾಗಿ, ಇಂತಹ ವಿಷಯಗಳನ್ನು ಚೆನ್ನಾಗಿ, ಸೃಜನಶೀಲವಾಗಿ ತಿಳಿಸಿದಾಗ ಅವರ ಆಹಾರ ಆಯ್ಕೆಗಳ ಮೇಲೆ ಸಕಾರಾತ್ಮಕವಾದ ಪರಿಣಾಮ ಉಂಟಾಗುತ್ತದೆ.

ಆಹಾರದ ಆಯ್ಕೆಗಳ ಬಗ್ಗೆ ಈ ಬಗೆಯ ಮಾಹಿತಿ ನೀಡುವ ಜೊತೆಯಲ್ಲೇ ಒಂದಿಷ್ಟು ಹೆಚ್ಚುವರಿ ಕ್ರಮಗಳನ್ನು ಕೂಡ ಕೈಗೊಳ್ಳಬೇಕು. ಶಾಲೆಗಳ ಕ್ಯಾಂಟೀನ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯಕರವಾದ ತಿಂಡಿ-ತಿನಿಸುಗಳು ಮಾತ್ರ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಒಳ್ಳೆಯ ಆಹಾರದ ಬಗ್ಗೆ ಮಕ್ಕಳಲ್ಲಿ ಹೆಚ್ಚು ಒಲವು ಮೂಡುವಂತೆ ಮಾಡುವಲ್ಲಿ ಶಿಕ್ಷಕರ ಪಾತ್ರ ದೊಡ್ಡದಾಗಿರುತ್ತದೆ. ಈ ಅಭಿಯಾನದಲ್ಲಿ ಪಾಲಕರೂ ಕೈಜೋಡಿಸಬೇಕು. ಇಂತಹ ಫಲಕಗಳನ್ನು ಶಾಲೆಗಳಲ್ಲಿ ಹಲವು ಸ್ಥಳಗಳಲ್ಲಿ ಅಳವಡಿಸಬೇಕು. ಆಗ ಉದ್ದೇಶಿತ ಸಂದೇಶವು ಎಲ್ಲ ಮಕ್ಕಳಿಗೆ ಹೆಚ್ಚು ಪರಿಣಾಮಕಾರಿಯಾಗಿ ರವಾನೆ ಆಗುತ್ತದೆ. ಆರೋಗ್ಯಕರವಾದ ಆಹಾರ ಸೇವನೆಯ ಮಹತ್ವವನ್ನು ಇತರ ಪಠ್ಯಕ್ರಮ ಮಂಡಳಿಗಳು ಹಾಗೂ ಶಾಲೆಗಳು ಮಕ್ಕಳಿಗೆ ತಿಳಿಹೇಳುವ ಕೆಲಸ ಮಾಡಬೇಕು. ಹಲವು ಬಗೆಗಳಲ್ಲಿ, ಹೊಸ ವಿಧಾನಗಳ ಮೂಲಕ ಈ ಸಂದೇಶವನ್ನು ಮಕ್ಕಳಿಗೆ ರವಾನಿಸಬೇಕು. ನಾವು ಉಪಭೋಗ ಸಂಸ್ಕೃತಿಯ ಸಮಾಜದಲ್ಲಿ ಇದ್ದೇವೆ. ದಿಢೀರನೆ ಸಿದ್ಧವಾಗುವ ಆಹಾರದ ಬಗ್ಗೆ ಮಕ್ಕಳಿಗೆ ಬಹಳ ರಂಜನೀಯವಾಗಿ ಮಾಹಿತಿ ನೀಡುವ ಕೆಲಸವನ್ನು ಈ ವ್ಯವಸ್ಥೆ ಮಾಡುತ್ತಿದೆ. ಇಂತಹ ಆಹಾರ ಬಹಳ ಸುಲಭದ ಆಯ್ಕೆ ಎಂದೂ ಹೇಳಲಾಗುತ್ತಿದೆ. ಇಂತಹ ತಿಂಡಿ-ತಿನಿಸುಗಳ ಬಗ್ಗೆ ದತ್ತಾಂಶ ಬಳಸಿ ಮಾಹಿತಿ ಒದಗಿಸಬೇಕು, ಆರೋಗ್ಯಕರ ಆಹಾರದ ಮಹತ್ವದ ಬಗ್ಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ತಿಳಿಸಬೇಕು.

ದಿನದ ಟ್ವೀಟ್

ಜಲಮೂಲ ಸ್ವಚ್ಛತೆಗೆ ಬಳಸಿ...

ಕರ್ನಾಟಕ ರಾಜ್ಯ ಸರ್ಕಾರವು ಕಾವೇರಿ ಆರತಿಗಾಗಿ ₹100 ಕೋಟಿ ವೆಚ್ಚ ಮಾಡಲು ಹೊರಟಿದೆ. ನಿಷ್ಪ್ರಯೋಜಕ ಮಾತ್ರವಲ್ಲದೆ ಸಂವಿಧಾನಬಾಹಿರವೂ ಆಗಿರುವ ಇಂತಹ ಅವಿವೇಕತನದ ಬದಲು, ಆ ಹಣವನ್ನು ರಾಜ್ಯದ ಎಲ್ಲ ಜಲಮೂಲಗಳನ್ನು ಸ್ವಚ್ಛಗೊಳಿಸಲು ಬಳಸಬೇಕು...

ಚೇತನ್ ಅಹಿಂಸಾ, ನಟ

ಕಿಡಿನುಡಿ

ಸಿದ್ದರಾಮಯ್ಯ ಅವರ ಆಡಳಿತ ಅವಧಿಯಲ್ಲಿ ಏನು ಅಭಿವೃದ್ಧಿ ಆಗಿದೆ? ಯಾವ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ? ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಿಸಿದ್ದಾರೆಯೇ? ಮೈಸೂರು ಭಾಗದ ನಾಲೆಗಳ ಹೂಳೆತ್ತಿಸಿದ್ದಾರೆಯೇ?

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 13-6-2000

● **ಪೆಟ್ರೋಲ್, ಡೀಸೆಲ್ ಮೇಲೆ ಸೆಸ್ ಶೀಘ್ರ ಸುಗ್ರೀವಾಜ್ಞೆ**

ನವದೆಹಲಿ, ಜೂನ್ 12 (ಪಿಟಿಐ)- ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಸುಧಾರಣೆಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸೆಸ್ ವಿಧಿಸಿ ವಾರ್ಷಿಕ 6 ಸಾವಿರ ಕೋಟಿ ರೂಪಾಯಿ ಸಂಗ್ರಹಣೆಯ ಕೇಂದ್ರ ರಸ್ತೆ ನಿಧಿ ಸ್ಥಾಪಿಸಲು ಕೇಂದ್ರವು ಈ ಕುರಿತ ಸುಗ್ರೀವಾಜ್ಞೆ ಯನ್ನು ಶೀಘ್ರವೇ ಹೊರಡಿಸಲಿದೆ.

ಈ ಸಂಬಂಧ ಮಸೂದೆಯನ್ನು ರೂಪಿಸುವುದು ವಿಳಂಬದ ಪ್ರಕ್ರಿಯೆಯಾಗುವುದರಿಂದ ಕಳೆದ ಸಂಸತ್ ಅಧಿವೇಶನದಲ್ಲಿ ಮಸೂದೆ ಮಂಡಿಸುವ ಯತ್ನ ನಡೆಸಲಿಲ್ಲ. ಸುಗ್ರೀವಾಜ್ಞೆ ಮೂಲಕ ನಿಧಿಯನ್ನು ಸ್ಥಾಪಿಸುವ ಕುರಿತಂತೆ ಕೇಂದ್ರ ಸಂಪುಟದಲ್ಲಿ ಶೀಘ್ರವೇ ತೀರ್ಮಾನ ಕೈಗೊಳ್ಳಲಾಗುವುದು ಎಂದು ಭೂ ಸಾರಿಗೆ ಸಚಿವ ರಾಜನಾಥ್ ಸಿಂಗ್ ಅವರು, ಇಂದು ಇಲ್ಲಿ ನಡೆದ ರಾಜ್ಯ ಲೋಕೋಪಯೋಗಿ ಸಚಿವರ ಎರಡನೇ ಸಮ್ಮೇಳನದಲ್ಲಿ ಹೇಳಿದರು.

ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಒಂದು ರೂಪಾಯಿ ಸೆಸ್ ವಿಧಿಸಲಾಗುವುದು. ಇದರಿಂದ ವಾರ್ಷಿಕ 6 ಸಾವಿರ ಕೋಟಿ ರೂಪಾಯಿ ಸಂಗ್ರಹಣೆಯಾಗಲಿದೆ ಎಂದು ಅವರು ಹೇಳಿದರು.

● **ನ್ಯಾಯಾಲಯದ ಆವರಣದಲ್ಲೇ ಆರೋಪಿ ಆತ್ಮಹತ್ಯೆ**

ಬೆಂಗಳೂರು, ಜೂನ್ 12- ವಿಲ್ಸನ್ ಗಾರ್ಡನ್‌ನ ಕರ್ತವ್ಯನಿರತ ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರನ್ನು ಇತ್ತೀಚೆಗೆ ಲಾರಿ ಹರಿಸಿ ಸಾಯಿಸಿದ ಆರೋಪದ ಮೇಲೆ ಪೊಲೀಸ್ ಬಂಧನದಲ್ಲಿದ್ದ ಲಾರಿ ಚಾಲಕ ನ್ಯಾಯಾಲಯದ ಆವರಣದಲ್ಲಿ ಇಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಶಬ್ಬೀರ್ ಅಲಿಯಾಸ್ ರಮೇಶ್ ಎಂಬ ಈತ, ಇಂದು ಮಧ್ಯಾಹ್ನ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ 3ನೇ ಮಹಡಿಯಿಂದ ಕೆಳಕ್ಕೆ ಹಾರಿದ. ತೀವ್ರವಾಗಿ ಗಾಯಗೊಂಡಿದ್ದ ಈತ ವಿಕ್ಟೋರಿಯ ಆಸ್ಪತ್ರೆ ಯಲ್ಲಿ ಮೃತನಾದ.

50 ವರ್ಷಗಳ ಹಿಂದೆ

ಶುಕ್ರವಾರ, 13-6-1975

● **ಲೋಕಸಭೆಗೆ ಇಂದಿರಾ ಗಾಂಧಿ ಆಯ್ಕೆ ರದ್ದು: ಆರು ವರ್ಷ ಅನರ್ಹತೆ**

ಅಲಹಾಬಾದ್, ಜೂನ್ 12- ರಾಯ್ ಬರೇಲಿ ಕ್ಷೇತ್ರದಿಂದ ಲೋಕಸಭೆಗೆ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರ ಆಯ್ಕೆಯನ್ನು ಅಲಹಾಬಾದ್ ಹೈಕೋರ್ಟ್ ರದ್ದುಪಡಿಸಿದೆ. ತೀರ್ಪಿನ ಅನುಷ್ಠಾನಕ್ಕೆ ಇಪ್ಪತ್ತು ದಿನಗಳ ತಡೆಯಾಜ್ಞೆಯನ್ನೂ ನೀಡಲಾಗಿದೆ.

ಇಂದಿರಾ ಗಾಂಧಿ ಅವರ ಆಯ್ಕೆ ಪ್ರಶ್ನಿಸಿ ರಾಜನಾರಾಯಣ್ ಅವರು ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ಮೇಲೆ ಇಂದು ನ್ಯಾಯಮೂರ್ತಿ ಸಿನ್ಹಾ ಅವರು ತೀರ್ಪು ನೀಡಿದರು.

ಚುನಾವಣೆಯಲ್ಲಿ ಭ್ರಷ್ಟ ಮಾರ್ಗ ಅನುಸರಿಸಲಾಗಿದೆ ಎಂಬ ಆಪಾದನೆಯನ್ನು ಎತ್ತಿ ಹಿಡಿದಿರುವ ನ್ಯಾಯಮೂರ್ತಿ, ಆರು ವರ್ಷಗಳ ಕಾಲ ಇಂದಿರಾ ಗಾಂಧಿ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರೆಂದು ಘೋಷಿಸಿದ್ದಾರೆ.

● **ಎಲ್ಲ ಕಡೆ ಜನತಾ ರಂಗದ ಮೇಲುಗೈ**

ಅಹಮದಾಬಾದ್, ಜೂನ್ 12- ಗುಜರಾತ್ ವಿಧಾನಸಭೆಯ ಫಲಿತಾಂಶಗಳು ಹೊರ ಬೀಳುತ್ತಿದ್ದಂತೆ ಜನತಾ ರಂಗ ಮೇಲುಗೈ ಹೊಂದಿರುವುದು ಸ್ಪಷ್ಟವಾಯಿತು.

ಪ್ರಕಟವಾದ ಒಟ್ಟು 42 ಸ್ಥಾನಗಳಲ್ಲಿ ಐದು ಪಕ್ಷಗಳನ್ನು ಒಳಗೊಂಡ ಜನತಾ ರಂಗವು ಒಟ್ಟು 32 ಸ್ಥಾನಗಳನ್ನು ಗಿಟ್ಟಿಸಿಕೊಂಡಿತು. ಕಾಂಗ್ರೆಸ್ಸಿಗೆ ಕೇವಲ 9 ಸ್ಥಾನಗಳು ಲಭಿಸಿವೆ. ಪಕ್ಷೇತರರೊಬ್ಬರು ಜಯಗಳಿಸಿದ್ದಾರೆ.

ಎಣಿಕೆ ನಡೆಯುತ್ತಿರುವ ಎಲ್ಲ ಕ್ಷೇತ್ರಗಳಲ್ಲೂ ಜನತಾ ರಂಗವು ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ಸಿಗಿಂತ ಮುಂದಿದೆ. ಆಯ್ಕೆಗೊಂಡ ಜನತಾ ರಂಗ ಅಭ್ಯರ್ಥಿಗಳಲ್ಲೂ ಸಂಸ್ಥಾ ಕಾಂಗ್ರೆಸ್ಸಿನದೇ ಮೇಲುಗೈ. ಅನಂತರದ ಸ್ಥಾನ ಜನಸಂಘಕ್ಕೆ.

ಈಗಿನಿಂದಲೇ ಆಗಬೇಕಿದೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನೋತ್ತರ ಕಾಲದ ತಯಾರಿ

ಎ.ಐ: ಮನುಷ್ಯರಂತೆ ಆಗುವ ಮುನ್ನ...

ವಿಶ್ಲೇಷಣೆ

ವಸಂತ ಶೆಟ್ಟಿ

ಕೃತಕ ಬುದ್ಧಿಮತ್ತೆ (ಎ.ಐ.) ತಂತ್ರಜ್ಞಾನದ ಬೆಳವಣಿಗೆಯ ಶರವೇಗವನ್ನು ಗಮನಿಸಿದರೆ ಹೊರಜಗತ್ತಿನಲ್ಲಿ ಮೂವತ್ತು ವರ್ಷಗಳಲ್ಲಿ ಆಗುವಂತಹ ಬದಲಾವಣೆಗಳು ಈ ಕ್ಷೇತ್ರದಲ್ಲಿ ಮೂವತ್ತು ದಿನಗಳಲ್ಲಿ ಆಗುತ್ತವೆ ಅನ್ನಬಹುದು. ಕಳೆದ ಮೂವತ್ತು ದಿನಗಳು ಇದಕ್ಕೆ ಹೊರತಾಗಿರಲಿಲ್ಲ. ಈ ಕ್ಷೇತ್ರದ ಇತ್ತೀಚಿನ ಕೆಲವು ಮುಖ್ಯ ಬೆಳವಣಿಗೆಗಳ ದಿಕ್ಕನ್ನು ಅರಿಯುವ ಪ್ರಯತ್ನ ಮಾಡಿದರೆ, ಮುಂದಿನ ಕೆಲವು ವರ್ಷಗಳ ಎ.ಐ. ಬೆಳವಣಿಗೆ ಯಾವ ರೀತಿಯಲ್ಲಿರಲಿದೆ ಎಂದು ಊಹಿಸಬಹುದು.

ಮನುಷ್ಯರಂತೆಯೇ ಯೋಚಿಸುವ, ಭಾವನೆಗಳಿಗೆ ಸ್ಪಂದಿಸುವ ಹಾಗೂ ಬೌದ್ಧಿಕವಾದ ಯಾವುದೇ ಕೆಲಸಗಳನ್ನು ಮನುಷ್ಯರಿಗಿಂತಲೂ ಚೆನ್ನಾಗಿ ಮಾಡುವ ಶಕ್ತಿಯನ್ನು ಒಂದೆರಡು ವರ್ಷಗಳಲ್ಲಿ ಎ.ಐ. ಪಡೆಯಲಿದೆ; ಆ ಮೂಲಕ, ಎ.ಜಿ.ಐ. (ಆರ್ಟಿಫಿಷಿಯಲ್ ಜನರಲ್ ಇಂಟೆಲಿಜನ್ಸ್) ಆಗಿ ರೂಪಾಂತರ ಹೊಂದಲಿದೆ ಎನ್ನುವ ಮಾತು ಈ ವಲಯದಲ್ಲಿತ್ತು. ಅಂತಹದೊಂದು ಜ್ಞಾನ ಸ್ಫೋಟದ ಸಾಧ್ಯತೆಗೆ ಜಗತ್ತಿನ್ನೂ ಸಿದ್ಧಗೊಂಡಿಲ್ಲ ಎನ್ನುವ ಆತಂಕವೂ ಎ.ಐ. ಕ್ಷೇತ್ರದಲ್ಲಿತ್ತು. ಆದರೆ, ಈಗ ಎ.ಜಿ.ಐ. ಸಾಧ್ಯತೆ ಸಾಕಾರಗೊಳ್ಳಲು ಇನ್ನೂ ಐದರಿಂದ ಹತ್ತು ವರ್ಷಗಳಾದರೂ ಬೇಕು ಎನ್ನುವ ಅಭಿಪ್ರಾಯ ಕೇಳಿಬರುತ್ತಿದೆ.

ಎ.ಐ. ತಂತ್ರಜ್ಞಾನದ ವಿಷಯದಲ್ಲಿ ‘ಆ್ಯಪಲ್’ ಸಂಸ್ಥೆಯ ಹೂಡಿಕೆ ಕಡಿಮೆ. ಈ ಕಾರಣಕ್ಕೆ ಅದು ಬಹಳಷ್ಟು ಟೀಕೆಗೂ ಒಳಗಾಗಿದೆ. ಏನೇ ಮಾಡಿದರೂ ಜಗತ್ತನ್ನು ಅಚ್ಚರಿಗೆ ಕೆಡಹುವ ಆ್ಯಪಲ್, ಎ.ಐ. ಮಾದರಿಗಳ ಕುರಿತ ವರದಿಯೊಂದನ್ನು ಇತ್ತೀಚೆಗೆ ಹೊರತಂದಿದೆ. ಸದ್ಯಕ್ಕೆ ಮಾರುಕಟ್ಟೆಯಲ್ಲಿ ದೊಡ್ಡ ಸಂಚಲನ ಮೂಡಿಸಿರುವ ‘ಓಪನ್ ಎ.ಐ.’, ‘ಅಂತ್ರೋಪಿಕ್’ ಮತ್ತು ಚೀನಾದ ‘ಡೀಪ್‌ಸೀಕ್’ನ ದೊಡ್ಡ ತಾರ್ಕಿಕ ಮಾದರಿಗಳನ್ನು (ಲಾರ್ಜ್ ರೀಸನಿಂಗ್ ಮಾಡೆಲ್ಸ್- ಮನುಷ್ಯರು ಒಂದು ಸಮಸ್ಯೆಯನ್ನು ಕ್ರಮಬದ್ಧವಾಗಿ ಬಗೆಹರಿಸುವ ರೀತಿಯಲ್ಲೇ ಯೋಚಿಸುವ ನುಡಿ ಮಾದರಿ ಅನ್ನಬಹುದು) ಎತ್ತಿಕೊಂಡು, ಅವುಗಳಿಗೆ ಕಷ್ಟಕರವಾದ ಸಮಸ್ಯೆಗಳನ್ನು ಬಿಡಿಸುವ ಕೆಲಸವನ್ನು ಆ್ಯಪಲ್ ಸಂಸ್ಥೆಯ ಸಂಶೋಧಕರು ಕೊಟ್ಟರು. ಆದರೆ, ಒಂದು ಹಂತದ ಸಂಕೀರ್ಣ ಸ್ಥಿತಿ ದಾಟಿದ ಮೇಲೆ ಎಲ್ಲ ಎ.ಐ. ಮಾದರಿಗಳು ಸೋತು ಕೈಚೆಲ್ಲಿದವು. ಹೇಳಿಕೊಟ್ಟಿದ್ದನ್ನು ಹಾಗೂ ನೆನಪಿನಲ್ಲಿ ಇಟ್ಟುಕೊಂಡಿದ್ದನ್ನು ಮಾತ್ರ ಎ.ಐ. ಮಾದರಿಗಳು ಉತ್ತರಿಸಬಲ್ಲವು; ತಾವಾಗಿಯೇ ಯೋಚಿಸುವ ಸಂದರ್ಭ ಬಂದಾಗ ಅವು ಸೋಲುತ್ತವೆ ಎಂದು ಈ ಸಂಶೋಧಕರು ವಾದಿಸಿದರು. ‘ಆಳವಾಗಿ ಯೋಚಿಸಬಲ್ಲವು ಅನ್ನುವ ಭ್ರಮೆಯನ್ನು ಎ.ಐ. ಮಾದರಿಗಳು ನಮಗೆ ಹುಟ್ಟುಹಾಕಿವೆ’ ಎಂದು ಆ್ಯಪಲ್ ವರದಿ ಹೇಳಿದೆ. ಈ ವರದಿ, ತಮ್ಮ ಬಳಿ ಅಗಾಧವಾದ ವಿಶ್ಲೇಷಣಾ ಶಕ್ತಿಯಿದ್ದಾಗಲೂ ಎ.ಐ. ಮಾದರಿಗಳು ಸೋತಿರುವುದನ್ನು ನೋಡಿದರೆ, ಎ.ಜಿ.ಐ. ಸಾಕಾರಗೊಳ್ಳುವ ಕಾಲ ದೂರವಿದೆ ಎನ್ನುವ ವಿಶ್ಲೇಷಣೆಗೆ ಕಾರಣವಾಗಿದೆ.

ಸಿಲಿಕಾನ್ ವ್ಯಾಲಿಯಲ್ಲಿ ಎ.ಐ. ಕುರಿತ ಪಾಡ್‌ಕಾಸ್ಟ್‌ಗಳ (ಆಡಿಯೊ ರೂಪದಲ್ಲಿರುವ ಮಾತುಕತೆ) ಮೂಲಕ ಪ್ರಸಿದ್ಧರಾಗಿರುವ ಭಾರತ ಮೂಲದ ದ್ವಾರಕೇಶ್ ಪಟೇಲ್ ಕೂಡ ಇಂತಹುದೇ ಅಭಿಪ್ರಾಯವ್ಯಕ್ತಪಡಿಸಿದ್ದಾರೆ. ತಮ್ಮ ಪಾಡ್‌ಕಾಸ್ಟ್‌ಗಳ ನಿರ್ಮಾಣದ ಹಂತದಲ್ಲಿ ಎ.ಐ. ಬಳಸಲು ಮಾಡಿದ ಪ್ರಯತ್ನಗಳ ಕುರಿತು ಬರೆದಿರುವ ಅವರ ಅಭಿಪ್ರಾಯ ಹೀಗಿದೆ: ‘ಮನುಷ್ಯರಂತೆ ನಿರಂತರವಾಗಿ ತಾವೇ ಕಲಿಯುವ ಹಾಗೂ ತಪ್ಪು ತಿದ್ದಿಕೊಳ್ಳುವ ಗುಣ ಎ.ಐ. ಮಾದರಿಗಳಿಗಿಲ್ಲ. ಅವುಗಳಿಗೆ ಯಾವುದೇ ವಿಷಯದ ಬಗ್ಗೆ ಒಂದು ಸಮಗ್ರ ನೋಟ ಬೆಳೆಸಿಕೊಳ್ಳುವ ಗುಣವಿಲ್ಲ. ಚುಟುಕಾದ ಕೆಲಸಗಳನ್ನು ಚುರುಕಾಗಿ ಮಾಡಲು ಸಹಾಯ ನೀಡುವ ಮಟ್ಟಿಗೆ ಅವು ಸಮರ್ಥವಾಗಿದ್ದರೂ, ಮನುಷ್ಯರಂತೆ ಒಂದಿಡೀ ಸಮಸ್ಯೆಯನ್ನು ಆಮೂಲಾಗ್ರವಾಗಿ ಅರ್ಥೈಸಿಕೊಂಡು ಪರಿಹಾರ ಕಲ್ಪಿಸುವ ಮಟ್ಟಿಗೆ ಅವು ಇನ್ನೂ ಬೆಳೆದಿಲ್ಲ. ಆ ಹಂತವನ್ನು ಮುಟ್ಟಲು ಇನ್ನೂ ಹತ್ತು ವರ್ಷವಾದರೂ ಬೇಕು’. ಆ್ಯಪಲ್ ವರದಿಯ ಜೊತೆಗೆ ದ್ವಾರಕೇಶ್ ಪಟೇಲ್ ಅವರ ವಿಶ್ಲೇಷಣೆಯೂ ವ್ಯಾಪಕ ಚರ್ಚೆಗೆ ಒಳಗಾಗಿದೆ.

ಎ.ಜಿ.ಐ. ಸಾಕಾರಗೊಳ್ಳುವ ದಿನ ದೂರದಲ್ಲಿದ್ದರೂ ಈಗಾಗಲೇ ಎ.ಐ. ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆ ಕಡಿಮೆಯದೇನಲ್ಲ. ಆರಂಭಿಕ ಹಂತದಲ್ಲಿನ ವೃತ್ತಿಪರ ಕೆಲಸಗಳನ್ನು (ಎಂಟ್ರಿ ಲೆವೆಲ್ ವೈಟ್ ಕಾಲರ್ ಜಾಬ್ಸ್) ಸಮರ್ಥವಾಗಿ ನಿಭಾಯಿಸುವ ಶಕ್ತಿ ಪಡೆದಿರುವುದರಿಂದ, ಮುಂದಿನ ಐದು ವರ್ಷಗಳಲ್ಲಿ ಅಮೆರಿಕದಲ್ಲಿ ಆರಂಭಿಕ ಹಂತದ ಶೇ 50ರಷ್ಟು ವೃತ್ತಿಪರ ಕೆಲಸಗಳನ್ನು ಎ.ಐ. ಕಸಿದುಕೊಳ್ಳಲಿದೆ. ಇದರಿಂದಾಗಿ, ಅಮೆರಿಕದಲ್ಲಿ ನಿರುದ್ಯೋಗ ಪ್ರಮಾಣ ಶೇ 20ಕ್ಕೆ ಮುಟ್ಟಬಹುದು ಎಂದು ಎ.ಐ. ಕ್ಷೇತ್ರದ ಮುಂಚೂಣಿ ಸಂಸ್ಥೆಗಳಲ್ಲೊಂದಾದ ‘ಅಂತ್ರೋಪಿಕ್’ ಮುಖ್ಯಸ್ಥ ಡ್ಯಾರಿಯೋ ಅಮೋಡೈ ಎಚ್ಚರಿಸಿದ್ದಾರೆ. ಈ ಆತಂಕಕ್ಕೆ ದನಿಗೂಡಿಸಿರುವ ‘ಪ್ಯಾಲೆಂಟಿರ್’ ಸಂಸ್ಥೆಯ ಮುಖ್ಯಸ್ಥ ಅಲೆಕ್ಸ್ ಕಾರ್ಪ್, ‘ಎ.ಐ. ತಂತ್ರಜ್ಞಾನವನ್ನು ಲೋಕದ ಹಿತಕ್ಕೆ ಬಳಸುವಂತೆ ಮಾಡುವುದು ಅತ್ಯಂತ ಶ್ರಮದ ಕೆಲಸ. ಅದನ್ನು ಮಾಡದೇ ಹೋದಲ್ಲಿ ಎದುರಾಗುವ ಸಾಮಾಜಿಕ ತಲ್ಲಣಗಳು ಊಹಿಸಲಾಗದ ಮಟ್ಟದಲ್ಲಿರಲಿವೆ’ ಎಂದಿದ್ದಾರೆ. ಎ.ಐ. ಬೆಳವಣಿಗೆ ಮತ್ತು ಪರಿಣಾಮಗಳ ಬಗ್ಗೆ ದೇಶದ ರಾಜಕಾರಣ ಚರ್ಚಿಸುವ ಹೊತ್ತು ಬಂದಿದೆ ಎಂದು ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಕೂಡ ಹೇಳಿದ್ದಾರೆ.



ಎ.ಐ. ಬೆಳವಣಿಗೆ ಕುರಿತ ಚರ್ಚೆಗಳಿಗೆ ಹಲವು ಆಯಾಮಗಳಿವೆ. ಎ.ಐ. ತಂತ್ರಜ್ಞಾನದ ಸಾಧ್ಯತೆಗಳಿಗೆ ಆಕಾಶವೇ ಮಿತಿ. ಹಾಗಾಗಿ, ಆ ತಂತ್ರಜ್ಞಾನವನ್ನು ಮನುಕುಲದ ಒಳಿತಿನ ಸಾಧನವಾಗಿಸಿಕೊಳ್ಳಬೇಕು. ಅದಕ್ಕೊಂದು ಜಾಗತಿಕ ಸಮನ್ವಯ ಬೇಕು. ಎ.ಐ. ಬೆಳವಣಿಗೆಯನ್ನು ಸರಿದಿಕ್ಕಿನಲ್ಲಿ ನಡೆಸಲು ಸರಿಯಾದ ನೀತಿನಿಯಮಗಳು ಬೇಕು ಅನ್ನುವುದು ಚರ್ಚೆಯ ಒಂದು ಆಯಾಮ. ಆರ್ಥಿಕತೆ ಮತ್ತು ಉದ್ಯೋಗದ ಮಾರುಕಟ್ಟೆಯ ಮೇಲೆ ಅದು ಉಂಟು ಮಾಡುವ ತೀವ್ರ ಮತ್ತು ವೇಗದ ಪರಿಣಾಮಗಳನ್ನು ದೊಡ್ಡ ಮಟ್ಟದ ಸಾಮಾಜಿಕ ತಲ್ಲಣಗಳಿಲ್ಲದೆ ಅರಗಿಸಿಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳ ಕುರಿತ ಚರ್ಚೆಯೂ ವ್ಯಾಪಕವಾಗಿ ನಡೆಯುತ್ತಿದೆ. ಈ ಚರ್ಚೆ, ‘ಸಾರ್ವತ್ರಿಕ ಮೂಲ ಆದಾಯ’ (ಯುಬಿಐ - ಯೂನಿವರ್ಸಲ್ ಬೇಸಿಕ್ ಇನ್‌ಕಂ) ಎನ್ನುವ ವಿಷಯದತ್ತ ತಿರುಗುತ್ತಿದೆ. ಎ.ಐ. ಕಾರಣದಿಂದ ಸೃಷ್ಟಿಯಾಗುವ ಹೆಚ್ಚಿನ ಆರ್ಥಿಕತೆಯ ಮೇಲೆ ಸರ್ಕಾರ ಹೆಚ್ಚಿನ ತೆರಿಗೆ ವಿಧಿಸಬೇಕು ಹಾಗೂ ಅದರಿಂದ ಸಂಗ್ರಹವಾಗುವ ನಿಧಿಯನ್ನು ಎ.ಐ. ಕಾರಣದಿಂದ ಕೆಲಸ ಕಳೆದುಕೊಳ್ಳುವವರಿಗೆ ನೀಡುವ ಪರಿಕಲ್ಪನೆ ಇದಾಗಿದೆ.

ನಮ್ಮ ದೇಶದಲ್ಲಿ ‘ಗ್ಯಾರಂಟಿ ಯೋಜನೆ’ಗಳು ಜನರಿಗೆ ಒಳಿತು ಮಾಡಿವೆಯೇ ಇಲ್ಲವೇ ಅವರನ್ನು ಸೋಮಾರಿಗಳನ್ನಾಗಿಸುತ್ತಿವೆಯೇ ಅನ್ನುವ ಚರ್ಚೆ ನಡೆಯುತ್ತಿರುವಂತೆ, ಅಮೆರಿಕದಲ್ಲಿ ಯುಬಿಐ ಕುರಿತ ಪರ- ವಿರೋಧದ ಚರ್ಚೆ ಶುರುವಾಗಿದೆ. ಅಮೆರಿಕ ಸರ್ಕಾರ ಮುಂದೊಂದು ದಿನ ‘ಯುಬಿಐ ಭಾಗ್ಯ’ ಯೋಜನೆ ಆರಂಭಿಸಿದರೆ ಅಚ್ಚರಿಯೇನಿಲ್ಲ. ಒಬ್ಬ ವ್ಯಕ್ತಿ, ಒಂದು ಸಂಸ್ಥೆ ಅಥವಾ ದೇಶದ ಕೈಯಲ್ಲಿ ಅಧಿಕಾರ ಕೇಂದ್ರೀಕೃತಗೊಂಡಾಗ, ಅಲ್ಲಿ ಆರ್ಥಿಕ-ಸಾಮಾಜಿಕ ತಾರತಮ್ಯ ಕಟ್ಟಿಟ್ಟ ಬುತ್ತಿ ಎನ್ನುವುದಕ್ಕೆ ಇತಿಹಾಸದುದ್ದಕ್ಕೂ ನಿದರ್ಶನಗಳಿವೆ. ಎ.ಐ. ಪೈಪೋಟಿಯಲ್ಲಿ ಅಧಿಕಾರ ಮತ್ತು ನಿಯಂತ್ರಣ ಕೆಲವೇ ಕೆಲವು ಖಾಸಗಿ ಸಂಸ್ಥೆಗಳ ಹಿಡಿತಕ್ಕೆ ಸಿಲುಕುವ ಮುನ್ನ, ಎ.ಐ. ಏಕಸ್ವಾಮ್ಯವನ್ನು ತಡೆಯಲು ಬೇಕಾದ ಸಾಂಸ್ಥಿಕ ಏರ್ಪಾಡುಗಳನ್ನು ಕಟ್ಟಿಕೊಳ್ಳುವತ್ತ ಸರ್ಕಾರಗಳು ಗಮನಹರಿಸಬೇಕು. ಇದಾಗದೆ ಹೋದರೆ, ತೆರಿಗೆ ವಿಧಿಸುವುದರಲ್ಲಾಗಲೀ ಅಥವಾ ಮರುಹಂಚಿಕೆ ಮಾಡುವುದರಲ್ಲಾಗಲೀ ಏನೂ ಮಾಡಲಾಗದ ಸ್ಥಿತಿ ಎದುರಾಗಬಹುದು.

ಎ.ಐ. ಕಾರಣದಿಂದಾಗಿ ಜಾಗತಿಕ ಆರ್ಥಿಕತೆಯ ಮೂಲಸ್ವರೂಪವೇ ಬದಲಾಗುವ ದಿನಗಳು ದೂರವಿಲ್ಲ. ಎ.ಐ. ಯಾವ ರೀತಿಯ ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡಬಹುದು ಎನ್ನುವುದು ಇನ್ನಷ್ಟೇ ಸ್ಪಷ್ಟವಾಗಬೇಕಿದೆ. ಈ ಉತ್ತರ ನಿಚ್ಚಳಗೊಳ್ಳುವ ಮುಂದಿನ ಒಂದು ದಶಕ ಬಹಳಷ್ಟು ಅನಿಶ್ಚಿತತೆಯಿಂದ ಕೂಡಿರಲಿದೆ. ಆ ವೇಳೆಗೆ ಎ.ಐ. ಮನುಷ್ಯರಂತೆ ಯೋಚಿಸುವ ಮಟ್ಟ ಮುಟ್ಟಿದಿರಬಹುದು. ಆದರೆ, ಎ.ಐ. ತಂತ್ರಜ್ಞಾನ ಎ.ಜಿ.ಐ. ಹಂತಕ್ಕೆ ತಲಪುವ ಸಂದರ್ಭದಲ್ಲಿ ಆ ಹೊಸ ಜಗತ್ತನ್ನು ಹೇಗೆ ನಿಭಾಯಿಸಬೇಕು ಎನ್ನುವುದನ್ನು ನಾವು ಈಗಿನಿಂದಲೇ ಯೋಚಿಸಬೇಕಾಗಿದೆ.

ಚುರುಮುರಿ



ಫಟಾಫಟ್ ಗಣತಿ!

● ಬಿ.ಎನ್. ಮಲ್ಲೇಶ್

‘ಬ್ರೇಕಿಂಗ್ ನ್ಯೂಸ್! ಭಾರತದಲ್ಲಿ ಬಡವರ ಸಂಖ್ಯೆ ಕಡಿಮಿ ಆಗೇತಂತೆ, ಪೇಪರಲ್ಲಿ ಬಂದಿದೆ’ ಎಂದ ದುಬ್ಬೀರ.

‘ಹೌದಾ? ಮತ್ತೆ ಈ ಮಂಜಮ್ಮ ಇನ್ನೂ ಡಬ್ಬಾ ಹೋಟ್ಲಲ್ಲೇ ಅದಾಳೆ?’ ಗುಡ್ಡೆ ನಕ್ಕ.

‘ನಿನ್ನಂಥ ಉದ್ರಿ ಗಿರಾಕಿಗಳಿರೋವಾಗ ನಾನು ಉದ್ಧಾರ ಆಗೋಕಾಗುತ್ತಾ?’ ಮಂಜಮ್ಮಗೆ ಸಿಟ್ಟು ಬಂತು.

‘ಶಾಂತಿ, ಶಾಂತಿ... ಬಿಗ್ ನ್ಯೂಸ್ ಏನ್ ಗೊತ್ತಾ? ಭಾರತದ ಜನಸಂಖ್ಯೆ ಈಗ 146 ಕೋಟಿಯಂತೆ. ಜಗತ್ತಲ್ಲಿ ನಾವೇ ನಂಬರ್ ಒನ್!’ ಎಂದ ತೆಪರೇಸಿ.

‘ಇದೊಂದ್ರಲ್ಲೇ ನಾವು ಜಗತ್ತನ್ನ ಮೀರಿಸಿರೋದು. ಅದಿರ್ಲಿ, ಕರ್ನಾಟಕದ ಜನಸಂಖ್ಯೆ ಎಷ್ಟಿರಬೋದು?’ ದುಬ್ಬೀರ ಕೇಳಿದ.

‘ಏಳೋ, ಎಂಟೋ ಕೋಟಿ ಇರಬೋದು...’

‘ಮತ್ತೆ ಅಷ್ಟು ಕೋಟಿ ಜನಾನ ತೊಂಬತ್ತು ದಿನದಲ್ಲಿ ಭೇಟಿಯಾಗಿ ಜಾತಿ ಜನಗಣತಿ ಮಾಡಾಕಾಗುತ್ತಾ?’ ಕೊಟ್ರೇಶಿ ಕೊಕ್ಕೆ.

‘ನೋಟು ಎಣಿಸೋ ಮಿಷನ್ ಥರ ಜನ ಎಣಿಸೋ ಮಿಷನ್ ಇದ್ದಿದ್ರೆ ಮಾಡಬೋದಿತ್ತೇನಪ...’ ಮಂಜಮ್ಮ ನಕ್ಕಳು.

‘ನಿನ್ನೆಲಿ, ಮನಸ್ಸು ಮಾಡಿದ್ರೆ ತೊಂಬತ್ತು ದಿನ ಯಾಕೆ, ಒಂಬತ್ತು ದಿನದಲ್ಲೇ ಫಟಾಫಟ್ ಅಂತ ಜಾತಿ ಜನಗಣತಿ ಮಾಡಿ ಮುಗಿಸ್ಬೋದು...’ ಗುಡ್ಡೆ ಆಕಾಶ ನೋಡಿದ.

‘ಒಂಬತ್ತು ದಿನದಲ್ಲಾ? ಹೆಂಗೆ?’

‘ಸಿಂಪಲ್... ಆಯಾ ಜಾತಿ ಮುಖಂಡರನ್ನ ಕರೆಸಿ ನಿಮ್ ಜಾತಿ ಜನ ಎಷ್ಟದಾರೆ ನೀವೇ ಲೆಕ್ಕ ಕೊಡಿ ಅಂದ್ರ ಮುಗೀತು. ಹೆಚ್ಚು, ಕಮ್ಮಿ ಅನ್ನೋ ಯಾವ ಆಕ್ಷೇಪಣೆನೂ ಬರಲ್ಲ...’

‘ಅವರು ಒಂದಕ್ಕೆರಡು ಲೆಕ್ಕ ಕೊಡ್ತಾರೆ, ಆಗ? ಜನಸಂಖ್ಯೆ 15 ಕೋಟಿ ಆದ್ರೆ?’

‘ಆಗ್ಲಿಬಿಡು, 146 ಕೋಟಿಗೆ ಇದ್ನೂ ಸೇರಿಸಿದ್ರಾತು...’

‘ಹಂಗಾದ್ರೆ ಜನಸಂಖ್ಯೆಯ ಸ್ತುತಿಗೀತೆಯೊಂದನ್ನು ರಚಿಸಿಕೊಳ್ಳೋಣ...’

‘ಅದನ್ನು ಹೀಗೆ ಹಾಡಬಹುದಲ್ಲವೇ... ಜನವೇ ಜನವೇ ಜನವೇ... ಎಲ್ಲೆಲ್ಲೂ ಜನ ಜನವೇ!’

ಸಂಗತ

ವೈಯಕ್ತಿಕ ಆಯ್ಕೆಗೆ ನೂರೆಂಟು ತಕರಾರು

ಎಲ್ಲರ ಆಯ್ಕೆಗಳನ್ನು ಗೌರವಿಸುವ ಸಾಮಾಜಿಕ ವಾತಾವರಣ ಶಿಕ್ಷಣದಿಂದ ಸಾಧ್ಯ

● ಸದಾಶಿವ ಸೊರಟೂರು

ಮೊನ್ನೆ ದೊಡ್ಡ ಹೋಟೆಲ್‌ವೊಂದರಲ್ಲಿ ಕುಟುಂಬವೊಂದು ತರಹೇವಾರಿ ಆಹಾರ ಪದಾರ್ಥಗಳನ್ನು ತರಿಸಿಕೊಂಡು, ಟೇಬಲ್ ತುಂಬಾ ಹರಡಿಕೊಂಡು ತಿನ್ನುತ್ತಿತ್ತು. ದುಬಾರಿ ಬೆಲೆಯ ಉತ್ತರ ಭಾರತೀಯ ತಿನಿಸುಗಳವು. ಅದೇ ಸಮಯಕ್ಕೆ ಆ ಕುಟುಂಬ ಕುಳಿತಿದ್ದ ಪಕ್ಕದ ಟೇಬಲ್‌ಗೆ ಬಂದ ವ್ಯಕ್ತಿ ‘ಅನ್ನ-ಸಾರು ಕೊಡಿ’ ಎಂದು ವೇಟರ್‌ಗೆ ಹೇಳಿ ಕೂತ. ವೇಟರ್‌ನ ಮುಖದಲ್ಲಿ ಅಂತಹ ಒಳ್ಳೆಯ ಪ್ರತಿಕ್ರಿಯೆ ಏನೂ ಕಾಣಿಸಲಿಲ್ಲ. ಈ ವ್ಯಕ್ತಿ ಕೂತು ತನ್ನ ಪಾಡಿಗೆ ತಾನು ಅನ್ನ-ಸಾರು ಉಣ್ಣುವಾಗ, ಪಕ್ಕದ ಟೇಬಲ್‌ನಲ್ಲಿ ದುಬಾರಿ ಆಹಾರ ಸೇವಿಸುವ ಕುಟುಂಬದವರ ಕಣ್ಣಲ್ಲಿನ ಭಾವನೆಯಿತ್ತಲ್ಲ, ಅದರಲ್ಲಿ ‘ನಾವು ಶ್ರೇಷ್ಠರು’ ಎಂಬ ಭಾವವಿತ್ತು.

ಆ ಹುಡುಗಿಗೆ ಮೊಟ್ಟೆ ತಿನ್ನುವ ಆಸೆ. ಮನೆಯಲ್ಲೂ ಮೊಟ್ಟೆ ತಿನ್ನುವವರೇ ಅವರು. ಶಾಲೆಯಲ್ಲಿ ಮಾತ್ರ ಸರತಿ ಸಾಲಿನಲ್ಲಿ ಬಂದು ಮೊಟ್ಟೆಯ ಬದಲು ಬಾಳೆಹಣ್ಣು ತೆಗೆದುಕೊಂಡು ಹೋಗುತ್ತಿದ್ದಳು. ಹುಡುಗಿಗೆ ಮೊಟ್ಟೆ ಇಷ್ಟವೆಂಬುದು ಮೇಷ್ಟ್ರಿಗೂ ಗೊತ್ತು. ಈ ಹುಡುಗಿ ಮೊಟ್ಟೆ ಏಕೆ ತಿನ್ನುತ್ತಿಲ್ಲ ಎನ್ನುವ ಕುತೂಹಲ ಅವರದು. ಒಂದು ದಿನ ಕರೆದು ವಿಚಾರಿಸಿದರು. ಹುಡುಗಿ ಹೇಳಲು ಮುಜುಗರಪಟ್ಟರೂ ಮೇಷ್ಟ್ರ ಒತ್ತಾಯಕ್ಕೆ ಹೇಳಿದಳು: ‘ಸರ್, ನನ್ನ ಗೆಳತಿಯರೆಲ್ಲರೂ ಹಣ್ಣು ತಿನ್ನುವವರು. ಅವರು ಯಾರೂ ಮೊಟ್ಟೆ ತಿನ್ನಲ್ಲ. ಅವರ ಮುಂದೆ ನಾನು ಮೊಟ್ಟೆ ತಿಂದರೆ ಅವರು ನನ್ನನ್ನು ಒಂಥರ ನೋಡ್ತಾರೆ’ ಅಂದಳು.

ಕಣ್ಣುಗಳು ನಮ್ಮವೇ ಆದರೂ ಏನನ್ನು ನೋಡಬೇಕು ಅನ್ನುವುದನ್ನು ಹೇರಲಾಗುತ್ತದೆ. ಹಣ ನಮ್ಮದೇ ಆದರೂ ಏನನ್ನು ಧರಿಸಬೇಕು ಎಂದು ಯಾರೋ ನಿರ್ಧರಿಸುತ್ತಾರೆ. ರುಚಿ-ಅಭಿರುಚಿಗಳು ನಮ್ಮವೇ ಆದರೂ ಏನು ತಿನ್ನಬೇಕು, ಏನು ತಿನ್ನಬಾರದು ಎನ್ನುವುದಕ್ಕೆ ಸಂಬಂಧಿಸಿದಂತೆ ಯಾರೋ ಒತ್ತಡ ಹೇರುತ್ತಾರೆ. ಅನ್ನ-ಸಾರು ತಿನ್ನುವ ವ್ಯಕ್ತಿಗೆ ತಾನು ತಿನ್ನುತ್ತಿರುವುದು ಕನಿಷ್ಠವಾದುದೆಂದು ಮತ್ತು ಆ ಮಗು ಮೊಟ್ಟೆ ತಿನ್ನುವುದು ಅವಮಾನಕರ ಎಂದು ಭಾವಿಸುವುದಕ್ಕೆ ನಾವು ಸಲಹುತ್ತಿರುವ ಸಾಮಾಜಿಕ ಒತ್ತಡ ಮತ್ತು ವಿಚಿತ್ರ ಶ್ರೇಣೀಕರಣವೂ ಒಂದು ಕಾರಣ.

ಅನೇಕ ಕಾರಣಗಳನ್ನು ಹೇರುವುದರ ಮೂಲಕ ಜನರನ್ನು ಶ್ರೇಣೀಕರಣಕ್ಕೆ ತಳ್ಳುತ್ತಿದ್ದೇವೆ. ಧರ್ಮ, ಭಾಷೆ, ಆರ್ಥಿಕತೆ, ವಿಚಿತ್ರ ಸಾಂಸ್ಕೃತಿಕ ನೆಲೆಗಟ್ಟುಗಳು, ಪ್ರಾದೇಶಿಕತೆ ಮುಂತಾದವು ಇನ್ನೊಬ್ಬರನ್ನು ಹಣಿಯುವ ಹತಾರಗಳಂತೆ ಕಾಣಿಸುತ್ತವೆ.

ಸಾಮಾಜಿಕ ಒತ್ತಡವು ಒಬ್ಬ ವ್ಯಕ್ತಿಯ ಆಯ್ಕೆಯ ಮೇಲೆ ಮಾತ್ರವಲ್ಲ, ಇತರರ ದೃಷ್ಟಿಕೋನದ ಮೇಲೂ ಪರಿಣಾಮ ಬೀರುತ್ತದೆ. ಮೇಲಿನ ಉದಾಹರಣೆಯಲ್ಲಿ ಆ ಕುಟುಂಬದ ‘ಶ್ರೇಷ್ಠ’ ಭಾವನೆಯು ತಾವು ಆಯ್ಕೆ ಮಾಡಿದ ಆಹಾರದ ದುಬಾರಿತನದಿಂದ ಉಂಟಾದ ಸಾಮಾಜಿಕ ಸ್ಥಾನಮಾನವನ್ನು ಒಪ್ಪಿಕೊಂಡಿರುವುದನ್ನು ಹೇಳುತ್ತದೆ. ಇದು, ಆರ್ಥಿಕ ಸಾಮರ್ಥ್ಯವನ್ನು ಸ್ಥಾನಮಾನದೊಂದಿಗೆ ತಳಕು ಹಾಕುವ ಸಾಮಾಜಿಕ ರಚನೆಯನ್ನು ಬಿಂಬಿಸುತ್ತದೆ.

ವಿದ್ಯಾರ್ಥಿನಿಯ ಮುಜುಗರವು ಸಾಮಾಜಿಕ ತೀರ್ಪಿನ ಭಯ (ಇವಳು ಮೊಟ್ಟೆ ತಿನ್ನುವವಳು) ಹಾಗೂ ಅದರಿಂದ ಉಂಟಾಗುವ ಆತಂಕವನ್ನು ವ್ಯಾಖ್ಯಾನಿಸುತ್ತದೆ. ಸಮಾಜದಲ್ಲಿ ಸ್ವೀಕಾರಕ್ಕೆ ಒಳಗಾಗಬೇಕು ಎನ್ನುವ ಕಾರಣಕ್ಕೆ ಯುವಜನರು ತಮ್ಮ ವೈಯಕ್ತಿಕ ಆಯ್ಕೆಗಳನ್ನು ಬದಲಾಯಿಸಿಕೊಳ್ಳಬೇಕಾದ ಒತ್ತಡಕ್ಕೆ ಒಳಗಾಗುತ್ತಿದ್ದಾರೆ.

ವ್ಯಕ್ತಿಯ ಸ್ವಾತಂತ್ರ್ಯದ ಮೇಲೆ ಸಮಾಜ ಪ್ರಭಾವ ಬೀರುತ್ತದೆ. ಅಸಮಾನ ಸಮಾಜ ಅಸಮಾನತೆಯನ್ನೇ ಪೋಷಿಸುತ್ತದೆ. ವ್ಯಾಧಿಗ್ರಸ್ತ ಸಮಾಜವು ಅನಾರೋಗ್ಯಕರ ವರ್ತನೆಗಳನ್ನು ಸಲಹುತ್ತದೆ. ಈ ಪ್ರಕ್ರಿಯೆಯು ಮಾನಸಿಕ ಒತ್ತಡವನ್ನೂ ನಿರ್ಣಯ ಸ್ವಾತಂತ್ರ್ಯದ ಕೊರತೆಯನ್ನೂ ಮತ್ತು ಸಾಮಾಜಿಕ ಮೌಲ್ಯವನ್ನು ಕುಸಿಯುವಂತೆಯೂ ಮಾಡಬಲ್ಲದು. ಇದರಿಂದ ವ್ಯಕ್ತಿಯ ಆತ್ಮವಿಶ್ವಾಸ ಕುಸಿಯಬಹುದು; ಆ ವ್ಯಕ್ತಿ ತನ್ನ ಆಸೆಗಳನ್ನು ನುಂಗಿಕೊಳ್ಳಬೇಕಾಗಿ ಬರಬಹುದು. ಮಕ್ಕಳಂತೂ ತುಸು ಹೆಚ್ಚೇ ಅನ್ನುವಷ್ಟು ಇದರಿಂದ ಪ್ರಭಾವಿತರಾಗುತ್ತಾರೆ. ಅವರ ವ್ಯಕ್ತಿತ್ವ ದಿಕ್ಕು ತಪ್ಪುತ್ತದೆ.

ಅನಾರೋಗ್ಯಕರ ವರ್ತನೆಗಳಿಗೆ ಪರಿಹಾರವು ಶಿಕ್ಷಣದಲ್ಲಿದೆ ಎಂಬುದು ನಮಗೆ ಗೊತ್ತಿಲ್ಲದಿರುವ ವಿಷಯವೇನಲ್ಲ. ಅಂಬೇಡ್ಕರ್, ‘ಒಳ್ಳೆಯ ಶಿಕ್ಷಣ ಮಾತ್ರ ನಮ್ಮನ್ನು ಎಲ್ಲ ಅಸಮಾನತೆಗಳಿಂದ ಪಾರು ಮಾಡಬಲ್ಲದು’ ಎನ್ನುತ್ತಾರೆ. ಶಿಕ್ಷಣವು ಅಂಕವಲ್ಲ, ಅದೊಂದು ಜಾಗೃತಿ. ಸಂಸ್ಕೃತಿ ಕೂಡ. ಎಲ್ಲರ ಆಯ್ಕೆಗಳನ್ನೂ ಗೌರವಿಸುವ ಸಾಮಾಜಿಕ ವಾತಾವರಣವನ್ನು ಒಳ್ಳೆಯ ಶಿಕ್ಷಣ ಮಾತ್ರ ರೂಪಿಸಬಲ್ಲದು.

ನಮ್ಮ ಯೋಜನೆಗಳು ಆರ್ಥಿಕ ಶ್ರೇಣೀಕರಣವನ್ನು ಕಡಿಮೆ ಮಾಡುವ ಕಡೆ ಇರಬೇಕು. ಅದು ವ್ಯಕ್ತಿಗಳಿಗೆ ತಮ್ಮ ಆದ್ಯತೆಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಹಾಗೂ ಸಾಮಾಜಿಕ ಒತ್ತಡವನ್ನು ಎದುರಿಸಲು ಸಹಾಯಕವಾಗುತ್ತದೆ. ಆರೋಗ್ಯಕರ ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತದೆ. ವಿಶೇಷವಾಗಿ ಯುವಜನರಲ್ಲಿ ಸ್ವಾತಂತ್ರ್ಯದ ಭಾವನೆಯನ್ನು ಬಿತ್ತುತ್ತದೆ.

ನಮ್ಮ ನೋಟ, ನಮ್ಮ ನಿರ್ಧಾರಗಳು ಇತರರ ಮಾನವೀಯತೆಯನ್ನು ಮೀರದಂತೆ ಇರಬೇಕು. ವೈಯಕ್ತಿಕ ಆಯ್ಕೆಗಳಿಗೆ ಇತರರ ದೃಷ್ಟಿ, ಟೀಕೆ, ಒತ್ತಡ ಕಡಿಮೆ ಮಾಡಿದಾಗ ಮಾತ್ರ ಸಮಾನತೆಯ ಸಮಾಜ ಸಾಧ್ಯ. ‘ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಣವಕ್ಕು’ ಎನ್ನುತ್ತಾನೆ ಸರ್ವಜ್ಞ. ಅಂತಹ ಕೈಲಾಸ ನಮ್ಮ ಕೈಯಲ್ಲೇ ಇದೆ. ಅದನ್ನು ಸಾಧ್ಯ ಮಾಡಿಕೊಳ್ಳಬೇಕಷ್ಟೆ.

ವಾಚಕರ ವಾಣಿ

ವ್ಯಾಪಾರಿ ಮನೋಭಾವದ ಸೂಚಕ

ಕೆಆರ್‌ಎಸ್ ಜಲಾಶಯದ ಬಳಿ ‘ಕಾವೇರಿ ಆರತಿ’ ನಡೆಸುವ ಮತ್ತು ‘ಅಮ್ಯೂಸ್‌ಮೆಂಟ್ ಪಾರ್ಕ್’ ನಿರ್ಮಿಸುವ ರಾಜ್ಯ ಸರ್ಕಾರದ ನಿರ್ಧಾರವು ವ್ಯಾಪಾರಿ ಮನೋಭಾವದ ಸೂಚಕವಾಗಿದೆ (ಆಳ-ಅಗಲ, ಜೂನ್ 12). ಸರ್ಕಾರದ ಈ ಉದ್ದೇಶದ ಹಿಂದೆ ಜಲಾಶಯದ ಅಭಿವೃದ್ಧಿಯ ಆಶಯವಿಲ್ಲ. ಅದೊಂದು ವಿನಾಶಕ್ಕೆ ನೀಲನಕ್ಷೆ ಎನಿಸುತ್ತದೆ.

ಜಲಾಶಯವು ಮೈಸೂರು, ಕೊಡಗು, ಮಂಡ್ಯ, ಬೆಂಗಳೂರು ಜಿಲ್ಲೆಯ ಜನರಿಗೆ ಜೀವನಾಡಿಯಾಗಿದೆ. ಶಿಸ್ತುಬದ್ಧವಾಗಿ ಕಾರ್ಯಕ್ರಮ ಆಯೋಜಿಸುವುದಾಗಿ ಸರ್ಕಾರ ಹೇಳಿದರೂ ಜಲಾಶಯದ ಸುತ್ತಮುತ್ತಲಿನ ಪರಿಸರಕ್ಕೆ ಹಾನಿಯಾಗುವುದರಲ್ಲಿ ಅನುಮಾನವಿಲ್ಲ. ಕಾರ್ಯಕ್ರಮಕ್ಕೆ ಮೀಸಲಿಟ್ಟಿರುವ ಹಣವನ್ನು ಇದೇ ಪ್ರದೇಶದ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳಿಗೆ ವಿನಿಯೋಗಿಸುವುದು ಒಳಿತು.

ರಮೇಶ್, ಬೆಂಗಳೂರು

ಪ್ರವಾಸಿಗರು ಜವಾಬ್ದಾರಿ ಅರಿಯಲಿ

ಇತ್ತೀಚೆಗೆ ನಾವು ಮೂವರು ಸಹೋದರಿಯರು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಹಾಗೂ ಹರಿಹರಪುರದ ದೇಗುಲಕ್ಕೆ ಹೋಗಿದ್ದೆವು. ಶಾರದಾಂಬೆಯ ದರ್ಶನ ಪಡೆದ ಬಳಿಕ ಸಮೀಪದ ಸಿರಿಮನೆ ಜಲಪಾತ ವೀಕ್ಷಿಸಲು ತೆರಳಿದೆವು. ಅಲ್ಲಿನ ಪರಿಸರದ ಸ್ವಚ್ಛತೆ ಕಂಡು ಬೆರಗಾದೆವು.

ಅಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಕಾಣಸಿಗಲಿಲ್ಲ. ಅಲ್ಲಿನ ಬಹುತೇಕ ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಗೆ ನಿಷೇಧ ಹೇರಿರುವ ಬಗ್ಗೆ ಸೂಚನಾ ಫಲಕ ಅಳವಡಿಸಲಾಗಿದೆ. ಪ್ರಕೃತಿಯು ನಮಗೆ ಕೊಟ್ಟಿರುವ ಕೊಡುಗೆಗಳಿಗೆ ಪ್ರತಿಯಾಗಿ ನಾವು ಪರಿಸರದ ಸ್ವಚ್ಛತೆಯನ್ನೂ ಕಾಪಾಡಬೇಕಿದೆ. ಪ್ರವಾಸಿಗರಿಗೆ ಈ ಸತ್ಯದ ಅರಿವಾಗಬೇಕಿದೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ದೇವರ ದರ್ಶನಕ್ಕೆ ದುಪ್ಪಟ್ಟು ಹಣ ಏಕೆ?

ಜನಸಂಘದ ಅಧ್ಯಕ್ಷರಾಗಿದ್ದ ದೀನ ದಯಾಳ್ ಉಪಾಧ್ಯಾಯ ಒಮ್ಮೆ ಒಡಿಶಾದ ಪುರಿ ನಗರಕ್ಕೆ ಪಕ್ಷದ ಸಭೆಯಲ್ಲಿ ಪಾಲ್ಗೊಳ್ಳಲು ಹೋಗಿದ್ದರು. ಸಭೆಗೂ ಮುಂಚೆ ಕಾರ್ಯಕರ್ತರು ಅವರನ್ನು ಜಗನ್ನಾಥ ಮಂದಿರಕ್ಕೆ ಕರೆದೊಯ್ದರು. ಮಂದಿರದ ಆವರಣದಲ್ಲಿದ್ದ ಪ್ರವೇಶ ಶುಲ್ಕದ ಫಲಕ ಅವರ ಕಣ್ಣಿಗೆ ಬಿತ್ತು. ಜೊತೆಗಿದ್ದವರು ಟಿಕೆಟ್ ಖರೀದಿಗೆ ಮುಂದಾದರು. ಉಪಾಧ್ಯಾಯರು ಅವರನ್ನು ತಡೆದು, ‘ಹಣ ಕೊಟ್ಟು ದೇವರ ದರ್ಶನ ಪಡೆಯುವುದು ನನಗೆ ಬೇಕಾಗಿಲ್ಲ’ ಎಂದು ಅಲ್ಲಿಂದ ವಾಪಸ್ ಹೊರಟೇಬಿಟ್ಟರು.

ಪುರಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ್ದ ದೇಗುಲದ ಆಡಳಿತ ಮಂಡಳಿಯವರಿಗೆ ಉಪಾಧ್ಯಾಯರು ದೇವರ ದರ್ಶನ ಪಡೆಯದೇ ಹೋದ ಸಂಗತಿ ತಿಳಿಯಿತು. ಉಪಾಧ್ಯಾಯ ಅವರನ್ನು ಭೇಟಿಯಾಗಿ ಮಂದಿರಕ್ಕೆ ಬರುವಂತೆ ವಿನಂತಿಸಿದರು. ಆಗ ಸಣ್ಣಗೆ ನಕ್ಕ ಅವರು, ‘ಈ ಜನ್ಮದಲ್ಲಿ ಅದು ಸಾಧ್ಯವಿಲ್ಲ; ಮುಂದಿನ ಜನ್ಮ ಎನ್ನುವುದಿದ್ದರೆ ಬರುತ್ತೇನೆ’ ಎಂದು ಹೇಳಿದರು.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ನಡೆಯುವ ಆಷಾಢ ಶುಕ್ರವಾರ ಆಚರಣೆಯ ‘ವಿಶೇಷ ದರ್ಶನ’ದ ಟಿಕೆಟ್ ದರವನ್ನು ₹2 ಸಾವಿರಕ್ಕೆ ನಿಗದಿಪಡಿಸಿರುವ ವರದಿ (ಪ್ರ.ವಾ., ಜೂನ್ 12) ಓದಿದ ತಕ್ಷಣ ಈ ಪ್ರಸಂಗ ನೆನಪಾಯಿತು.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಪರಿಸರಸ್ನೇಹಿ ಕ್ರಮ

ಹೊಸ ಹೊಸ ಕೆಲಸಕ್ಕೆ ಕೈ ಹಚ್ಚಿದಾಗ,
ಅಲ್ಲಲ್ಲಿ ಕೈ ಕಚ್ಚುತ್ತೆ.
ಹಾಲಿಗೆ ಪರಿಸರಸ್ನೇಹಿ ಕವರು
ಬಳಸಿದಾಗ,
ಬೆಲೆ ಸ್ವಲ್ಪ ಹೆಚ್ಚುತ್ತೆ.
ಏನೇ ಇತಿಮಿತಿಗಳಿದ್ರೂ ದಾಟಿ,
ಆಗ್ಲಿ ಈ ಕೆಲಸ ಯಶಸ್ವಿ.
ನಮ್ಮ ಮುಂದಿನ ಪೀಳಿಗೆಗೆ
ಜ್ಞಾಪಕವಾಗಿ ಉಳೀಲಿ ಈ ಇಸ್ವಿ.

ರಾ. ಪ್ರಕಾಶ್ ಅರಸ್, ಬೆಂಗಳೂರು

ಬಡವರ ಠೇವಣಿ ಹಣಕ್ಕೆ ಭದ್ರತೆ ಬೇಕು

ಮೈಸೂರು ಜಿಲ್ಲೆಯ ಸರಗೂರು ಪಟ್ಟಣದ ಅಂಚೆ ಕಚೇರಿಯಲ್ಲಿ ಗ್ರಾಹಕರು ಠೇವಣಿ ಇಟ್ಟಿದ್ದ ಕೋಟ್ಯಂತರ ರೂಪಾಯಿಯು ಕಚೇರಿಯ ನೌಕರರಿಂದಲೇ ದುರುಪಯೋಗ ಆಗಿರುವುದು ವರದಿಯಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಅಂಚೆ ಇಲಾಖೆ ಮೇಲೆ ಸಾರ್ವಜನಿಕರು ಹೆಚ್ಚು ನಂಬಿಕೆ ಹೊಂದಿದ್ದಾರೆ. ಕಡು ಬಡವರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ಕಷ್ಟಪಟ್ಟು ದುಡಿದ ಹಣವನ್ನು ಠೇವಣಿ ಇಟ್ಟಿರುತ್ತಾರೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ಈ ಇಲಾಖೆಯಲ್ಲೇ ಹಣ ದುರುಪಯೋಗವಾದರೆ ಬಡವರ ಹಣಕ್ಕೆ ಭದ್ರತೆ ಎಲ್ಲಿಂದ ಸಿಗುತ್ತದೆ? ಈ ಪ್ರಕರಣವು ‘ಕುರಿ ಕಾಯಲು ತೋಳ ನೇಮಿಸಿದಂತೆ’ ಎಂಬ ಮಾತನ್ನು ನೆನಪಿಸುತ್ತದೆ.

ಹಣ ದುರುಪಯೋಗದ ಹಿಂದೆ ಇಲಾಖೆಯ ಹಿರಿಯ ಅಧಿಕಾರಿಗಳು ಶಾಮೀಲಾಗಿರುವ ಸಾಧ್ಯತೆಯಿದೆ. ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಬೇಕು. ದುರುಪಯೋಗ ಆಗಿರುವ ಹಣವನ್ನು ಗ್ರಾಹಕರಿಗೆ ಮರಳಿಸುವ ಕೆಲಸವೂ ತ್ವರಿತವಾಗಿ ಆಗಬೇಕಿದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಕಾಲ್ತುಳಿತ ಪ್ರಕರಣ ಎತ್ತ ಸಾಗುತ್ತಿದೆ?

ಹನ್ನೊಂದು ಜನ ಅಮಾಯಕರನ್ನು ಬಲಿ ತೆಗೆದುಕೊಂಡ ಕಾಲ್ತುಳಿತ ಪ್ರಕರಣದಲ್ಲಿ ಯಾರ್ಯಾರ ಕಡೆಗೋ ಬೊಟ್ಟು ತೋರಿಸುವ ಕೆಲಸ ನಡೆಯುತ್ತಿದೆ. ಇಂಗ್ಲೆಂಡ್‌ನಲ್ಲಿ ಪ್ರಚಲಿತದಲ್ಲಿರುವ ‘ರಾಜರು ತಪ್ಪು ಮಾಡುವುದಿಲ್ಲ’ ಎಂಬ ಸೂಕ್ತಿಯಂತೆ ಈವರೆಗೆ ಯಾವ ರಾಜಕಾರಣಿಯ ಹೆಸರೂ ಮುನ್ನೆಲೆಗೆ ಬಂದಿಲ್ಲ. ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳ ಎತ್ತಂಗಡಿಯಾಗಿದೆ. ಕೆಲವರ ವಿಚಾರಣೆ ನಡೆಯುತ್ತಿದೆ. ಆರೋಪ, ಪ್ರತ್ಯಾರೋಪ ನೋಡಿದರೆ ಅಂತಿಮವಾಗಿ ಬಲಿಯಾದವರದ್ದೇ ತಪ್ಪು ಆಗಬಹುದೇನೋ ಎನಿಸುತ್ತದೆ. ಅವಘಡ ಸಂಭವಿಸಿ ವಾರವಾದರೂ ತಪ್ಪಿತಸ್ಥರು ಯಾರು ಎನ್ನುವ ಸುಳಿವು ಇನ್ನೂ ಸಿಗುತ್ತಿಲ್ಲ!

ರಮಾನಂದ ಎಸ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದಲ್ಲಿ ನಡೆದ ಪ್ರಮುಖ ವಿಮಾನ ಅಪಘಾತಗಳು

2020, ಆ.7: ಕೋಯಿಕ್ಕೋಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಳೆಯಿಂದ ಒದ್ದೆಯಾಗಿದ್ದ ರನ್‌ವೇಯಿಂದ ಜಾರಿ ಕಂದಕಕ್ಕೆ ಬಿದ್ದಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ 1344; ವಿಮಾನದಲ್ಲಿದ್ದ 190 ಮಂದಿ ಪೈಕಿ ಇಬ್ಬರು ಪೈಲಟ್‌ಗಳು ಸೇರಿ **21** ಮಂದಿ ಸಾವು

2010, ಮೇ 22: ದುಬೈನಿಂದ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ 812 (ಬೋಯಿಂಗ್ 737-800), ರನ್‌ವೇಯಿಂದ ಕಂದಕಕ್ಕೆ ಬಿದ್ದು, **158** ಮಂದಿ ಸಾವಿಗೀಡಾಗಿದ್ದರು

2000, ಜು.17: ಅಲಯೆನ್ಸ್ ಏರ್ ವಿಮಾನ 7412 (ಬೋಯಿಂಗ್ 737-200) ಬಿಹಾರದ ಪಟ್ನಾದಲ್ಲಿ ಇಳಿಯುವ ವೇಳೆ ನಡೆದ ತಪ್ಪಿನಿಂದ ವಸತಿ ಪ್ರದೇಶದ ಮೇಲೆ ಬಿದ್ದಿತ್ತು. ನೆಲದ ಮೇಲಿದ್ದ ಐದು ಮಂದಿಯೂ ಸೇರಿ ಒಟ್ಟು **60** ಮಂದಿ ಸಾವಿಗೀಡಾಗಿದ್ದರು

1996, ನ. 12: ಸೌದಿ ವಿಮಾನ 763 (ಬೋಯಿಂಗ್ 747) ಮತ್ತು ಕಜಕಸ್ತಾನ್ ಏರ್‌ಲೈನ್ಸ್ ವಿಮಾನ 1907 (ಇಲ್ಯೂಶಿನ್ ಇಲ್–76) ಹರಿಯಾಣದ ಚರ್ಖಿ ದಾದ್ರಿ ಎಂಬಲ್ಲಿ ಆಗಸದಲ್ಲಿ ಡಿಕ್ಕಿ ಹೊಡೆದಿದ್ದವು. ಅದರ ಫಲವಾಗಿ **349** ಮಂದಿ ಮೃತರಾಗಿದ್ದರು. ಸಂವಹನದ ಕೊರತೆಯಿಂದ ಅಪಘಾತ ಸಂಭವಿಸಿತ್ತು

1990, ಫೆ. 14: ಇಂಡಿಯನ್ ಏರ್‌ಲೈನ್ಸ್ ವಿಮಾನ 605 (ಏರ್‌ಬಸ್ ಎ320) ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದ ರನ್‌ವೇ ಮೇಲೆ ಇಳಿಯುವ ಮುಂಚೆಯೇ ನೆಲಕ್ಕೆ ಅಪ್ಪಳಿಸಿತ್ತು. ವಿಮಾನದಲ್ಲಿದ್ದ **146** ಮಂದಿಯಲ್ಲಿ 92 ಮಂದಿ ಮೃತರಾಗಿದ್ದರು

1988, ಅ.19: ಮುಂಬೈನಿಂದ ಅಹಮದಾಬಾದ್‌ಗೆ ಬಂದ ಇಂಡಿಯನ್ ಏರ್‌ಲೈನ್ಸ್ ವಿಮಾನ 113 (ಬೋಯಿಂಗ್ 737-200), ರನ್‌ವೇ ಸ್ಪಷ್ಟವಾಗಿ ಕಾಣಿಸದ ಇಳಿಯುವ ಮುನ್ನವೇ ಮರಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ವಿಮಾನದಲ್ಲಿದ್ದ 135 ಮಂದಿಯ ಪೈಕಿ **133** ಮಂದಿ ಸಾವಿಗೀಡಾಗಿದ್ದರು

1978, ಜ.1: ದುಬೈಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ 855 (ಬೋಯಿಂಗ್ 747), ಮುಂಬೈನಿಂದ ಹೊರಟ ಕೆಲವೇ ಕ್ಷಣಗಳಲ್ಲಿ (101 ಸೆಕೆಂಡ್‌ಗಳಲ್ಲಿ) ಅರಬ್ಬಿ ಸಮುದ್ರಕ್ಕೆ ಬಿದ್ದಿತ್ತು. ವಿಮಾನದಲ್ಲಿದ್ದ **213** ಮಂದಿಯೂ ಮೃತರಾಗಿದ್ದರು

1973, ಮೇ 31: ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಾಗಿದ್ದ ಇಂಡಿಯನ್ ಏರ್‌ಲೈನ್ಸ್ ವಿಮಾನ 440 (ಬೋಯಿಂಗ್ 737–200) ರನ್‌ವೇ ಮುಟ್ಟುವ ಮುನ್ನವೇ ಪ್ರತಿಕೂಲ ಹವಾಮಾನದಿಂದ ರನ್‌ವೇ ಸ್ಪಷ್ಟವಾಗಿ ಕಾಣಿಸದೆ ಅಧಿಕ ಸಾಮರ್ಥ್ಯದ ವಿದ್ಯುತ್ ತಂತಿಗೆ ತಗುಲಿ ಅಪಘಾತಕ್ಕೀಡಾಗಿತ್ತು. ವಿಮಾನದಲ್ಲಿದ್ದ 65 ಮಂದಿ ಪೈಕಿ **48** ಮಂದಿ ಸಾವಿಗೀಡಾಗಿದ್ದರು

ಜಾಗತಿಕವಾಗಿ ಜನರ ನಡುವೆ ವಿಮಾನಯಾನ ಈಗ ಹೆಚ್ಚು ಜನಪ್ರಿಯವಾಗುತ್ತಿದೆ. ಭಾರತ ಸೇರಿದಂತೆ ಪ್ರಪಂಚದಾದ್ಯಂತ ವಿಮಾನಗಳಲ್ಲಿ ಸಂಚರಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿದೆ. ಅದಕ್ಕೆ ಪೂರಕವಾಗಿ ವಿಮಾನಗಳ ಹಾರಾಟದಲ್ಲೂ ಗಣನೀಯವಾಗಿ ಹೆಚ್ಚಳವಾಗಿದೆ. ಇದರ ನಡುವೆಯೇ, ವಿಮಾನಗಳು ಅಪಘಾತಕ್ಕೀಡಾಗುತ್ತಿರುವುದು ಹೆಚ್ಚುತ್ತಿದೆ. 2023ಕ್ಕೆ ಹೋಲಿಸಿದರೆ, 2024ರಲ್ಲಿ ವಿಮಾನ ಅಪಘಾತಗಳು ಹೆಚ್ಚಾಗಿವೆ ಎಂದು ಐಎಟಿಎ ವಾರ್ಷಿಕ ಸುರಕ್ಷತಾ ವರದಿ–2024 ಹೇಳಿದೆ. ವಿಮಾನಗಳ ಅಪಘಾತಕ್ಕೆ ಪ್ರಮುಖ ಕಾರಣಗಳೇನು ಎಂಬುದನ್ನು ಇಲ್ಲಿ ವಿವರಿಸಲಾಗಿದೆ

ವಿಮಾನ ಅಪಘಾತ ಹೇಗಾಗುತ್ತದೆ?

ಪ್ರಜಾವಾಣಿ ವಾರ್ತೆ

ಮಹಾ ವಿಮಾನ ದುರಂತವೊಂದು ದೇಶದಲ್ಲಿ ನಡೆದಿದೆ. ಕಳೆದ ವರ್ಷಾಂತ್ಯ, ಈ ವರ್ಷಾರಂಭದಿಂದಲೂ ಜಗತ್ತಿನ ವಿವಿಧ ಕಡೆಗಳಲ್ಲಿ ವಿಮಾನಗಳು ಅಪಘಾತ ಪ್ರಕರಣಗಳು ವರದಿಯಾಗುತ್ತಿವೆ. 2024ರ ಡಿಸೆಂಬರ್ 29ರಂದು ದಕ್ಷಿಣ ಕೊರಿಯಾದಲ್ಲಿ ಜೆಜು ಏರ್ ಇಂಟರ್‌ನ್ಯಾಷನಲ್ ವಿಮಾನವು ಮೌನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಪಘಾತಕ್ಕೀಡಾಗಿತ್ತು. ವಿಮಾನದಲ್ಲಿದ್ದ 179 ಮಂದಿ ಮೃತಪಟ್ಟಿದ್ದರು. ರೊನಾಲ್ಡ್ ರೇಗನ್ ವಾಷಿಂಗ್ಟನ್ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಅಮೆರಿಕನ್ ಏರ್‌ಲೈನ್ಸ್‌ನ ವಿಮಾನ ಮತ್ತು ಅಮೆರಿಕ ಸೇನೆಯ ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್ ನಡುವೆ ಈ ವರ್ಷದ ಜನವರಿ 29ರಂದು ಪರಸ್ಪರ ಡಿಕ್ಕಿ ಸಂಭವಿಸಿ 60ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದರು. ಆ ಬಳಿಕ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿರುವುದು ಅಹಮದಾಬಾದ್‌ನ ದುರಂತ.

> 15 ವರ್ಷಗಳ ಹಿಂದೆ ಮಂಗಳೂರಿನಲ್ಲಿ ನಡೆದಿದ್ದ ವಿಮಾನ ದುರಂತ ಸೇರಿದಂತೆ ಹೆಚ್ಚಿನ ಅಪಘಾತಗಳು ಟೇಕ್ ಆಫ್ ಆಗುವಾಗ ಇಲ್ಲವೇ ವಿಮಾನ ಇಳಿಯುವಾಗ ಸಂಭವಿಸಿದವು (ಮಂಗಳೂರಿನಲ್ಲಿ ಇಳಿಯುವಾಗ ಸಂಭವಿಸಿತ್ತು). ಜಾಗತಿಕವಾಗಿ ಸಂಭವಿಸಿರುವ ಅಪಘಾತಗಳಲ್ಲಿ ಶೇ 35ರಷ್ಟು ದುರಂತಗಳು ಟೇಕ್ ಆಫ್ ಆಗುವಾಗ ಅಥವಾ ವಿಮಾನ ಆಗಸಕ್ಕೆ ನೆಗೆದ ಕೆಲವೇ ಹೊತ್ತಿನಲ್ಲಿ ಸಂಭವಿಸಿವೆ ಎಂದು ಹೇಳುತ್ತವೆ ಅಂಕಿ ಅಂಶಗಳು

ದಕ್ಷಿಣ ಕೊರಿಯಾದಲ್ಲಿ ನಡೆದಿದ್ದ ಅಪಘಾತಕ್ಕೆ, ಹಕ್ಕಿಗಳ ಗುಂಪು ಡಿಕ್ಕಿ ಹೊಡೆದುದು ಕಾರಣ ಎಂದು ಹೇಳಲಾಗಿದೆ. ಹಕ್ಕಿಗಳ ಡಿಕ್ಕಿಯಿಂದ ಎಂಜಿನ್‌ಗೆ ಹಾನಿಯಾಗಿತ್ತು. ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಲು ಪೈಲಟ್ ಯತ್ನಿಸಿದ್ದರು. ಲ್ಯಾಂಡಿಂಗ್ ಗೇರ್ ತೆರೆದುಕೊಳ್ಳಲಿಲ್ಲ. ಹೀಗಾಗಿ ವಿಮಾನವು ರನ್‌ವೇಯಿಂದ ಜಾರಿ ಕಾಂಪೌಂಡ್‌ಗೆ ಅಪ್ಪಳಿಸಿದ್ದರಿಂದ ಭಾರಿ ದುರಂತ ಸಂಭವಿಸಿತ್ತು. ಎರಡನೇ ಪ್ರಕರಣದಲ್ಲಿ ಉಲ್ಲೇಖಿಸಿದಂತೆ ವಿಮಾನ ಮತ್ತು ಹೆಲಿಕಾಪ್ಟರ್ ನಡುವೆ ಸಂಭವಿಸಿದ ಡಿಕ್ಕಿ ಅವಘಡಕ್ಕೆ ಕಾರಣ.

ಭಾರತ ಸೇರಿದಂತೆ ಜಗತ್ತಿನಲ್ಲಿ ಸಂಭವಿಸಿದ ವಿಮಾನ ಅಪಘಾತಗಳ ಇತಿಹಾಸ ಕೆದಕುತ್ತಾ ಹೋದರೆ, ವಿಮಾನ ಅಪಘಾತ ಕಾರಣವಾಗುವ ಹಲವು ಅಂಶಗಳು ಸಿಗುತ್ತವೆ. ವೈಮಾನಿಕ ಕ್ಷೇತ್ರದ ತಜ್ಞರು ವಿಮಾನಗಳ ಅಪಘಾತಕ್ಕೆ ಹಲವು ಕಾರಣಗಳನ್ನು ಪಟ್ಟಿ ಮಾಡುತ್ತಾರೆ.

ಪೈಲಟ್/ಮಾನವ ಲೋಪ

ಈಗಿನ ವಿಮಾನಗಳು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದ್ದು, ಹೆಚ್ಚು ಸುರಕ್ಷಿತ ಎಂಬ ಅಭಿಪ್ರಾಯ ಇದೆ. ಹಾಗಿದ್ದರೂ ಪೈಲಟ್‌ಗಳು ಅಥವಾ ವಿಮಾನದ ಸಿಬ್ಬಂದಿ, ಎಟಿಸಿ ಸಿಬ್ಬಂದಿ/ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುವ ಸಿಬ್ಬಂದಿ ಮಾಡುವ ಪ್ರಮಾದದಿಂದ ಅಪಘಾತಗಳು ಸಂಭವಿಸಬಹುದು. ವಿಮಾನ ನಿರ್ವಹಣಾ ಕಂಪ್ಯೂಟರ್‌ಗಳನ್ನು (ಎಫ್‌ಎಂಸಿ) ಸಮರ್ಪಕವಾಗಿ ಪ್ರೋಗ್ರಾಮ್ ಮಾಡದೇ ಇದ್ದರೆ ಅಥವಾ ಪೈಲಟ್‌ಗಳ ಲೆಕ್ಕಾಚಾರ ತಪ್ಪಾದರೆ ಅಪಘಾತ ಸಂಭವಿಸುತ್ತವೆ ಎಂದು ಹೇಳುತ್ತಾರೆ ತಜ್ಞರು

ತಾಂತ್ರಿಕ ವೈಫಲ್ಯ

ಇದು ದುರಂತಗಳಿಗೆ ಮತ್ತೊಂದು ಪ್ರಮುಖ ಕಾರಣ. ಅಂದಾಜಿನ ಪ್ರಕಾರ, ಶೇ 20ರಷ್ಟು ಅಪಘಾತಗಳು ಈ ಕಾರಣಕ್ಕೆ ಆಗುತ್ತವೆ. ಹಾರಾಟದ ನಡುವೆ ಎಂಜಿನ್ ವಿಫಲವಾಗುವುದು, ಲ್ಯಾಂಡಿಂಗ್ ಗೇರ್ ಸಮಸ್ಯೆ, ಹೈಡ್ರಾಲಿಕ್ಸ್ ವ್ಯವಸ್ಥೆಯಲ್ಲಿ ದೋಷ, ಇನ್ನಿತರ ತಾಂತ್ರಿಕ ಸಮಸ್ಯೆಗಳು ಭಾರಿ ಅನಾಹುತವನ್ನು ಉಂಟು ಮಾಡಬಹುದು

ಪ್ರತಿಕೂಲ ಹವಾಮಾನ

ಭಾರಿ ಮಳೆ, ಬಿರುಗಾಳಿ, ಮಂಜು ಸೇರಿದಂತೆ ಪ್ರತಿಕೂಲ ಹವಾಮಾನ ಪರಿಸ್ಥಿತಿ ಕೂಡ ಅಪಘಾತಕ್ಕೆ ಕಾರಣ ಆಗಬಹುದು. ಪ್ರತಿಕೂಲ ಹವೆಯ ಸಂದರ್ಭದಲ್ಲೂ ಪೈಲಟ್‌ಗಳಿಗೆ ವಿಮಾನ ಚಾಲನೆಗೆ ಅನುಕೂಲ ಕಲ್ಪಿಸುವಂತಹ ಆಧುನಿಕ ವ್ಯವಸ್ಥೆಗಳಿದ್ದರೂ (ಉಪಗ್ರಹ ಆಧಾರಿತ ಪಥದರ್ಶಕ, ಭ್ರಮಣ ದರ್ಶಕ ಇತ್ಯಾದಿ) ಕೆಲವು ಬಾರಿ ಇವು ಉಪಯೋಗಕ್ಕೆ ಬಾರದಿರಬಹುದು. ನೇಪಾಳದಲ್ಲಿ ಸಂಭವಿಸಿದ ಕೆಲವು ಅಪಘಾತಗಳ ಹಿಂದಿನ ಕಾರಣ ಪ್ರತಿಕೂಲ ಹವಾಮಾನವಾಗಿತ್ತು. ಕಳೆದ ತಿಂಗಳು ಇಂಡಿಗೊ ವಿಮಾನವೊಂದು ಪಠಾಣ್‌ಕೋಟ್ ಆಗಸದಲ್ಲಿ ಹಾರಾಡುತ್ತಿರುವಾಗ ಆಲಿಕಲ್ಲು ಬಡಿದು ಮತ್ತು ಪ್ರಕ್ಷುಬ್ಧ ಹವಾಮಾನದ (ಟರ್ಬುಲೆನ್ಸ್) ಮಧ್ಯೆ ಸಿಲುಕಿಕೊಂಡಿತ್ತು. ಲಾಹೋರ್ ವಿಮಾನ ನಿಲ್ದಾಣದಲ್ಲಿ ತುರ್ತಾಗಿ ಇಳಿಯಲು ಪಾಕಿಸ್ತಾನ ಅವಕಾಶ ಕೊಡದೇ ಇದ್ದುದರಿಂದ ನಂತರ ವಿಮಾನದ ಪೈಲಟ್ ಶ್ರೀನಗರದ ವಿಮಾನನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸಿದ್ದರು. ವಿಮಾನದ ಮೂತಿಗೆ ಹಾನಿಯಾಗಿತ್ತು

> ಟೇಕ್ ಆಫ್ ಸಂದರ್ಭದಲ್ಲಿ ವಿಮಾನದ ಹಿಂಭಾಗ ರನ್‌ವೇಗೆ ಉಜ್ಜುವುದು, ಇಳಿದ ಸಂದರ್ಭದಲ್ಲಿ ವಿಮಾನ ನಿಯಂತ್ರಣಕ್ಕೆ ಸಿಗದೆ ರನ್‌ವೇನಿಂದ ಜಾರುವುದು, ಸರಾಗವಾಗಿ ವಿಮಾನ ಇಳಿಯಲು ಸಾಧ್ಯವಾಗದಿರುವುದು ಅಥವಾ ಹಾರ್ಡ್ ಲ್ಯಾಂಡಿಂಗ್ ಕೂಡ ಅಪಘಾತಕ್ಕೆ ಕಾರಣಗಳಾಗಬಹುದು

ವಿಧ್ವಂಸಕ ಕೃತ್ಯ

ಭಯೋತ್ಪಾದನೆ ಅಥವಾ ವಿಧ್ವಂಸಕ ಕೃತ್ಯ ಸಂಘಟಿಸಲು ವಿಮಾನಗಳನ್ನು ಅಪಹರಿಸಿ, ಅವುಗಳನ್ನು ಉದ್ದೇಶಪೂರ್ವಕವಾಗಿ ಪತನಗೊಳಿಸುವ ಅಪಾಯವೂ ಇದೆ. ಅಲ್‌ಕೈದಾ ಸಂಘಟನೆಯ ಉಗ್ರರು 2001ರಲ್ಲಿ (9/11) ಅಮೆರಿಕದಲ್ಲಿ ಎರಡು ವಿಮಾನಗಳನ್ನು ಅಪಹರಣ ಮಾಡಿ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಕಟ್ಟಡಗಳಿಗೆ ಡಿಕ್ಕಿ ಹೊಡೆಸಿದ್ದು ಇದಕ್ಕೆ ಉದಾಹರಣೆ

ಹಕ್ಕಿಗಳ ಡಿಕ್ಕಿ

ವಿಮಾನ ವೇಗವಾಗಿ ಹಾರಾಟ ನಡೆಸುತ್ತಿರುವಾಗ ಎದುರಿಂದ ಏನಾದರೂ ವಸ್ತು ಬಡಿದರೆ ಅದು ದುರಂತಕ್ಕೆ ಕಾರಣವಾಗಬಹುದು. ಎತ್ತರದ ಆಗಸದಲ್ಲಿ ಹಾರಾಡುವ ಹಕ್ಕಿಗಳು ವಿಮಾನಕ್ಕೆ ಡಿಕ್ಕಿ ಹೊಡೆದು ವಿಮಾನಕ್ಕೆ ಹಾನಿ ಮಾಡಿರುವ, ಎಂಜಿನ್ ವೈಫಲ್ಯಕ್ಕೆ ಕಾರಣವಾಗಿರುವ ಉದಾಹರಣೆಗಳು ಹಲವು ಇವೆ

ರನ್‌ವೇಗೆ ಹಾನಿ

ರನ್‌ವೇಗೆ ಹಾನಿಯಾಗಿದ್ದರೆ ಅಥವಾ ವಿಮಾನ ಇಳಿಯುವ ಸಂದರ್ಭದಲ್ಲಿ ರನ್‌ವೇನಲ್ಲಿ ಜಾನುವಾರುಗಳೋ ಅಥವಾ ಬೇರೆ ವಿಮಾನ ಇರುವುದೋ ಅಥವಾ ಇತರೆ ಯಾವುದೇ ದೊಡ್ಡ ವಸ್ತು ಇರುವುದು ಪೈಲಟ್ ಗಮನಕ್ಕೆ ಬಾರದೇ ಇದ್ದರೆ ಅಪಘಾತ ಸಂಭವಿಸುವುದು ಖಚಿತ

ಆಧಾರ: ಅಂತರರಾಷ್ಟ್ರೀಯ ವಾಯು ಸಾರಿಗೆ ಒಕ್ಕೂಟದ (ಐಎಟಿಎ) ವಾರ್ಷಿಕ ಸುರಕ್ಷತಾ ವರದಿ–2024, ಬಿಬಿಸಿ, ರಾಯಿಟರ್ಸ್, ಪಿಐಬಿ ಪ್ರಕಟಣೆ ಮಾಧ್ಯಮ ವರದಿಗಳು

2024ರಲ್ಲಿ ವಿಮಾನ ಅಪಘಾತಗಳು: ಒಂದು ನೋಟ

46 ಸಂಭವಿಸಿದ್ದ ಪ್ರಮುಖ ವಿಮಾನ ಅಪಘಾತಗಳು

9% 2023ಕ್ಕೆ ಹೋಲಿಸಿದರೆ ಅಪಘಾತದಲ್ಲಿ ಆದ ಹೆಚ್ಚಳ

7 ಜೀವಹಾನಿಗೆ ಕಾರಣವಾದ ಪ್ರಕರಣಗಳು

244 ಮೃತಪಟ್ಟ ಪ್ರಯಾಣಿಕರು ಮತ್ತು ಸಿಬ್ಬಂದಿ

7 ವಿಮಾನಗಳ ಅಪಘಾತದಿಂದ ಮೃತಪಟ್ಟ ಇತರರು (ಪ್ರಯಾಣಿಕರು, ಸಿಬ್ಬಂದಿ ಅಲ್ಲದವರು)

0.06 2024ರಲ್ಲಿ ಪ್ರತಿ 10 ಲಕ್ಷ ವಿಮಾನ ಪ್ರಯಾಣದಲ್ಲಿ (per million sectors) ಇದ್ದ ಸಾವಿನ ಅಪಾಯದ ದರ

0.03 2023ರಲ್ಲಿ ಪ್ರತಿ 10 ಲಕ್ಷ ವಿಮಾನ ಪ್ರಯಾಣದಲ್ಲಿ ಇದ್ದ ಸಾವಿನ ಅಪಾಯದ ದರ

2024ರಲ್ಲಿ ಪ್ರತಿ 1,81,541 ವಿಮಾನ ಪ್ರಯಾಣಕ್ಕೆ ಒಂದು ಅಪಘಾತ ಸಂಭವಿಸಿದೆ

2024ರಲ್ಲಿ ಜನರನ್ನು ಬಲಿ ಪಡೆದ ದುರಂತಗಳಿಗೆ ಕಾರಣಗಳು

- ವಿಮಾನ ನಿಯಂತ್ರಣ ಕಳೆದುಕೊಂಡಿದ್ದು
- ರನ್ ವೇಗೆ ಆದ ಹಾನಿ
- ಆಗಸದಲ್ಲಿ ಪರಸ್ಪರ ಡಿಕ್ಕಿ

ಜೀವ ಹಾನಿ ಉಂಟು ಮಾಡದ ಅಪಘಾತಗಳಿಗೆ ಕಾರಣಗಳು

ವಿಮಾನದ ಹಿಂಭಾಗ ರನ್‌ವೇಗೆ ಉಜ್ಜಿದ್ದು	ರನ್‌ವೇನಿಂದ ವಿಮಾನಗಳು ಜಾರಿದ್ದು	ಲ್ಯಾಂಡಿಂಗ್ ಗೇರ್ ಸಮಸ್ಯೆ	ರನ್ ವೇಗೆ ಹಾನಿ	ವಿಮಾನವು ರನ್‌ವೇ ಬಿಟ್ಟು ನೆಲ ಸ್ಪರ್ಶ	ವಿಮಾನದ ಒಳಗೆ ಹಾನಿ	ಬಿರುಸಾಗಿ ಭೂ ಸ್ಪರ್ಶ (ಹಾರ್ಡ್ ಲ್ಯಾಂಡಿಂಗ್)

1.20 ಕೋಟಿಗೂ ಹೆಚ್ಚು ಪ್ರತಿ ದಿನ ಜಾಗತಿಕವಾಗಿ ವಿಮಾನದಲ್ಲಿ ಪ್ರಯಾಣಿಸುತ್ತಿರುವರ ಸಂಖ್ಯೆ

1 ಲಕ್ಷಕ್ಕೂ ಹೆಚ್ಚು ಜಗತ್ತಿನಲ್ಲಿ ಪ್ರತಿ ದಿನ ಸಂಚರಿಸುವ ಅಂದಾಜು ವಿಮಾನಗಳು

5.05 ಲಕ್ಷ ಭಾರತದಲ್ಲಿ ಪ್ರತಿ ದಿನ ವಿಮಾನದಲ್ಲಿ ಪ್ರಯಾಣಿಸುತ್ತಿರುವವರು

3,100 ದೇಶಿಯವಾಗಿ ಪ್ರತಿ ದಿನ ಭಾರತದಲ್ಲಿ ಹಾರಾಡುತ್ತಿರುವ ವಿಮಾನಗಳು

ಕಪ್ಪು ಪೆಟ್ಟಿಗೆ ಬಹುಮುಖ್ಯ

ಅಪಘಾತಕ್ಕೆ ಏನು ಕಾರಣ ಎನ್ನುವುದನ್ನು ವಿಮಾನದಲ್ಲಿರುವ ಬ್ಲ್ಯಾಕ್‌ಬಾಕ್ಸ್ ಅಥವಾ ಕಪ್ಪು ಪೆಟ್ಟಿಗೆಯಲ್ಲಿರುವ ದತ್ತಾಂಶಗಳು ಹೇಳುತ್ತವೆ. ಫ್ಲೈಟ್ ಡೇಟಾ ರೆಕಾರ್ಡರ್ ಎಂದು ಕರೆಯಲಾಗುವ ಕಿತ್ತಳೆ ಬಣ್ಣದ ಈ ಸಾಧನದಲ್ಲಿ ವಿಮಾನಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಗಳು ಅಂದರೆ, ಅಪಘಾತಕ್ಕೂ ಮೊದಲು ವಿಮಾನದ ವೇಗ, ಎತ್ತರ, ಮಾರ್ಗ ನಕ್ಷೆ ಸೇರಿದಂತೆ ಎಲ್ಲ ತಾಂತ್ರಿಕ ವಿವರಗಳೂ ದಾಖಲಾಗುತ್ತಿರುತ್ತವೆ. ಬೆಂಕಿ, ಸ್ಫೋಟ ಸೇರಿದಂತೆ ಯಾವುದೇ ಸ್ವರೂಪದ ಅವಘಡ ನಡೆದಿದ್ದರೂ ಹಾನಿಗೀಡಾಗದ ರೀತಿಯಲ್ಲಿ ಈ ಬ್ಲ್ಯಾಕ್ ಬಾಕ್ಸ್ ಅನ್ನು ರೂಪಿಸಲಾಗುತ್ತಿರುತ್ತದೆ. ಸಾಮಾನ್ಯವಾಗಿ ಒಂದು ವಿಮಾನದಲ್ಲಿ ಎರಡು ಬ್ಲ್ಯಾಕ್ ಬಾಕ್ಸ್‌ಗಳನ್ನು ಅಳವಡಿಸಲಾಗಿರುತ್ತದೆ.

ವಿಶ್ವದ ಕೆಲವು ಪ್ರಮುಖ ವಿಮಾನ ದುರಂತಗಳು

2020, ಜ.8: ಉಕ್ರೇನ್ ಏರ್‌ಲೈನ್ಸ್ ವಿಮಾನವು ಇರಾನ್ ರಾಜಧಾನಿ ಟೆಹರಾನ್‌ನಿಂದ ಟೇಕ್ ಆಫ್ ಆದ ಕೆಲ ಹೊತ್ತಿನಲ್ಲೇ ಪತನಗೊಂಡಿತ್ತು. ವಿಮಾನದಲ್ಲಿದ್ದ **176** ಮಂದಿ ಸಾವಿಗೀಡಾಗಿದ್ದರು. ತಾನೇ ವಿಮಾನವನ್ನು ಹೊಡೆದುರುಳಿಸಿದ್ದಾಗಿ ಇರಾನ್ ಸರ್ಕಾರ ನಂತರ ಒಪ್ಪಿಕೊಂಡಿತ್ತು

2019, ಮಾ.10: ಇಥಿಯೋಪಿಯಾ ಏರ್‌ಲೈನ್ಸ್‌ನ ಬೋಯಿಂಗ್ 737 ಮ್ಯಾಕ್ಸ್ ವಿಮಾನವು ಅಡಿಸ್ ಅಬಾಬಾದಿಂದ ಟೇಕ್ ಆಫ್ ಆದ ಆರು ನಿಮಿಷಗಳ ನಂತರ ಪತನಗೊಂಡಿತ್ತು. ವಿಮಾನದಲ್ಲಿದ್ದ **157** ಮಂದಿ ಮೃತಪಟ್ಟಿದ್ದರು

2018 ಅ.29: ಲಯನ್ ಏರ್‌ನ ಬೋಯಿಂಗ್ 737 ಮ್ಯಾಕ್ಸ್ ವಿಮಾನವು ಜಕಾರ್ತಾದಿಂದ ಹೊರಟ ಕೆಲವೇ ಕ್ಷಣಗಳಲ್ಲಿ ಜಾವಾ ಸಮುದ್ರದಲ್ಲಿ ಪತನಗೊಂಡಿತ್ತು. ಅದರಲ್ಲಿದ್ದ **189** ಮಂದಿ ಸಾವಿಗೀಡಾಗಿದ್ದರು

2018 ಮೇ 18: ಹವಾನಾದ ಜೋಸ್ ಮಾರ್ಟಿ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಕೆಲವೇ ಕ್ಷಣಗಳಲ್ಲಿ ಬೋಯಿಂಗ್ 737 ವಿಮಾನವು ಪತನಗೊಂಡಿತ್ತು. ವಿಮಾನದಲ್ಲಿದ್ದವರ ಪೈಕಿ **112** ಮಂದಿ ಸಾವಿಗೀಡಾದರೆ, ಒಬ್ಬರು ಮಾತ್ರ ಬದುಕುಳಿದಿದ್ದರು

2018 ಏ.11: ಅಲ್ಜೀರಿಯಾದ ರಾಜಧಾನಿ ಅಲ್ಜೀರ್ಸ್‌ನಿಂದ ಹೊರಟ ಸೇನಾ ವಿಮಾನ ಪತನಗೊಂಡು **257** ಮಂದಿ ಮೃತಪಟ್ಟಿದ್ದರು

2016, ನ.28: ಬ್ರೆಜಿಲ್‌ನ ಕ್ಲಬ್‌ವೊಂದರ ಫುಟ್‌ಬಾಲ್ ತಂಡವನ್ನು ಒಯ್ಯುತ್ತಿದ್ದ ವಿಮಾನವು ಇಂಧನ ಖಾಲಿ ಆಗಿದ್ದರಿಂದಾಗಿ ಕೊಲಂಬಿಯಾದ ಮೆಡೆಲ್ಲಿನ್ ಬಳಿ ಪತನಗೊಂಡಿತ್ತು. ಆಟಗಾರರು ಸೇರಿ **71** ಮಂದಿ ಮೃತಪಟ್ಟಿದ್ದರು

2015, ಅ.31: ರಷ್ಯನ್ ಏರ್‌ಲೈನ್ ಕೊಗಲಿಮೆವಿಯಾ ಕಾರ್ಯಾಚರಿಸುವ ಏರ್‌ಬಸ್ ಎ321 ವಿಮಾನವು ಶರ್ಮ್ ಅಲ್ ಶೇಖ್‌ನಿಂದ ಟೇಕ್ ಆಫ್ ಆದ 22 ಗಂಟೆಗಳ ನಂತರ ಪತನಗೊಂಡಿತ್ತು. ಅದರಲ್ಲಿದ್ದ **224** ಮಂದಿ ಮೃತರಾಗಿದ್ದರು. ಸಿರಿಯಾ ಮೇಲೆ ರಷ್ಯಾ ದಾಳಿ ಮಾಡಿದ್ದಕ್ಕೆ ಪ್ರತಿಯಾಗಿ ಈ ಕೃತ್ಯ ಎಸಗಿದ್ದಾಗಿ ಇಸ್ಲಾಮಿಕ್ ಸ್ಟೇಟ್ ಹೇಳಿಕೊಂಡಿತ್ತು

2014 ಜು.17: ಮಲೇಷ್ಯಾ ಏರ್‌ಲೈನ್ಸ್‌ನ ಎಂಎಚ್17 ಪೂರ್ವ ಉಕ್ರೇನ್‌ನ ಗ್ರಾಬೋವ್ ಸನಿಹ ಪತನಗೊಂಡಿತ್ತು. ಅದರಲ್ಲಿದ್ದ 298 ಮಂದಿ ಸಾವಿಗೀಡಾಗಿದ್ದರು. ರಷ್ಯಾ ಬೆಂಬಲಿತ ಬಂಡುಕೋರರು ಘಟನೆಗೆ ಕಾರಣ ಎನ್ನುವ ಆರೋಪಗಳು ಕೇಳಿಬಂದವು

2014, ಮಾ. 8: ಕೌಲಾಲಂಪುರದಿಂದ ಬೀಜಿಂಗ್‌ಗೆ ಹೊರಟಿದ್ದ ಮಲೇಷ್ಯಾ ಏರ್‌ಲೈನ್ಸ್‌ನ ಎಂಎಚ್370 ವಿಮಾನವು ಕಣ್ಮರೆಯಾಗಿತ್ತು. ಅದರಲ್ಲಿ 239 ಜನರಿದ್ದರು ಕಣ್ಮರೆಯು ವಿಮಾನಯಾನ ಇತಿಹಾಸದಲ್ಲಿ ಒಂದು ನಿಗೂಢವಾಗಿಯೇ ಉಳಿದಿದೆ

ಗುಂಡಣ್ಣ



ಎಲ್ಲಾ ಮಾತುಗಳೂ ಕೋಪದಲ್ಲೇ ಕೊನೆಯಾಗಬೇಕಿಲ್ಲ

ನುಡಿ ಬೆಳಗು

ದಯಾ ಗಂಗನಘಟ್ಟ

ಆಫೀಸಿಗೆ ತಡವಾಯಿತೆಂದು ಗಡಿಬಿಡಿಯಲ್ಲಿ ಮೆಟ್ರೋ ಸ್ಟೇಷನ್‌ಗೆ ಬಂದ ಗೀತಾ ಅವಸರದಲ್ಲಿ ಈಗಾಗಲೇ ಇದ್ದ ಕ್ಯೂನಲ್ಲಿ ಹೋಗಿ ನಿಂತಳು. ಇನ್ನೇನು ಮೂರು ನಿಮಿಷವಿತ್ತು ಟ್ರೇನ್ ಬರಲು. ಅವಳ ಮುಂದೆ ಮೂರು ಜನ ಅವಳಂತೆಯೇ ತಡವಾದವರು ಚಡಪಡಿಕೆಯಲ್ಲಿ ಕಾಯುತ್ತಾ ನಿಂತಿದ್ದರು. ಅಷ್ಟರಲ್ಲಿ ಟಿಪ್‌ಟಾಪಾಗಿ ಡ್ರೆಸ್ ಮಾಡಿಕೊಂಡಿದ್ದ ಸುಮಾರು 25–26 ವರ್ಷ ವಯಸ್ಸಿನ ಯುವಕನೊಬ್ಬ ಕಿವಿಗೆ ಇಯರ್ ಫೋನ್ ಸಿಗಿಸಿಕೊಂಡು ಯಾರ ಜೊತೆಯೋ ಮಾತಾಡಿಕೊಂಡು ಹಿಂದಿನಿಂದ ಬಂದವನೇ ಅವಳನ್ನೂ ಸೇರಿದಂತೆ ಮುಂದಿದ್ದ ವಯಸ್ಸಾದ ವ್ಯಕ್ತಿಯನ್ನು ತಳ್ಳಿದವನು ಅದರ ಗಮನವೂ ಇಲ್ಲದವನಂತೆ ಸೀದಾ ಹೋಗಿ ಸಾಲಿನ ಮುಂದಕ್ಕೆ ನಿಂತುಬಿಟ್ಟ. ತಾನು ಮಾಡಿದ್ದು ತಪ್ಪು ಎಂಬ ಸಣ್ಣ ತಿಳಿವಳಿಕೆಯೂ ಆತನ ಮುಖದ ಮೇಲಿರಲಿಲ್ಲ. ಗೀತಾ, 'ನೋಡ್ಕೊಂಡು ಹೋಗಪ್ಪಾ' ಎಂದಿದ್ದನ್ನು ಕೇಳಿಸಿಕೊಳ್ಳಲೂ ಇಲ್ಲ.

ಎಲ್ಲರೂ ಅಲ್ಲೇ ಮುಂದೆ ನಿಂತಿದ್ದ ಸೆಕ್ಯುರಿಟಿ ಮಹಿಳೆಯ ಕಡೆ ಅವನಿಗೆ ಬುದ್ಧಿ ಹೇಳಬಾರದೇ ಎಂಬಂತೆ ನೋಡಿದರು. ಆಕೆ ಆತನ ಬಳಿ ಹೋಗಿ ಅವನನ್ನು ನೋಡಿ ನಕ್ಕಳು. ಅವಳ ನಗು ಅದೆಷ್ಟು ಚಂದವಿತ್ತು ಅಂದರೆ ಆ ಹುಡುಗ ತಾನೂ ನಕ್ಕ. ಅವಳು 'ಕೆಲಸಕ್ಕೆ ತಡವಾಯ್ತಾ ಸರ್' ಅಂದಳು. ಅವನು 'ಯಾ ಯಾ' ಅಂದ. 'ಏನು ಸಾಫ್ಟ್‌ವೇರ್ ಕೆಲಸಾನ, ಯಾವ ಕಂಪನಿ' ಅಂದಳು. ಅವನು ತುಸು ಹೆಮ್ಮೆಯಿಂದ ಯಾವುದೋ ಕಂಪನಿಯ ಹೆಸರು ಹೇಳಿದ, ಇವಳು ಅಬ್ಬಾ ಎಂಬಂತೆ ಕಣ್ಣು ಅರಳಿಸಿ ನಕ್ಕಳು. ಇವರಿಗೆಲ್ಲಾ ಭಲೇ ಕೋಪ. ಬೈಯುವುದು ಬಿಟ್ಟು ಕಣಿ ಹೇಳ್ತಿದೆಯಲ್ಲ ಈ ಯಮ್ಮ ಅಂತ, ಆಕೆಯನ್ನೇ ದುರುಗುಟ್ಟಿ ನೋಡಿದರು. ಆಕೆ ಮತ್ತೆ ಕೇಳಿದಳು. 'ಹಾಗಾದರೆ ಎಂಜಿನಿಯರಿಂಗ್ ಓದಿದ್ದೀರಿ. ತಂದೆ ತಾಯಿ ಚೆನ್ನಾಗಿ ಓದಿಸಿದ್ದಾರೆ ಅಲ್ವಾ' ಹುಡುಗ ಜಂಬದಿಂದ ತಲೆ ಆಡಿಸಿದ. ಮತ್ತೊಮ್ಮೆ ಚಂದಗೆ ನಕ್ಕ ಅವಳು 'ನೋಡಿ ಸರ್ ಮನೆಯ ತೊಂದರೆಗಳ ಕಾರಣ ನನಗೆ ಹೆಚ್ಚು ಓದಲು ಆಗಲೇ ಇಲ್ಲ. ಆದರೆ ಇಲ್ಲಿ ಬರೆದಿದ್ದಾರಲ್ಲ 'ಸರತಿ ಸಾಲಿನಲ್ಲಿ ನಿಲ್ಲಿ. Stand in Queue' ಎಂಬುದನ್ನು ಓದುವಷ್ಟು ಕಲಿತಿದ್ದೇನೆ ಸರ್. ಅದನ್ನು ಅಚ್ಚುಕಟ್ಟಾಗಿ ಪಾಲಿಸ್ತೀನಿ ಸರ್' ಎಂದಳು ನಗುನಗುತ್ತಲೇ. ಆ ಹುಡುಗ ತೆಪ್ಪಗೆ ನಗುತ್ತಾ ಸರತಿ ಸಾಲಿಗೆ ಬಂದು ನಿಂತ.

ಎಲ್ಲಾ ಸಮಯದಲ್ಲೂ ದನಿ ಎತ್ತರಿಸಿ, ಕಿರುಚಿಯೇ ವಿಷಯವನ್ನು ಅರ್ಥ ಮಾಡಿಸಬೇಕಿಲ್ಲ. ಎಲ್ಲಾ ಮಾತುಗಳೂ ಕೋಪದಲ್ಲೇ ಕೊನೆಯಾಗಬೇಕಿಲ್ಲ. ಬಹಳ ತಣ್ಣಗೆಯೂ ನಮ್ಮ ವಿಚಾರಗಳನ್ನು ದಾಟಿಸಬಹುದು ಅನ್ನೋದು ಇವತ್ತಿನ ಕೂಗುಮಾರಿ ಕಾಲದಲ್ಲಿ ನಾವು ಕಲಿಯಬೇಕಾದ ವಿಷಯ ಅಲ್ವಾ?

'ಪ್ರಜಾವಾಣಿ'ಯ ಗುರುವಾರದ (ಜೂನ್ 12) ಸಂಚಿಕೆಯ 'ನುಡಿ ಬೆಳಗು' ಅಂಕಣದಲ್ಲಿ 'ಸಹಜ ಪ್ರೀತಿ' ಬರಹ ಪ್ರಕಟವಾಗಿದೆ. ಅದನ್ನು ಬರೆದವರು ದೀಪಾ ಹಿರೇಗುತ್ತಿ ಎಂದು ಮುದ್ರಿತವಾಗಿದೆ. ಆದರೆ, ಅದನ್ನು ಬರೆದವರು ಪಿ.ಚಂದ್ರಿಕಾ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 13, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದ್ವಿತೀಯ ಗಂ. 15-19 ನಕ್ಷತ್ರ: ಪೂರ್ವಾಷಾಢ ಗಂ. 23-21 ಯೋಗ: ಶುಕ್ಲ (ಶುಕ್ರ) ಗಂ. 13-48, ವೃಷಭ ಮಾಸದ 30 ನೇ ದಿನ. ಮಳೆ ನಕ್ಷತ್ರ : ಮೃಗಶಿರ 2 ನೇ ಪಾದ.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 16 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 2, 3

ಮೇಷ: ಸದಾಕಾಲ ಪಕ್ಕದಲ್ಲಿಯೇ ಇರುವ ಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ, ಖಂಡಿತವಾಗಿ ಜಯಶಾಲಿಯಾಗುವಿರಿ. ದೈಹಿಕ ಶ್ರಮ ಜಾಸ್ತಿಯಾದರೂ ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ.

ವೃಷಭ: ಒಳಾಂಗಣ ವಿನ್ಯಾಸಕಾರರಿಗೆ ಅಧಿಕ ಬೇಡಿಕೆ ಮತ್ತು ವರಮಾನ ಇರುತ್ತದೆ. ಕಾರ್ಯಕ್ಷೇತ್ರದಲ್ಲಿ ಯಶಸ್ಸನ್ನು ಕಾಣಬಹುದು. ಮಹಿಳೆಯರು ಆಭರಣ ಕೊಳ್ಳಲಿದ್ದಾರೆ.

ಮಿಥುನ: ತಪ್ಪುಗಳನ್ನು ಹುಡುಕುವವರ ಜತೆಯಲ್ಲಿಯೇ ಈ ದಿನ ಇರಬೇಕಾಗುತ್ತದೆ. ಸಾರಿಗೆ ವ್ಯವಸ್ಥೆಯಲ್ಲಿ ಅಥವಾ ಸಂಪರ್ಕ ಮಾಧ್ಯಮದಲ್ಲಿ ಸೇವೆ ಸಲ್ಲಿಸುವವರಿಗೆ ಅಧಿಕ ಒತ್ತಡ.

ಕರ್ಕಾಟಕ: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಆರ್ಥಿಕವಾಗಿ ಮುಂದುವರಿಯಲು ಸಹಾಯವಾಗುತ್ತದೆ. ಮಿತ್ರರೊಬ್ಬರು ಎಲ್ಲ ರೀತಿಯಲ್ಲಿಯೂ ಸಹಾಯ ಮಾಡಲಿದ್ದಾರೆ.

ಸಿಂಹ: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಏರಿಳಿತದ ನಡುವಿನ ಜೀವನ ಹೊಸ ಅನುಭವವನ್ನು ನೀಡುವುದು. ಸಾಮಾಜಿಕವಾಗಿ ಹೆಸರು ಮಾಡುವ ಉದ್ದೇಶದಿಂದ ವಿಭಿನ್ನ ವಿಷಯಗಳಲ್ಲಿ ತೊಡಗಿಸಿಕೊಳ್ಳುವಿರಿ.

ಕನ್ಯಾ: ವಿಳಂಬವಾಗಿದ್ದ ಕಾರ್ಯಗಳು ಚುರುಕುಗೊಂಡು ಅನುಕೂಲ ಒದಗಿ ಬರಲಿದೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಬೇಕಾದ ಆರ್ಥಿಕ ವ್ಯವಸ್ಥೆಯು ಸಿಗುವುದು. ಅಧಿಕಾರಿಗಳ ವಿಶ್ವಾಸ ಗೆಲ್ಲುವಲ್ಲಿ ಯಶಸ್ವಿಯಾಗುವಿರಿ.

ತುಲಾ: ಸತ್ಕಾರ್ಯಗಳ ನಿರ್ವಹಣೆಗೆ ಸಹಕಾರ ಕೋರಿ ಬರುವವರಿಗೆ ನಿಮ್ಮಿಂದಾಗುವ ಸಹಾಯವನ್ನು ಮಾಡಿ ಪುಣ್ಯ ಸಂಪಾದಿಸುವಿರಿ. ಮಕ್ಕಳ ಓದಿನ ಬಗ್ಗೆ ಚಿಂತಿಸಬೇಕಾಗಿಲ್ಲ. ಎಲ್ಲವು ಎಣಿಕೆಯಂತೆ ನಡೆಯುವುದು.

ವೃಶ್ಚಿಕ: ಸ್ವಂತ ಕೆಲಸಕ್ಕಾಗಿ ಹೊಸ ಅಧಿಕಾರಿಗಳನ್ನು ಭೇಟಿ ಮಾಡಲು ಇದು ಒಳ್ಳೆಯ ದಿನ. ಪ್ರಾಮಾಣಿಕತೆಯಿಂದ ಮೇಲಧಿಕಾರಿಗಳ ನಂಬಿಕೆ ಪಡೆಯುವಿರಿ. ಭೂತಕಾಲದ ಕಹಿ ನೆನಪುಗಳು ನಿಮ್ಮನ್ನು ಕಾಡಬಹುದು.

ಧನು: ಎಲ್ಲಾ ಸನ್ನಿವೇಶಗಳು ನಿಮ್ಮ ಪರ ಇರುವುದರಿಂದ ನಿರಾಳವಾಗಿ ಮುಂದುವರಿಯಬಹುದು. ಕಾರ್ಮಿಕ ವರ್ಗದವರಿಗೆ ಹೆಚ್ಚಿನ ಸವಲತ್ತುಗಳು ಒದಗಲಿವೆ. ಮಾನವೀಯತೆ ಮುಖ್ಯ ಧ್ಯೇಯವಾಗಿರಲಿ.

ಮಕರ: ಕೌಟುಂಬಿಕ ಸಮಸ್ಯೆಗಳಿಗೆ ಸಂಗಾತಿಯೊಂದಿಗೆ ಸಮಾಲೋಚನೆ ನಡೆಸಿದಲ್ಲಿ ಉತ್ತಮ ಪರಿಹಾರ ದೊರೆಯುವುದು. ಹಿರಿಯರೊಂದಿಗೆ ಯಾತ್ರೆ ಕೈಗೊಳ್ಳುವುದರ ಪುಣ್ಯದಿಂದ ಕಾರ್ಯಾನುಕೂಲವಾಗುವುದು.

ಕುಂಭ: ಇತರರಿಗಿಂತ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರವನ್ನು ತೆಗೆದುಕೊಳ್ಳುವಿರಿ. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು. ಷೇರು ವ್ಯಾಪಾರ ಅದೃಷ್ಟದಾಯಕವಾಗಿರುತ್ತದೆ.

ಮೀನ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣವಿರುತ್ತದೆ. ನೀರಿನ ಬದಲಾವಣೆಯಿಂದ ಅನಾರೋಗ್ಯ ಎದುರಾಗಬಹುದು.

ಪದಬಂಧ 6072

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉತ್ತರದವರ ಮಂಚ (3)
3.ಪಂಜನ್ನು ಹಚ್ಚಿದಾಗ ಕಾಣಿಸಿದ ಹಕ್ಕಿಗೂಡು (3)
6.ರೀತಿಯೊಡನೆ ಬರುವ ಜೋಡುನುಡಿ (3)
7.ಇಬ್ಬಂದಿಯೇನಿಲ್ಲ! ಕಚೇರಿಯ ನೌಕರ ವರ್ಗ! (3)
8.ಮರದಿಂದ ಮಾಡಿದ ಪಾದರಕ್ಷೆ (3)
10.ಶವ ಸುಡಲು ಒಟ್ಟಿದ ಕಟ್ಟಿಗೆ ರಾಶಿ (2)
11.ಬರಲು ಹೇಳಿದವನು ಹಿಡಿದಿರುವ ಪೊರಕೆ! (3)
13.ತೀರ ದೂರವಿರುವ ದಡ! (2)
15.ಬಿನ್ನಹ ಹೀಗೆ ಬಂದಿದೆ (3)
16.ಸಣ್ಣ ಸಣ್ಣ ಗೆಜ್ಜೆಗಳಿಂದ ಕೂಡಿದ ಕಾಲಿನ ಕಡಗ (3)
17.ನಗ ಧರಿಸಿಕೊಂಡು ನೋಡಿರುವ ಪಟ್ಟಣ (3)
18.ಕುಂಬಾರನ ಚಕ್ರವಿದು (3)
19.ಸಿದ್ಧತೆಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ಈತ ದನಕಾಯುವವನು (5)
2.ಒಂದು ಬಗೆಯ ಹುಲ್ಲು (3)
3.ದೀವಟಿಗೆ ಇಲ್ಲಿ ಕಾಣುತ್ತಿದೆ (2)
4.ವಿಲಾಸಪ್ರಿಯತೆಯಿದು (4)
5.ಮಂದಿ ಹೊಕ್ಕಿರುವ ಗುಡಿ (3)
9.ಬರವಿದ್ದಾಗ ನೋಡಿದ ಆಕಾಶ (3)
10.ಬಾಗಿಲಿಗೆ ಹಾಕುವ ಕೊಂಡಿ (3)
12.ವಿರಮಿಸಿಕೊಳ್ಳುವ ಮನೆಯಿದು (5)
13.ಚುರುಕಾದ ಗಮನ (4)
14.ತಣ್ಣಗಾದ ಅನ್ನ (3)
15.ಸರಸದ ವಿರುದ್ಧ ಪದ (3)
17.ಮೋಸಗಾರನೆಂದು ಹೆಸರು ಪಡೆದ ಪ್ರಾಣಿ (2)

1		2	■	3		4	■	5
	■	6			■	7		
8			■	■	■		■	
	■	■	9	■	10		■	■
	■	■	11			■	■	12
■	■	13		■		■	■	
14	■		■	■	■	15		
16			■	17			■	
	■	18			■	19		

6071ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕಸ್ಮಿಕ 3.ಜಲಪಾತ 5.ವಿದಾಯ 7.ರಾಡಿ 8.ದರ 10.ತೆವಲು 11.ಕೃಪಣ 13.ರಿಪು 15.ಮಿತ್ರ 16.ಅಂಕುಶ 18.ತೆಗಳಿಕೆ 19.ರವಿಸುತ

ಮೇಲಿಂದ ಕೆಳಕ್ಕೆ:
1.ಆಯುರ್ವೇದ 2.ಕವಿ 3.ಜಯ 4.ತಕ್ಕಡಿ 6.ದಾನವ 7.ರಾಯಭಾರಿ 9.ರಕ್ಷಾಪತ್ರ 12.ಪರಾಕು 14.ಪುರಸ್ಕೃತ 15.ಮಿಡತೆ 16.ಅಂಕೆ 17.ಶರ

ಸುಡೊಕು 6456

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6455 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಏರಿದ ಕ್ಷಣವೇ ಆರಿತು ಜೀವ

‘ಮೇಡೇ, ಮೇಡೇ, ಮೇಡೇ’...ಎಂದು ಪೈಲಟ್‌ಗಳಿಂದ ಕೊನೆಯ ಸಂದೇಶ ● ವೈದ್ಯಕೀಯ ಕಾಲೇಜು ಹಾಸ್ಟೆಲ್ ಆವರಣದಲ್ಲಿ ತೆರೆದ ಸಾವಿನ ಬಾಗಿಲು ● ಅಹಮದಾಬಾದ್, ದೆಹಲಿಯಲ್ಲಿ ನಿಯಂತ್ರಣ ಕೊಠಡಿ ಸ್ಥಾಪನೆ

ವಿಮಾನದಲ್ಲಿ ಎ.ಸಿ ಸಮಸ್ಯೆ ಇತ್ತು: ಉದ್ಯಮಿಯ ಪೋಸ್ಟ್

ಮುಂಬೈ: ವಿಮಾನವು ಪತನವಾಗುವ ಕೆಲವೇ ತಾಸುಗಳ ಮೊದಲು ಅದೇ ವಿಮಾನದಲ್ಲಿ ದೆಹಲಿಯಿಂದ ಪ್ರಯಾಣಿಸಿದ್ದಾಗಿ ಆಕಾಶ್ ವತ್ಸ ಎಂಬ ಉದ್ಯಮಿ ಹೇಳಿದ್ದು, ಕೆಲವು ಸಮಸ್ಯೆಗಳನ್ನು ಸಿಬ್ಬಂದಿಯ ಗಮನಕ್ಕೆ ತಂದಿದ್ದಾಗಿಯೂ ತಿಳಿಸಿದ್ದಾರೆ.

‘ಅಹಮದಾಬಾದ್‌ನಿಂದ ವಿಮಾನ ಟೇಕಾಫ್ ಆಗುವ ಎರಡು ತಾಸು ಮೊದಲು ಅದೇ ವಿಮಾನದಲ್ಲಿ ನಾನು ದೆಹಲಿಯಿಂದ ಅಲ್ಲಿಗೆ ಪ್ರಯಾಣಿಸಿದ್ದೆ. ಓದಲು ಇಟ್ಟಿದ್ದ ನಿಯ-ತಕಾಲಿಕೆಗಳನ್ನು ಜನರು ಗಾಳಿ ಬೀಸಿಕೊಳ್ಳಲು ಬಳಸುವಷ್ಟು ಧಗೆ ಇತ್ತು. ಹವಾನಿಯಂತ್ರಣ ವ್ಯವಸ್ಥೆ ಕೈಕೊಟ್ಟಿತ್ತು’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ವಿಮಾನದ ಮೂರು ವಿಡಿಯೊಗಳು ಹಾಗೂ ಒಂದು ಫೋಟೊವನ್ನೂ ಅವರು ‘ಅಟ್ಯಾಚ್’ ಮಾಡಿದ್ದು, ಸಾಕಷ್ಟು ಜನರು ಪ್ರತಿಕ್ರಿಯಿಸಿದ್ದಾರೆ.

ಅಪಘಾತಕ್ಕೂ ಆಕಾಶ್ ಅವರು ಪೋಸ್ಟ್‌ನಲ್ಲಿ ಉಲ್ಲೇಖಿಸಿರುವ ಸಮಸ್ಯೆಗೂ ಸಂಬಂಧ ಇದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ ಎಂದು ಪರಿಣತರು ಹೇಳಿದ್ದಾರೆ.

ಪ್ರಯಾಣ ಮುಂದೂಡಿ ಬಚಾವಾದ ಸಾವಜಿಭಾಯಿ

ಅಹಮದಾಬಾದ್ (ಪಿಟಿಐ): ನಗರದ ಸಾವಜಿಭಾಯಿ ತಿಂಬಾಡಿಯಾ ಎಂಬ ವೃದ್ಧರು ಪತನಗೊಂಡ ವಿಮಾನದಲ್ಲಿ ಪಯಣಿಸಬೇಕಿತ್ತು. ಅವರು ಖಾತರಿಯಾಗಿದ್ದ ಟಿಕೆಟ್ ರದ್ದುಪಡಿಸಿದ್ದರು. ‘ದೇವರೇ ನನ್ನನ್ನು ಕಾಪಾಡಿದ’ ಎಂದು ಅವರು ಟಿ.ವಿ ವಾಹಿನಿಗೆ ಪ್ರತಿಕ್ರಿಯಿಸಿದರು.

‘ಲಂಡನ್‌ನಲ್ಲಿರುವ ನನ್ನ ಮಗ ಟಿಕೆಟ್ ಬುಕ್ ಮಾಡಿದ್ದ. ಸೀಟ್ ನಂಬರ್ ಕೂಡ ಖಾತರಿಯಾಗಿತ್ತು. ನಾಲ್ಕು ದಿನಗಳ ಮಟ್ಟಿಗೆ ಪ್ರವಾಸ ಮುಂದೂಡಿದೆ. ಆ ನಿರ್ಧಾರ ನನ್ನ ಜೀವವನ್ನೇ ಉಳಿಸಿತು. ಮಗನು ಕರೆ ಮಾಡಿ, ನಾನು ಮಾಡಿದ ಒಳ್ಳೆಯ ಕೆಲಸಗಳೇ ಕಾಪಾಡಿವೆ ಎಂದ’ ಎಂದು 60 ವರ್ಷ ವಯಸ್ಸಿನ ಸಾವಜಿಭಾಯಿ ಹೇಳಿದರು.

ಭೂಮಿ ಚೌಹಾಣ್ ಎಂಬ ಯುವತಿ ಟ್ರಾಫಿಕ್‌ನಲ್ಲಿ ಸಿಲುಕಿದ್ದರಿಂದ ವಿಮಾನ ನಿಲ್ದಾಣ ತಲುಪುವುದು 10 ನಿಮಿಷ ವಿಳಂಬವಾಯಿತು. ‘ಗಣಪತಿಯೇ ನನ್ನನ್ನು ಕಾಪಾಡಿದ’ ಎಂದು ‘ಹಿಂದೂಸ್ತಾನ್ ಟೈಮ್ಸ್’ಗೆ ಪ್ರತಿಕ್ರಿಯಿಸಿದರು.

ರಕ್ಷಣೆಗೆ ಓಡೋಡಿ ಬಂದ ಜನ

ಅಹಮದಾಬಾದ್: ಈ ದುರಂತ ನಗರದಲ್ಲಿ ಆತಂಕದ ವಾತಾವರಣ ಸೃಷ್ಟಿಸಿತು. ಇದರ ನಡುವೆಯೂ ನಗರದ ಜನರು ರಕ್ಷಣೆಗೆಂದು ಧಾವಿಸಿದರು. ವಿಮಾನ ಬಿದ್ದಿದ್ದ ಕಟ್ಟಡಕ್ಕೂ ಬಹುತೇಕ ಹಾನಿಯಾಗಿತ್ತು. ಹಲವು ಗಂಟೆಗಳ ಬಳಿಕವೂ ದುರಂತ ಸಂಭವಿಸಿದ ಸ್ಥಳದಿಂದ ದಟ್ಟ ಹೊಗೆ ಹೊರಹೊಮ್ಮುತ್ತಿತ್ತು. ಅದು ನಗರದ ವಿವಿಧ ಭಾಗಗಳಿಗೂ ಗೋಚರಿಸುತ್ತಿತ್ತು.

ವಿಮಾನ ಪತನಗೊಂಡಿರುವ ಸ್ಥಳದಲ್ಲಿ ರಕ್ಷಣಾ ಕಾರ್ಯ ಭರದಿಂದ ಸಾಗಿತ್ತು — ಪಿಟಿಐ ಚಿತ್ರಗಳು

ಓಡೋಡಿ ಬಂದರು

ಈ ದೃಶ್ಯಗಳಿಂದ ಆಘಾತಕ್ಕೆ ಒಳಗಾಗಿದ್ದ ನಗರದ ಜನರು, ಸಾಧ್ಯವಾದಷ್ಟು ಜೀವಗಳನ್ನು ಉಳಿಸಲೆಂದು ಓಡೋಡಿ ಬರುತ್ತಿದ್ದದ್ದು ಕಂಡುಬಂದಿತು ಎಂದು ಬಿಬಿಸಿ ವರದಿ ಮಾಡಿದೆ.

ಅಗ್ನಿಶಾಮಕ ದಳದವರು ಬೆಂಕಿ ನಂದಿಸಲು ಮತ್ತು ಹೊಗೆ ನಿಯಂತ್ರಿಸಲು ಹರಸಾಹಸ ಪಡುತ್ತಿದ್ದರು. ಅವಶೇಷಗಳಡಿ ಸಿಲುಕಿದ್ದ ಮೃತ ದೇಹಗಳನ್ನು ಹೊರತರಲು ಶ್ರಮಿಸುತ್ತಿದ್ದರು. ದುರಂತ ಸಂಭವಿಸಿದ ಪ್ರದೇಶದತ್ತ ಆಂಬುಲೆನ್ಸ್‌ಗಳು ಧಾವಿಸಿ ಬಂದವು. ರಸ್ತೆಗಳಲ್ಲಿ ಸಂಚಾರವನ್ನು ನಿರ್ಬಂಧಿಸಿ ರಕ್ಷಣಾ ಕಾರ್ಯಗಳಿಗೆ ಒತ್ತು ನೀಡಲಾಗಿತ್ತು.

ವಿಮಾನದಲ್ಲಿ ಲಂಡನ್‌ಗೆ ಪ್ರಯಾಣಿಸುತ್ತಿದ್ದವರ ಸಂಬಂಧಿಕರು, ವಿಷಯ ತಿಳಿದ ಕೂಡಲೇ ಸ್ಥಳದತ್ತ ಆತಂಕದಿಂದ ಧಾವಿಸಿ ಬಂದರು.

ಅಹಮದಾಬಾದ್‌ನಿಂದ ಲಂಡನ್‌ಗೆ ಗುರುವಾರ ಮಧ್ಯಾಹ್ನ ಹೊರಟಿದ್ದ ವಿಮಾನ, ಟೇಕಾಫ್ ಆದ ಕೆಲ ಕ್ಷಣಗಳಲ್ಲಿಯೇ ಪತನಗೊಂಡಿತ್ತು. ವಿಮಾನದಲ್ಲಿ ಭಾರತ, ಬ್ರಿಟನ್, ಪೋರ್ಚುಗಲ್ ಮತ್ತು ಕೆನಡಾದ 242 ಪ್ರಜೆಗಳು ಪ್ರಯಾಣಿಸುತ್ತಿದ್ದರು.

‘ಮೇಡೇ’ ಕರೆ ನೀಡಿದ್ದ ಪೈಲಟ್

ನವದೆಹಲಿ: ‘ಮೇಡೇ, ಮೇಡೇ, ಮೇಡೇ’... ಇದು ವಿಮಾನ ದುರಂತಕ್ಕೆ ಈಡಾಗುವುದಕ್ಕೂ ಮುನ್ನ ಪೈಲಟ್ ಕಳುಹಿಸಿದ್ದ ತುರ್ತು ಸಮಸ್ಯೆಯ ಸಂದೇಶ.

ವಿಮಾನದ ಪೈಲಟ್ ರವಾನಿಸಿದ ಈ ಸಂದೇಶವನ್ನು ಕೆಲವೇ ಸೆಕೆಂಡುಗಳಲ್ಲಿ ವಿಮಾನ ಸಂಚಾರ ನಿಯಂತ್ರಕರು (ಎಟಿಸಿ) ಸ್ವೀಕರಿಸಿದರು. ಆದರೆ ಪೈಲಟ್‌ಗಳನ್ನು ಸಂಪರ್ಕಿಸಲು ಎಟಿಸಿ ನಡೆಸಿದ ಪ್ರಯತ್ನ ವಿಫಲವಾಯಿತು. ಕೆಲ ಕ್ಷಣದಲ್ಲಿಯೇ ವಿಮಾನವು ಪತನಗೊಂಡಿತು.

‘ಮೇಡೇ’ ಕರೆಯು ಜಾಗತಿಕವಾಗಿ ಬಳಸುವ ಪ್ರಮಾಣಿತ ಶಿಷ್ಟಾಚಾರವಾಗಿದೆ. ಇದನ್ನು 1920ರ ದಶಕದಲ್ಲಿ ಪರಿಚಯಿಸಲಾಯಿತು. ಇದು ಫ್ರೆಂಚ್‌ನ ‘ಮೈಡರ್’ ಪದದಿಂದ ಬಂದಿದೆ. ಅಂದರೆ ‘ಸಹಾಯ ಮಾಡಿ’ ಎಂದರ್ಥ. ಇದನ್ನು ಮೂರು ಬಾರಿ ಹೇಳಬೇಕಾಗುತ್ತದೆ.

ಭಾರಿ ಶಬ್ದ, ಕಪ್ಪು ಹೊಗೆ

ಅಹಮದಾಬಾದ್‌ನ ಜನರು, ವಿಮಾನ ಪತನದ ವೇಳೆ ಭಾರಿ ಪ್ರಮಾಣದ ಶಬ್ದ ಕೇಳಿಸಿಕೊಂಡರು. ಅದರ ಬೆನ್ನಲ್ಲೇ ಆಕಾಶದಲ್ಲಿ ದಟ್ಟವಾದ ಕಪ್ಪುಹೊಗೆ ಹೊರಹೊಮ್ಮುತ್ತಿದ್ದುದನ್ನು ಗಮನಿಸಿದರು.

‘ನಾವು ಮನೆಯಲ್ಲಿದ್ದಾಗ ಭಾರಿ ಶಬ್ದ ಕೇಳಿಸಿತು. ಏನಾಗಿದೆ ಎಂದು ಹೊರಗೆ ಬಂದು ನೋಡಿದಾಗ, ಆಗಸದಲ್ಲಿ ದಟ್ಟ ಹೊಗೆ ಆವರಿಸಿತ್ತು. ಕೂಡಲೇ ದುರಂತ ಸಂಭವಿಸಿದ ಸ್ಥಳಕ್ಕೆ ಬಂದೆವು. ಅಲ್ಲೆಲ್ಲ ವಿಮಾನದ ಅವಶೇಷಗಳು, ಮೃತ ದೇಹಗಳು ಚೆಲ್ಲಾಪಿಲ್ಲಿಯಾಗಿದ್ದವು’ ಎಂದು ಸ್ಥಳೀಯ ನಿವಾಸಿಯೊಬ್ಬರು ಆತಂಕದಿಂದ ಹೇಳಿದರು.

ಬದುಕುಳಿದ ವಿಶ್ವಾಸ್

ಬೆಂಗಳೂರು: ಬ್ರಿಟನ್ ಪ್ರಜೆ ವಿಶ್ವಾಸ್ ಕುಮಾರ್ ರಮೇಶ್ ಎಂಬವರು ವಿಮಾನ ದುರಂತದ ನಂತರವೂ ಬದುಕುಳಿದಿದ್ದಾರೆ.

ಅಹಮದಾಬಾದ್‌ನ ಅಸಾವರದಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ತಮ್ಮವರಿಗಾಗಿ ಹುಡುಕುತ್ತಿದ್ದವರು ಇಡುಕಿರಿದಿದ್ದರು. ಆಸ್ಪತ್ರೆಯ ಜನರಲ್ ವಾರ್ಡ್‌ನ ಹಾಸಿಗೆಯ ಮೇಲೆ ಮಲಗಿದ್ದ ವಿಶ್ವಾಸ್ ತಾವು ದುರಂತದಲ್ಲಿ ಪಾರಾಗಿರುವುದಾಗಿ ಹೇಳಿದರು ಎಂದು ‘ಹಿಂದೂಸ್ತಾನ್ ಟೈಮ್ಸ್’ ವರದಿ ಮಾಡಿದೆ.

ಕೆಲವು ದಿನಗಳ ಹಿಂದೆ ವಿಶ್ವಾಸ್ ಭಾರತಕ್ಕೆ ಪ್ರವಾಸಕ್ಕೆಂದು ಬಂದಿದ್ದರು. ಸಹೋದರನ ಜತೆ ದಿಯು ದ್ವೀಪಕ್ಕೆ ಪ್ರವಾಸಕ್ಕೆ ಹೋಗಿಬಂದ ನಂತರ ಲಂಡನ್‌ಗೆ ಮರಳುತ್ತಿದ್ದುದಾಗಿ ಅವರು ತಿಳಿಸಿದ್ದಾರೆ.

‘11ಎ’ ಸೀಟಿನಲ್ಲಿ ಪ್ರಯಾಣಿಸುತ್ತಿದ್ದ ಅವರಲ್ಲಿ ಬೋರ್ಡಿಂಗ್ ಪಾಸ್ ಕೂಡ ಜತನವಾಗಿದೆ ಎಂದೂ ವರದಿ ಉಲ್ಲೇಖಿಸಿದೆ.

ವಿಶ್ವಾಸ್ ಅವರ ಜತೆ ಅವರ ಸಹೋದರ ಅಜಯ್ ಕುಮಾರ್ ರಮೇಶ್ (45) ಕೂಡ ಲಂಡನ್‌ಗೆ ಪ್ರಯಾಣಿಸುತ್ತಿದ್ದರು. ‘ಸಹೋದರನು ಬೇರೆ ಸೀಟಿನಲ್ಲಿ ಪ್ರಯಾಣಿಸುತ್ತಿದ್ದ. ಅವನು ಎಲ್ಲಿದ್ದಾನೋ ಹುಡುಕಬೇಕಿದೆ’ ಎಂದೂ ವಿಶ್ವಾಸ್ ಹೇಳಿದ್ದಾರೆ. ‘ವಿಮಾನ ಟೇಕಾಫ್ ಆಗಿ ಸುಮಾರು ಮೂವತ್ತು ಸೆಕೆಂಡ್‌ಗಳಲ್ಲೇ ನೆಲಕ್ಕೆ ಅಪ್ಪಳಿಸಿತು. ಆ ಸಂದರ್ಭದಲ್ಲಿ ನಾನು ತುರ್ತು ನಿರ್ಗಮನ ದ್ವಾರದಿಂದ ಹೊರಗೆ ಜಿಗಿದೆ. ಏಳುವಷ್ಟರಲ್ಲಿ ಸುತ್ತಲೂ ವಿಮಾನದ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಶವಗಳು ಕೂಡ ಕಂಡವು. ಭಯಗೊಂಡು, ಎದ್ದು ಓಡಲಾರಂಭಿಸಿದೆ. ಆಗ ಕೆಲವರು ನನ್ನನ್ನು ಹಿಡಿದುಕೊಂಡು, ಆಂಬುಲೆನ್ಸ್ ಒಳಗೆ ಕರೆದೊಯ್ದರು’ ಎಂದು ವಿಶ್ವಾಸ್ ಮಾಹಿತಿ ನೀಡಿದ್ದಾರೆ.

ವಿಮಾನವು ನೆಲಕ್ಕೆ ಅಪ್ಪಳಿಸಿದಾಗ ಉಂಟಾದ ಪರಿಣಾಮದಿಂದಾಗಿ ಅವರ ಮುಖದ ಮೇಲೆ ಗಾಯಗಳಾಗಿವೆ. ಎದೆ, ಕಣ್ಣು ಹಾಗೂ ಪಾದಗಳಿಗೂ ಪೆಟ್ಟಾಗಿದೆ ಎಂದು ‘ಹಿಂದೂಸ್ತಾನ್ ಟೈಮ್ಸ್’ ವರದಿ ಮಾಡಿದೆ.

ಇಪ್ಪತ್ತು ವರ್ಷಗಳಿಂದ ವಿಶ್ವಾಸ್ ಅವರು ಬ್ರಿಟನ್‌ನಲ್ಲಿ ನೆಲಸಿದ್ದು, ಅವರ ಪತ್ನಿ ಹಾಗೂ ಮಗು ಅಲ್ಲಿಯೇ ಇದ್ದಾರೆ.

ಊಟದ ವೇಳೆ ಅಪ್ಪಳಿಸಿದ ವಿಮಾನ

ಅಹಮದಾಬಾದ್ (ಪಿಟಿಐ): ವಿಮಾನ ನಿಲ್ದಾಣದಿಂದ ಸಮೀಪದ ಮೇಘಾನಿನಗರ ಪ್ರದೇಶದಲ್ಲಿ ಬಿ.ಜೆ. ವೈದ್ಯಕೀಯ ಕಾಲೇಜಿನ ಕ್ಯಾಂಪಸ್ ಇದ್ದು, ಇಲ್ಲಿರುವ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳ ವಸತಿ ನಿಲಯ ಸಮುಚ್ಚಯದ ಕಟ್ಟಡಕ್ಕೆ ವಿಮಾನ ಅಪ್ಪಳಿಸಿದೆ.

ವಿಮಾನ ಪತನದ ವೇಳೆ ವಿದ್ಯಾರ್ಥಿಗಳು ವಸತಿ ನಿಲಯದ ಮೆಸ್‌ನಲ್ಲಿ ಊಟಕ್ಕೆ ಸೇರಿದ್ದರು.

‘ವಿಮಾನವು ಕೆಳ ಮಟ್ಟದಲ್ಲಿ ಹಾರುತ್ತಾ ವೈದ್ಯರು ಮತ್ತು ವೈದ್ಯಕೀಯ ವಿದ್ಯಾರ್ಥಿಗಳ ವಸತಿ ನಿಲಯ ಸಮುಚ್ಚಯದ ಕಟ್ಟಡಕ್ಕೆ ಅಪ್ಪಳಿಸಿತು. ಇಲ್ಲಿರುವ ಬಹುತೇಕ ಕಟ್ಟಡಗಳು 5 ಅಂತಸ್ತಿನವು. ಘಟನೆಯಲ್ಲಿ ಕಟ್ಟಡಕ್ಕೆ ಅಪಾರ ಹಾನಿಯಾಗಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ಇದ್ದವರಿಗೆ ಬೆಂಕಿಯಿಂದ ಸುಟ್ಟ ಗಾಯಗಳಾಗಿವೆ’ ಎಂದು ಪ್ರತ್ಯಕ್ಷದರ್ಶಿ ಹರೀಶ್ ಶಾ ಹೇಳಿದ್ದಾರೆ. ‘ವಸತಿ ನಿಲಯದ ಕಟ್ಟಡದ ಹೊರಗೆ ವಾಹನ ನಿಲುಗಡೆ ಪ್ರದೇಶದಲ್ಲಿ ನಿಲ್ಲಿಸಲಾಗಿದ್ದ ಕೆಲವು ದ್ವಿಚಕ್ರ ವಾಹನಗಳು, ಕಾರುಗಳು ಬೆಂಕಿಯಿಂದ ಸುಟ್ಟುಹೋದವು’ ಎಂದು ಇನ್ನೊಬ್ಬ ಪ್ರತ್ಯಕ್ಷದರ್ಶಿ ಹೇಳಿದ್ದಾರೆ.

ವಿಮಾನ ಅಪ್ಪಳಿಸಿದ್ದರಿಂದ ಬಿ.ಜೆ.ವೈದ್ಯಕೀಯ ಕಾಲೇಜಿನ ಮೆಸ್‌ಗೆ ಹಾನಿಯಾಗಿದೆ

ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ

ಅಹಮದಾಬಾದ್ (ಪಿಟಿಐ): ಏರ್ ಇಂಡಿಯಾ ವಿಮಾನ ಅವಘಡದಲ್ಲಿ ಮೃತಪಟ್ಟವರ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಸಲಾಗುವುದು ಎಂದು ಗುಜರಾತ್ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಡಿಎನ್‌ಎ ಪರೀಕ್ಷೆಗೆ ಮಾದರಿ ಸಂಗ್ರಹಕ್ಕೆ ಅಹಮದಾಬಾದ್ ಸಾರ್ವಜನಿಕ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಮೃತರ ಪೋಷಕರು ಅಥವಾ ಮಕ್ಕಳು ಸೇರಿದಂತೆ ಹತ್ತಿರದ ಸಂಬಂಧಿಗಳು ಡಿಎನ್‌ಎ ಪರೀಕ್ಷೆಗೆ ಮಾದರಿಯನ್ನು ನೀಡಬಹುದು’ ಎಂದು ಆರೋಗ್ಯ ಇಲಾಖೆಯ ಕಾರ್ಯದರ್ಶಿ ಧನಂಜಯ್ ದ್ವಿವೇದಿ ಅವರು ತಿಳಿಸಿದ್ದಾರೆ.



ಅಹಮದಾಬಾದ್‌ನಲ್ಲಿ ಗುರುವಾರ ವಿಮಾನ ಬಿದ್ದ ಕಟ್ಟಡದ ಬಳಿ ಜನರು ಜಮಾಯಿಸಿದ್ದರು

‘ಮಗಳ ಜೊತೆ ಬೆಳಿಗ್ಗೆಯಷ್ಟೆ ಮಾತನಾಡಿದ್ದೆ...:

ನಾಗ್ಪುರ(ಪಿಟಿಐ): ‘ನನ್ನ ಮಗಳ ಜೊತೆ ಇಂದು ಬೆಳಿಗ್ಗೆ 9ರ ಸುಮಾರಿಗೆ ಮಾತನಾಡಿದ್ದೆ. ಈಗ, ನನಗಾಗಲಿ, ನನ್ನ ಕುಟುಂಬಕ್ಕಾಗಲಿ ಅವರ ಸ್ಥಿತಿ ಬಗ್ಗೆ ಏನೂ ಗೊತ್ತಿಲ್ಲ. ಏರ್ ಇಂಡಿಯಾ ಅಥವಾ ಗುಜರಾತ್ ಸರ್ಕಾರದ ಪ್ರತಿನಿಧಿಗಳು ನಮ್ಮನ್ನು ಈ ವರೆಗೆ ಸಂಪರ್ಕಿಸಿಲ್ಲ...’

–ಅಹಮದಾಬಾದ್‌ನಿಂದ ಲಂಡನ್‌ಗೆ ತೆರಳುವಾಗ ಪತನಗೊಂಡಿರುವ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಯಶಾ ಮೋಧಾ ಅವರ ತಂದೆ ಮನೀಷ್ ಕಾಮದಾರ್ ಹೇಳುವ ಮಾತುಗಳಿವು.

‘ನನ್ನ ಮಗಳು ಯಶಾ ಮೋಧಾ, ಆಕೆಯ ಒಂದೂವರೆ ವರ್ಷದ ಮಗ ರುದ್ರ ಹಾಗೂ ಅತ್ತೆ ಈ ನತದೃಷ್ಟ ವಿಮಾನದ-ಲ್ಲಿದ್ದರು. ಈಗ, ಅವರ ಸ್ಥಿತಿ ಏನಿದೆಯೋ ಎಂಬ ಬಗ್ಗೆ ಸುಳಿವೇ ಇಲ್ಲದಂತಾಗಿದೆ’ ಎಂದು ಮನೀಷ್ ದುಃಖಿಸಿದ್ದಾರೆ.

ಪತಿಯ ಭೇಟಿಯಾಗಲು ಹೊರಟಿದ್ದ ನವವಿವಾಹಿತೆ!

ಬೆಂಗಳೂರು: ಲಂಡನ್‌ನಲ್ಲಿದ್ದ ಪತಿಯನ್ನು ಮೊದಲ ಬಾರಿ ಭೇಟಿಯಾಗಲು ಹೊರಟಿದ್ದ ನವವಿವಾಹಿತೆಯ ಕನಸು ವಿಮಾನದ ಪತನದೊಂದಿಗೆ ಕಮರಿಹೋಗಿದೆ.

ರಾಜಸ್ಥಾನದ ಬಾಲೋತರಾ ಜಿಲ್ಲೆಯ ಅರಬಾ ಗ್ರಾಮದ ನಿವಾಸಿ ಮದನ್ ಸಿಂಗ್ ಅವರ ಮಗಳು ಖುಷ್ಬೂ ರಾಜ್ ಪುರೋಹಿತ್ ಅವರು ಈ ವರ್ಷದ ಜನವರಿ ತಿಂಗಳಲ್ಲಿ ಮನ್ಫೂಲ್ ಸಿಂಗ್ ಅವರನ್ನು ಮದುವೆಯಾಗಿದ್ದರು. ಪತಿ ಅಲ್ಲಿ ಓದುತ್ತಿದ್ದು, ಮದುವೆ ಬಳಿಕ ಮೊದಲ ಸಲ ಅವರನ್ನು ಭೇಟಿಯಾಗಲು ಅಲ್ಲಿಗೆ ಹೊರಟಿದ್ದರು. ಭೇಟಿಗೂ ಮುನ್ನ ಮಾರ್ಗಮಧ್ಯದಲ್ಲೇ ಅವರು ಕೊನೆಯುಸಿರೆಳೆದಿದ್ದಾರೆ ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ವಿಮಾನ ದುರಂತದಲ್ಲಿ ಮೃತಪಟ್ಟವರಲ್ಲಿ 11 ಮಂದಿ ರಾಜಸ್ಥಾನಕ್ಕೆ ಸೇರಿದವರು. ಇವರಲ್ಲಿ ಇಬ್ಬರು ಬ್ರಿಟನ್‌ನಲ್ಲಿ ಬಾಣಸಿಗರಾಗಿ ಕೆಲಸ ಮಾಡುತ್ತಿದ್ದರು.

ಮಾರ್ಬಲ್ ಉದ್ಯಮಿಯ ಇಬ್ಬರು ಮಕ್ಕಳು ಸಾವು

ಜೈಪುರ (ಪಿಟಿಐ): ವಿಮಾನ ದುರಂತದಲ್ಲಿ ಸಾವಿಗೀಡಾದವರಲ್ಲಿ ರಾಜಸ್ಥಾನದ ಐವರು ಸೇರಿದ್ದಾರೆ. ಇವರಲ್ಲಿ ನಾಲ್ವರು ಉದಯಪುರ ಜಿಲ್ಲೆಯವರು. ಉದಯಪುರದ ಮಾರ್ಬಲ್ ಉದ್ಯಮಿಯ ಪುತ್ರ ಶುಭ್ ಮತ್ತು ಪುತ್ರಿ ಶಗುನ್ ಮೋದಿ ಮೃತಪಟ್ಟಿದ್ದಾರೆ. ಇವರಿಬ್ಬರೂ ಎಂಬಿಎ ಪದವೀಧರರು. ತಂದೆಯ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ಇವರು, ಪ್ರವಾಸದ ಭಾಗವಾಗಿ ಲಂಡನ್‌ಗೆ ಪ್ರಯಾಣಿಸುತ್ತಿದ್ದರು.

ಮೃತಪಟ್ಟ ಇನ್ನೊಬ್ಬ ಪ್ರಯಾಣಿಕ ವರ್ದಿಚಂದ್ ಮನಾರಿಯಾ ಉದಯಪುರ ಜಿಲ್ಲೆಯ ವಲ್ಲಭನಗರದವರು. ಬಾರ್ಮೇಡ್ ಜಿಲ್ಲೆಯ ಖುಷ್ಬೂ ರಾಜ್‌ಪುರೋಹಿತ್ ಎಂಬ ಮಹಿಳೆಯೂ ದುರಂತದಲ್ಲಿ ಮೃತಪಟ್ಟಿದ್ದಾರೆ.

ಮೃತಪಟ್ಟವರಲ್ಲಿ ಕೇರಳದ ದಾದಿ

ತಿರುವನಂತಪುರ (ಪಿಟಿಐ): ವಿಮಾನ ದುರಂತದಲ್ಲಿ ಮೃತಪಟ್ಟವರಲ್ಲಿ ಕೇರಳದ ದಾದಿಯೊಬ್ಬರು ಸೇರಿದ್ದಾರೆ. ಪತ್ತನಂತಿಟ್ಟ ಜಿಲ್ಲೆಯ ಪುಲ್ಲಾಡ್ ನಿವಾಸಿ ರಂಜಿತಾ ಗೋಪಕುಮಾರ್ ನಾಯರ್ (40) ಮೃತರು.

ಲಂಡನ್‌ನಲ್ಲಿ ದಾದಿಯಾಗಿದ್ದ ರಂಜಿತಾ, ರಜೆ ನಿಮಿತ್ತ ಊರಿಗೆ ಬಂದಿದ್ದರು. ರಜೆ ಮುಗಿಸಿಕೊಂಡು ಬುಧವಾರ ಮರಳಿ ಲಂಡನ್‌ಗೆ ಹೋಗಲು ವಿಮಾನ ಏರಿದ್ದರು. ರಂಜಿತಾ ಅವರಿಗೆ 15 ವರ್ಷದ ಪುತ್ರ ಮತ್ತು 13 ವರ್ಷದ ಪುತ್ರಿ ಇದ್ದಾರೆ.

‘ರಂಜಿತಾ ಮೊದಲು ಕೊಲ್ಲಿ ರಾಷ್ಟ್ರದಲ್ಲಿ ದಾದಿಯಾಗಿ ಕೆಲಸ ಮಾಡಿದ್ದರು ನಂತರ ಅವರಿಗೆ ಲಂಡನ್‌ನ ಆಸ್ಪತ್ರೆಯಲ್ಲಿ ಕೆಲಸ ಲಭಿಸಿತ್ತು. ಕೇರಳದ ಪುಲ್ಲಾಡ್‌ನಲ್ಲಿ ಅವರು ಹೊಸ ಮನೆ ನಿರ್ಮಿಸುತ್ತಿದ್ದರು. ಮನೆ ನಿರ್ಮಾಣ ಕಾರ್ಯ ಅಂತಿಮ ಹಂತಕ್ಕೆ ಬಂದಿತ್ತು’ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಅನುಭವಿಗಳಾಗಿದ್ದ ಪೈಲಟ್‌ಗಳು

ಅಹಮದಾಬಾದ್: ಪೈಲಟ್‌ಗಳಿಬ್ಬರು 9,300 ಗಂಟೆಗಳ ಕಾಲ ವಿಮಾನ ಹಾರಿಸಿದ್ದ ಅನುಭವ ಹೊಂದಿದ್ದರು ಎಂದು ಡಿಜಿಸಿಎ ತಿಳಿಸಿದೆ.

ಕ್ಯಾಪ್ಟನ್ ಸುಮಿತ್ ಸಭರ್ವಾಲ್ ಅವರು 8,200 ಗಂಟೆ, ಸಹ ಪೈಲಟ್ ಆಗಿದ್ದ ಕ್ಲೈವ್ ಕುಂದರ್ 1,100 ಗಂಟೆಗಳ ಹಾರಾಟದ ಅನುಭವ ಹೊಂದಿದ್ದರು. ಸಭರ್ವಾಲ್ ಅವರು (ಲೈನ್ ಟ್ರೇನಿಂಗ್ ಕ್ಯಾಪ್ಟನ್–ಎಲ್‌ಟಿಸಿ) ಹೊಸ ಪೈಲಟ್‌ಗಳಿಗೆ ತರಬೇತಿ ನೀಡುವ ಪ್ರಮಾಣೀಕೃತ ಅನುಭವಿ ಪೈಲಟ್ ಕೂಡ ಆಗಿದ್ದರು. ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನವು ಮೊದಲ ಸಲ ಬಂದಿಳಿದ ವೇಳೆ ಆ ವಿಮಾನದಲ್ಲಿ ಇದ್ದ ಪೈಲಟ್‌ಗಳಲ್ಲಿ ಕ್ಯಾಪ್ಟನ್ ಸಭರ್ವಾಲ್ ಕೂಡ ಒಬ್ಬರಾಗಿದ್ದರು.

ಸಹ ಪೈಲಟ್ ಮಂಗಳೂರು ಮೂಲದವರು?

ಮಂಗಳೂರು: ವಿಮಾನದ ಸಹ ಪೈಲಟ್ ಕ್ಲೈವ್ ಕುಂದರ್ ಅವರ ಹಿರಿಯರು ಮಂಗಳೂರು ಮೂಲದವರು. ಕ್ಲೈವ್ ಅವರ ತಂದೆ ಕ್ಲಿಫರ್ಡ್ ಕುಂದರ್ ಮಂಗಳೂರಿನವರಾಗಿದ್ದು ಮುಂಬೈನ ಕಲಿನಾ ಪ್ರದೇಶದಲ್ಲಿ ವಾಸವಾಗಿದ್ದಾರೆ. ಸದ್ಯ ಅವರ ಸಂಬಂಧಿಕರು ಮಂಗಳೂರು ಭಾಗದಲ್ಲಿ ಇಲ್ಲ ಎಂದು ಮೂಲಗಳು ತಿಳಿಸಿವೆ.

ಏರಿದ ಕ್ಷಣವೇ ಆರಿತು ಜೀವ



ಅಹಮದಾಬಾದ್‌ನ ಮೇಘಾನಿನಗರ್ ಪ್ರದೇಶದಲ್ಲಿರುವ ಬಿ.ಜೆ.ವೈದ್ಯಕೀಯ ಕಾಲೇಜಿನ ಕ್ಯಾಂಪಸ್ ವೈದ್ಯಕೀಯ ವಿದ್ಯಾರ್ಥಿಗಳ ವಸತಿ ನಿಲಯದ ಕಟ್ಟಡಕ್ಕೆ ಅಪ್ಪಳಿಸಿದ ವಿಮಾನದ ಬಿಡಿಭಾಗ

ವಿಮಾನ ಪತನಗೊಂಡ ಸ್ಥಳದಲ್ಲಿ ಚದುರಿಬಿದ್ದಿದ್ದ ಅವಶೇಷಗಳ ನಡುವಿನಿಂದ ಸಾಗಿದ ಜನರು

ದುರಂತದಲ್ಲಿ ಮೃತಪಟ್ಟ ಏರ್ ಇಂಡಿಯಾ ವಿಮಾನದ ಕ್ಯಾಬಿನ್ ಸಿಬ್ಬಂದಿ ಮಣಿಪುರದ ಥೌಬಾಲ್ ಜಿಲ್ಲೆಯ ಕೊಂಗಬ್ರಾಯಿಲಾಟ್ಪಮ್ ನಗನಥೋಯಿ ಶರ್ಮಾ ನಿವಾಸದಲ್ಲಿ ದುಃಖತಪ್ತರಾಗಿದ್ದ ಕುಟುಂಬ ಸದಸ್ಯರು –ಪಿಟಿಐ ಚಿತ್ರಗಳು

ಗಣ್ಯರ ಪ್ರತಿಕ್ರಿಯೆಗಳು

ವಿಮಾನ ದುರಂತದ ಸುದ್ದಿ ತಿಳಿದು ನಾನು ತುಂಬಾ ದುಃಖಿತವಾಗಿದ್ದೇನೆ. ಇದು ಹೃದಯ ಒಡೆದುಹೋಗುವಂತಹ ದುರಂತ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುವೆ. ಹೇಳಿಕೊಳ್ಳಲಾಗದ ದುಃಖದ ಗಳಿಗೆಯಲ್ಲಿ ಇಡೀ ದೇಶ ನಿಮ್ಮ ಜತೆಗಿದೆ

ದ್ರೌಪದಿ ಮುರ್ಮು, ರಾಷ್ಟ್ರಪತಿ

ದುರದೃಷ್ಟಕರ ಘಟನೆ ನಮ್ಮನ್ನು ವಿನಾಶಕಾರಿ ದುರಂತ ಎದುರಿಸುವ ಸ್ಥಿತಿಗೆ ತಂದಿದೆ. ಘಟನೆಯಲ್ಲಿ ಮೃತಪಟ್ಟವರಿಗೆ ಸಂತಾಪಗಳು. ಕಠಿಣ ಗಳಿಗೆಯಲ್ಲಿ ದೇಶ ಸಮಾನವಾಗಿ ದುಃಖ ಹಂಚಿಕೊಳ್ಳಲಿದೆ

ಜಗದೀಪ್ ಧನಕರ್, ಉಪ ರಾಷ್ಟ್ರಪತಿ



ವಿಮಾನ ದುರಂತವು ಪದಗಳಿಗೂ ಮೀರಿದ ನೋವುಂಟು ಮಾಡಿದೆ. ವಿಪತ್ತು ನಿರ್ವಹಣಾ ತಂಡಗಳು ರಕ್ಷಣಾ ಕಾರ್ಯ ಕೈಗೊಂಡಿವೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ವಿಮಾನ ಪತನದ ಸುದ್ದಿ ತಿಳಿದು ಆಘಾತ ಮತ್ತು ಹೃದಯ ಒಡೆದಂತಾಯ್ತು. ವೈಯಕ್ತಿಕವಾಗಿ ನಾನೇ ಪರಿಸ್ಥಿತಿ ನಿರ್ವಹಿಸುತ್ತಿದ್ದೇನೆ. ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರು, ಸಿಬ್ಬಂದಿಯ ಕುಟುಂಬಗಳಿಗಾಗಿ ಪ್ರಾರ್ಥಿಸುವೆ

ರಾಮ ಮೋಹನ ನಾಯ್ಡು, ನಾಗರಿಕ ವಿಮಾನಯಾನ ಸಚಿವ

ಏರ್ ಇಂಡಿಯಾ ವಿಮಾನ ದುರಂತವು ಭಯಾನಕವಾಗಿದೆ. ಅತ್ಯಂತ ಸಂಕಟದ ಸಮಯದಲ್ಲಿ ಪ್ರಯಾಣಿಕರು ಮತ್ತು ಅವರ ಕುಟುಂಬ ಸದಸ್ಯರಿಗೆ ನನ್ನ ಸಹಾನುಭೂತಿ ವ್ಯಕ್ತಪಡಿಸುವೆ. ನಾವು ಪ್ರತಿ ಕ್ಷಣದ ಮಾಹಿತಿಯನ್ನು ಪಡೆಯುತ್ತಿದ್ದೇವೆ

ಕಿಯರ್ ಸ್ಟಾರ್ಮರ್, ಬ್ರಿಟನ್ ಪ್ರಧಾನಿ

ಅಹಮದಾಬಾದ್‌ನ ಭಯಾನಕ ಘಟನೆ ಕೇಳಿ ದಿಗ್ಭ್ರಮೆಯಾಯಿತು. ಇದು ಅತೀವ ದುಃಖದ ಮತ್ತು ಆಘಾತಕಾರಿಯಾದ ಸಮಯ. ದುರಂತದಲ್ಲಿ ಮಡಿದವರ ಕುಟುಂಬಗಳಿಗೆ ನಾನು ಮತ್ತು ನನ್ನ ಪತ್ನಿ ವಿಶೇಷ ಪ್ರಾರ್ಥನೆ ಸಲ್ಲಿಸುತ್ತೇವೆ

ಕಿಂಗ್ ಚಾರ್ಲ್ಸ್, ಬ್ರಿಟನ್ ದೊರೆ

ವಿಮಾನ ದುರಂತ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನಿಷ್ಪಕ್ಷಪಾತವಾಗಿ ಉನ್ನತ ಮಟ್ಟದಲ್ಲಿ ತನಿಖೆ ಮಾಡಬೇಕು'

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

ತಮ್ಮವರನ್ನು ಕಳೆದುಕೊಂಡ ಜನರ ನೋವು - ಸಂಕಟ ಕಂಡು ಮನಸ್ಸು ಮಮ್ಮಲ ಮರುಗುತ್ತಿದೆ. ಈ ನೋವಿನ ಗಳಿಗೆಯಲ್ಲಿ ಇಡೀ ದೇಶ ಅವರ ಜೊತೆಗಿದೆ. ಕೇಂದ್ರ ಸರ್ಕಾರ ಮೃತರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡುವ ಜೊತೆಗೆ ಉನ್ನತ ಮಟ್ಟದ ತನಿಖೆ ನಡೆಸಲಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿಮಾನ ದುರಂತ: ಕನಿಷ್ಠ 265 ಸಾವು

ಒಂದನೇ ಪುಟದಿಂದ...

ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರು ರಕ್ಷಣಾ ಕಾರ್ಯಾಚರಣೆ ನಡೆಸಿರುವುದು, ಪ್ರಯಾಣಿಕರ ಸುಟ್ಟು ಕರಕಲಾದ ದೇಹಗಳನ್ನು ದುರಂತದ ಸ್ಥಳದಿಂದ ಆಸ್ಪತ್ರೆಗಳಿಗೆ ಸಾಗಿಸುವ ದೃಶ್ಯಗಳನ್ನು ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ. ಗಾಯಾಳುಗಳನ್ನು ಆಸ್ಪತ್ರೆಗಳಿಗೆ ಕರೆದೊಯ್ಯುವುದನ್ನೂ ಕೆಲವು ವಿಡಿಯೊಗಳು ತೋರಿಸಿವೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಒಳಗೊಂಡಂತೆ ವಿಶ್ವದ ವಿವಿಧ ದೇಶಗಳ ನಾಯಕರು ದುರಂತದ ಬಗ್ಗೆ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಸುದೀರ್ಘ ಪ್ರಯಾಣಕ್ಕಾಗಿ ಭಾರಿ ಪ್ರಮಾಣದ ಇಂಧನ ತುಂಬಿಸಿದ್ದರಿಂದ ವಿಮಾನವು ಬಿದ್ದಾಗ ಉಂಟಾದ ಬೆಂಕಿಯ ಪ್ರಮಾಣ ಹೆಚ್ಚಲು ಕಾರಣ ಎಂದು ವರದಿಗಳು ತಿಳಿಸಿವೆ.

ಬಿಜೆಪಿ ಮುಖಂಡ, ಎರಡು ಬಾರಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ವಿಜಯ್ ರೂಪಾನಿ ಅವರು ಮೃತಪಟ್ಟಿರುವುದು ದೃಢಪಟ್ಟಿದೆ. 'ಇದು ತುಂಬಾ ದುಃಖಕರ ಘಟನೆ. ವಿಜಯ್ ರೂಪಾನಿ ಅವರನ್ನು ನಾವು ಅಪಘಾತದಲ್ಲಿ ಕಳೆದುಕೊಂಡಿದ್ದೇವೆ' ಎಂದು ಕೇಂದ್ರ ಸಚಿವ ಸಿ.ಆರ್.ಪಾಟೀಲ್ ತಿಳಿಸಿದ್ದಾರೆ.

ಘಟನೆಯ ಬೆನ್ನಲ್ಲೇ,

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಭೂಪೇಂದ್ರ ಪಟೇಲ್

ಅಹಮದಾಬಾದ್ ವಿಮಾನ ನಿಲ್ದಾಣ ತನ್ನ ಎಲ್ಲ ಕಾರ್ಯಾಚರಣೆಗಳನ್ನು ಸಂಜೆಯವರೆಗೆ ಸ್ಥಗಿತಗೊಳಿಸಿತು. ಇಲ್ಲಿಗೆ ಬಂದಿಳಿಯಬೇಕಿದ್ದ ಹಲವು ವಿಮಾನಗಳು ಮಾರ್ಗ ಬದಲಿಸಿ ಬೇರೆ ನಿಲ್ದಾಣಗಳಲ್ಲಿ ಇಳಿದವು.

ದುರಂತಕ್ಕೆ ಏನು ಕಾರಣ ಎಂಬುದನ್ನು ತಿಳಿಯಲು ವಿಮಾನದ ಬ್ಲ್ಯಾಕ್ ಬಾಕ್ಸ್, ಫ್ಲೈಟ್ ಡೇಟಾ ರೆಕಾರ್ಡರ್ ಮತ್ತು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್‌ಗಾಗಿ ಹುಡುಕಾಟ ನಡೆಸಲಾಗಿದೆ ಎಂದು ವಿಮಾನಯಾನ ಸಂಸ್ಥೆಯ ಮೂಲಗಳು ತಿಳಿಸಿವೆ.

'ನಾವು ಸ್ಥಳಕ್ಕೆ ತಲುಪಿದಾಗ ಹಲವಾರು ಮೃತದೇಹಗಳು ಸುತ್ತಲೂ ಬಿದ್ದಿದ್ದವು ಅನೇಕ ಮೃತದೇಹಗಳು ಸುಟ್ಟು ಹೋಗಿದ್ದವು' ಎಂದು ಸ್ಥಳೀಯ ನಿವಾಸಿ ಪೂನಂ ಪಾಟ್ನಿ ಅವರು ತಾವು ಕಂಡ ದೃಶ್ಯವನ್ನು ವಿವರಿಸಿದ್ದಾರೆ.

'ಮೊಬೈಲ್ ರಿಂಗಣಿಸುತ್ತಿದ್ದರೂ.. ಕರೆ ಸ್ವೀಕರಿಸುತ್ತಿಲ್ಲ...'

ಇಂಫಾಲ್/ಮುಂಬೈ(ಪಿಟಿಐ): ಅಹಮದಾಬಾದ್‌ನಿಂದ ಲಂಡನ್‌ಗೆ ಹೊರಟಿದ್ದ ನತದೃಷ್ಟ ವಿಮಾನದ ಮಹಿಳಾ ಸಿಬ್ಬಂದಿಯಲ್ಲಿ ಒಬ್ಬರಾದ, ಮಣಿಪುರದ ಥೌಬಾಲ್ ಜಿಲ್ಲೆಯ ಕೊಂಗಬ್ರಾಯಿಲಾಟ್ಪಮ್ ನಗನಥೋಯಿ ಶರ್ಮಾ ಅವರ ಕುಟುಂಬ ಸದಸ್ಯರಲ್ಲಿಯೂ ಆತಂಕ ಮನೆ ಮಾಡಿದೆ. ಆದರೆ, ಆಕೆ ಬದುಕುಳಿದಿರುವ ಕುರಿತ ಭರವಸೆಯನ್ನು ಇನ್ನೂ ಕಳೆದುಕೊಂಡಿಲ್ಲ.

ಈ ಅಪಘಾತದಲ್ಲಿ ಮೃತಪಟ್ಟವರ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಇನ್ನೂ ಬಿಡುಗಡೆ ಮಾಡಿಲ್ಲ. ಅಲ್ಲದೇ, ಶರ್ಮಾ ಅವರ ಮೊಬೈಲ್ ಸ್ವಿಚ್ ಆನ್ ಇದ್ದು, ಕರೆ ಹೋಗುತ್ತಿರುವುದೇ ಈ ಭರವಸೆಗೆ ಕಾರಣ.

ತಾಂತ್ರಿಕ ಲೋಪದ ಶಂಕೆ

ಅಹಮದಾಬಾದ್ ವಿಮಾನ ದುರಂತ: ಸುರಕ್ಷತಾ ತಂತ್ರಜ್ಞರ ವಿಶ್ಲೇಷಣೆ

ವಾಷಿಂಗ್ಟನ್ (ಎಪಿ): 'ದುರಂತಕ್ಕೊಳಗಾದ ವಿಮಾನವು ಹಾರಾಟಕ್ಕೆ ತಾಂತ್ರಿಕವಾಗಿ ಸಂಪೂರ್ಣವಾಗಿ ಸಜ್ಜುಗೊಂಡಿರಲಿಲ್ಲ' ಎಂದು ಅಮೆರಿಕದ ತಂತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಪತನಗೊಂಡ ವಿಮಾನವು ಹಾರಾಟ ನಡೆಸುವುದಕ್ಕೆ ತಾಂತ್ರಿಕವಾಗಿ ಸಂಪೂರ್ಣವಾಗಿ ಸಜ್ಜುಗೊಂಡಿತ್ತೇ ಎಂದು ತನಿಖಾಧಿಕಾರಿಗಳು ಪ್ರಶ್ನಿಸಿದರು' ಎಂದು ವಾಷಿಂಗ್ಟನ್ ಮೂಲದ ವಿಮಾನಯಾನ ಸುರಕ್ಷತಾ ಸಲಹೆಗಾರ ಜಾನ್ ಎಂ. ಕಾಕ್ಸ್ ಹೇಳಿದರು.

'ಈಗಲೇ ಯಾವುದೇ ನಿರ್ಧಾರಕ್ಕೆ ಬರಲಾಗದು. ಆದರೆ, ಪತನಗೊಂಡ ವಿಮಾನದ ಚಿತ್ರಗಳನ್ನು ಗಮನಿಸಿದಾಗ, ವಿಮಾನದ ರೆಕ್ಕೆಯಂಚಿನಲ್ಲಿರುವ ಕವಾಟದ ವಿನ್ಯಾಸದಲ್ಲಿ ವ್ಯತ್ಯಾಸ ಇದೆಯೇ ಎನ್ನುವುದರ ಕುರಿತು ತನಿಖೆ ನಡೆಯುವ ಅಗತ್ಯ ಇದೆ ಎನಿಸುತ್ತದೆ. ಕವಾಟದ ಸ್ಥಾನ, ರಚನೆಯಲ್ಲಿ ವ್ಯತ್ಯಾಸ ಇದ್ದರೆ, ವಿಮಾನ ಮೇಲೇರಲು ಅಡ್ಡಿಯಾಗುತ್ತದೆ. ಕವಾಟ ಇರುವ ಸ್ಥಾನ ನಿರ್ದಿಷ್ಟ ಸ್ಥಳದಲ್ಲಿದ್ದರೆ ಮಾತ್ರ ಟೇಕಾಫ್ ವೇಳೆ ಕಡಿಮೆ ವೇಗ ಇದ್ದರೂ ವಿಮಾನ ಸುಲಭವಾಗಿ ಮೇಲೇರುತ್ತದೆ' ಎಂದು ಜಾನ್ ಹೇಳಿದರು.

'ವಿಮಾನ ಪತನಕ್ಕೆ ಕಾರಣ ಏನು ಎಂದು ಇಷ್ಟು ಬೇಗ ಹೇಳಲಾಗದು. ಮೊದಲ ನೋಟಕ್ಕೆ ಇದು ಅತ್ಯಂತ ಆಶ್ಚರ್ಯಕರ ಸಂಗತಿ' ಎಂದು ನ್ಯೂಯಾರ್ಕ್ ವಿಶ್ವವಿದ್ಯಾಲಯ ಸೇಫ್ಟಿ ಎಂಜಿನಿಯರಿಂಗ್ ತಜ್ಞ ಜಾನ್ ಮ್ಯಾಕ್‌ಡರ್ಮಿಡ್ ಹೇಳಿದ್ದಾರೆ.

'ದುರಂತಕ್ಕೊಳಗಾದ ವಿಮಾನವು 200 ಮೀಟರ್ ಅಥವಾ 650 ಅಡಿಗಳಿಗಿಂತ ಹೆಚ್ಚು ಮೇಲೇರಿರಲಿಲ್ಲ' ಎಂದು ಅವರು ಹೇಳಿದ್ದಾರೆ.

ಅಗಲವಾದ ದೇಹ ವಿನ್ಯಾಸ ಹೊಂದಿರುವ ಈ ವಿಮಾನವು ಅವಳಿ ಎಂಜಿನ್ ಹೊಂದಿದೆ. 2009ರಲ್ಲಿ ಡ್ರೀಮ್‌ಲೈನರ್ ಸರಣಿಯ ವಿಮಾನಗಳು ಕಾರ್ಯಾಚರಣೆ ಆರಂಭಿಸಿದ ನಂತರ ನಡೆದ ಮೊದಲ ದುರಂತ ಇದಾಗಿದೆ ಎನ್ನುತ್ತದೆ ವಿಮಾನ ಯಾನ ಸುರಕ್ಷಾ ಜಾಲದ ದತ್ತಾಂಶಗಳು.

ಬೋಯಿಂಗ್ 787: ಮೊದಲ ಬಾರಿಗೆ ದುರಂತ

ಅಹಮದಾಬಾದ್ (ರಾಯಿಟರ್ಸ್): ಅಮೆರಿಕದ ಬೋಯಿಂಗ್ ಕಂಪನಿಯ '787 ಡ್ರೀಮ್‌ಲೈನರ್' ವಿಮಾನವು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿದೆ. ಈ ವಿಮಾನವು ಪ್ರಯಾಣಕ್ಕೆ ಅತ್ಯಂತ ಸುರಕ್ಷಿತ ಎನ್ನುತ್ತಾರೆ ತಜ್ಞರು. ಆದರೆ, ಇದೇ ಮೊದಲ ಬಾರಿಗೆ '787 ಡ್ರೀಮ್‌ಲೈನರ್' ವಿಮಾನವು ಅಪಘಾತಕ್ಕೀಡಾಗಿದೆ. 787 ವಿಮಾನವು 2011ರಲ್ಲಿ ಮೊದಲ ಬಾರಿಗೆ ಹಾರಾಟ ನಡೆಸಿತ್ತು.

ಅಹಮದಾಬಾದ್‌ನಲ್ಲಿ ಪತನಗೊಂಡಿದ್ದು '787-8' ಎನ್ನುವ ಮಾದರಿಯ ವಿಮಾನ. 2014ರಲ್ಲಿ ಈ ವಿಮಾನವು ಹಾರಾಟ ಆರಂಭಿಸಿತ್ತು. '787 ಡ್ರೀಮ್‌ಲೈನರ್'ನಲ್ಲಿ ಒಟ್ಟು ಮೂರು ಮಾದರಿಗಳಿವೆ. ಈ ಮೂರರಲ್ಲಿ ಗುರುವಾರ ಪತನಗೊಂಡಿದ್ದು ಅತ್ಯಂತ ಸಣ್ಣ ವಿಮಾನದ ಮಾದರಿ ಆಗಿದೆ.

787 ವಿಮಾನದಲ್ಲಿ ಎರಡು ಎಂಜಿನ್‌ಗಳಿರುತ್ತವೆ. ಇವುಗಳನ್ನು 'ಜಿಇ ಏರೋಸ್ಪೇಸ್' ಅಥವಾ ಬ್ರಿಟನ್‌ನ 'ರೋಲ್ಸ್ ರಾಯ್ಸ್' ಕಂಪನಿ ಪೂರೈಸುತ್ತದೆ. ಅಪಘಾತಕ್ಕೀಡಾದ ವಿಮಾನಕ್ಕೆ 'ಜಿಇ ಏರೋಸ್ಪೇಸ್' ಕಂಪನಿ ಇಂಜಿನ್ ಪೂರೈಸಿತ್ತು.

ತನಿಖಾ ತಂಡ ಕಳುಹಿಸಲು ಸಿದ್ಧ: (ವಾಷಿಂಗ್ಟನ್ (ಎಪಿ): ಭಾರತದ ಅಧಿಕಾರಿಗಳು ಮನವಿ ಮಾಡಿದರೆ, ಏರ್ ಇಂಡಿಯಾ ವಿಮಾನ ದುರಂತದ ತನಿಖೆಗೆ ಸಹಾಯ ಮಾಡಲು ತಂಡವನ್ನು ಕಳುಹಿಸಲಾಗುವುದು ಎಂದು ಅಮೆರಿಕ ಸರ್ಕಾರ ಗುರುವಾರ ಹೇಳಿದೆ.

ಅಮೆರಿಕದ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿ (ಎನ್‌ಟಿಎಸ್‌ಬಿ) ಹಾಗೂ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ತಾಂತ್ರಿಕ ಸಹಾಯ ಒದಗಿಸಲು ಸಿದ್ಧವಿರುವುದಾಗಿ ಹೇಳಿವೆ.

ವಾರ್ಷಿಕ 450ಕ್ಕೂ ಹೆಚ್ಚು ಅಂತರರಾಷ್ಟ್ರೀಯ ದುರಂತಗಳಿಗೆ ಕಾರಣವಾದ ಅಂಶಗಳನ್ನು ಪತ್ತೆ ಮಾಡಲು ಎನ್‌ಟಿಎಸ್‌ಬಿ ತಾಂತ್ರಿಕ ಸಹಾಯ ಒದಗಿಸುತ್ತಿದೆ.

'ನೆರವು ನೀಡುತ್ತೇವೆ: (ವಾಷಿಂಗ್ಟನ್ (ಎಎಫ್‌ಪಿ): ಲಂಡನ್‌ಗೆ ಹಾರುತ್ತಿದ್ದ ಏರ್‌ಇಂಡಿಯಾ ವಿಮಾನವು ಅಹಮದಾಬಾದ್‌ನಲ್ಲಿಯೇ ಪತನಗೊಂಡ ಬೆನ್ನಲ್ಲೇ, 'ಏರ್ ಇಂಡಿಯಾ ಸಂಸ್ಥೆಗೆ ಅಗತ್ಯ ನೆರವು ನೀಡಲು ಸಿದ್ಧ' ಎಂದು ಅಮೆರಿಕದ ವಿಮಾನ ತಯಾರಿಕಾ ಕಂಪನಿ ಬೋಯಿಂಗ್ ತಿಳಿಸಿದೆ.'ಬೋಯಿಂಗ್ 787-8 ಡ್ರೀಮ್‌ಲೈನರ್'ಗೆ ಸಂಬಂಧಿಸಿದಂತೆ, ನಾವು ಏರ್ ಇಂಡಿಯಾದ ಜೊತೆ ಸಂಪರ್ಕದಲ್ಲಿದ್ದು, ಅಗತ್ಯ ನೆರವು ನೀಡಲು ಸಿದ್ಧರಿದ್ದೇವೆ. ದುರಂತದಲ್ಲಿ ಮೃತಪಟ್ಟ ಪ್ರಯಾಣಿಕರು, ಸಿಬ್ಬಂದಿ ಕುಟುಂಬಸ್ಥರ ದುಃಖದಲ್ಲಿ ನಾವಿದ್ದೇವೆ' ಎಂದು ತಿಳಿಸಿದೆ.

ಹಾರಾಟ ಪುನರಾರಂಭ

ಅಹಮದಾಬಾದ್ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತದ ಬೆನ್ನಲ್ಲೇ, ಇಲ್ಲಿನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸ್ಥಗಿತಗೊಳಿಸಲಾಗಿದ್ದ ವಿಮಾನ ಹಾರಾಟವನ್ನು ಗುರುವಾರ ಸಂಜೆ ಸೀಮಿತ ಪ್ರಮಾಣದಲ್ಲಿ ಪುನರಾರಂಭಿಸಲಾಯಿತು.

'ಕೆಲವು ಮಾರ್ಗಗಳಲ್ಲಿ, ಸೀಮಿತ ಸಂಖ್ಯೆಯಲ್ಲಿ ವಿಮಾನ ಹಾರಾಟ ಪುನರಾರಂಭಿಸಲಾಗಿದೆ. ಪ್ರಯಾಣಿಕರು, ತಾವು ಟಿಕೆಟ್ ಕಾಯ್ದಿರಿಸುವ ವಿಮಾನದ ಹಾರಾಟ ಇದೆಯೇ ಇಲ್ಲವೇ ಎನ್ನುವುದನ್ನು ಖಚಿತಪಡಿಸಿಕೊಂಡ ಬಳಿಕವೇ ನಿಲ್ದಾಣಕ್ಕೆ ಬರಬೇಕು' ಎಂದು ವಿಮಾನ ನಿಲ್ದಾಣದ ವಕ್ತಾರ ಮನವಿ ಮಾಡಿದ್ದಾರೆ.

ಶಾಂತ ಸ್ವಭಾವ, ಬಿಗಿ ಆಡಳಿತಕ್ಕೆ ಹೆಸರಾಗಿದ್ದ ವಿಜಯ ರೂಪಾನಿ

ಅಹಮದಾಬಾದ್(ಪಿಟಿಐ): ಏರ್ ಇಂಡಿಯಾ ವಿಮಾನ ಪತನಗೊಂಡು ಮೃತಪಟ್ಟಿರುವ ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ ರೂಪಾನಿ ಅವರು ಶಾಂತ ಸ್ವಭಾವ ಹಾಗೂ ಸಮಾಧಾನದಿಂದ ಕೂಡಿದ ವರ್ತನೆಗೆ ಹೆಸರಾಗಿದ್ದರು.

2016ರ ಆಗಸ್ಟ್‌ನಿಂದ 2021ರ ಸೆಪ್ಟೆಂಬರ್‌ವರೆಗೆ ಮುಖ್ಯಮಂತ್ರಿಯಾಗಿದ್ದ ಅವರು, ಆಡಳಿತದ ಮೇಲೆ ಪ್ರಬಲ ಹಿಡಿತ ಹೊಂದಿದ್ದರು. ಕೋವಿಡ್-19 ಪಿಡುಗಿನಿಂದ ರಾಜ್ಯವು ಚೇತರಿಸಿಕೊಳ್ಳುತ್ತಿದ್ದ ಸಮಯದಲ್ಲಿ ಅವರು ಸರ್ಕಾರದ ನೇತೃತ್ವ ವಹಿಸಿದ್ದರು. ಆ ಕ್ಲಿಷ್ಟಕರ ಸಂದರ್ಭವನ್ನು ನಿಭಾಯಿಸುವ ಮೂಲಕ ರೂಪಾನಿ ಗಮನ ಸೆಳೆದಿದ್ದರು.

ಕಾಲೇಜು ದಿನಗಳಲ್ಲಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ಸಕ್ರಿಯ ಕಾರ್ಯಕರ್ತರಾಗಿದ್ದ ಅವರು, ಹಲವು ಹೋರಾಟಗಳನ್ನು ಸಂಘಟಿಸುವ ಮೂಲಕ ವಿದ್ಯಾರ್ಥಿ ನಾಯಕರಾಗಿ ಹೊರಹೊಮ್ಮಿದ್ದರು. ತುರ್ತು ಪರಿಸ್ಥಿತಿ ವಿರೋಧಿ ಚಳವಳಿಯಲ್ಲಿ ಪಾಲ್ಗೊಂಡಿದ್ದಕ್ಕಾಗಿ 1975ರಲ್ಲಿ ಅವರನ್ನು ಒಂದು ವರ್ಷ ಭಾವನಗರ ಜೈಲಿನಲ್ಲಿ ಇರಿಸಲಾಗಿತ್ತು.

ವಿಜಯ ರೂಪಾನಿ

1987ರಲ್ಲಿ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದ ಅವರು, ರಾಜ್‌ನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದರು. ನಂತರ, ಮೇಯರ್ ಆಗಿಯೂ ಕಾರ್ಯನಿರ್ವಹಿಸಿದ್ದರು. 2006 ಹಾಗೂ 2012 ನಡುವೆ ರಾಜ್ಯಸಭಾ ಸಂಸದರಾಗಿದ್ದರು.

ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ರೂಪಾನಿ ಅವರು 2020ರಲ್ಲಿ ನೂತನ ಕೈಗಾರಿಕೆ ನೀತಿ ಜಾರಿಗೊಳಿಸಿದ್ದರು. ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದ ವೇಳೆ, 2021ರ ಸೆಪ್ಟೆಂಬರ್‌ನಲ್ಲಿ ಅಧಿಕಾರ ತ್ಯಜಿಸಿದ್ದರು. ಆಗ, ಭೂಪೇಂದ್ರ ಪಟೇಲ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ವಿಜಯ್ ರೂಪಾನಿ ಅವರು ಪ್ರಸ್ತುತ ಬಿಜೆಪಿ ಪಂಜಾಬ್ ರಾಜ್ಯ ಘಟಕದ ಉಸ್ತುವಾರಿಯಾಗಿದ್ದರು. ಅವರ ಸಾವು ಪಂಜಾಬ್ ಬಿಜೆಪಿ ಮುಖಂಡರಲ್ಲಿ ದಿಗ್ಭ್ರಮೆ ಮೂಡಿಸಿದೆ.

158 ಮಂದಿಯನ್ನು ಬಲಿ ಪಡೆದಿದ್ದ 2010ರ ಮಂಗಳೂರು ವಿಮಾನ ದುರಂತ

ವರುಷ 15 ಉರುಳಿದರೂ ಕಾಡುತ್ತಿದೆ ಕರಾಳ ನೆನಪು

ಪ್ರಜಾವಾಣಿ ವಾರ್ತೆ

ಮಂಗಳೂರು: ಅಂದು 2010ರ ಮೇ 22. ಆಗಿನ್ನೂ ಮುಂಜಾನೆ 6.03 ನಿಮಿಷ. ದುಬೈನಿಂದ ಒಟ್ಟು 166 ಪ್ರಯಾಣಿಕರನ್ನು ಕರೆತಂದಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ 812 ವಿಮಾನದ ಪೈಲಟ್ ಝ್ಲಾಟ್ಕೊ ಗ್ಲುಸಿಕಾ ಬಜಪೆಯ ಮಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ವಿಮಾನವನ್ನು ಇಳಿಸುವುದಕ್ಕೆ ಸಜ್ಜಾಗುತ್ತಿದ್ದರು. ಅಷ್ಟರಲ್ಲಿ ಘೋರ ದುರಂತವೇ ಸಂಭವಿಸಿತ್ತು.

ರನ್‌ವೇಯಲ್ಲಿ ಇಳಿಯಬೇಕಾದ ಜಾಗಕ್ಕಿಂತ ಸ್ವಲ್ಪ ಮುಂದೆ (5200 ಅಡಿ) ವಿಮಾನ ಭೂಸ್ಪರ್ಶಮಾಡಿತ್ತು. ವೇಗವನ್ನು ನಿಯಂತ್ರಿಸಿ ವಿಮಾನವನ್ನು ಪೂರ್ತಿ ನಿಲ್ಲಿಸುವುದಕ್ಕೆ ಇದ್ದುದು 2800 ಅಡಿ ಉದ್ದದ ರನ್‌ವೇ ಮಾತ್ರ. ಅಷ್ಟರಲ್ಲಿ ಪೈಲಟ್ ಬಾಯಿಂದ 'ಓ ಮೈ ಗಾಡ್' ಉದ್ಗಾರ ಹೊರ ಬಿದ್ದಿತ್ತು. ಅನಾಹುತ ಸಂಭವಿಸಬಹುದು ಎಂಬ ಸುಳಿವು ಸಿಗುತ್ತಲೇ ಸಹಪೈಲಟ್ ಎಚ್.ಎಸ್. ಅಹ್ಲುವಾಲಿಯ ವಿಮಾನವನ್ನು ಮತ್ತೆ ಮೇಲಕ್ಕೆ ಹಾರಿಸುವಂತೆ ಪದೇ ಪದೇ ಸಲಹೆ ನೀಡಿದ್ದರೂ ಪೈಲಟ್ ಗ್ಲುಸಿಕಾ ಕಡೆಗಣಿಸಿದ್ದರು. ಪೈಲಟ್ ಬ್ರೇಕ್ ಹಾಕಿ, ರಿವರ್ಸ್ ಥ್ರಸ್ಟ್ ಎಳೆದು ವಿಮಾನವನ್ನು ನಿಲ್ಲಿಸಲು ಯತ್ನಿಸುವಷ್ಟರಲ್ಲಿ ಅದು ರನ್‌ವೇ ಅಂಚನ್ನು ದಾಟಿ, ರನ್‌ವೇ ತುದಿಯ ಸುರಕ್ಷತಾ ಪ್ರದೇಶಕ್ಕೆ (ರೇಸಾ) ನುಗ್ಗಿತ್ತು. ಇನ್ನು ವಿಮಾನ ನಿಲ್ಲಿಸಲು ಸಾಧ್ಯವಿಲ್ಲ ಎಂಬುದನ್ನರಿತ ಪೈಲಟ್

ರನ್‌ವೇನಿಂದ ಕೆಳಗೆ ಉರುಳಿಬಿದ್ದಿದ್ದ ವಿಮಾನ– ಪ್ರಜಾವಾಣಿ ಚಿತ್ರ

ವಿಮಾನವನ್ನು ಮತ್ತೆ ಹಾರಾಟ ನಡೆಸಲು ಯತ್ನಿಸಿದ್ದ. ಇನ್ನೇನು ಮೇಲಕ್ಕೇರಿತು ಎನ್ನುವಷ್ಟರಲ್ಲಿ ವಿಮಾನದ ಬಲ ರೆಕ್ಕೆ ವಿಮಾನ ನಿಲ್ದಾಣದಲ್ಲಿ ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್‌ನ ಲೋಕಲೈಸರ್ ಆಂಟೆನಾ ಅಳವಡಿಸಿದ್ದ ಗೋಪುರಕ್ಕೆ ಬಡಿದು, ಕೆಂಜಾರು ಗ್ರಾಮದ ಪ್ರಪಾತಕ್ಕೆ ಉರುಳಿತ್ತು.

ವಿಮಾನ ನೆಲಕ್ಕಪ್ಪಳಿಸಿದಾಗ ಸಂಭವಿಸಿದ ಸ್ಫೋಟದ ಬೆಂಕಿ ವಿಮಾನದಲ್ಲಿದ್ದ ನಾಲ್ವರು ಮಕ್ಕಳು ಸೇರಿದಂತೆ 158 ಪ್ರಯಾಣಿಕರ ಜೀವವನ್ನೇ ಆಪೋಶನ ಪಡೆದಿತ್ತು. ಅವರ ಮೃತದೇಹಗಳು ಗುರುತಿಸಲಾಗದಷ್ಟು ಸುಟ್ಟು ಕರಕಲಾಗಿದ್ದವು. ಈ ನಡುವೆಯೂ ಎಂಟು ಮಂದಿ ಪವಾಡ ಸದೃಶವಾಗಿ ಬದುಕಿದ್ದರು.

ಕರಕಲು ದೇಹಗಳ ಕರಾಳ ನೆನಪು: ವಿಮಾನಪತನದ ಸುದ್ದಿ ಮಿಂಚಿನಂತೆ ಹಬ್ಬಿತ್ತು. ವಿಮಾನ ಬಿದ್ದು ಒಂದು ಗಂಟೆ ಕಳೆಯುವಷ್ಟರಲ್ಲಿ ವಿಮಾನದ ಅವಶೇಷವಿದ್ದ ಕೆಂಜಾರಿನ ಪ್ರಪಾತದ ಬಳಿ ನೂರಾರು ಮಂದಿ ಸೇರಿದ್ದರು. ವಿಮಾನದಲ್ಲಿದ್ದ ಪ್ರಯಾಣಿಕರನ್ನು ರಕ್ಷಿಸುವ ಧಾವಂತದಲ್ಲಿದ್ದವರಿಗೆ ಸಿಕ್ಕಿದ್ದು ಕರಕಲಾದ ಮೃತದೇಹಗಳು ಮಾತ್ರ. ಸುಮಾರು 100 ಅಡಿಗೂ ಹೆಚ್ಚು ಆಳದ ಪ್ರಪಾತದಿಂದ ಪ್ರಯಾಣಿಕರ ಮೃತದೇಹಗಳನ್ನು ಮೇಲಕ್ಕೆತ್ತುವುದು ಮತ್ತೊಂದು ಸವಾಲಾಗಿತ್ತು. ನಿಗಿ ನಿಗಿ ಕೆಂಡದಂತಿದ್ದ ವಿಮಾನದ ಅವಶೇಷ ಬಳಿಗೆ ಜನ ಸುಳಿಯಲೂ ಸಾಧ್ಯವಾಗದಷ್ಟು ಬಿಸಿ ಅಲ್ಲಿ ಆವರಿಸಿತ್ತು. ಕಿರಿದಾದ ರಸ್ತೆಯಲ್ಲೇ ಹರಸಾಹಸ ಪಟ್ಟು ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ಕರೆಸಿ ನೀರು ಹಾಯಿಸಿದ ಬಳಿಕ ಒಂದೊಂದೇ ಮೃತದೇಹಗಳನ್ನು ಹೊರತೆಗೆಯಲಾಗಿತ್ತು. ಕಾರ್ಯಾಚರಣೆಗೆ ಸ್ಥಳೀಯರೂ ಕೈಜೋಡಿಸಿದ್ದರು. ಇಳಿಜಾರಿನಲ್ಲಿ ಜಾರುತ್ತಿದ್ದ ಕಾಲುದಾರಿಯಲ್ಲಿ 158 ಮೃತದೇಹಗಳನ್ನು ಮೇಲಕ್ಕೆತ್ತುವಾಗ ಸಂಜೆಯಾಗಿತ್ತು.

ಸ್ಮಾರಕ: ಈ ದುರಂತದಲ್ಲಿ ಮೃತಪಟ್ಟವರಿಗಾಗಿ ಕೂಳೂರು ಸೇತುವೆ ಬಳಿ ತಣ್ಣೀರುಬಾವಿ ರಸ್ತೆ ಪಕ್ಕ ಸ್ಮಾರಕವನ್ನು ನಿರ್ಮಿಸಲಾಗಿದೆ. ಜಿಲ್ಲಾಡಳಿತ ಪ್ರತಿ ವರ್ಷವೂ ಮೇ 22ರಂದು ಶ್ರದ್ಧಾಂಜಲಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ.

ಈ ಘೋರ ದುರಂತ ಜನರ ಸ್ಮೃತಿ ಪಟಲದಿಂದ ನಿಧಾನವಾಗಿ ಮರೆಯಾಗಿತ್ತು. ಗುಜರಾತಿನ ಅಹಮದಾಬಾದ್‌ನಲ್ಲಿ ಸಂಭವಿಸಿದ ವಿಮಾನ ದುರಂತ ಆ ಕರಾಳ ದುರಂತವನ್ನು ಮತ್ತೆ ನೆನಪು ಮಾಡಿದೆ.

ಈಗಲೂ ಅಸುರಕ್ಷಿತ ವಿಮಾನ ನಿಲ್ದಾಣ!

ಬೆಟ್ಟದ ಮೇಲಿರುವ ಬಜಪೆಯ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದೇಶದ ಬೆರಳೆಣಿಕೆಯ 'ಟೇಬಲ್ ಟಾಪ್' ವಿಮಾನ ನಿಲ್ದಾಣಗಳಲ್ಲಿ ಒಂದು. ಇಲ್ಲಿ ವಿಮಾನ ಹಾರಾಟ ನಡೆಸುವ ಪೈಲಟ್‌ಗಳಿಗೆ ವಿಶೇಷ ಪರಿಣತಿ ಅಗತ್ಯ. 2010ರಲ್ಲಿ ಸಂಭವಿಸಿದ ವಿಮಾನದುರಂತದ ತನಿಖೆ ನಡೆಸಿದ್ದ ಏರ್ ಮಾರ್ಷಲ್ ಬಿ.ಎನ್.ಗೋಖಲೆ ನೇತೃತ್ವದ ತಂಡ ದುರಂತಕ್ಕೆ ಕಾರಣವಾಗಿದ್ದ ಅಂಶಗಳ ಕುರಿತು ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿತ್ತು. ವಿಮಾನ ನಿಲ್ದಾಣದ ಲೋಪಗಳನ್ನು ಪಟ್ಟಿ ಮಾಡಿತ್ತು. ಅವುಗಳಲ್ಲಿ ಬಹುತೇಕ ಲೋಪಗಳನ್ನು ಸರಿಪಡಿಸಲಾಗಿದೆ. ಈ ವಿಮಾನ ನಿಲ್ದಾಣದ ರನ್‌ವೇ 8038 ಅಡಿ ಉದ್ದ ಇದೆ. ರನ್‌ವೇ ಪಟ್ಟಿ ಕೇವಲ 150 ಮೀ ಅಗಲ ಇದೆ. ಸುರಕ್ಷತಾ ಮಾನದಂಡ ಪ್ರಕಾರ ಇದು ಕನಿಷ್ಠ 300 ಮೀ ಅಗಲ ಇರಬೇಕಿದೆ.

ರನ್‌ವೇ ವಿಸ್ತರಣೆಗೆ ದುಬಾರಿ ವೆಚ್ಚವಾಗುತ್ತದೆ. ರನ್‌ವೇ ವಿಸ್ತರಿಸಿದರೂ ಈ ವಿಮಾನ ನಿಲ್ದಾಣಕ್ಕೆ ಇರುವ 'ಟೇಬಲ್ ಟಾಪ್' ಹಣೆಪಟ್ಟಿ ಕಳಚದು. ಅದರ ಬದಲು ಬೇರೆಯೇ ವಿಮಾನ ನಿಲ್ದಾಣ ನಿರ್ಮಿಸುವುದು ಸೂಕ್ತ ಎಂಬ ಅಭಿಪ್ರಾಯವೂ ಇದೆ. ಈ ವಿಮಾನನಿಲ್ದಾಣದ ನಿರ್ವಹಣೆಯನ್ನು ಕೆಲ ವರ್ಷಗಳ ಹಿಂದೆ ಅದಾನಿ ಗ್ರೂಪ್‌ನ ತೆಕ್ಕೆಗೆ ವಹಿಸಲಾಗಿದೆ. ಹಾಗಾಗಿ ಭೂಸ್ವಾಧೀನ ವೆಚ್ಚ ಭರಿಸಲು ರಾಜ್ಯ ಸರ್ಕಾರವೂ ಒಪ್ಪುತ್ತಿಲ್ಲ.

ಇನ್ನೂ ಆಘಾತದಲ್ಲಿ ಕೋಯಿಕ್ಕೋಡ್

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಗುರುವಾರ ಪತನಗೊಂಡು, ಪ್ರಯಾಣಿಕರು ಮೃತಪಟ್ಟಿರುವ ಈ ವೇಳೆ, 2020ರಲ್ಲಿ ಕೋಯಿಕ್ಕೋಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಂಭವಿಸಿದ್ದ ಅಪಘಾತವನ್ನು ಕೆಲವರು ನೆನಪಿಸಿಕೊಂಡಿದ್ದಾರೆ.

ಈ ಅಪಘಾತದಲ್ಲಿ ಗಾಯಗೊಂಡು, ಅಂಗವೈಕಲ್ಯದಿಂದ ಬಳಲುತ್ತಿರುವವರು ಇನ್ನೂ ಪರದಾಡುತ್ತಿದ್ದಾರೆ. ಅಪಘಾತಕ್ಕೆ ಕಾರಣವಾಗಿದ್ದ ರನ್‌ವೇನಲ್ಲಿ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸುವ ಕಾರ್ಯ ಕೂಡ ಇನ್ನೂ ಪೂರ್ಣಗೊಂಡಿಲ್ಲ.

2020ರ ಆಗಸ್ಟ್ 7ರಂದು, ದುಬೈನಿಂದ ಬಂದಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ವಿಮಾನ(ಐಎಕ್ಸ್ 1344) ಕೋಯಿಕ್ಕೋಡ್ ವಿಮಾನ ನಿಲ್ದಾಣದಲ್ಲಿ ಇಳಿಯುವ ವೇಳೆ, ರನ್‌ವೇ ದಾಟಿ ಮುಂದೆ ಸಾಗಿ ಬಿದ್ದಿತ್ತು.

ಕೋವಿಡ್-19ನಿಂದಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ಸಿಲುಕಿದ್ದ ಭಾರತೀಯರನ್ನು ಕರೆತರುವುದಕ್ಕಾಗಿ ಆರಂಭಿಸಿದ್ದ 'ವಂದೇ ಭಾರತ' ಕಾರ್ಯಕ್ರಮದ ಭಾಗವಾಗಿ ಈ ವಿಮಾನ ನಿಯೋಜನೆಗೊಂಡಿತ್ತು. ಇಬ್ಬರು ಪೈಲಟ್ ಸೇರಿ 21 ಜನರು ಮೃತಪಟ್ಟಿದ್ದರು ಹಾಗೂ ಸಿಬ್ಬಂದಿ ಸೇರಿ 165 ಮಂದಿ ಗಾಯಗೊಂಡಿದ್ದರು.

'ನಾನು ಈಗ ನಡೆದಾಡಬಲ್ಲೆ. ಹೀಗಾಗಿ ನಾನು ಅದೃಷ್ಟವಂತ. ಇತರ ಹಲವರಂತೆ ನನ್ನ ಪತ್ನಿ ಇನ್ನೂ ಗಾಲಿಕುರ್ಚಿ ಅವಲಂಬಿಸಿದ್ದಾಳೆ. ಹಲವು ಶಸ್ತ್ರಚಿಕಿತ್ಸೆಗಳಿಗೆ ಒಳಗಾದ ನಂತರವೂ ಮಹಿಳೆಯೊಬ್ಬರು ಇನ್ನೂ ಹಾಸಿಗೆಯಲ್ಲಿದ್ದಾರೆ' ಎಂದು ಈ ಅಪಘಾತದಲ್ಲಿ ಬದುಕುಳಿದಿರುವ ಸೈಫು ಹೇಳುತ್ತಾರೆ.

'ವಿಮಾನ ಅಪಘಾತದಲ್ಲಿ ಬದುಕುಳಿದವರು ಹಾಗೂ ಅವರ ಅವಲಂಬಿತರಿಗೆ ಪರಿಹಾರ ನೀಡಲಾಗಿದೆ. ಹೆಚ್ಚಿನ ಪರಿಹಾರ ಕೋರಿ ಕೆಲವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. 40 ಪ್ರಯಾಣಿಕರು ಅಂಗವಿಕಲರಾಗಿದ್ದು, ಅವರಿಗೆ ವೈದ್ಯಕೀಯ ನೆರವಿನ ಅಗತ್ಯ ಇದೆ. ಇವರಿಗೆ ಈಗಲೂ ಯಾವುದೇ ನೆರವು ಸಿಗುತ್ತಿಲ್ಲ' ಎಂದು ಅಪಘಾತದಲ್ಲಿ ಬದುಕುಳಿದವರು ಮತ್ತು ಸಂತ್ರಸ್ತರ ಅವಲಂಬಿತರ ಕ್ರಿಯಾ ಮಂಡಳಿಯ ಮುಖ್ಯಸ್ಥ ಅಬ್ದುರಹಿಮಾನ್ ಎಡಕ್ಕುನಿ ಹೇಳುತ್ತಾರೆ.

'ಕೋಯಿಕ್ಕೋಡ್‌ನಲ್ಲಿರುವುದು ಟೇಬಲ್ ಟಾಪ್ ವಿಮಾನ ನಿಲ್ದಾಣ. ಹೀಗಾಗಿ ರನ್‌ವೇ ವಿಸ್ತರಣೆಗೆ ಹೆಚ್ಚು ಜಮೀನು ಅಗತ್ಯ. ಇದೇ ಕಾರಣಕ್ಕಾಗಿ ರನ್‌ವೇ ವಿಸ್ತರಣೆ ಕಾರ್ಯ ವಿಳಂಬವಾಗುತ್ತಿರಬಹುದು' ಎಂದು ಸ್ಥಳೀಯ ಶಾಸಕ ಟಿ.ವಿ.ಇಬ್ರಾಹಿಂ ಹೇಳುತ್ತಾರೆ.

ಸದ್ಯ, ರನ್‌ವೇ ಉದ್ದ 2,850 ಮೀ. ಇದ್ದು, ಇದನ್ನು 3,400 ಮೀಟರ್‌ಗೆ ಹೆಚ್ಚಿಸಲು ಯೋಜನೆ ರೂಪಿಸಲಾಗಿದೆ. 2020ರಲ್ಲಿ ಅಪಘಾತ ಸಂಭವಿಸಿದ ನಂತರ, ಕೋಯಿಕ್ಕೋಡ್ ವಿಮಾನ ನಿಲ್ದಾಣದಿಂದ ದೊಡ್ಡ ವಿಮಾನಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವು ಕೋಯಿಕ್ಕೋಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್‌ವೇ ದಾಟಿ ಸಾಗಿ, ಅಪಘಾತಕ್ಕೀಡಾಗಿತ್ತು–ಪಿಟಿಐ ಚಿತ್ರ



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,141
ಇಂದಿನ ಅಂತ್ಯ	24,888
▼	253
ದಿನದ ಕನಿಷ್ಠ	24,825

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹223-522
ದ್ವಿತಳಿ (ಪ್ರ.ಕೆ)	₹411-660

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹177

ಮುದ್ರಮನ ಕಾಫಿ (50 ಕೆಜಿಗೆ)

ಎಪಿ	₹27900
ಎಸಿ	₹15400
ಆರ್‌ಪಿ	₹20500
ಆರ್‌ಸಿ	₹10725

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 823 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರು ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಕುಸಿತ ಕಂಡಿವೆ.

'ಇಸ್ರೇಲ್ ಮತ್ತು ಇರಾನ್ ನಡುವಿನ ಬಿಕ್ಕಟ್ಟು, ವ್ಯಾಪಾರ ಪಾಲುದಾರ ರಾಷ್ಟ್ರಗಳ ಮೇಲೆ ಅಮೆರಿಕದ ಸುಂಕ ಹೆಚ್ಚಳದ ಅನಿಶ್ಚಿತ ಸ್ಥಿತಿಯು ಜಾಗತಿಕ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ. ಇದರಿಂದ ದೇಶದ ಹೂಡಿಕೆದಾರರು ತೈಲ ಮತ್ತು ಅನಿಲ, ವಿದ್ಯುತ್, ಬಂಡವಾಳ ಸರಕುಗಳ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಿದೇಶಿ ಬಂಡವಾಳದ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು ಎಂದು ಹೇಳಿದ್ದಾರೆ.



ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹5.98 ಲಕ್ಷ ಕೋಟಿ ಕರಗಿದೆ. ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯ ₹449 ಲಕ್ಷ ಕೋಟಿಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 823 ಅಂಶ (ಶೇ 1) ಇಳಿಕೆಯಾಗಿ, 81,691ಕ್ಕೆ ವಹಿವಾಟು ಅಂತ್ಯಗೊಂಡಿತು. ದಿನದ ವಹಿವಾಟಿನಲ್ಲಿ 991 ಅಂಶದವರೆಗೆ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 253 ಅಂಶ (ಶೇ 1.01) ಕಡಿಮೆಯಾಗಿ, 24,888ಕ್ಕೆ ಕೊನೆಗೊಂಡಿತು.

ಟಾಟಾ ಮೋಟರ್ಸ್, ಟೈಟನ್, ಎಟರ್ನಲ್, ಪವರ್ ಗ್ರಿಡ್, ಟಾಟಾ ಸ್ಟೀಲ್, ಲಾರ್ಸನ್ ಆ್ಯಂಡ್ ಟೂಬ್ರೊ, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಹಿಂದುಸ್ತಾನ್ ಯುನಿಲಿವರ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಜಾಜ್ ಫಿನ್‌ಸರ್ವ್, ಏಷ್ಯನ್ ಪೇಂಟ್ಸ್ ಮತ್ತು ಟೆಕ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

'ಯುಪಿಐ ವಹಿವಾಟಿಗೆ ಶುಲ್ಕ ಇಲ್ಲ'

ನವದೆಹಲಿ (ಪಿಟಿಐ): ಯುಪಿಐ ಬಳಸಿ ಮಾಡುವ ಪಾವತಿಗಳಿಗೆ ಎಂಡಿಆರ್ (ಮರ್ಚೆಂಟ್ ಡಿಸ್ಕೌಂಟ್ ರೇಟ್) ವಿಧಿಸುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸ್ಪಷ್ಟಪಡಿಸಿದೆ.

'ಯುಪಿಐ ಆಧಾರಿತ ಪಾವತಿಗಳಿಗೆ ಎಂಡಿಆರ್ ಶುಲ್ಕ ವಿಧಿಸಲಾಗುತ್ತದೆ ಎಂಬ ಹೇಳಿಕೆಗಳು, ಊಹೆಗಳು ಸಂಪೂರ್ಣವಾಗಿ ಆಧಾರರಹಿತ, ಸುಳ್ಳು ಮತ್ತು ತಪ್ಪುದಾರಿಗೆ ಎಳೆಯುವಂಥದ್ದು' ಎಂದು ಸಚಿವಾಲಯವು ಎಕ್ಸ್ ಮೂಲಕ ತಿಳಿಸಿದೆ.

'ಇಂತಹ ಆಧಾರವಿಲ್ಲದ ಊಹಾಪೋಹಗಳು ಜನರಲ್ಲಿ ಅನಗತ್ಯ ಅನಿಶ್ಚಿತತೆಗೆ, ಭೀತಿಗೆ ಮತ್ತು ಅನುಮಾನಗಳಿಗೆ ಕಾರಣವಾಗುತ್ತವೆ. ಯುಪಿಐ ಮೂಲಕ ಡಿಜಿಟಲ್ ಪಾವತಿಗಳನ್ನು ಉತ್ತೇಜಿಸಲು ಸರ್ಕಾರವು ಬದ್ಧವಾಗಿದೆ' ಎಂದು ಸಚಿವಾಲಯ ಹೇಳಿದೆ.

ಗ್ರಾಹಕರಿಂದ ಡಿಜಿಟಲ್ ರೂಪದಲ್ಲಿ ಪಾವತಿ ಸ್ವೀಕರಿಸುವ ವರ್ತಕರು ಬ್ಯಾಂಕ್‌ಗೆ ನೀಡಬೇಕಿರುವ ಶುಲ್ಕವನ್ನು ಎಂಡಿಆರ್ ಎನ್ನಲಾಗುತ್ತದೆ. ಶುಲ್ಕದ ಮೊತ್ತವನ್ನು ಪಾವತಿ ಮೊತ್ತದ ಆಧಾರದಲ್ಲಿ ಲೆಕ್ಕಹಾಕಲಾಗುತ್ತದೆ.

ಯುಪಿಐ ಮೂಲಕ ಆಗುವ ದೊಡ್ಡ ಮೊತ್ತದ ಪಾವತಿಗಳಿಗೆ ಎಂಡಿಆರ್ ವಿಧಿಸುವ ಆಲೋಚನೆಯು ಸರ್ಕಾರಕ್ಕೆ ಇದೆ ಎಂಬ ವರದಿಗಳು ಬಂದ ಕಾರಣಕ್ಕೆ ಸಚಿವಾಲಯವು ಈ ಸ್ಪಷ್ಟನೆ ನೀಡಿದೆ.

ಸೆಲ್ಕೋ ಸೋಲಾರ್ ಲೈಟ್ ಪ್ರೈವೆಟ್ ಲಿಮಿಟೆಡ್ ಪರವಾಗಿ ಸಂಸ್ಥೆಯ ಡಿಜಿಎಂ ಸುದೀಪ್ತ ಘೋಷ್ (ಮಧ್ಯದಲ್ಲಿ), ಸಿಇಒ ಮೋಹನ ಭಾಸ್ಕರ ಹೆಗಡೆ (ಬಲತುದಿ) ಅವರು 2025ನೇ ಸಾಲಿನ 'ಆಶ್ಡೆನ್' ಪ್ರಶಸ್ತಿ ಸ್ವೀಕರಿಸಿದರು. ಲಿಂಕ್ಡ್‌ಇನ್ ಎಂಟರ್‌ಪ್ರೈಸಸ್ ಹಿರಿಯ ಅಧಿಕಾರಿ ಕ್ರಿಸ್ ಬ್ಯಾರೆಟ್ (ಎಡತುದಿ) ಅವರು ಇದ್ದಾರೆ.

ಸೆಲ್ಕೋಗೆ 'ಆಶ್ಡೆನ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಲ್ಕೋ ಸೋಲಾರ್ ಲೈಟ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯು 2025ನೇ ಸಾಲಿನ ಪ್ರತಿಷ್ಠಿತ 'ಆಶ್ಡೆನ್' ಪ್ರಶಸ್ತಿಗೆ ಭಾಜನವಾಗಿದೆ.

2005 ಮತ್ತು 2007ರಲ್ಲಿ ಈ ಪ್ರಶಸ್ತಿಗೆ ಸೆಲ್ಕೋ ಸೋಲಾರ್ ಲೈಟ್ ಪ್ರೈವೆಟ್ ಲಿಮಿಟೆಡ್ ಪಾತ್ರವಾಗಿತ್ತು. ಈಗ ಮೂರನೇ ಬಾರಿಗೆ ಈ ಪ್ರಶಸ್ತಿ ಸಂದಿದೆ. ಜೂನ್ 11ರಂದು ಲಂಡನ್‌ನ ರಾಯಲ್ ಜಿಯಾಗ್ರಫಿಕಲ್ ಸೊಸೈಟಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

'1995ರಲ್ಲಿ ಹರೀಶ್ ಹಂದೆ ಮತ್ತು ನೆವಿಲ್ಲೆ ವಿಲಿಯಮ್ಸ್ ಅವರು ಸ್ಥಾಪಿಸಿದ ಸೆಲ್ಕೋ ಸಂಸ್ಥೆ ಕರ್ನಾಟಕದ ಮನೆಗಳಿಗೆ ಸೌರಬೆಳಕು ಒದಗಿಸುವಲ್ಲಿ ಪ್ರಧಾನ ಪಾತ್ರ ವಹಿಸಿದೆ. ಇಂದು ಆಂಧ್ರಪ್ರದೇಶ, ಬಿಹಾರ, ಕೇರಳ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಚಟುವಟಿಕೆ ವಿಸ್ತರಿಸಿದೆ' ಎಂದು ಕಂಪನಿ ತಿಳಿಸಿದೆ.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಗ್ರೀನ್ ಆಸ್ಕರ್ ಎಂಬ ಹೆಗ್ಗಳಿಕೆ ಹೊಂದಿರುವ ಈ ಪ್ರಶಸ್ತಿಯನ್ನು ಮೂರನೇ ಬಾರಿ ಮುಡಿಗೇರಿಸಿಕೊಂಡ ಗೌರವ ಸೆಲ್ಕೋಗೆ ಸಲ್ಲುತ್ತದೆ. ಹಸಿರು ಇಂಧನ ಕ್ಷೇತ್ರದಲ್ಲಿ ಭಾರತಕ್ಕೆ ಸಂದ ದೊಡ್ಡ ಗೌರವ ಇದು' ಎಂದು ತಿಳಿಸಿದೆ.

ಸೆಲ್ಕೋ ಉಪ ಪ್ರಧಾನ ವ್ಯವಸ್ಥಾಪಕ (ಡಿಜಿಎಂ) ಸುದೀಪ್ತ ಘೋಷ್ ಹಾಗೂ ಸೆಲ್ಕೋ ಸಿಇಒ ಮೋಹನ ಭಾಸ್ಕರ ಹೆಗಡೆ ಪ್ರಶಸ್ತಿ ಸ್ವೀಕರಿಸಿದರು. ಲಿಂಕ್ಡ್‌ಇನ್ ಎಂಟರ್‌ಪ್ರೈಸಸ್‌ನ ಹಿರಿಯ ಅಧಿಕಾರಿ ಮತ್ತು ಗೋ ಗ್ರೀನ್‌ನ ಮುಖ್ಯಸ್ಥ ಕ್ರಿಸ್ ಬ್ಯಾರೆಟ್ ಇದ್ದರು.

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹11200-20000
ತಿಪಟೂರು	₹21000-24129

ಆಹಾರ ವಸ್ತುಗಳ ಬೆಲೆ ಇಳಿಕೆ ಕಾರಣ: ಎನ್‌ಎಸ್‌ಒ ಮಾಹಿತಿ

ಹಣದುಬ್ಬರ 6 ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ಏರಿಕೆಯು ಮಂದವಾಗಿ ಇದ್ದುದರ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇಕಡ 2.82ಕ್ಕೆ ತಗ್ಗಿದೆ. ಇದು ಆರು ವರ್ಷಗಳ ಕನಿಷ್ಠ ಮಟ್ಟ.

ಇದರೊಂದಿಗೆ, ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ನಾಲ್ಕು ತಿಂಗಳುಗಳಿಂದ ಆರ್‌ಬಿಐ ಮಿತಿಯಲ್ಲಿ (ಶೇ 4) ಉಳಿದಂತಾಗಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಏಪ್ರಿಲ್‌ನಲ್ಲಿ ಶೇ 3.16ರಷ್ಟು ಇತ್ತು. ಇದು ಹಿಂದಿನ ವರ್ಷದ ಮೇ ತಿಂಗಳಲ್ಲಿ ಶೇ 4.80ರಷ್ಟು ಇತ್ತು. ಈ ಬಾರಿಯ ಮೇ ತಿಂಗಳಲ್ಲಿ ದಾಖಲಾಗಿರುವುದು 2019ರ ಫೆಬ್ರುವರಿ ನಂತರದ ಕನಿಷ್ಠ ಮಟ್ಟ. ಹಣದುಬ್ಬರದ ಇಳಿಕೆಯನ್ನು ಗಮನಿಸಿ ಆರ್‌ಬಿಐ ರೆಪೊ ದರವನ್ನು ಶೇಕಡ 0.50ರಷ್ಟು ಕಡಿಮೆ ಮಾಡಿದೆ.

ಮೇ ತಿಂಗಳಲ್ಲಿ ಆಹಾರ ಪದಾರ್ಥಗಳ ಹಣದುಬ್ಬರ ಶೇ 0.99ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳಲ್ಲಿ ಹೇಳಲಾಗಿದೆ.

> ಆಗಸ್ಟ್‌ನಲ್ಲಿ ರೆಪೊ ಇಳಿಕೆಯಾಗುವ ನಿರೀಕ್ಷೆ ಇಲ್ಲ. ಆದರೆ, ತಗ್ಗಿದ ಹಣದುಬ್ಬರ ಹಾಗೂ ಆರ್ಥಿಕ ಬೆಳವಣಿಗೆ ಅಂದಾಜನ್ನು ಪರಿಗಣಿಸಿದಾಗ, ಅಕ್ಟೋಬರ್‌ನಲ್ಲಿ ರೆಪೊ ದರವನ್ನು ಶೇ 0.25ರಷ್ಟು ತಗ್ಗಿಸುವ ಸಾಧ್ಯತೆ ತಳ್ಳಿಹಾಕಲಾಗದು
>
> **ಅದಿತಿ ನಾಯರ್,** ಮುಖ್ಯ ಅರ್ಥಶಾಸ್ತ್ರಜ್ಞೆ, ಐಸಿಆರ್‌ಎ

'ದ್ವಿದಳ ಧಾನ್ಯಗಳು, ತರಕಾರಿಗಳು, ಹಣ್ಣುಗಳು, ಏಕದಳ ಧಾನ್ಯಗಳು, ಮನೆಬಳಕೆಯ ಉತ್ಪನ್ನಗಳು ಹಾಗೂ ಸೇವೆಗಳು, ಮೊಟ್ಟೆಯ ಬೆಲೆ ಏರಿಕೆಯಲ್ಲಿ ಇಳಿಕೆ ಆಗಿರುವುದು ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಕಡಿಮೆ ಆಗಿರುವುದಕ್ಕೆ ಮುಖ್ಯ ಕಾರಣ' ಎಂದು ಎನ್‌ಎಸ್‌ಒ ಪ್ರಕಟಣೆ ತಿಳಿಸಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು 75 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿರುವುದು ರೆಪೊ ದರ ಇಳಿಸಲು ಆರ್‌ಬಿಐ ಕೈಗೊಂಡ ತೀರ್ಮಾನವನ್ನು ಸಮರ್ಥಿಸುವಂತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ತೋತಾಪುರಿ: ನಿರ್ಬಂಧ ಸಡಿಲಿಕೆಗೆ ಆಂಧ್ರ ನಿರಾಸಕ್ತಿ?

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬೇರೆ ರಾಜ್ಯಗಳ ತೋತಾಪುರಿ ಮಾವಿನ ಮೇಲೆ ಹೇರಿರುವ ನಿರ್ಬಂಧವನ್ನು ತೆರವುಗೊಳಿಸುವಂತೆ ಕೋರಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮನವಿ ಮಾಡಿದ ನಂತರವೂ, ತನ್ನ ನಿಲುವಿನಲ್ಲಿ ಬದಲಾವಣೆ ತರದೆ ಇರಲು ಆಂಧ್ರಪ್ರದೇಶ ಸರ್ಕಾರವು ತೀರ್ಮಾನಿಸಿರುವಂತಿದೆ.

ಏಕೆಂದರೆ, ನಿರ್ಬಂಧ ವಿಧಿಸಿರುವ ಕ್ರಮವು ಆಂಧ್ರಪ್ರದೇಶದ ರೈತರ ಹಿತಾಸಕ್ತಿಗಳನ್ನು ಕಾಪಾಡುತ್ತದೆ ಎಂದು ಸರ್ಕಾರ ಭಾವಿಸಿದೆ. ಕರ್ನಾಟಕದ ರೈತರು ಚಿತ್ತೂರಿನ ಸಂಸ್ಕರಣಾ ಘಟಕಗಳಿಗೆ ಕೆ.ಜಿ. ₹5ರಂತೆ ಮಾವು ಮಾರಾಟ ಮಾಡುವುದು ಆಂಧ್ರಪ್ರದೇಶದ ರೈತರ ಹಿತಾಸಕ್ತಿಗೆ ಪೆಟ್ಟು ಕೊಡುವಂತಿದೆ ಎಂದು ಆಂಧ್ರ ಸರ್ಕಾರವು ಭಾವಿಸಿದೆ.

ಕರ್ನಾಟಕದಿಂದ ಬರುವ ಮಾವಿಗೆ ನಿಷೇಧ ವಿಧಿಸುವುದು ಅಗತ್ಯವಾಗಿತ್ತು. ನಿಷೇಧ ಹೇರದೆ ಇದ್ದಿದ್ದರೆ ಆಂಧ್ರದ ರೈತರು ಪ್ರತಿಭಟನೆಗೆ ಮುಂದಾಗುತ್ತಿದ್ದರು, ಇದರಿಂದಾಗಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಸೃಷ್ಟಿಯಾಗುವ ಸಾಧ್ಯತೆ ಇತ್ತು ಎಂದು ಆಂಧ್ರಪ್ರದೇಶ ಸರ್ಕಾರದ ಮೂಲಗಳು ಹೇಳಿವೆ.

ಬೇರೆ ರಾಜ್ಯಗಳ ತೋತಾಪುರಿ ಮಾವು ಚಿತ್ತೂರಿಗೆ ತರುವಂತಿಲ್ಲ ಎಂದು ಅಲ್ಲಿನ ಜಿಲ್ಲಾಧಿಕಾರಿ ಜೂನ್ 7ರಂದು ಆದೇಶಿಸಿದ್ದಾರೆ ಎಂದು ವರದಿಯಾಗಿದೆ. ಆಂಧ್ರಪ್ರದೇಶದ ರೈತರು ಚಿತ್ತೂರಿನ ಸಂಸ್ಕರಣಾ ಘಟಕಗಳಿಗೆ ಕೆ.ಜಿ.ಗೆ ₹8ರಂತೆ ತೋತಾಪುರಿ ಮಾವು ಪೂರೈಸುತ್ತಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟಾ		ಶಿವಮೊಗ್ಗ		ಶಿರಸಿ	
ಹೊಸಚಾಲಿ	34100-41519	ಬೆಟ್ಟೆ	50570-59199	ಬೆಟ್ಟೆ	22169-39892
ಚಾಲಿ	39269-42098	ಗೊರಬಲು	18215-31111	ಬಿಳಿಗೋಟು	16078-31299
ಚಿಪ್ಪು	17209-29211	ರಾಶಿ	48009-57700	ಚಾಲಿ	35999-42500
ಕೋಕ	6161-22699	ಸರಕು	53100-94540	ರಾಶಿ	42099-47499
ಸಾಗರ		**ಸಿದ್ದಾಪುರ**		**ಯಲ್ಲಾಪುರ**	
ಬಿಳಿಗೋಟು	7099-26899	ಬಿಳಿಗೋಟು	24089-30869	ಬಿಳಿಗೋಟು	15701-31895
ಚಾಲಿ	26899-38099	ಚಾಲಿ	33899-40000	ಚಾಲಿ	32009-41470
ಕೋಕ	8099-28999	ಕೋಕ	16469-26799	ಕೋಕ	699-16809
ಕೆಂಪುಗೋಟು	18819-30009	ಕೆಂಪುಗೋಟು	19900-23119	ಕೆಂಪುಗೋಟು	16010-26716
ರಾಶಿ	24989-58109	ರಾಶಿ	42099-49009	ರಾಶಿ	40809-56899
ಸಿಪ್ಪೆಗೋಟು	5099-18111	ತಟ್ಟಿಬೆಟ್ಟೆ	28900-36099	ತಟ್ಟಿಬೆಟ್ಟೆ	27169-37399

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1365 (1360)
ಸೋಯಾ (ರಿಫೈನ್ಡ್)	₹1165 (1160)
ಸೂರ್ಯಕಾಂತಿ (ರಿಫೈನ್ಡ್)	₹1325 (1320)
ಪಾಮೋಲಿನ್	₹1150 (1140)

ವಿನಿಮಯ ದರ

$ ಡಾಲರ್	85.52
£ ಪೌಂಡ್	116.24
€ ಯುರೊ	99.07
¥ ಯೆನ್ (100ಕ್ಕೆ)	59

ಮುಂಬೈ ಧಾರಣೆ

ಶೇಂಗಾ
12-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1375 (1370)
ಒಂದು ವಾರದ ಡೆಲಿವರಿ	1370 (1365)
ಪಾಮ್ ವಾರದ ಡೆಲಿವರಿ	1148 (1138)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹97,250 (95,700)
ಬೆಳ್ಳಿ ಕೆ.ಜಿ ₹1,05,500 (1,05,300)
ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಆಂಧ್ರ ಸಿ.ಎಂಗೆ ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದ ತೋತಾಪುರಿ ಮಾವು ಖರೀದಿ ಮೇಲೆ ಹೇರಿರುವ ನಿಷೇಧವನ್ನು ತೆರವುಗೊಳಿಸುವಂತೆ ಚಿತ್ತೂರು ಜಿಲ್ಲಾಡಳಿತಕ್ಕೆ ಸೂಚಿಸಬೇಕು' ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದಿದ್ದಾರೆ.

ಇತರ ರಾಜ್ಯಗಳಿಂದ ತೋತಾಪುರಿ ಮಾವಿನ ಹಣ್ಣುಗಳ ಸಾಗಣೆಯನ್ನು ನಿಷೇಧಿಸಿ ಚಿತ್ತೂರು ಜಿಲ್ಲಾಧಿಕಾರಿ ಜೂನ್ 7ರಂದು ಆದೇಶಿಸಿದ್ದರು.

'ತೋತಾಪುರಿ ಮಾವು ಖರೀದಿ ಮೇಲಿನ ನಿಷೇಧದ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಈ ನಿರ್ಬಂಧವನ್ನು ತಕ್ಷಣ ರದ್ದುಗೊಳಿಸುವಂತೆ ಚಿತ್ತೂರು ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಬೇಕು. ರೈತರ ಹಿತದೃಷ್ಟಿಯಿಂದ ಕೃಷಿ ಉತ್ಪನ್ನಗಳ ಸರಾಗ ಸಾಗಣೆಗೆ ಅವಕಾಶ ಮಾಡಲು ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಪತ್ರದಲ್ಲಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಪತ್ರದಲ್ಲಿದೆ ಏನಿದೆ?: 'ಚಿತ್ತೂರು ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶದಿಂದ ತೀವ್ರ ಕಳವಳವಾಗಿದೆ. ಈ ಆದೇಶದ ಪಾಲನೆಗಾಗಿ ಕರ್ನಾಟಕ ಮತ್ತು ತಮಿಳುನಾಡು ಅಂತರರಾಜ್ಯ ಗಡಿಯ ಚೆಕ್ ಪೋಸ್ಟ್‌ಗಳಲ್ಲಿ ಆಂಧ್ರ ಪೊಲೀಸರು, ಅರಣ್ಯ ಇಲಾಖೆ ಅಧಿಕಾರಿಗಳು, ಕೃಷಿ ಮಾರುಕಟ್ಟೆ ಅಧಿಕಾರಿಗಳು, ಕಂದಾಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ' ಎಂದು ಪತ್ರದಲ್ಲಿ ಮುಖ್ಯಮಂತ್ರಿ ವಿವರಿಸಿದ್ದಾರೆ.

'ಈ ನಿಷೇಧದಿಂದಾಗಿ, ಕರ್ನಾಟಕದ ಗಡಿ ಭಾಗದ ಮಾವು ಬೆಳೆಗಾರರಿಗೆ ಸಂಕಷ್ಟ ಎದುರಾಗಿದೆ. ಗಡಿ ಭಾಗದ ರೈತರು ಮಾವು ಮಾರಾಟಕ್ಕೆ ಚಿತ್ತೂರನ್ನು ಬಹುವಾಗಿ ನೆಚ್ಚಿಕೊಂಡಿದ್ದಾರೆ. ಈ ಆದೇಶದಿಂದ ಸರಬರಾಜು ಸರಪಳಿಗೆ ಅಡಚಣೆಯಾಗಿದ್ದು, ಮಾವು ಬೆಳೆ ನಷ್ಟದ ಆತಂಕ ಸೃಷ್ಟಿಯಾಗಿದೆ. ಸಾವಿರಾರು ರೈತರ ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ' ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಜೂಮ್ ಫೋನ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂಮ್ ಕಮ್ಯುನಿಕೇಷನ್ಸ್ ಕಂಪನಿಯು ತನ್ನ 'ಜೂಮ್ ಫೋನ್' ಸೇವೆಯನ್ನು ದೇಶದ ನಾಲ್ಕು ಪ್ರಮುಖ ಮೆಟ್ರೊ ದೂರಸಂಪರ್ಕ ವೃತ್ತಗಳಿಗೆ ವಿಸ್ತರಿಸಿರುವುದಾಗಿ ತಿಳಿಸಿದೆ.

ಮುಂಬೈ, ದೆಹಲಿ ಎನ್‌ಸಿಆರ್, ಬೆಂಗಳೂರು ಮತ್ತು ಹೈದರಾಬಾದ್ ಆ ನಾಲ್ಕು ವೃತ್ತಗಳು. ಇದರೊಂದಿಗೆ ಜೂಮ್ ಫೋನ್ ಸೇವೆಯು ದೇಶದ ಆರು ದೂರಸಂಪರ್ಕ ವೃತ್ತಗಳಲ್ಲಿ ಲಭ್ಯವಾದಂತೆ ಆಗಿದೆ.

'ಕ್ಲೌಡ್ ಆಧಾರಿತ ದೂರಸಂಪರ್ಕ ಸೇವೆಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಜೂಮ್ ಫೋನ್ ಪೂರೈಸುತ್ತದೆ' ಎಂದು ಕಂಪನಿಯ ಹಿರಿಯ ಅಧಿಕಾರಿ ವೆಲ್ಚಾಮಿ ಶಂಕರಲಿಂಗಂ ಹೇಳಿದ್ದಾರೆ.

₹7 ಕೋಟಿ ಅಕ್ರಮ ವರ್ಗಾವಣೆ: ತಂಬಾಕು ಮಂಡಳಿಯ ಇಬ್ಬರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ಕಗ್ಗುಂಡಿ ತಂಬಾಕು ಹರಾಜು ಮಾರುಕಟ್ಟೆ ಸಂಖ್ಯೆ 5ರಲ್ಲಿ ಸಾರ್ವಜನಿಕ ನಿಧಿಯಿಂದ ₹7 ಕೋಟಿಗೂ ಹೆಚ್ಚಿನ ಮೊತ್ತ ದುರ್ಬಳಕೆ ಮಾಡಿಕೊಂಡ ಆರೋಪದಲ್ಲಿ ತಂಬಾಕು ಮಂಡಳಿ ಹೊರಗುತ್ತಿಗೆ ನೌಕರ ಪಿ.ಎಸ್. ಮಧು ಹಾಗೂ ಲೆಕ್ಕಾಧಿಕಾರಿ ಬಿ. ರಾಜಶೇಖರ ರೆಡ್ಡಿ ವಿರುದ್ಧ ಗುರುವಾರ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಹರಾಜು ಮಾರುಕಟ್ಟೆ ಅಧೀಕ್ಷಕ ಬ್ರಿಜ್ ಭೂಷಣ್ ಕೃತ್ಯವನ್ನು ಪತ್ತೆ ಹಚ್ಚಿ ಪಟ್ಟಣದ ಪೊಲೀಸ್ ಠಾಣೆಗೆ ಬುಧವಾರ ದೂರು ನೀಡಿದ್ದರು.

'ಬೆಳೆಗಾರರಿಗೆ ನೆರವಾಗಲೆಂದು ಮಂಡಳಿಯು ಬೆಳಗಾರರ ಸಮಿತಿ ರಚಿಸಿ, ಅದರ ಮೂಲಕ ರಸಗೊಬ್ಬರ ಖರೀದಿಸಿ ಮುಂಗಡವಾಗಿ ವಿತರಿಸಿತ್ತು. ತಂಬಾಕು ಮಾರಾಟದ ನಂತರ ರೈತರ ಖಾತೆಯಿಂದ ಹಣ ಕಡಿತ ಮಾಡಿ, ಅದನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುವ ವ್ಯವಸ್ಥೆಯು ಎರಡು ವರ್ಷ ದುರ್ಬಳಕೆಯಾಗಿದೆ' ಎಂದು ಮಂಡಳಿಯ ಕೇಂದ್ರ ಕಚೇರಿಗೆ ಭೂಷಣ್ ವರದಿ ನೀಡಿದ್ದರು. ನಂತರ, ಕೇಂದ್ರ ಕಚೇರಿಯ ಅಧಿಕಾರಿಗಳ ಲೆಕ್ಕಪರಿಶೋಧನೆ ವೇಳೆಯೂ ದುರ್ಬಳಕೆ ಕಂಡು ಬಂದಿತ್ತು.

ಸಾಮಾಜಿಕ ಕಾರ್ಯಕರ್ತ ಅಶ್ವತ್ ಎಂಬುವರು ಕೆಲವು ದಿನಗಳ ಹಿಂದೆ ಪತ್ರಿಕಾಗೋಷ್ಠಿ ನಡೆಸಿ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಬೇಕೆಂದು ಆಗ್ರಹಿಸಿದ್ದರು.

ವಂಚನೆ: ಭಾರತ ಮೂಲದ ವ್ಯಕ್ತಿಗೆ ಜೈಲು ಶಿಕ್ಷೆ

ಸ್ಯಾನ್ ಫ್ರಾನ್ಸಿಸ್ಕೋ (ಪಿಟಿಐ): ಹಿರಿಯ ನಾಗರಿಕರಿಗೆ ದಶಲಕ್ಷ ಡಾಲರ್‌ಗಳಿಗೂ ಹೆಚ್ಚು ವಂಚನೆ ಮಾಡಿದ್ದ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಭಾರತ ಮೂಲದ ವ್ಯಕ್ತಿಗೆ ಇಲ್ಲಿನ ನ್ಯಾಯಾಲಯ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ ಎಂದು ನ್ಯಾಯಾಂಗ ಇಲಾಖೆ ತಿಳಿಸಿದೆ. ಅಮೆರಿಕದ ನ್ಯೂಜೆರ್ಸಿಯಲ್ಲಿ ನೆಲಸಿದ್ದ 33 ವರ್ಷದ ಪ್ರಣವ್ ಪಟೇಲ್ ಶಿಕ್ಷೆಗೆ ಗುರಿಯಾದವರು. 2023ರ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ 'ಮನಿ ಮುಲ್' (ಹಣ ಅಕ್ರಮ ವರ್ಗಾವಣೆಗೆ ಅಪರಾಧಿಗಳಿಂದ ನೇಮಕಗೊಂಡ ವ್ಯಕ್ತಿ) ಆಗಿ ಕಾರ್ಯನಿರ್ವಹಿಸುತ್ತಿದ್ದ ಈತ ಸುಮಾರು 1.7 ದಶಲಕ್ಷ ಅಮೆರಿಕನ್ ಡಾಲರ್ (₹14 ಕೋಟಿ) ವಂಚಿಸಿದ್ದ ಆರೋಪ ಹೊತ್ತಿದ್ದರು.

ಎಎಸ್‌ಪಿ ಮೇಲೆ ಕೈ: ಸಿ. ಎಂ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧಾರವಾಡದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಭರಮನಿ ಅವರನ್ನು ಹೊಡೆಯಲು ಕೈ ಎತ್ತಿದ ಘಟನೆಗೆ ಸಂಬಂಧಿಸಿದಂತೆ ಆರ್‌ಟಿಐ ಕಾರ್ಯಕರ್ತ ಭೀಮಪ್ಪ ಗಡಾದ ಅವರು ಕ್ಯಾಂಪ್ ಪೊಲೀಸ್ ಠಾಣೆ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಗುರುವಾರ ದೂರು ನೀಡಿದ್ದಾರೆ.

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರೋಧಿಸಿ ಏಪ್ರಿಲ್ 28ರಂದು ಬೆಳಗಾವಿಯಲ್ಲಿ ಕಾಂಗ್ರೆಸ್ ಸಮಾವೇಶ ನಡೆದ ಸಂದರ್ಭದಲ್ಲಿ ಭದ್ರತಾ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರು ಸಿಟ್ಟಿಗೆದ್ದು, ಧಾರವಾಡದ ಎಎಸ್‌ಪಿ ಭರಮನಿ ಅವರ ಮೇಲೆ ಕೋಪದಿಂದ ಕೈ ಎತ್ತಿದ್ದರು.

'ಜವಾಬ್ದಾರಿಯುತವಾಗಿ ನಡೆದುಕೊಳ್ಳದ ಮುಖ್ಯಮಂತ್ರಿಯವರು ಕರ್ತವ್ಯನಿರತ ಅಧಿಕಾರಿಯನ್ನು ಕೀಳು ಪದಗಳಿಂದ ನಿಂದಿಸಿದ್ದಾರೆ. ಪೊಲೀಸ್ ಸಮವಸ್ತ್ರ ಧರಿಸಿದ್ದ ಅವರ ಮೇಲೆ ಕೈ ಮಾಡಿ, ಆತ್ಮಸ್ಥೈರ್ಯ ಕುಗ್ಗಿಸಿದ್ದಾರೆ. ಅವರ ಈ ನಡೆ ಸಂವಿಧಾನದ ಆಶಯಕ್ಕೆ ವಿರೋಧವಾಗಿದೆ' ಎಂದು ಭೀಮಪ್ಪ ಗಡಾದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಭೀಮಪ್ಪ ಗಡಾದ ಅವರ ದೂರನ್ನು ಪರಿಶೀಲಿಸಿ ಮತ್ತು ಪ್ರಕರಣದ ವಿಚಾರಣೆ ನಡೆಸಿ, ಅಗತ್ಯ ಕ್ರಮ ವಹಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಭೂಷಣ್ ಗುಲಾಬರಾವ್ ಬೊರಸೆ ತಿಳಿಸಿದರು.

'ಭಾರತ–ಬಾಂಗ್ಲಾ ಸಂಬಂಧ ಸದಾ ಏನೋ ತಪ್ಪಾಗುತ್ತದೆ'

ಲಂಡನ್ (ಪಿಟಿಐ): 'ಭಾರತದ ಜೊತೆಗೆ ಉತ್ತಮ ಬಾಂಧವ್ಯ ಹೊಂದಲು ಬಾಂಗ್ಲಾದೇಶ ಬಯಸುತ್ತದೆ, ಆದರೆ, ಯಾವಾಗಲೂ ಏನೋ ತಪ್ಪಾಗುತ್ತದೆ' ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ತಿಳಿಸಿದರು.

ಲಂಡನ್‌ನಲ್ಲಿ ಬುಧವಾರ ಛತಾಂ ಹೌಸ್ ಚಿಂತಕರ ಚಾವಡಿಯ ನಿರ್ದೇಶಕಿ ಬ್ರಾನ್‌ವೆನ್ ಮಡ್ಡಾಕ್ಸ್ ಜೊತೆಗೆ ನಡೆದ ಸಂವಾದದಲ್ಲಿ, ಭಾರತದೊಟ್ಟಿಗಿನ ದ್ವಿಪಕ್ಷೀಯ ಸಂಬಂಧ ಹಾಗೂ ದೇಶದಲ್ಲಿ ಪ್ರಜಾಪ್ರಭುತ್ವ ಮರಳಿ ಸ್ಥಾಪನೆ ಮಾಡುವ ಕುರಿತಂತೆಯೂ ಚರ್ಚೆ ನಡೆಸಿದರು.

ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಮರಳಿ ದೇಶಕ್ಕೆ ಹಸ್ತಾಂತರಿಸುವ ಬಗ್ಗೆ ಭಾರತಕ್ಕೆ ನೀಡಲಾದ ಅನೌಪಚಾರಿಕ ರಾಜತಾಂತ್ರಿಕ ಮಾಹಿತಿಯ ಸಂಗತಿಯನ್ನು ಸಂವಾದದ ವೇಳೆ ಬ್ರಾನ್‌ವೆನ್ ಉಲ್ಲೇಖಿಸಿದರು.

ಇದಕ್ಕೆ ಉತ್ತರಿಸಿದ ಯೂನುಸ್, 'ಈ ಪ್ರಕ್ರಿಯೆ ಮುಂದುವರಿಯಲಿದೆ. ಇಡೀ ಪ್ರಕ್ರಿಯೆ ಕಾನೂನಾತ್ಮಕ ಹಾಗೂ ಸರಿಯಾದ ಮಾರ್ಗದಲ್ಲಿ ಸಾಗಬೇಕು ಎಂದು ನಾವು ಬಯಸುತ್ತೇವೆ. ಭಾರತದ ಜೊತೆಗೆ ಸದಾ ಅತ್ಯುತ್ತಮ ಸಂಬಂಧ ಬಯಸುತ್ತಿದ್ದೇವೆ. ಅವರು ನಮ್ಮ ನೆರೆಯ ರಾಷ್ಟ್ರವಾಗಿದ್ದು, ನಾವು ಅವರೊಂದಿಗೆ ಯಾವುದೇ ಮೂಲಭೂತ ಸಮಸ್ಯೆಯನ್ನು ಹೊಂದಲು ಬಯಸುವುದಿಲ್ಲ' ಎಂದರು.

> ಶೇಖ್ ಹಸೀನಾ ಅವಧಿಯಲ್ಲಿ ಕದ್ದೊಯ್ಯಲಾದ ಹಣವನ್ನು ಮರಳಿ ಪಡೆಯುವ ಸಂಬಂಧ ಬ್ರಿಟನ್ ಪ್ರಧಾನಿ ಜೊತೆ ನಾನು ನೇರ ಮಾತುಕತೆ ನಡೆಸಿಲ್ಲ
>
> **ಮೊಹಮ್ಮದ್ ಯೂನುಸ್,** ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯಸ್ಥ

'ಭಾರತದ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳು ಪ್ರಕಟವಾಗುತ್ತಿದ್ದಂತೆಯೇ, ಪ್ರತಿ ಬಾರಿಯೂ ವಿಷಯಗಳನ್ನು ತಪ್ಪಾಗಿ ಅರ್ಥೈಸಲಾಗುತ್ತದೆ' ಎಂದರು.

'ಶೇಖ್ ಹಸೀನಾ ಕುರಿತು ಭಾರತದ ಅಸ್ಪಷ್ಟ ಪಾತ್ರ'ದ ಕುರಿತಂತೆ ಸಭಿಕರ ಪ್ರಶ್ನೆಗೆ ಉತ್ತರಿಸಿದ ಅವರು, 'ಹಸೀನಾ ಅವರ ಮೇಲಿನ ಎಲ್ಲ ಸಿಟ್ಟು ಈಗ ಭಾರತದ ಕಡೆಗೆ ವರ್ಗಾವಣೆಯಾಗಿದೆ. ಏಕೆಂದರೆ, ಈಗ ಅವರು ಅಲ್ಲಿ ನೆಲಸಿದ್ದಾರೆ' ಎಂದರು.

ವಾರದೊಳಗೆ ಪ್ರತಿಸುಂಕ ನೀತಿ ಪತ್ರ: ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಪ್ರತಿಸುಂಕ ನಿರ್ಧಾರಕ್ಕೆ ಸಂಬಂಧಿಸಿದಂತೆ ಇನ್ನು ಒಂದು ಅಥವಾ ಎರಡು ವಾರಗಳ ಒಳಗೆ ತಮ್ಮ ವ್ಯಾಪಾರ ಪಾಲುದಾರ ರಾಷ್ಟ್ರಗಳಿಗೆ ಏಕಪಕ್ಷೀಯ ಪತ್ರ ಬರೆಯುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳ ಮೇಲೆ ಭಾರಿ ಪ್ರಮಾಣದ ಪ್ರತಿಸುಂಕ ವಿಧಿಸಿ, ಅದರ ಅನುಷ್ಠಾನಕ್ಕೆ ಜುಲೈ 9ರವರೆಗೆ ಟ್ರಂಪ್ ಗಡುವು ನೀಡಿದ್ದರು.

ಗಡುವು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತಾವೇ ಏಕಪಕ್ಷೀಯವಾಗಿ ಪ್ರತಿಸುಂಕದ ಪ್ರಮಾಣದ ಒಪ್ಪಂದಕ್ಕೆ ಸಂಬಂಧಿಸಿದಂತೆ ಪತ್ರ ಬರೆಯುವುದಾಗಿ ಕೆನಡಿ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಪ್ರತಿಸುಂಕ ಸಂಬಂಧಿಸಿದಂತೆ ಯಾವ ರಾಷ್ಟ್ರಗಳ ಜತೆಗೆ ಸೌಹಾರ್ದಯುತ ಮಾತುಕತೆ ನಡೆದಿದೆಯೋ ಅಂಥ ರಾಷ್ಟ್ರಗಳಿಗೆ ಮತ್ತಷ್ಟು ಗಡುವು ವಿಸ್ತರಿಸುವ ಸಾಧ್ಯತೆ ಇದೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಬುಧವಾರ ಹೇಳಿದ್ದರು. ಅದರ ಬೆನ್ನಲ್ಲೇ ಟ್ರಂಪ್ ಮೇಲ್ಕಂಡ ಹೇಳಿಕೆ ನೀಡಿದ್ದಾರೆ.

8 ತಿಂಗಳ ಬಳಿಕ 'ಲೆಕ್ಕ' ಕೊಟ್ಟ ಜಿಲ್ಲಾಡಳಿತ

ದಸರೆಗೆ ₹41 ಕೋಟಿ ವೆಚ್ಚ

ಪ್ರಜಾವಾಣಿ ವಾರ್ತೆ

ಮೈಸೂರು: ಕಳೆದ ವರ್ಷ ವಿಜೃಂಭಣೆಯಿಂದ ನಡೆದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಬರೋಬ್ಬರಿ ₹41.69 ಕೋಟಿ ಖರ್ಚು ಮಾಡಲಾಗಿದೆ.

ಜಿಲ್ಲಾಡಳಿತದಿಂದ ಇದೇ ಮೊದಲ ಬಾರಿಗೆ ಬಹಳ ವಿಳಂಬವಾಗಿ ಅಂದರೆ, ಎಂಟು ತಿಂಗಳ ನಂತರ ಖರ್ಚು–ವೆಚ್ಚದ ಮಾಹಿತಿಯನ್ನು ಗುರುವಾರ ಸಂಜೆ ಬಿಡುಗಡೆ ಮಾಡಲಾಗಿದೆ.

ರಾಜ್ಯ ಸರ್ಕಾರದ ಅನುದಾನ ₹ 25 ಕೋಟಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ₹10 ಕೋಟಿ, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ಪ್ರಾಯೋಜಕತ್ವದಿಂದ ₹2.15 ಕೋಟಿ, ಯುವದಸರಾ, ಮೆರವಣಿಗೆ, ಪಂಜಿನ ಕವಾಯತು ಟಿಕೆಟ್‌ಗಳು ಮತ್ತು 'ಗೋಲ್ಡ್ ಕಾರ್ಡ್'ಗಳ ಮಾರಾಟದಿಂದ ₹4.76 ಕೋಟಿ ಸಂಗ್ರಹವಾಗಿತ್ತು ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

18 ಉಪ ಸಮಿತಿಗಳಿಗೆ ₹31.27 ಕೋಟಿ ಬಿಡುಗಡೆ ಮಾಡಲಾಗಿತ್ತು. ಸಿವಿಲ್ ಹಾಗೂ ವಿದ್ಯುತ್ ಕಾಮಗಾರಿಗಳಿಗೆ ₹5.91 ಕೋಟಿ ಕೊಡಲಾಗಿತ್ತು. ಚಾಮರಾಜನಗರಕ್ಕೆ ₹1.75 ಕೋಟಿ, ಮಂಡ್ಯಕ್ಕೆ ₹2 ಕೋಟಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ₹75 ಲಕ್ಷ ಹಾಗೂ 'ಪ್ರಭುತ್ವ ಮತ್ತು ಸಂವಿಧಾನದ ಆಶಯ' ಕುರಿತು ರಾಜ್ಯಮಟ್ಟದ ಕಾರ್ಯಾಗಾರ ಆಯೋಜನೆಗೆ ಹುಣಸೂರು ಉಪವಿಭಾಗಾಧಿಕಾರಿಗೆ ₹1 ಲಕ್ಷ ನೀಡಲಾಗಿತ್ತು ಎಂದು ತಿಳಿಸಿದೆ.

ಈ ಬಾರಿಯ ದಸರಾ ಮಹೋತ್ಸವಕ್ಕೆ ಸಿದ್ಧತೆ ಆರಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ಸಭೆಯನ್ನು ಜೂನ್ 26ರಂದು ವಿಧಾನ ಸೌಧದಲ್ಲಿ ನಿಗದಿಪಡಿಸಲಾಗಿದೆ. ಇಲ್ಲಿನ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಚೀಟಿ ಸದ್ದು

ದಾಖಲೆ ಪತ್ರಗಳನ್ನು ಒಯ್ದ ಇ.ಡಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜಿಲ್ಲೆಯ ಸಂಸದರು ಮತ್ತು ಮೂವರು ಶಾಸಕರ ಮನೆಗಳ ಮೇಲೆ ಬುಧವಾರ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಕೆಲ ದಾಖಲೆಪತ್ರಗಳನ್ನು ಒಯ್ದಿದ್ದಾರೆ.

ಬುಧವಾರ ಬೆಳಿಗ್ಗೆ 6ಕ್ಕೆ ದಾಳಿ ಆರಂಭಿಸಿದ್ದ ಅಧಿಕಾರಿಗಳು, ಸಂಸದ ಮತ್ತು ಶಾಸಕರನ್ನು ದಾಖಲೆಗಳನ್ನು ಮುಂದಿಟ್ಟು ವಿಚಾರಣೆ ನಡೆಸಿದರು. ಚುನಾವಣೆ ವೆಚ್ಚದ ಕುರಿತ ಚೀಟಿಯೊಂದರ ಬಗ್ಗೆ ಪ್ರಶ್ನಿಸಿದರು. ರಾತ್ರಿ 9.30ಕ್ಕೆ ಎಲ್ಲರ ಮನೆಗಳಿಂದ ನಿರ್ಗಮಿಸಿದ ಅಧಿಕಾರಿಗಳು ತಮ್ಮೊಂದಿಗೆ ಕೆಲ ದಾಖಲೆಗಳನ್ನು ಕೊಂಡೊಯ್ದರು ಎಂದು ಮೂಲಗಳು ತಿಳಿಸಿವೆ.

ಸಂಸದ ಇ. ತುಕಾರಾಂ ಅವರಿಂದ ₹1 ಲಕ್ಷ ವಶಕ್ಕೆ ಪಡೆದ ಬಗ್ಗೆ ಸುದ್ದಿ ಹರಿಡಿತ್ತಾದರೂ, ಇದು ಖಚಿತವಾಗಿಲ್ಲ. 'ಇ.ಡಿ ಅಧಿಕಾರಿಗಳಿಗೆ ಸತ್ಯವನ್ನು ವಿವರಿಸಿದ್ದೇನೆ. ವಾಲ್ಮೀಕಿ ನಿಗಮದ ಹಣಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ. ದಾಳಿ ರಾಜಕೀಯ ಪ್ರೇರಿತ ಎನ್ನಲಾರೆ' ಎಂದು ತುಕಾರಾಂ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ನಾರಾ ಭರತ್ ರೆಡ್ಡಿ ಮಾತನಾಡಿ, 'ನನ್ನ ಮನೆಯಿಂದ ಒಂದೇ ಒಂದು ಕಾಗದದ ಚೂರನ್ನು ಇ.ಡಿ ಅಧಿಕಾರಿಗಳು ಒಯ್ದಿಲ್ಲ. ಬೇಕಿದ್ದರೆ, ಮಹಜರ್ ವರದಿ ನಾನು ಕೊಡಬಲ್ಲೆ' ಎಂದರು.

ಶಾಸಕ ಜೆ.ಎನ್ ಗಣೇಶ್ ಅವರು, 'ಲೋಕಸಭಾ ಚುನಾವಣೆ, ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ನಿಮಗೆ ಏನಾದರೂ ತಿಳಿದಿದೆಯೇ ಎಂದು ಅಧಿಕಾರಿಗಳು ಕೇಳಿದರು. ಆದರೆ, ಇದರ ಬಗ್ಗೆ ನಮಗೇನೂ ಮಾಹಿತಿ ಇಲ್ಲ ಎಂದು ತಿಳಿಸಿದ್ದೇನೆ. ತನಿಖೆಗೆ ಸಹರಿಸಿದ್ದೇನೆ' ಎಂದರು.

'ಹನ್ನೊಂದು ವರ್ಷದಲ್ಲಿ ಕೇಂದ್ರ ಸರ್ಕಾರ ವಿರೋಧ ಪಕ್ಷದ ನಾಯಕರ ವಿರುದ್ಧ 193 ಪ್ರಕರಣ ದಾಖಲಿಸಿದೆ. ಇದರಲ್ಲಿ ಶೇ 98ರಷ್ಟು ಮಂದಿ ಕಾಂಗ್ರೆಸ್ ನಾಯಕರೇ ಆಗಿದ್ದಾರೆ' ಎಂದು ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್ ಆರೋಪಿಸಿದ್ದಾರೆ.

ಸದ್ದು ಮಾಡುತ್ತಿರುವ ಚೀಟಿ: ಜಿಲ್ಲೆಯ ಮಾಜಿ ಶಾಸಕರೊಬ್ಬರು ಅವರಿವರಿಗೆ ನೀಡಿದ ಲಕ್ಷಾಂತರ ರೂಪಾಯಿ ಹಣದ ಲೆಕ್ಕವಿರುವ ಚೀಟಿಯೊಂದು ಸದ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

2024ರ ಫೆಬ್ರುವರಿ 10ರಂದು ಮಾಜಿ ಶಾಸಕರು ಸಹಿ ಮಾಡಿರುವುದು ಈ ಚೀಟಿಯಲ್ಲಿದೆ. ಕನಿಷ್ಠ ₹2 ಲಕ್ಷದಿಂದ ಗರಿಷ್ಠ ₹60 ಲಕ್ಷದ ವರೆಗೆ ಹಣ ನೀಡಿರುವ ಲೆಕ್ಕಗಳು ಅದರಲ್ಲಿವೆ. ಈ ವಿಷಯವಾಗಿ ಜಿಲ್ಲೆಯ ಶಾಸಕರನ್ನು ಇ.ಡಿ ಅಧಿಕಾರಿಗಳು ವಿಚಾರಿಸಿದ್ದಾರೆ ಎನ್ನಲಾಗಿದೆ. ಆದರೆ, ಇದನ್ನೂ ಯಾರೂ ಖಚಿತಪಡಿಸಿಲ್ಲ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

WORK FROM HOME. 10,000-25,000/- ಯಾವುದೇವಿದ್ಯಾರ್ಹತೆ ಇರುವುದಿಲ್ಲ. 8792745918

HRD & Admin

WANTED FIELD / recruitment officers for a reputed Facilities & Security Management company. Salary-35K-50K Contact - 8050290580/8310882699

ಪ್ರವಾಸ

Travel Agencies

ನೇಪಾಳ ಪ್ರವಾಸ 10 ದಿನಗಳು 18/6 ಮಧ್ಯಪ್ರದೇಶ 4 ದಿನಗಳು 24/5 ಬ್ಯಾಂಕಾಕ್ ಪಟ್ಟಾಯ 5 ದಿನಗಳು 19/6 ಬಾಲಿ ಪ್ರವಾಸ 6 ದಿನಗಳು 25/7 ಸುವರ್ಣ ಯಾತ್ರ 4/9/2025: 9480843945 9019462508

Travel

26.06.2025ರಿಂದ 4ದಿನಗಳು- ಧರ್ಮಸ್ಥಳ,ಕೊಲ್ಲೂರು ಮುಕಾಂಬಿಕೆ,ಹೊರನಾಡು, ಮುರುಡೇಶ್ವರ,ಸಿಗಂದೂರು 05.07.2025ರಿಂದ 7ದಿನಗಳು- ಪುರಿ,ಕೊಲ್ಕತ್ತ,ಕೊನಾರ್ಕ್, ಭುವನೇಶ್ವರ 06.07.2025 ರಿಂದ 4 ದಿನಗಳು-ಶಿರಡಿ, ಕೊಲ್ಹಾಪುರ,ತುಳಜಾಪುರ, ಕೂಡಲಸಂಗಮ, ಬಿಜಾಪುರ12.07.2025ರಿಂದ 6ದಿನಗಳು-ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂದ್ರಂ,ಶ್ರೀರಂಗ, ಅಲಪೂಬೋಟಿಂಗ್, ಕೋವಲಂಬೀಚ್ 17.07.2025ರಿಂದ 4ದಿನಗಳು- ಕಾಶಿ, ಅಯೋಧ್ಯ,ಪ್ರಯಾಗ್ ರಾಜ್20.07.2025ರಿಂದ 7ದಿನಗಳು- ಭದ್ರಾಚಲಂ, ಹೈದ್ರಾಬಾದ್, ಶ್ರೀಶೈಲ, ಮಂತ್ರಾಲಯ, ಅಮರಾವತಿ, ರಾಮೋಜಿ ಫಿಲಂಸಿಟಿ ಶ್ರೀ ಗುರುರಾಜ ಟ್ರಾವೆಲ್ಸ್- ಕೋಲಾರ- 9611082432, 9449652555, 8123099913

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹೊಸಪೇಟೆ ಹೊರವಲಯದ ಜಂಬುನಾಥಹಳ್ಳಿಯ ರಾಯರಕೆರೆ ಪ್ರದೇಶದಲ್ಲಿ ಗುರುವಾರ ಕಬ್ಬಿನ ಗದ್ದೆಗಳು ಜಲಾವೃತಗೊಂಡವು (ಎಡ ಚಿತ್ರ). ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಯಮನೂರು ಸಮೀಪ ಜಮೀನಿನಲ್ಲಿನ ಜಲಾವೃತವಾಗಿದ್ದ ಮನೆಯ ನಿವಾಸಿಗಳನ್ನು ಅಗ್ನಿಶಾಮಕ ಸಿಬ್ಬಂದಿ ಮೋಟರ್ ಬೋಟ್‌ನಲ್ಲಿ ಸುರಕ್ಷಿತವಾಗಿ ಕರೆತಂದರು –ಪ್ರಜಾವಾಣಿ ಚಿತ್ರ

ಧಾರವಾಡ, ಉತ್ತರಕನ್ನಡ ಜಿಲ್ಲೆಗಳಲ್ಲಿ ರಸ್ತೆಗಳು ಜಲಾವೃತ • ಕೊಡಗಿನಲ್ಲಿ ಶಾಲೆಗಳಿಗೆ ರಜೆ

ಧಾರಾಕಾರ ಮಳೆ: ಕೋಡಿ ಹರಿದ ಕೆರೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ/ಮೈಸೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಬುಧವಾರ ಮತ್ತು ಗುರುವಾರ ವ್ಯಾಪಕ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ನಗರವೂ ಸೇರಿ ವಿವಿಧೆಡೆ ಗುರುವಾರ ಮಧ್ಯಾಹ್ನದಿಂದ ಮಳೆಯಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಅತಿಹೆಚ್ಚು 11 ಸೆಂ.ಮೀ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ನಿರಂತರ ಮಳೆ ಕಾರಣ ಶುಕ್ರವಾರವೂ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯಾದ್ಯಂತ ಬುಧವಾರ ಸಂಜೆ 3 ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆ ಸುರಿದು ಕೆರೆ, ಕಟ್ಟೆಗಳು ತುಂಬಿ ಹರಿದಿವೆ.

ಬರಡನಪುರದ ಬಣ್ಣದಕಟ್ಟೆ ಕೆರೆ ತುಂಬಿ ಕೋಡಿ ಬಿದ್ದಿದೆ. ಜಯಪುರದ ಜೇಡಿಕಟ್ಟೆ ತುಂಬಿ ಹೊಸಕೆರೆಗೆ ಹೆಚ್ಚಿನ ನೀರು ಬಂದಿದೆ. ಕೆಗ್ಗೆರೆಯು ತುಂಬಿದ್ದು, ಕೋಡಿ ಬೀಳುವ ಹಂತ ತಲುಪಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿರುವುದರಿಂದ ತುಂಗಾ, ಭದ್ರಾ ಹಾಗೂ ಲಿಂಗನಮಕ್ಕಿ ಜಲಾಶಯಗಳ ಒಳಹರಿವು ಹೆಚ್ಚಳಗೊಂಡಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ 4,000 ಕ್ಯೂಸೆಕ್, ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ 2,364 ಹಾಗೂ ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯಕ್ಕೆ ಒಳಹರಿವು 3,777 ಕ್ಯೂಸೆಕ್ ಒಳಹರಿವು ದಾಖಲಾಗಿದೆ.

ದಾವಣಗೆರೆ ವರದಿ: ದಾವಣಗೆರೆ ಹಾಗೂ ಹರಿಹರ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುರುವಾರವೂ ಮಳೆ ಮುಂದುವರಿದಿದೆ. ಬುಧವಾರ ರಾತ್ರಿಯಿಂದ ಸುರಿದಿದ್ದ ಮಳೆ ಗುರುವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಧಾರಾಕಾರವಾಗಿ ಸುರಿಯಿತು. ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆ ಸುರಿದಿದೆ.

ಹುಬ್ಬಳ್ಳಿ ವರದಿ: ಧಾರವಾಡ ಜಿಲ್ಲೆಯಲ್ಲಿ ರಸ್ತೆಗಳು ಜಲಾವೃತವಾಗಿವೆ. ಹುಬ್ಬಳ್ಳಿ ನಗರದ ಕೆಲವೆಡೆ ನೂರಾರು ಮನೆಗಳಿಗೆ ಮಳೆ ನೀರು ನುಗ್ಗಿದೆ. ಮನೆಗಳಿಗೆ ಮಳೆನೀರು ನುಗ್ಗುವ ಸಮಸ್ಯೆಗೆ ಪರಿಹಾರ ಒದಗಿಸಬೇಕು ಎಂದು ಗುರುವಾರ ಬೆಳಿಗ್ಗೆ ಮಹಿಳೆಯರು ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ಬಹುಮಹಡಿ ಕಟ್ಟಡಗಳ ನೆಲಮಹಡಿಗಳಲ್ಲಿ ಮಳೆನೀರು ಭರ್ತಿಯಾಗಿ, ಅಲ್ಲಿದ್ದ ಬೈಕ್ ಹಾಗೂ ಕಾರುಗಳು ಜಲಾವೃತಗೊಂಡಿವೆ.

ನವಲಗುಂದ ತಾಲ್ಲೂಕಿನಲ್ಲಿ ಬೆಣ್ಣೆಹಳ್ಳ ಮತ್ತು ತುಪ್ಪರಿ ಗ್ರಾಮಗಳು ಮೈದುಂಬಿ ಅಪಾಯಮಟ್ಟದಲ್ಲಿ ಹರಿಯುತ್ತಿವೆ. ಯಮನೂರು ಸಮೀಪ ಜಮೀನಿನಲ್ಲಿನ ಮನೆ ಜಲಾವೃತವಾಗಿದೆ. ಮನೆಯಲ್ಲಿದ್ದವರನ್ನು ಮೋಟರ್ ಬೋಟ್‌ನಲ್ಲಿ ಆ ಪ್ರದೇಶದಿಂದ ಸುರಕ್ಷಿತವಾಗಿ ಹೊರಕ್ಕೆ ಕರೆತರಲಾಗಿದೆ. ತಿರ್ಲಾಪೂರ ಮತ್ತು ಯಮನೂರು ಗ್ರಾಮದಲ್ಲಿ ಕೆರೆಗಳು ಭರ್ತಿಯಾಗಿ ಕೋಡಿ ಬಿದ್ದಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರಂತರ ಮಳೆಯಿಂದ ಕಾರವಾರ, ಭಟ್ಕಳದಲ್ಲಿ ಹೆದ್ದಾರಿಗಳು, ಮುಖ್ಯ ರಸ್ತೆಗಳು, ಜನ ವಸತಿ ಪ್ರದೇಶಗಳು ಜಲಾವೃತಗೊಂಡಿದ್ದವು. ಕಾರವಾರದ ಜಿಲ್ಲಾಸ್ಪತ್ರೆಯಲ್ಲಿ ಮಳೆನೀರು ನುಗ್ಗಿದ್ದರಿಂದ ರೋಗಿಗಳನ್ನು ಬೇರೆ ವಾರ್ಡ್‌ಗಳಿಗೆ ಸ್ಥಳಾಂತರಿಸಲಾಯಿತು. ಕಾರವಾರದ ಎರಡು ಕಡೆಗಳಲ್ಲಿ ಭೂಕುಸಿತ ಸಂಭವಿಸಿದ್ದು, ಸಮೀಪದ ಪ್ರದೇಶದ ಜನರನ್ನು ಸ್ಥಳಾಂತರಿಸಲಾಯಿತು.

ಬಾಗಲಕೋಟೆ ಜಿಲ್ಲೆ ಗುಳೇದಗುಡ್ಡ ಬಳಿಯ ಪರ್ವತಿಹಳ್ಳಿ ರಸ್ತೆ ಮೇಲೆ ನೀರು ಉಕ್ಕಿದ್ದು ಅಸಂಗಿ–ಪಟ್ಟದಕಲ್ಲು ಸಂಚಾರ ಗುರುವಾರ ಬೆಳಿಗ್ಗೆಯಿಂದ ಬಂದ್ ಆಗಿದೆ.

ಮಂಗಳೂರು ವರದಿ: ಪುತ್ತೂರು ತಾಲ್ಲೂಕಿನ ಪಟ್ಟೆ ಎಂಬಲ್ಲಿ ಸಿಡಿಲು ಬಡಿದು ಮನೆಗೆ ಹಾನಿಯಾಗಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರ, ಕುಂದಾಪುರ, ಕಾರ್ಕಳ, ಹೆಬ್ರಿ, ಕಾಪು, ಬೈಂದೂರಿನಲ್ಲಿ ಬಿರುಸಿನ ಮಳೆಯಾಗಿದ್ದು ಬ್ರಹ್ಮಾವರದ ಗಾಂಧಿ ಮೈದಾನದ ಬಳಿ ವಿದ್ಯಾರ್ಥಿನಿಯರ ವಸತಿನಿಲಯಕ್ಕೆ ನೀರು ನುಗ್ಗಿತ್ತು.

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ಮೂಡಿಗೆರೆ, ಕೊಟ್ಟಿಗೆಹಾರ, ಕೊಪ್ಪ, ಬಾಳೆಹೊನ್ನೂರು, ಆಲ್ದೂರು ಭಾಗದಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ನಿರಂತರ ಮಳೆ ಸುರಿದಿದೆ. ಮಲೆನಾಡು ಭಾಗದ ಆರು ತಾಲ್ಲೂಕಿನ ಅಂಗನವಾಡಿಗಳಿಗೆ ಶುಕ್ರವಾರ ಮತ್ತು ಶನಿವಾರ ರಜೆ ಘೋಷಿಸಲಾಗಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಗುರುವಾರವೂ ಸಾಧಾರಣ ಮಳೆಯಾಗಿದೆ. ರಾಯಚೂರು ಜಿಲ್ಲೆಯ ವಿವಿಧೆಡೆ ಗುರುವಾರ ಬೆಳಗಿನ ಜಾವ ಸಾಧಾರಣ ಮಳೆಯಾಗಿದೆ. ದೇವದುರ್ಗ ತಾಲ್ಲೂಕಿನ ಕೊಳೂರು ಗ್ರಾಮದಲ್ಲಿ ಚಿಕ್ಕಹಳ್ಳ ಉಕ್ಕಿ ಹರಿಯಿತು. ಕೊಪ್ಪಳ, ಮುನಿರಾಬಾದ್, ಕುಷ್ಟಗಿ ಹಾಗೂ ಹನುಮಸಾಗರದಲ್ಲಿ ಸಾಧಾರಣ ಮಳೆಯಾಗಿದೆ. ಬೀದರ್‌ನಲ್ಲಿ ತುಂತುರು ಮಳೆಯಾಗಿದೆ.



ಗುರುವಾರ ರಾತ್ರಿ ಸುರಿದ ಮಳೆಯಿಂದಾಗಿ ಹುಬ್ಬಳ್ಳಿಯ ಅಕ್ಷಯ ಕಾಲೊನಿ ಕ್ಲಾಸಿಕ್ ಅಪಾರ್ಟ್‌ಮೆಂಟ್‌ನ ನೆಲಮಹಡಿ ಜಲಾವೃತವಾಗಿದ್ದರಿಂದ ಬೈಕ್ ಮತ್ತು ಕಾರು ಮುಳುಗಿದ್ದವು

ಹಲವೆಡೆ ರಸ್ತೆ ಬಂದ್

ಗದಗ ಜಿಲ್ಲೆ ರೋಣ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಕೃಷಿ ಜಮೀನು ಜಲಾವೃತವಾಗಿ, ಬೆಳೆ ಹಾನಿಯಾಗಿದೆ. ರೋಣದಿಂದ ನರಗುಂದ ಸಂಪರ್ಕಿಸುವ ರಸ್ತೆಯ ಯಾವಗಲ್ ಸಮೀಪದ ಹಳ್ಳ ತುಂಬಿ ಹರಿಯುತ್ತಿದ್ದು ಅಕ್ಕಪಕ್ಕದ ಜಮೀನುಗಳಿಗೆ ನೀರು ನುಗ್ಗಿದೆ. ಮೆಣಸಗಿ ಗ್ರಾಮದ ಬಳಿ ಬೆಣ್ಣೆಹಳ್ಳ ತುಂಬಿ ಹರಿಯುತ್ತಿದ್ದು, ನರಗುಂದ ಸೇರಿ ಬೆಳಗಾವಿ ಸಂಪರ್ಕಿಸುವ ರಸ್ತೆ ಸಂಪರ್ಕ ಕಡಿತಗೊಂಡಿದೆ. ಯಾವಗಲ್ ಗ್ರಾಮದಲ್ಲಿ ಮಳೆಯಿಂದಾಗಿ ಜನವಸತಿ ಪ್ರದೇಶಕ್ಕೆ ನೀರು ನುಗ್ಗಿದ್ದು, ಮನೆಯ ಗೋಡೆ ಕುಸಿದಿದೆ.

ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಹಂಪಿ ಪರಿಸರದಲ್ಲಿ ಉತ್ತಮ ಮಳೆಯಾಗಿದ್ದು ತಳವಾರಘಟ್ಟ ಪ್ರದೇಶದಲ್ಲಿನ ವಿಜಯನಗರ ಅರಸರ ಕಾಲದ ಕಾಲುವೆ ತುಂಬಿ ರಸ್ತೆ ಮೇಲೆ ಹರಿದು ಹಲವು ಗಂಟೆಗಳ ಕಾಲ ವಿಜಯ ವಿಠ್ಠಲ ದೇವಸ್ಥಾನಕ್ಕೆ ತೆರಳುವ ರಸ್ತೆ ಬಂದ್ ಆಗಿತ್ತು. ಬಳ್ಳಾರಿ ಜಿಲ್ಲೆ ಸಿರುಗುಪ್ಪ, ಸಂಡೂರು, ಕಂಪ್ಲಿ, ಕುರುಗೋಡು ತಾಲ್ಲೂಕುಗಳಲ್ಲಿ ಧಾರಾಕಾರ ಮಳೆಯಾಯಿತು.

ನ್ಯಾ. ವರ್ಮಾ ಪ್ರಕರಣ: ‘ಸುಪ್ರೀಂ’ ವರದಿ ನೀಡುವಂತೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ಆರೋಪಗಳ ಬಗ್ಗೆ ಸುಪ್ರೀಂ ಕೋರ್ಟ್ ನೇಮಿಸಿದ್ದ ಸಮಿತಿ ನೀಡಿರುವ ವರದಿಯನ್ನು ಸಂಸತ್ತಿನ ಮುಂಗಾರು ಅಧಿವೇಶನದ ಮೊದಲು ಕೇಂದ್ರ ಸರ್ಕಾರ ಹಂಚಿಕೊಂಡರೆ ಅವರ ವಿರುದ್ಧ ವಾಗ್ದಂಡನೆ ನಿಲುವಳಿಗೆ ಬೆಂಬಲ ನೀಡುವ ಬಗ್ಗೆ ನಿರ್ಧರಿಸಬಹುದು ಎಂದು ಕಾಂಗ್ರೆಸ್ ಹೇಳಿದೆ.

ಜುಲೈ 21ರಂದು ಆರಂಭಗೊಳ್ಳಲಿರುವ ಮುಂಗಾರು ಅಧಿವೇಶನದಲ್ಲಿ ಯಶವಂತ್ ವಿರುದ್ಧ ವಾಗ್ದಂಡನೆ ನಿರ್ಣಯ ಮಂಡಿಸುವ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಎಲ್ಲ ಪಕ್ಷಗಳೊಂದಿಗೆ ಚರ್ಚೆ ಆರಂಭಿಸಿದ್ದಾರೆ.

‘ಸಮಿತಿಯ ವರದಿಯನ್ನು ನೀಡುವಂತೆ ಕಿರಣ್ ರಿಜಿಜು ಅವರಿಗೆ ಪಕ್ಷ ಆಗ್ರಹಿಸಿದೆ. ಆದರೆ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ನ್ಯಾಯಮೂರ್ತಿ ವರ್ಮಾ ಅವರು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಸಂದರ್ಭದಲ್ಲಿ ಅವರ ಅಧಿಕೃತ ನಿವಾಸದಲ್ಲಿ ಸುಟ್ಟ ನೋಟಿನ ಕಂತೆಗಳು ಪತ್ತೆಯಾಗಿದ್ದವು. ಈ ಸಂಬಂಧ ತನಿಖೆಗೆ ಸುಪ್ರೀಂ ಕೋರ್ಟ್ ಸಮಿತಿಯನ್ನು ರಚಿಸಿತ್ತು.

ಮೀನುಗಾರಿಕೆಗೆ ತಯಾರಿ

ಬಂಗಾಳ ಕೊಲ್ಲಿಯ ಪೂರ್ವ ಕರಾವಳಿಯಲ್ಲಿ ಮೀನುಗಾರಿಕೆಗೆ ವಿಧಿಸಿದ್ದ 61 ದಿನಗಳ ನಿಷೇಧ ಅಂತ್ಯಗೊಂಡ ಬಳಿಕ ತಮಿಳುನಾಡಿನ ಚೆನ್ನೈ ಸಮುದ್ರ ತೀರದಲ್ಲಿ ಮೀನುಗಾರಿಕೆ ಆರಂಭಿಸಲು ಸಜ್ಜಾಗಿರುವ ಹಡಗುಗಳು ಪಿಟಿಐ ಚಿತ್ರ

ವಿದ್ಯಾರ್ಥಿಗಳಿಗಾಗಿ ಕೊಳವೆಬಾವಿ ಕೊರೆಸಿದ ಶಿಕ್ಷಕಿ

ಪ್ರಜಾವಾಣಿ ವಾರ್ತೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಪಟ್ಟಣದ ಸರ್ಕಾರಿ ಉರ್ದು ಹಿರಿಯ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆ ನಂಬರ್–2ರ ಆವರಣದಲ್ಲಿ ಸಹ ಶಿಕ್ಷಕಿ ಎಸ್.ಎಂ.ರಾಯಬಾಗಿ ಅವರು ವಿದ್ಯಾರ್ಥಿಗಳಿಗೆ ಕುಡಿಯುವ ನೀರಿಗಾಗಿ ₹80 ಸಾವಿರ ಖರ್ಚಿನಲ್ಲಿ ಕೊಳವೆಬಾವಿ ಕೊರೆಸಿದ್ದಾರೆ. ಒಂದೂವರೆ ಇಂಚಿನಷ್ಟು ನೀರು ಲಭ್ಯವಾಗಿದೆ.

ಎಸ್.ಎಂ. ರಾಯಬಾಗಿ

ಒಟ್ಟು 802 ವಿದ್ಯಾರ್ಥಿಗಳು ಮತ್ತು 9 ಶಿಕ್ಷಕರು ಇರುವ ಶಾಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹಲವು ದಿನಗಳಿಂದ ಇತ್ತು. ಮಧ್ಯಾಹ್ನದ ಬಿಸಿಯೂಟ ಸಿದ್ಧಪಡಿಸಲು ತೊಂದರೆ ಆಗುತಿತ್ತು. ಎಲ್ಲರೂ ಮನೆಯಿಂದ ನೀರು ತರುವ ಪರಿಸ್ಥಿತಿ ಇತ್ತು.

ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಶಿಕ್ಷಕಿ ಎಸ್.ಎನ್.ರಾಯಬಾಗಿ ಅವರೇ ಸ್ವತಃ ಕೊಳವೆಬಾವಿ ಕೊರೆಸಿದರು. ನೀರನ್ನು ಶುದ್ಧೀಕರಿಸಲು ಅಗತ್ಯ ಸಾಮಗ್ರಿಗಳನ್ನೂ ಕೊಡಿಸುವುದಾಗಿ ಅವರು ತಿಳಿಸಿದ್ದಾರೆ. ಅವರ ಕಾರ್ಯಕ್ಕೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಲೀಲಾವತಿ ಹಿರೇಮಠ, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎನ್.ಪ್ಯಾಟಿ, ಶಾಲಾಭಿವೃದ್ಧಿ ಸಮಿತಿ ಸದಸ್ಯರು ಶ್ಲಾಘಿಸಿದ್ದಾರೆ.

ಬೈಲಹೊಂಗಲ ಸರ್ಕಾರಿ ಉರ್ದು ಹಿರಿಯ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆ ನಂಬರ್–2ರಲ್ಲಿ ಶಿಕ್ಷಕಿ ಎಸ್.ಎಂ.ರಾಯಬಾಗಿ ಅವರು ಮಕ್ಕಳಿಗೆ ಕುಡಿಯುವ ನೀರಿಗಾಗಿ ಕೊರೆಸಿದ ಕೊಳವೆಬಾವಿ ಸೌಲಭ್ಯಕ್ಕೆ ಚಾಲನೆ ನೀಡಲಾಯಿತು

ಸಿಂಧೂರಿ, ರೂಪಾ ವರ್ಗಾವಣೆ

ಬೆಂಗಳೂರು: ಸ್ಥಳ ನಿರೀಕ್ಷಣೆಯಲ್ಲಿದ್ದ ಎಸ್.ಬಿ. ಶೆಟ್ಟಣ್ಣನವರ ಅವರನ್ನು ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರನ್ನಾಗಿ ಹಾಗೂ ಅಕ್ರಂ ಪಾಷ ಅವರನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಕೃಷಿ ಇಲಾಖೆಯ ಕಾರ್ಯದರ್ಶಿ (ಆಹಾರ ಸಂಸ್ಕರಣೆ, ಕೊಯ್ಲು ತಂತ್ರಜ್ಞಾನ) ರೋಹಿಣಿ ಸಿಂಧೂರಿ ಅವರನ್ನು ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿ, ಐಪಿಎಸ್ ಅಧಿಕಾರಿ ಡಿ. ರೂಪಾ ಅವರನ್ನು ಬೆಂಗಳೂರು ಮಹಾನಗರ ಕಾರ್ಯ ಪಡೆಯ (ಬಿಎಂಟಿಎಫ್) ಎಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ.

ಜೀವಂತ ತಾಯಿ ಹೆಸರಲ್ಲಿ ಮರಣ ಪತ್ರ ಪಡೆದ ಮಗ

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ತಾಯಿ ಮೃತಪಟ್ಟಿದ್ದಾರೆ’ ಎಂದು ಪುರಸಭೆಗೆ ಸುಳ್ಳು ಅರ್ಜಿ ನೀಡಿ, ಮರಣ ಪ್ರಮಾಣ ಪತ್ರ ಪಡೆದ ಮಗ ಶೌಕತ್‌ಅಲಿ ಜಂಗ್ಲಿಸಾಬ್ ಮುಲ್ಕಿ ವಿರುದ್ಧ ತಾಯಿ ಹೂರಾಂಬಿ ಅವರು ಶಿಗ್ಗಾವಿ ಪೊಲೀಸ್ ಠಾಣೆಗೆ ಗುರುವಾರ ದೂರು ನೀಡಿದ್ದಾರೆ.

ಶಿಗ್ಗಾವಿಯ ಖಾಜೆಖಾನಗಲ್ಲಿಯಲ್ಲಿ ವಾಸಿಸುವ ಹೂರಾಂಬಿ ಮತ್ತು ಹುಬ್ಬಳ್ಳಿಯಲ್ಲಿ ವಾಸವಿರುವ ಶೌಕತ್‌ಅಲಿ ಅವರಿಬ್ಬರ ಹೆಸರಿನಲ್ಲಿ ಜಂಟಿಯಾಗಿ ಎರಡು ಎಕರೆ ಆಸ್ತಿಯಿದೆ.

‘ಆಸ್ತಿಯನ್ನು ಸಂಪೂರ್ಣವಾಗಿ ಕಬಳಿಸುವ ದುರುದ್ದೇಶದಿಂದ ಜೀವಂತವಾಗಿರುವ ತಾಯಿ ಮೃತರಾಗಿದ್ದಾರೆ ಎಂದು ಪುರಸಭೆಗೆ ಖೊಟ್ಟಿ ದಾಖಲೆ ನೀಡಿ ಮರಣ ಪತ್ರ ಪಡೆದಿದ್ದಾನೆ’ ಎಂದು ತಾಯಿ ಹೂರಾಂಬಿ ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬಿಒಎಂ ಬಡ್ಡಿ ದರದಲ್ಲಿ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.50ರಷ್ಟು ಕಡಿತಗೊಳಿಸಿದೆ. ಪರಿಷ್ಕೃತ ದರವು ಜೂನ್ 10ರಿಂದ ಜಾರಿಗೆ ಬಂದಿದೆ.

ರೆಪೊ ದರ ಆಧರಿಸಿದ ಗೃಹ, ಕಾರು, ಶಿಕ್ಷಣ ಮತ್ತು ಇತರೆ ಸಾಲಗಳ ಮೇಲಿನ ಬಡ್ಡಿ ದರ ಇಳಿಕೆ ಮಾಡಲಾಗಿದೆ. ಗೃಹ ಮತ್ತು ಕಾರಿನ ಸಾಲವು ಕ್ರಮವಾಗಿ ಶೇ 7.35 ಮತ್ತು ಶೇ 7.7ರಿಂದ ಆರಂಭವಾಗಲಿದೆ.

ಇದು ಬ್ಯಾಂಕಿಂಗ್ ಉದ್ಯಮದಲ್ಲಿ ಅತಿ ಕಡಿಮೆ ಬಡ್ಡಿ ದರ ಎಂದು ಬ್ಯಾಂಕ್ ಗುರುವಾರ ತಿಳಿಸಿದೆ. ಆರ್‌ಬಿಐ ಇತ್ತೀಚೆಗೆ ರೆಪೊ ದರ ಶೇ 0.50ರಷ್ಟು ಕಡಿತಗೊಳಿಸಿದೆ. ಹೀಗಾಗಿ ಬ್ಯಾಂಕ್‌ಗಳು ಬಡ್ಡಿ ದರ ಇಳಿಸುತ್ತಿವೆ.

ಇದೇ 21ರವರೆಗೆ ಅಂತರರಾಷ್ಟ್ರೀಯ ವಿಜ್ಞಾನ ಸ್ಪರ್ಧೆ

ವಿದ್ಯಾರ್ಥಿನಿಯರು ಜಪಾನ್‌ಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ ಉಡುಪಿ: ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ದೇಮಟ್ಟಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿ ನಾಗರತ್ನಾ ಬಸಪ್ಪ ಕೊಳ್ಳಿ ಮತ್ತು ಕಾರ್ಕಳದ ಇಬ್ಬರು ವಿದ್ಯಾರ್ಥಿನಿಯರು ಜಪಾನ್‌ನಲ್ಲಿ ಇದೇ 14 ರಿಂದ 21ರವರೆಗೆ ನಡೆಯುವ ಅಂತರರಾಷ್ಟ್ರೀಯ ವಿಜ್ಞಾನ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವರು.

ಕೂಲಿಗೆಲಸ ಮಾಡುವ ತಂದೆ ಬಸಪ್ಪ ಮತ್ತು ತಾಯಿ ರುದ್ರವ್ವ ಅವರ ಪುತ್ರಿ ನಾಗರತ್ನಾ ಕಂಡುಹಿಡಿದ ‘ಸುಲಭವಾಗಿ ತೆಂಗಿನಕಾಯಿ ಚಿಪ್ಪು ಸುಲಿಯುವ ಸಾಧನ’ವು ನವದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ‘ಇನ್‌ಸ್ಪೈಯರ್’ ವಿಜ್ಞಾನ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಗಳಿಸಿದೆ.ವಿಜ್ಞಾನ ಶಿಕ್ಷಕಿ ರಕ್ಷಾ ಮಡಿವಾಳ ಮಾರ್ಗದರ್ಶನ ಮಾಡಿದ್ದಾರೆ.

‘ಮನೆಯಲ್ಲಿ ಕಡು ಬಡತನವಿದೆ. ಹಣಕಾಸಿನ ಸಮಸ್ಯೆಯಿದೆ. ದೇಮಟ್ಟಿ ಗ್ರಾಮ ಪಂಚಾಯಿತಿಯವರು ₹38 ಸಾವಿರ ಕೊಟ್ಟು, ನವದೆಹಲಿಗೆ ವಿಮಾನದ ಟಿಕೆಟ್ ಬುಕ್ ಮಾಡಿದ್ದಾರೆ. ಶಾಸಕ ಬಾಬಾಸಾಹೇಬ ಪಾಟೀಲ ₹20 ಸಾವಿರ ಖರ್ಚಿಗೆ ನೀಡಿದ್ದಾರೆ’ ಎಂದು ನಾಗರತ್ನ ‘ಪ್ರಜಾವಾಣಿ’ಗೆ ತಿಳಿಸಿದರು.

ನಾಗರತ್ನ ಕೊಳ್ಳಿ

ನಿಕಿತಾ ಮೂಲ್ಯ

ಅಮೂಲ್ಯ ಹೆಗ್ಡೆ

ಕಾರ್ಕಳದ ಇಬ್ಬರು ಆಯ್ಕೆ: ಕಾರ್ಕಳ ತಾಲ್ಲೂಕಿನ ಕುಕ್ಕುಜೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿ ಅಮೂಲ್ಯ ಹೆಗ್ಡೆ ಪ್ರಸ್ತುತಪಡಿಸಿದ ಫ್ಲಡ್ ಡಿಟೆಕ್ಟರ್ ಪೋಲ್ ಮತ್ತು ನಿಕಿತಾ ಮೂಲ್ಯ ಅವರ ರೋಪೋ ಮೀಟರ್ ಅನ್ವೇಷಣೆಯು 2024ರ ಸೆಪ್ಟೆಂಬರ್ 21ರಂದು ದೆಹಲಿಯಲ್ಲಿ ನಡೆದಿದ್ದ ರಾಷ್ಟ್ರಮಟ್ಟದ ಇನ್‌ಸ್ಪೈರ್ ಸ್ಪರ್ಧೆಯಲ್ಲಿ ಆಯ್ಕೆಯಾಗಿತ್ತು. ಶಿಕ್ಷಕ ಸುರೇಶ್ ಮರಕಾಲ ಮಾರ್ಗದರ್ಶನ ನೀಡಿದ್ದರು.

ಅಮೂಲ್ಯ ಹೆಗ್ಡೆ ಉಡುಪಿ ತಾಲ್ಲೂಕಿನ ಬೈರಂಪಳ್ಳಿ ಗ್ರಾಮದ ಅರುಣ ಹೆಗ್ಡೆ ಮತ್ತು ಅನಿತಾ ಹೆಗ್ಡೆ ದಂಪತಿ ಪುತ್ರಿಯಾಗಿದ್ದು, ಪ್ರಸ್ತುತ ಹೆಬ್ರಿ ಅಮೃತ ಭಾರತಿಯಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯಾಗಿದ್ದಾರೆ. ನಿಕಿತಾ ಮೂಲ್ಯ ಅವರು ಬೈರಂಪಳ್ಳಿಯ ಕೃಷ್ಣ ಮೂಲ್ಯ ಮತ್ತು ವನಿತಾ ಮೂಲ್ಯ ದಂಪತಿಯ ಪುತ್ರಿಯಾಗಿದ್ದಾರೆ. ಇವರು ಪ್ರಸ್ತುತ ಕಾರ್ಕಳ ಭುವನೇಂದ್ರ ಕಾಲೇಜಿನ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯಾಗಿದ್ದಾರೆ.

‘ದೆಹಲಿಯಲ್ಲಿ ನಡೆದ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ 300 ಮಂದಿ ಪಾಲ್ಗೊಂಡಿದ್ದರು. ಅದರಲ್ಲಿ 30 ಮಂದಿ ಆಯ್ಕೆಯಾಗಿದ್ದರು. ನನ್ನ ‘ಫ್ಲಡ್ ಡಿಟೆಕ್ಟರ್ ಪೋಲ್’ ಅನ್ವೇಷಣೆಗೆ ಕಂಚಿನ ಪದಕ ಸಿಕ್ಕಿತ್ತು. ಪ್ರವಾಹ ಬರುವಾಗ ಎಚ್ಚರಿಕೆ ನೀಡುವ ಮೂಲಕ ಜನ, ಜಾನುವಾರುಗಳ ಪ್ರಾಣ ಉಳಿಸುವ ನಿಟ್ಟಿನಲ್ಲಿ ‘ಫ್ಲಡ್ ಡಿಟೆಕ್ಟರ್ ಪೋಲ್’ ಅನ್ವೇಷಣೆ ಮಾಡಲಾಗಿದೆ. ಮುಂದೆ ಐಪಿಎಸ್ ಅಧಿಕಾರಿಯಾಗುವಾಸೆ ಇದೆ’ ಎಂದು ಅಮೂಲ್ಯ ತಿಳಿಸಿದರು.

‘ರೋಪೊ ಮೀಟರ್ ಎಲೆಕ್ಟ್ರಿಕಲ್ ಅಂಗಡಿಗಳಲ್ಲಿ ವಯರ್ ಅಳತೆ ಮಾಡಲು ಸಹಕಾರಿಯಾಗಿದೆ. ಇದು ವಯರ್ ಅನ್ನು ಕರಾರುವಾಕ್ಕಾಗಿ ಅಳತೆ ಮಾಡುತ್ತದೆ. ಈ ಅನ್ವೇಷಣೆಯು ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಗಮನ ಸೆಳೆದಿತ್ತು. ಮುಂದೆ ವೈದ್ಯೆಯಾಗುವಾಸೆ ಇದೆ’ ಎಂದು ನಿಕಿತಾ ಮೂಲ್ಯ ಹೇಳಿದ್ದಾರೆ.

ಮರು ಮದುವೆಗೆ ಅಸಮ್ಮತಿ: ಗುಂಡು ಹಾರಿಸಿ ಸೊಸೆಯನ್ನು ಕೊಲೆ ಮಾಡಿದ ಮಾವ

ಮೊರೆನಾ/ಮಧ್ಯಪ್ರದೇಶ (ಪಿಟಿಐ): ಮರು ಮದುವೆಗೆ ನಿರಾಕರಿಸಿದ ವಿಧವೆ ಸೊಸೆಯನ್ನು ಮಾವ, ಮಾಜಿ ಸೈನಿಕ ಜ್ಞಾನ್‌ಸಿಂಗ್ ಗುರ್ಜರ್ (65) ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಸೊಸೆ ಪ್ರಿಯಾಂಕಾ (38) ಕೊಲೆಯಾದವರು. ಇಲ್ಲಿಗೆ ಸಮೀಪದ ಸಿವಿಲ್ ಲೈನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಪ್ರಿಯಾಂಕಾ ಪತಿ ಅಜಯ್ ಗುರ್ಜರ್ ಒಂದು ವರ್ಷದ ಹಿಂದೆ ಮೃತ ಪಟ್ಟಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಪತಿಯ ನಿಧನದ ಬಳಿಕ ತವರು ಮನೆಗೆ ಹೋಗಿದ್ದ ಪ್ರಿಯಾಂಕಾ, ನಾಲ್ಕು ದಿನಗಳ ಹಿಂದಷ್ಟೇ ಪತಿಯ ಮನೆಗೆ ಮರಳಿದ್ದರು. ‘ತಮ್ಮ ಹಿರಿಯ ಸಹೋದರನ ಪುತ್ರನನ್ನು ಮದುವೆಯಾಗುವಂತೆ ಜ್ಞಾನ್‌ಸಿಂಗ್ ಸೊಸೆಯ ಮೇಲೆ ಒತ್ತಡ ಹೇರಿದ್ದರು. ಆದರೆ, ಕುಟುಂಬದಲ್ಲೇ ಮರು ಮದುವೆಯಾಗಲು ಅವರು ನಿರಾಕರಿಸಿದ್ದರು. ಇದರಿಂದ ಕೋಪಗೊಂಡ ಜ್ಞಾನ್ ಸಿಂಗ್ ಸೊಸೆಯ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದ್ದಾರೆ’ ಎಂದು ಪ್ರಿಯಾಂಕಾ ಸಹೋದರ ಮುಕೇಶ್ ಠಾಣೆಗೆ ದೂರು ನೀಡಿದ್ದಾರೆ.

‘ಗುಂಡು ತಗುಲಿ ಪ್ರಿಯಾಂಕಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜ್ಞಾನ್ ಸಿಂಗ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಠಾಣಾಧಿಕಾರಿ ದರ್ಶನ್ ಲಾಲ್ ಶುಕ್ಲಾ ತಿಳಿಸಿದರು.

‘ಒಂದೂವರೆ ವರ್ಷದ ಅವಧಿಯಲ್ಲಿ ಜ್ಞಾನ್‌ಸಿಂಗ್ ತಮ್ಮ ಇಬ್ಬರು ಪುತ್ರರನ್ನು ಕಳೆದುಕೊಂಡಿದ್ದಾರೆ. ಪ್ರಿಯಾಂಕಾಗೆ 7 ವರ್ಷದ ಪುತ್ರಿ, 5 ಮತ್ತು ಮೂರು ವರ್ಷದ ಇಬ್ಬರು ಪುತ್ರರು ಇದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತಲ್ಲಿಕಿ ವಂದನಂ’ ಯೋಜನೆಗೆ ₹10,091 ಕೋಟಿ ವೆಚ್ಚ: ನಾಯ್ಡು

ಅಮರಾವತಿ (ಪಿಟಿಐ): ಆಂಧ್ರಪ್ರದೇಶ ಸರ್ಕಾರದ ಆರು ಪ್ರಮುಖ ಕಲ್ಯಾಣ ಕಾರ್ಯಕ್ರಮಗಳಲ್ಲಿ ‘ತಲ್ಲಿಕಿ ವಂದನಂ’ (ತಾಯಿಗೆ ವಂದನೆ) ಅತ್ಯಂತ ಮಹತ್ವದ್ದು, ಶಾಲೆಗೆ ಹೋಗುವ ಪ್ರತಿ ಮನೆಯ ಹೆಣ್ಣು ಮಕ್ಕಳಿಗೆ ಈ ಯೋಜನೆ ವಾರ್ಷಿಕ ₹15,000 ಒದಗಿಸಲಿದೆ ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಗುರುವಾರ ಹೇಳಿದ್ದಾರೆ.

ಉಂಡವಲ್ಲಿಯ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ಚಂದ್ರಬಾಬು ನಾಯ್ಡು ಅವರು, ‘ಟಿಡಿಪಿ ನೇತೃತ್ವದ ಸರ್ಕಾರ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ‘ತಲ್ಲಿಕಿ ವಂದನಂ’ ಯೋಜನೆಯ ಅಡಿ ₹10,091 ಕೋಟಿ ವೆಚ್ಚ ಮಾಡಲಿದೆ’ ಎಂದು ತಿಳಿಸಿದರು.



ಚಂದ್ರಬಾಬು ನಾಯ್ಡು

2024ರ ಚುನಾವಣೆ ವೇಳೆ ನಾಯ್ಡು ಅವರು ‘ಸೂಪರ್ ಸಿಕ್ಸ್’ ಶೀರ್ಷಿಕೆ ಅಡಿ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಿದ್ದರು. 19–59 ವರ್ಷದ ಮಹಿಳೆಯರಿಗೆ ಮಾಸಿಕ ₹1,500, ಯುವಕರಿಗೆ 20 ಲಕ್ಷ ಉದ್ಯೋಗ ಅಥವಾ ಮಾಸಿಕ ₹3,000 ನಿರುದ್ಯೋಗ ಭತ್ಯೆ ಮತ್ತು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಗಳನ್ನು ಪ್ರಕಟಿಸಿದ್ದರು.

‘ಒಂದು ಮನೆಯಲ್ಲಿ ಎರಡು ಅಥವಾ ಅದಕ್ಕೂ ಹೆಚ್ಚು ಮಕ್ಕಳಿದ್ದರೆ ಒಂದೇ ಮಗುವಿಗೆ ಸೌಲಭ್ಯ ನೀಡುವುದು ಸರಿಯಲ್ಲ. ಹೀಗಾಗಿ ಕುಟುಂಬದ ಎಲ್ಲ ಮಕ್ಕಳಿಗೂ ಯೋಜನೆಯ ಸೌಲಭ್ಯ ಸಿಗಲಿದ್ದು, 67 ಲಕ್ಷಕ್ಕೂ ಹೆಚ್ಚು ಜನರು ಇದರ ಲಾಭ ಪಡೆಯಲಿದ್ದಾರೆ. ₹1,346 ಕೋಟಿ ವೆಚ್ಚದಲ್ಲಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ ಮಾಡಲಾಗುವುದು’ ಎಂದು ಹೇಳಿದರು.

ಶಬೀರ್ ಅಹಮ್ಮದ್ ಶಾಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಭಯೋತ್ಪಾದಕರಿಗೆ ಆರ್ಥಿಕ ನೆರವು ನೀಡಿದ ಆರೋಪದಡಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಶಬೀರ್ ಅಹಮ್ಮದ್ ಶಾ ಅವರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಗುರುವಾರ ವಜಾ ಮಾಡಿದೆ.

ನ್ಯಾಯಮೂರ್ತಿಗಳಾದ ನವೀನ್ ಚಾವ್ಲಾ ಮತ್ತು ಶಲಿಂದರ್ ಕೌರ್ ಅವರಿದ್ದ ಪೀಠ ಆದೇಶ ನೀಡಿತು. ಶಾ ಅವರಿಗೆ ಜಾಮೀನು ನೀಡುವುದನ್ನು ನಿರಾಕರಿಸಿ 2023ರಲ್ಲಿಯೇ ವಿಚಾರಣಾ ನ್ಯಾಯಾಲಯವೊಂದು ಆದೇಶ ನೀಡಿತ್ತು. ಈ ಆದೇಶ ಪ್ರಶ್ನಿಸಿ ಶಾ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

‘ನಾಲ್ಕು ವರ್ಷಗಳಿಂದ ಜೈಲಿನಲ್ಲಿದ್ದೇನೆ. ಪ್ರಕರಣದ ವಿಚಾರಣೆ ಮುಗಿಯುವುದಕ್ಕೆ ಹಲವು ವರ್ಷಗಳು ಬೇಕಾಗಬಹುದು. ಈ ಪ್ರಕರಣವೇನು ಅತ್ಯಂತ ಮಹತ್ವದ್ದಲ್ಲ. ಆದ್ದರಿಂದ ಜಾಮೀನು ನೀಡಿ’ ಎಂದು ಶಾ ಅವರು 2023ರಲ್ಲಿ ಕೋರಿದ್ದರು.

ಸಂಕ್ಷಿಪ್ತ ಸುದ್ದಿ

‘ಮಹಿಳಾ ಮೀಸಲಾತಿ ಕಲ್ಪಿಸಲು ಬದ್ಧ’

ನಾಗ್ಪುರ (ಪಿಟಿಐ): ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ಕಲ್ಪಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬದ್ಧವಾಗಿದ್ದು, ಅದನ್ನು ಕಾರ್ಯರೂಪಕ್ಕೆ ತರುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಗುರುವಾರ ತಿಳಿಸಿದರು.

ನಿತಿನ್ ಗಡ್ಕರಿ

ದೇಶದ ಚರಿತ್ರೆಯಲ್ಲಿ ಮೋದಿ ಅಧಿಕಾರಾವಧಿಯ 11 ವರ್ಷಗಳಿಗೆ ಮಹತ್ವದ ಸ್ಥಾನವಿದೆ. ಎಲ್ಲ ವಲಯಗಳಲ್ಲೂ 60 ವರ್ಷಗಳಲ್ಲಿ ಸಾಧ್ಯವಾಗದಿದ್ದ ಪ್ರಗತಿಯನ್ನು ಈ ಅವಧಿಯಲ್ಲಿ ಸಾಧಿಸಲಾಗಿದೆ ಎಂದು ಅವರು ಹೇಳಿದರು.

ನಾಗ್ಪುರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಸಕ್ತ ವರ್ಷದ ಅಂತ್ಯದೊಳಗೆ ದೇಶದಲ್ಲಿ ಸರಕು ಸಾಗಣೆ ವೆಚ್ಚವು ಶೇ 9ರಷ್ಟಕ್ಕೆ ತಗ್ಗಲಿದೆ. ಇದು ರಫ್ತು ವಹಿವಾಟಿಗೆ ಉತ್ತೇಜನ ನೀಡಲಿದ್ದು, ವ್ಯಾಪಾರ ಹಾಗೂ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯಕವಾಗಲಿದೆ’ ಎಂದರು.

‘ಇನ್‌ಫ್ಲುಯೆನ್ಸರ್’ ಮೃತದೇಹ ಕಾರಿನಲ್ಲಿ ಪತ್ತೆ

ಚಂಡೀಗಢ (ಪಿಟಿಐ): ಕಾಣೆಯಾಗಿದ್ದ ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್ ಕಾಂಚನ ಕುಮಾರಿ (30) ಮೃತದೇಹವು ಪಂಜಾಬ್‌ನ ಭಟಿಂಡಾ ಜಿಲ್ಲೆಯ ಪಾರ್ಕಿಂಗ್ ಸ್ಥಳದಲ್ಲಿ ನಿಂತಿದ್ದ ಕೆಟ್ಟು ಹೋದ ಕಾರೊಂದರಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದರು.

ಕಮಲ್ ಕೌರ್ ಭಾಭಿ ಎಂದೇ ಜನಪ್ರಿಯತೆ ಹೊಂದಿದ್ದ ಅವರು, ಇನ್‌ಸ್ಟಾಗ್ರಾಮ್‌ನಲ್ಲಿ 3.84 ಲಕ್ಷ ಹಿಂಬಾಲಕರನ್ನು ಹೊಂದಿದ್ದರು. 2.36 ಲಕ್ಷ ಚಂದಾದಾರಿಕೆ ಹೊಂದಿದ್ದ ‘ಫನ್ನಿ ಭಾಭಿ’ ಎಂಬ ಯೂಟ್ಯೂಬ್ ಚಾನೆಲ್ ಅನ್ನು ಅವರು ನಡೆಸುತ್ತಿದ್ದರು.

ಅವರು ಲೂಧಿಯಾನದವರು. ಜೂನ್ 9ರಂದು ಪ್ರಚಾರ ಕಾರ್ಯಕ್ರಮಕ್ಕೆ ಹೋಗುವುದಾಗಿ ತಾಯಿ ಹೇಳಿ ಮನೆಯಿಂದ ತೆರಳಿದ್ದ ಅವರನ್ನು ಬಳಿಕ ಕುಟುಂಬಸ್ಥರ ಸಂಪರ್ಕಿಸಲು ಸಾಧ್ಯವಾಗಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರಿನಿಂದ ದುರ್ವಾಸನೆ ಬರುತ್ತಿರುವುದಾಗಿ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಪರಿಶೀಲಿಸಿದಾಗ ಕಾರಿನ ಹಿಂಬದಿಯ ಸೀಟಿನಲ್ಲಿ ಶವ ಪತ್ತೆಯಾಗಿದೆ. ಅಪರಿಚಿತ ವ್ಯಕ್ತಿಗಳು ಆಕೆಯನ್ನು ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಪ್ರಕರಣವನ್ನು ಎಲ್ಲ ಆಯಾಮಗಳಲ್ಲಿ ತನಿಖೆ ಮಾಡಲಾಗುತ್ತಿದೆ ಎಂದು ಭಟಿಂಡಾ ಪೊಲೀಸ್ ವರಿಷ್ಠಾಧಿಕಾರಿ ನರಿಂದರ್ ಸಿಂಗ್ ತಿಳಿಸಿದ್ದಾರೆ.

ಡಾ. ಸಿ.ಆರ್. ಚಂದ್ರಶೇಖರ್‌ಗೆ ಪ್ರಶಸ್ತಿ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘದಿಂದ ಜೀವಮಾನ ಸಾಧನೆಗಾಗಿ ನೀಡುವ ಡಾ.ಕೆ.ಶಿವರಾಮ ಕಾರಂತ ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ ಮಾನಸಿಕ ಆರೋಗ್ಯ ತಜ್ಞ ಡಾ.ಸಿ.ಆರ್. ಚಂದ್ರಶೇಖರ್ ಹಾಗೂ ಡಾ.ಶಂಬಾ ಜೋಶಿ ಸಂಶೋಧನಾ ಪ್ರಶಸ್ತಿಗೆ ಸಾಹಿತಿ, ಸಂಶೋಧಕಿ ಮೈಸೂರಿನ ಡಾ.ಟಿ.ಎನ್. ನಾಗರತ್ನಾ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯ ಮೊತ್ತ ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಜೂನ್ 15ರಂದು ಸಂಜೆ 5.30ಕ್ಕೆ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಕಾರ್ಯದರ್ಶಿ ವಿನಯ್ ಶಿವಮೊಗ್ಗ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಜೆಪಿ ಶಾಸಕರಿಂದ ಸಭಾತ್ಯಾಗ

ಕೋಲ್ಕತ್ತ (ಪಿಟಿಐ): ರಾಜ್ಯದ ಮುರ್ಶಿದಾಬಾದ್ ಮತ್ತು ಮಹೇಶ್ತಲಾದಲ್ಲಿನ ಹಿಂಸಾಚಾರ ವಿಚಾರವು ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಗುರುವಾರ ಪ್ರತಿಧ್ವನಿಸಿತಲ್ಲದೇ, ಈ ಬಗ್ಗೆ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡದ ಸ್ಪೀಕರ್ ಧೋರಣೆ ಖಂಡಿಸಿ ವಿರೋಧ ಪಕ್ಷವಾದ ಬಿಜೆಪಿಯ ಶಾಸಕರು ಸಭಾತ್ಯಾಗ ಮಾಡಿದರು.

ಒಂದು ಹಂತದಲ್ಲಿ, ‘ಸ್ಪೀಕರ್ ಬಿಮನ್ ಬ್ಯಾನರ್ಜಿ ಟಿಎಂಸಿ ಕಾರ್ಯಕರ್ತರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ’ ಎಂದು ಬಿಜೆಪಿ ಶಾಸಕರು ಟೀಕಿಸಿದರು. ‘ಬಿಜೆಪಿ ಶಾಸಕರು ಸದನದ ಶಿಷ್ಟಾಚಾರ ಪಾಲನೆ ಮಾಡುತ್ತಿಲ್ಲ’ ಎಂದು ಸ್ಪೀಕರ್ ಬ್ಯಾನರ್ಜಿ ವಾಗ್ದಾಳಿ ನಡೆಸಿದ್ದಕ್ಕೂ ಸದನ ಸಾಕ್ಷಿಯಾಯಿತು.



ಸುವೇಂದು

ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ, ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹಾಗೂ ಇತರ ಮೂವರು ಶಾಸಕರು ಮುರ್ಶಿದಾಬಾದ್‌ನಲ್ಲಿ ನಡೆದ ಹಿಂಸಾಚಾರ ಕುರಿತು ನಿಲುವಳಿ ಸೂಚನೆ ಮಂಡಿಸಿದರು. ಬಿಜೆಪಿಯ ಮತ್ತೊಬ್ಬ ಶಾಸಕ ಪುನಾ ಭೆಂಗ್ರಾ ಅವರು ಮಹೇಶ್ತಲಾದಲ್ಲಿ ಬುಧವಾರ ನಡೆದ ಹಿಂಸಾಚಾರ ಕುರಿತು ನಿಲುವಳಿ ಸೂಚನೆ ಮಂಡಿಸಲು ಮುಂದಾದರು.

ಸ್ಪೀಕರ್ ಬ್ಯಾನರ್ಜಿ ಅವರು ಈ ಎರಡೂ ಸೂಚನೆಗಳನ್ನು ತಿರಸ್ಕರಿಸಿದಾಗ, ಬಿಜೆಪಿ ಶಾಸಕರು ಪ್ರತಿಭಟನೆ ಆರಂಭಿಸಿದರು. ಟಿಎಂಸಿ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಸ್ಪೀಕರ್ ಪೀಠದ ಮುಂದೆ ಜಮಾಯಿಸಿದರು. ನಂತರ ಸುವೇಂದು ಅಧಿಕಾರಿ ನೇತೃತ್ವದಲ್ಲಿ ಬಿಜೆಪಿಯ ಎಲ್ಲ ಶಾಸಕರು ಸದನದಿಂದ ಹೊರನಡೆದರು. ಬಳಿಕ, ಸ್ಪೀಕರ್ ಕಲಾಪ ಮುಂದುವರಿಸಿದರು.

ಪ್ರಜಾವಾಣಿ
ಡಿಜಿಟಲ್ ಕಂಟೆಂಟ್ ಕ್ರಿಯೇಟರ್ಸ್ ಬೇಕಾಗಿದ್ದಾರೆ
1. ಸಿನಿಮಾ, ಮನರಂಜನಾ ವಿಭಾಗದ ಆಸಕ್ತರು
2. ಲೈಫ್‌ಸ್ಟೈಲ್ ವಿಷಯಗಳ ಬರವಣಿಗೆಯಲ್ಲಿ ಆಸಕ್ತಿ ಇರುವವರು
ಅರ್ಹತೆಗಳು:
- ಕನಿಷ್ಠ 2ರಿಂದ 3 ವರ್ಷ ವೆಬ್ ವಿಭಾಗದಲ್ಲಿ ಕೆಲಸ ಮಾಡಿದ ಅನುಭವ
- SEO, ಸಾಮಾಜಿಕ ಮಾಧ್ಯಮಗಳ ಆಳ–ಅಗಲದ ಅರಿವು
- ಇಂಗ್ಲಿಷ್ ಮೇಲೆ ಹಿಡಿತ, ಕನ್ನಡದಲ್ಲಿ ಪ್ರಾವೀಣ್ಯ
- ವಿದ್ಯಾರ್ಹತೆ: ಸ್ನಾತಕೋತ್ತರ ಪದವಿ
- ವಯೋಮಿತಿ: 30 ವರ್ಷ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14 ಜೂನ್ 2025
ನಿಮ್ಮ ಇತ್ತೀಚೆಗಿನ ರೆಸ್ಯೂಮ್/ಸಿವಿ ಪ್ರತಿಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ರವಾನಿಸುವುದು.
ವ್ಯವಸ್ಥಾಪಕರು – ನೇಮಕಾತಿ
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001
ಇ–ಮೇಲ್: careers@prajavani.co.in

ಲಾರ್ಡ್ಸ್‌ನಲ್ಲಿ ವೇಗಿಗಳದ್ದೇ ದರಬಾರು • ದಕ್ಷಿಣ ಆಫ್ರಿಕಾ ದಾಳಿ ಮೆಟ್ಟಿನಿಂತ ಅಲೆಕ್ಸ್, ಸ್ಟಾರ್ಕ್

ಕಮಿನ್ಸ್ ಪಡೆಗೆ ಗೆಲುವಿನ ಕನವರಿಕೆ

ಲಂಡನ್ (ಎಎಫ್‌ಪಿ): ನಾಯಕ ಪ್ಯಾಟ್ ಕಮಿನ್ಸ್ ಅವರ ಪರಿಣಾಮಕಾರಿ ದಾಳಿ ಮತ್ತು ಅಲೆಕ್ಸ್ ಕ್ಯಾರಿಯ ಜವಾಬ್ದಾರಿಯುತ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಉತ್ತಮ ಮುನ್ನಡೆ ಸಾಧಿಸಿತು.

ಪ್ಯಾಟ್ ಕಮಿನ್ಸ್ ಅವರನ್ನು ಅಭಿನಂದಿಸಿದ ಸಹ ಆಟಗಾರರು ಎಪಿ/ಪಿಟಿಐ ಚಿತ್ರ

ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯದ ಎರಡನೇ ದಿನವಾದ ಗುರುವಾರ ಆಸ್ಟ್ರೇಲಿಯಾ ತಂಡವು 218 ರನ್‌ಗಳ ಮುನ್ನಡೆ ಸಾಧಿಸಿತು. ಕಮಿನ್ಸ್ (28ಕ್ಕೆ6) ತಮ್ಮ ಅಮೋಘ ಬೌಲಿಂಗ್ ಮೂಲಕ ಆಸ್ಟ್ರೇಲಿಯಾ ತಂಡದ ಮೇಲುಗೈಗೆ ಕಾರಣರಾದರು. ಅಲ್ಲದೇ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 300 ವಿಕೆಟ್ ಗಳಿಸಿದ ಸಾಧನೆಯನ್ನೂ ದಾಖಲಿಸಿದರು.

ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 212 ರನ್‌ಗಳ ಮೊತ್ತಕ್ಕೆ ಉತ್ತರವಾಗಿ ದಕ್ಷಿಣ ಆಫ್ರಿಕಾ 138 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಕಮಿನ್ಸ್ ಬಳಗವು 74 ರನ್‌ಗಳ ಮುನ್ನಡೆ ಪಡೆಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾಕ್ಕೆ ಕಗಿಸೊ ರಬಾಡ (44ಕ್ಕೆ3) ಮತ್ತು ಲುಂಗಿ ಎನ್‌ಗಿಡಿ (33ಕ್ಕೆ3) ಪೆಟ್ಟುಕೊಟ್ಟರು. ರಬಾಡ ಅವರು ಮೊದಲ ಇನಿಂಗ್ಸ್‌ನಲ್ಲಿ (51ಕ್ಕೆ5) ಐದು ವಿಕೆಟ್ ಗೊಂಚಲು ಗಳಿಸಿದ್ದರು. ಇವರಿಬ್ಬರ ದಾಳಿಯ ನಡುವೆಯೂ ಗಟ್ಟಿಯಾಗಿ ನಿಂತ ಅಲೆಕ್ಸ್ ಕ್ಯಾರಿ (43; 50ಎ) ಮತ್ತು ಅವರಿಗೆ ಉತ್ತಮ ಜೊತೆ ನೀಡಿದ ಮಿಚೆಲ್ ಸ್ಟಾರ್ಕ್ (ಬ್ಯಾಟಿಂಗ್ 16) ಎಂಟನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು. ಇದರಿಂದಾಗಿ


ಅಲೆಕ್ಸ್ ಕ್ಯಾರಿ

ಮುನ್ನಡೆಯೂ ಹೆಚ್ಚಿತು.

ಕಮಿನ್ಸ್ ಮಿಂಚು: ದಕ್ಷಿಣ ಆಫ್ರಿಕಾ ತಂಡದ ಬ್ಯಾಟಿಂಗ್ ಕಳಪೆಯಾಗಿತ್ತು. ಒಂದು ಹಂತದಲ್ಲಿ ಕೇವಲ 12 ರನ್‌ಗಳ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡಿತು. ಕಮಿನ್ಸ್ ಅವರು ಕೆಳಕ್ರಮಾಂಕದ ವಿಕೆಟ್‌ಗಳನ್ನು ಗಳಿಸಿದರು. ಅದರೊಂದಿಗೆ ಲಾರ್ಡ್ಸ್‌ನಲ್ಲಿ ಪ್ರಥಮ ಸಲ ಮತ್ತು ತಮ್ಮ ಟೆಸ್ಟ್ ಕ್ರಿಕೆಟ್ ವೃತ್ತಿಜೀವನದಲ್ಲಿ 14ನೇ ಬಾರಿ ಐದು ವಿಕೆಟ್ ಗೊಂಚಲು ಗಳಿಸಿದರು. ಊಟದ ವಿರಾಮದ ನಂತರದ ಅವಧಿಯಲ್ಲಿ ಕಮಿನ್ಸ್ ಅಮೋಘ ಬೌಲಿಂಗ್ ಮಾಡಿದರು. ಅವರು ಹಾಕಿದ 17 ಎಸೆತಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಪತನವಾದವು.

ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ (36 ರನ್) ಮತ್ತು ಡೇವಿಡ್ ಬೆಡಿಂಗಮ್ (45 ರನ್) ಐದನೇ ವಿಕೆಟ್ ಜೊತೆಯಾಟದಲ್ಲಿ ತುಸು ಜಿಗುಟುತನ ತೋರಿಸಿದರು. ಈ ಇನಿಂಗ್ಸ್‌ನಲ್ಲಿ ಏಕೈಕ ಸಿಕ್ಸರ್ ಬಾರಿಸಿದ ತೆಂಬಾ ಬವುಮಾ ಅವರೂ ಕಮಿನ್ಸ್ ಬೌಲಿಂಗ್‌ನಲ್ಲಿ ಔಟಾದರು.

14 ವಿಕೆಟ್ ಪತನ: ಸತತ ಎರಡನೇ ದಿನದಾಟದಲ್ಲಿಯೂ ಒಟ್ಟು 14 ವಿಕೆಟ್‌ಗಳು ಪತನವಾದವು. ಪಂದ್ಯದ ಮೊದಲ ದಿನದಾಟದಲ್ಲಿಯೂ ಇಷ್ಟೇ ವಿಕೆಟ್‌ಗಳು ಉರುಳಿದ್ದವು. ಎರಡನೇ ದಿನವೂ ವೇಗದ ಬೌಲರ್‌ಗಳ ಮೆರೆದಾಟ ನಡೆಯಿತು. ಎರಡು ದಿನಗಳಲ್ಲಿ ಒಟ್ಟು 28 ವಿಕೆಟ್‌ಗಳು ಪತನವಾಗಿದ್ದು, ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಮುನ್ನಡೆಯಲ್ಲಿದೆ.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 1ನೇ ಇನಿಂಗ್ಸ್: 212 (56.4 ಓವರುಗಳಲ್ಲಿ)

ದಕ್ಷಿಣ ಆಫ್ರಿಕಾ 1ನೇ ಇನಿಂಗ್ಸ್: 138 (57.1 ಓವರುಗಳಲ್ಲಿ)

(ಬುಧವಾರ: 4 ವಿಕೆಟ್‌ಗೆ 43)

ಬವುಮಾ ಸಿ ಲಾಬುಷೇನ್ ಬಿ ಕಮಿನ್ಸ್ 36 (84ಎ, 4x4, 6x1)

ಬೆಡಿಂಗಮ್ ಸಿ ಕ್ಯಾರಿ ಬಿ ಕಮಿನ್ಸ್ 45 (111ಎ, 4x6)

ವೇರಿಯನ್ ಎಲ್‌ಬಿಡಬ್ಲ್ಯು ಬಿ ಕಮಿನ್ಸ್ 13 (39ಎ)

ಯಾನ್ಸೆನ್ ಸಿ ಮತ್ತು ಬಿ ಕಮಿನ್ಸ್ 0 (3ಎ)

ಮಹಾರಾಜ್ ರನೌಟ್ (ಹೆಡ್/ಕ್ಯಾರಿ) 7 (15ಎ, 4x1)

ರಬಾಡ ಸಿ ವೆಬ್‌ಸ್ಟರ್ ಬಿ ಕಮಿನ್ಸ್ 1 (6ಎ)

ಗಿಡಿ ಔಟಾಗದೇ 0 (1ಎ)

ಇತರೆ 12 (ಲೆಗ್‌ಬೈ 10, ನೋಬಾಲ್ 12)

ವಿಕೆಟ್ ಪತನ: 5–94 (ತೆಂಬಾ ಬವುಮಾ, 39.2), 6–126 (ಕೈಲ್ ವೇರಿಯನ್ 51.3), 7–126 (ಮಾರ್ಕೊ ಯಾನ್ಸೆನ್, 51.6), 8–135 (ಡೇವಿಡ್ ಬೆಡಿಂಗಮ್, 55.2), 9–138 (ಕೇಶವ ಮಹಾರಾಜ್, 56.5) 10–138 (ಕಗಿಸೊ ರಬಾಡ, 57.1).

ಬೌಲಿಂಗ್: ಮಿಚೆಲ್ ಸ್ಟಾರ್ಕ್ 13–3–41–2; ಹ್ಯಾಜಲ್‌ವುಡ್ 15–5–27–1; ಪ್ಯಾಟ್ ಕಮಿನ್ಸ್ 18.1–6–28–6; ನೇಥನ್ ಲಯನ್ 8–3–12–0; ಬ್ಯೂ ವೆಬ್‌ಸ್ಟರ್ 3–0–20–0

ಆಸ್ಟ್ರೇಲಿಯಾ: 2ನೇ ಇನಿಂಗ್ಸ್: 8 ವಿಕೆಟ್‌ಗೆ 144 (40 ಓವರುಗಳಲ್ಲಿ)

ಲಾಬುಶೇನ್ ಸಿ ವೇರಿಯನ್ ಬಿ ಯಾನ್ಸೆನ್ 22 (64ಎ, 4x2)

ಖ್ವಾಜಾ ಸಿ ವೇರಿಯನ್ ಬಿ ರಬಾಡ 6 (23ಎ)

ಗ್ರೀನ್ ಸಿ ಮುಲ್ಡರ್ ಬಿ ರಬಾಡ 0 (2ಎ)

ಸ್ಮಿತ್ ಎಲ್‌ಬಿಡಬ್ಲ್ಯು ಬಿ ಗಿಡಿ 13 (25ಎ, 4x1)

ಹೆಡ್ ಬಿ ಮುಲ್ಡರ್ 9 (18ಎ, 4x1)

ವೆಬ್‌ಸ್ಟರ್ ಎಲ್‌ಬಿಡಬ್ಲ್ಯು ಬಿ ಗಿಡಿ 9 (11ಎ, 4x1)

ಕ್ಯಾರಿ ಎಲ್‌ಬಿಡಬ್ಲ್ಯು ಬಿ ರಬಾಡ 43 (50ಎ, 4x5)

ಕಮಿನ್ಸ್ ಬಿ ಗಿಡಿ 6 (5ಎ, 4x1)

ಸ್ಟಾರ್ಕ್ ಬ್ಯಾಟಿಂಗ್ 16 (47ಎ)

ಲಯನ್ ಬ್ಯಾಟಿಂಗ್ 1 (4ಎ)

ಇತರೆ 19 (ಬೈ 4, ಲೆಗ್‌ಬೈ 6, ನೋಬಾಲ್ 9)

ವಿಕೆಟ್ ಪತನ: 1–28 (ಉಸ್ಮಾನ್ ಖ್ವಾಜಾ, 10.2), 2–28 (ಕ್ಯಾಮರೂನ್ ಗ್ರೀನ್, 10.4), 3–44 (ಲಾಬುಶೇನ್, 17.5), 4–48 (ಸ್ಟೀವನ್ ಸ್ಮಿತ್, 18.5), 5–64 (ವೆಬ್‌ಸ್ಟರ್, 22.6), 6–66 (ಟ್ರಾವಿಸ್ ಹೆಡ್, 23.4), 7–73 (ಕಮಿನ್ಸ್, 24.5), 8–134 (ಅಲೆಕ್ಸ್ ಕ್ಯಾರಿ, 38.2)

ಬೌಲಿಂಗ್: ಕಗಿಸೊ ರಬಾಡ 11–0–44–3; ಮಾರ್ಕೊ ಯಾನ್ಸೆನ್ 12–3–31–1; ವಿಯಾನ್ ಮುಲ್ಡರ್ 6–0–14–1; ಲುಂಗಿ ಗಿಡಿ 9–0–35–3; ಕೇಶವ ಮಹಾರಾಜ್ 2–0–10–0

ಭಾರತ ತಂಡದ ಎಡಗೈ ಸ್ಪಿನ್ ಜೋಡಿ ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಅಭ್ಯಾಸ ನಡೆಸಿದರು ಪಿಟಿಐ ಚಿತ್ರಗಳು

ಭಾರತ ಇಂಟ್ರಾಸ್ಕ್ವಾಡ್ ಅಭ್ಯಾಸ ಪಂದ್ಯ ಇಂದಿನಿಂದ

ಬೌಲಿಂಗ್ ಪಡೆಗೆ 'ಟೆಸ್ಟ್'

ಬೆಕ್‌ಹ್ಯಾಮ್ (ಕೆಂಟ್) (ಪಿಟಿಐ): ಎಡಗೈ ಸ್ಪಿನ್ ಜೋಡಿ ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಅವರು ಶುಕ್ರವಾರ ಇಲ್ಲಿ ನಡೆಯಲಿರುವ ಇಂಟ್ರಾಸ್ಕ್ವಾಡ್ ಅಭ್ಯಾಸ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ. ಭಾರತ ಸೀನಿಯರ್ ತಂಡ ಹಾಗೂ ಭಾರತ ಎ ತಂಡದ ನಡುವೆ ನಡೆಯಲಿರುವ ಈ ಹಣಾಹಣಿಯಲ್ಲಿ ಇವರಿಬ್ಬರು ಸ್ಪಿನ್ನರ್‌ಗಳಲ್ಲಿ ಯಾರು ಹೆಚ್ಚು ಪರಿಣಾಮಕಾರಿಯಾಗಲಿದ್ದಾರೆ ಮತ್ತು ಸರಣಿಯಲ್ಲಿ ಆಡಲಿದ್ದಾರೆ ಎಂಬ ಕುತೂಹಲ ಗರಿಗೆದರಿದೆ.

ಜೂನ್ 20ರಂದು ಇಂಗ್ಲೆಂಡ್ ಎದುರಿನ ಸರಣಿಯ ಮೊದಲ ಪಂದ್ಯವು ಹೆಡಿಂಗ್ಲೆಯಲ್ಲಿ ಆರಂಭವಾಗಲಿದೆ. ಅದಕ್ಕೂ ಮುನ್ನ ಭಾರತ ತಂಡಕ್ಕೆ ಲಭಿಸಲಿರುವ ಏಕೈಕ ಅಭ್ಯಾಸ ಪಂದ್ಯ ಇದಾಗಿದೆ. ಮುಖ್ಯ ಕೋಚ್ ಗೌತಮ್ ಗಂಭೀರ್ ಮಾರ್ಗದರ್ಶನದ ಈ ಪಂದ್ಯಕ್ಕೆ ಮಾಧ್ಯಮ ಅಥವಾ ಜನರಿಗೆ ಪ್ರವೇಶವಿಲ್ಲ. 'ಕ್ಲೋಸ್ಡ್ ಡೋರ್' ಪಂದ್ಯ ಇದಾಗಿದೆ. ಈಚೆಗೆ ಆಸ್ಟ್ರೇಲಿಯಾ ಪ್ರವಾಸ ಮಾಡಿದ್ದಾಗಲೂ ಭಾರತ ತಂಡವು ಇದೇ ರೀತಿ ಮಾಡಿತ್ತು.

'ದಿನವೊಂದಕ್ಕೆ 90 ಓವರ್‌ಗಳನ್ನು ಆಡುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಮುಖ್ಯ. ಅದು ಇಂತಹ ಅಭ್ಯಾಸ ಪಂದ್ಯಗಳಿಂದ ರೂಢಿಯಾಗುತ್ತದೆ. ನೆಟ್ ಪ್ರಾಕ್ಟೀಸ್‌ಗಳಲ್ಲಿ ಸಾಧ್ಯವಿಲ್ಲ. ಅಭ್ಯಾಸ ಪಂದ್ಯಗಳಲ್ಲಿ ಆಗುವ ಲೋಪಗಳನ್ನು ತಿದ್ದಿಕೊಳ್ಳುವತ್ತ ಗಮನಹರಿಸಬೇಕು' ಎಂದು ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಹೇಳಿದ್ದಾರೆ.

ಇದು ನಾಲ್ಕು ದಿನಗಳ ಪಂದ್ಯವಾಗಿದೆ. ಒಟ್ಟು 360 ಓವರ್‌ಗಳ ಆಟಕ್ಕೆ ಅವಕಾಶ ಇದೆ. ಅಧಿಕೃತ ಪ್ರಥಮದರ್ಜೆ ಪಂದ್ಯದ ಮಾನ್ಯತೆ ಇಲ್ಲ. ಬೌಲಿಂಗ್ ಸಂಯೋಜನೆಯ ಪ್ರಯೋಗಕ್ಕೂ ಈ ಪಂದ್ಯವು ವೇದಿಕೆಯಾಗಲಿದೆ. ವೇಗಿಗಳು ಅಥವಾ ಸ್ಪಿನ್ನರ್‌ಗಳಲ್ಲಿ ಯಾರು ಪ್ರಭಾವಶಾಲಿಗಳಾಗಲಿದ್ದರೆ ಎಂಬುದನ್ನು ತಂಡದ ಮ್ಯಾನೇಜ್‌ಮೆಂಟ್ ನಿಗಾ ವಹಿಸಲಿದೆ.

ಜಡೇಜ ತಮ್ಮ ಬೌಲಿಂಗ್ ಜೊತೆಗೆ ಬ್ಯಾಟಿಂಗ್‌ನಲ್ಲಿಯೂ ಉತ್ತಮ ಕಾಣಿಕೆ ನೀಡಬಲ್ಲರು. ಅದರಲ್ಲೂ ಎಸ್‌ಎಎನ್‌ಎ (ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ) ರಾಷ್ಟ್ರಗಳಲ್ಲಿ ಅವರು ಪರಿಣಾಮಕಾರಿ ಆಲ್‌ರೌಂಡರ್ ಆಗಿದ್ದಾರೆ.

ಕುಲದೀಪ್ ಅವರ ಬೌಲಿಂಗ್‌ನಲ್ಲಿರುವ ವೈವಿಧ್ಯತೆಯು ಇಂಗ್ಲೆಂಡ್ ತಂಡದ 'ಬಾಝ್‌ಬಾಲ್' ತಂತ್ರಕ್ಕೆ ತಿರುಮಂತ್ರವಾಗಬಹುದು. ವೇಗಿ ಜಸ್‌ಪ್ರೀತ್ ಬೂಮ್ರಾ ಅವರೊಂದಿಗೆ ಬೌಲಿಂಗ್ ಹೊಣೆ ನಿಭಾಯಿಸುವ ಸಾಮರ್ಥ್ಯ ಅವರಿಗೆ ಇದೆ. ಇವರು, ಪಂದ್ಯದಲ್ಲಿ 20 ವಿಕೆಟ್ ಪಡೆಯುವ ತಂಡದ ಆಶಯಕ್ಕೆ ತಕ್ಕಂತೆ ಬೌಲಿಂಗ್ ಮಾಡಬಲ್ಲರು.

ಇದಲ್ಲದೇ ವೇಗದ ವಿಭಾಗದಲ್ಲಿ ಆಕಾಶ್ ದೀಪ್ ಅವರ ಫುಲ್ಲರ್ ಲೆಂಗ್ತ್ ಮತ್ತು ಪ್ರಸಿದ್ಧ ಕೃಷ್ಣ ಅವರ ಬ್ಯಾಕ್ ಆಫ್ ಲೆಂಗ್ತ್ ಎಸೆತಗಳ ನಿಖರತೆಯನ್ನು ಅವಲೋಕಿಸಲು ಕೋಚ್ ಸಿಬ್ಬಂದಿ ಮತ್ತು ನಾಯಕ ಶುಭಮನ್ ಗಿಲ್ ಅವರಿಗೆ ಈ ಪಂದ್ಯದಲ್ಲಿ ಅವಕಾಶ ಸಿಗಲಿದೆ.

ಬೂಮ್ರಾ ಅವರು ಆರು ತಿಂಗಳುಗಳ ನಂತರ ರೆಡ್ ಬಾಲ್ ಕ್ರಿಕೆಟ್ ಆಡಲಿದ್ದಾರೆ. ಅವರಿಗೂ ಈ ಅಭ್ಯಾಸ ಪಂದ್ಯದಲ್ಲಿ ಕೆಲವು ಸ್ಪೆಲ್‌ಗಳ ಬೌಲಿಂಗ್ ಮಾಡುವ ಅವಕಾಶವಾಗಲಿದೆ. ಇದು ಅವರ 'ಫಿಟ್‌ನೆಸ್ ಟೆಸ್ಟ್' ಕೂಡ ಆಗಬಹುದು.

ಅರ್ಜೆಂಟೀನಾಕ್ಕೆ ಮತ್ತೆ ಜಯ

ಕೊನೆಗಳಿಗೆಯ ಪೆನಾಲ್ಟಿ ಅವಕಾಶದಲ್ಲಿ ಎಡವಿದ ಜುಗರಾಜ್

ಆಮ್‌ಸ್ಟಲ್ವೀನ್ (ನೆದರ್ಲೆಂಡ್ಸ್) (ಪಿಟಿಐ): ಮುಕ್ತಾಯದ ಸೀಟಿ ಊದಲು ಎರಡೇ ನಿಮಿಷಗಳ ಮೊದಲು ನಡೆದ ನಾಟಕೀಯ ಬೆಳವಣಿಗೆಯಲ್ಲಿ ಭಾರತ ತಂಡ 'ಪೆನಾಲ್ಟಿ' ಅವಕಾಶ ವ್ಯರ್ಥ ಮಾಡಿಕೊಂಡಿದ್ದು ದುಬಾರಿಯಾಯಿತು. ಗುರುವಾರ ನಡೆದ ಎಫ್‌ಐಎಚ್ ಯುರೋಪಿಯನ್ ಲೆಗ್‌ನ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಅರ್ಜೆಂಟೀನಾ 2–1 ಗೋಲುಗಳಿಂದ ಭಾರತ ತಂಡವನ್ನು ಸೋಲಿಸಿತು.


ಭಾರತ ಹಾಕಿ ತಂಡದ ಆಟಗಾರರು

ಇದು ಈ ಲೆಗ್‌ನಲ್ಲಿ ಭಾರತಕ್ಕೆ ಸತತ ನಾಲ್ಕನೇ ಸೋಲು. ಡ್ರ್ಯಾಗ್ ಫ್ಲಿಕ್ಕರ್ ಜುಗರಾಜ್ ಸಿಂಗ್ ಪಂದ್ಯದ ನಾಲ್ಕನೇ ನಿಮಿಷ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿದ್ದರು. ಆದರೆ ಥಾಮಸ್ ಡೊಮೆನ್ ಅವರು 9ನೇ ಮತ್ತು 49ನೇ ನಿಮಿಷ ಗೋಲುಗಳನ್ನು ಗಳಿಸಿ ಅರ್ಜೆಂಟೀನಾಕ್ಕೆ ಮುನ್ನಡೆ ನೀಡಿದರು.

ಮುಕ್ತಾಯಕ್ಕೆ ಕೆಲವೇ ಕ್ಷಣಗಳಿರುವಾಗ ಭಾರತ ತಂಡಕ್ಕೆ 'ಪೆನಾಲ್ಟಿ' ಅವಕಾಶ ದೊರೆಯಿತು. ಆದರಲ್ಲಿ ಜುಗರಾಜ್ ಸಿಂಗ್ ಚೆಂಡನ್ನು ಗುರಿ ತಲುಪಿಸಿದ್ದರು ಕೂಡ. ಆದರೆ ಸ್ಟ್ರೋಕ್ ತೆಗೆದುಕೊಳ್ಳುವಾಗ ಜುಗರಾಜ್ ಎಡಗಾಲು ಚೆಂಡಿಗಿಂತ ಮುಂದಿತ್ತು ಎಂದು ಅರ್ಜೆಂಟೀನಾ ಆಟಗಾರರು ವಾದಿಸಿ ಮರುಪರಿಶೀಲನೆಗೆ ಕೋರಿದರು. ವಿಡಿಯೊ ಅಂಪೈರ್ ಅರ್ಜೆಂಟೀನಾ ಪರ ತೀರ್ಪು ನೀಡಿದರು.

ಆದರೆ, ಜುಗರಾಜ್ ಸ್ಟ್ರೋಕ್ ತೆಗೆದುಕೊಳ್ಳುವ ಮುನ್ನವೇ ಅರ್ಜೆಂಟೀನಾ ಗೋಲ್‌ಕೀಪರ್ ಥಾಮಸ್ ಸಾಂಟಿಯಾಗೊ ಅವರು ಗೋಲುಗೆರೆಗಿಂತ ಮುಂದೆ ಬಂದಿದ್ದರು ಎಂದು ಭಾರತ ತಂಡದ ನಾಯಕತ್ವ ವಹಿಸಿದ್ದ ಹಾರ್ದಿಕ್ ಸಿಂಗ್ ಮನವಿ ಸಲ್ಲಿಸಿದರು. ಆಗ ಭಾರತದ ಪರ ತೀರ್ಪು ಬಂತು. ಜುಗರಾಜ್‌ಗೆ ಮತ್ತೊಮ್ಮೆ ಪೆನಾಲ್ಟಿ ತೆಗೆದುಕೊಳ್ಳಲು ಅವಕಾಶ ನೀಡಲಾಯಿತು. ಆದರೆ ಈ ಮರುಯತ್ನದಲ್ಲಿ ಸಾಂಟಿಯಾಗೊ ಚೆಂಡನ್ನು ಯಶಸ್ವಿಯಾಗಿ ತಡೆದರು.

ಕಾಯಂ ನಾಯಕ ಹರ್ಮನ್‌ಪ್ರೀತ್ ಸಿಂಗ್ ಬೆರಳಿಗೆ ಗಾಯಗೊಂಡ ಪರಿಣಾಮ ಹಾರ್ದಿಕ್ ನಾಯಕತ್ವ ವಹಿಸಿದ್ದರು.

ಭಾರತ ಈ ಲೆಗ್‌ನಲ್ಲಿ, ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ಎದುರು ಎರಡು ಬಾರಿ ಸೋಲನುಭವಿಸಿತ್ತು. ಈಗ ಅರ್ಜೆಂಟೀನಾದ ಎದುರೂ ಎರಡು ಪಂದ್ಯಗಳಲ್ಲಿ ಸೋತಿದೆ. ಬುಧವಾರ ಅರ್ಜೆಂಟೀನಾ 4–3ರಿಂದ ಜಯಗಳಿಸಿತ್ತು.

ಭಾರತ ತಂಡವು ತನ್ನ ಮುಂದಿನ ಪಂದ್ಯ ಆಡಲು ಬೆಲ್ಜಿಯಂನ ಆ್ಯಂಟ್‌ವರ್ಪ್‌ಗೆ ತೆರಳಲಿದ್ದು, ಅಲ್ಲಿ ಶನಿವಾರ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಸಿಂಗಲ್ಸ್ ವಿಜೇತರಿಗೆ ₹35 ಕೋಟಿ

ಲಂಡನ್ (ಎಪಿ): ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಬಹುಮಾನ ಹಣದ ಮೊತ್ತವನ್ನು ದಾಖಲೆಯ ₹622 ಕೋಟಿಗೆ (53.5 ದಶಲಕ್ಷ ಪೌಂಡ್) ಹೆಚ್ಚಿಸಲಾಗಿದೆ. ಸಿಂಗಲ್ಸ್ ಚಾಂಪಿಯನ್ನರು ಸುಮಾರು ₹35 ಕೋಟಿ ಬಹುಮಾನ ಮೊತ್ತ ಸಂಪಾದಿಸಲಿದ್ದಾರೆ ಎಂದು ಅಲ್ ಇಂಗ್ಲೆಂಡ್ ಕ್ಲಬ್ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಒಟ್ಟು ಬಹುಮಾನ ಮೊತ್ತ ಕಳೆದ ವರ್ಷಕ್ಕಿಂತ ಸುಮಾರು ₹41 ಕೋಟಿಯಷ್ಟು ಹೆಚ್ಚಾಗಿದೆ. ಹುಲ್ಲಿನಂಕಣದ ಈ ಟೂರ್ನಿಯಲ್ಲಿ ಸ್ಪರ್ಧಿಗಳು ಕಳೆದ ಬಾರಿ ಪಡೆದ ಮೊತ್ತಕ್ಕಿಂತ ಹೆಚ್ಚು ಹಣ ಪಡೆಯಲಿದ್ದಾರೆ ಎಂದು ಆಲ್ ಇಂಗ್ಲೆಂಡ್ ಚೇರ್ಮನ್ ಡೆಬೊರಾ ಜೆವನ್ಸ್ ತಿಳಿಸಿದರು.

'ನಾವು ಆಟಗಾರರ ಮಾತು ಆಲಿಸಿದ್ದೇವೆ. ಅವರೊಂದಿಗೆ ಸಮಯ ಕಳೆದಿದ್ದೇವೆ' ಎಂದು ಹೇಳಿದರು.

ಮೊದಲ ಸುತ್ತಿನಲ್ಲಿ ಸೋಲುವ ಆಟಗಾರ ಸುಮಾರು ₹76.80 ಲಕ್ಷ (66,000 ಪೌಂಡ್) ಮೊತ್ತ ಪಡೆಯಲಿದ್ದಾರೆ. ಇದು ಕಳೆದ ಬಾರಿಯ ಮೊತ್ತಕ್ಕಿಂತ ಶೇ 10ರಷ್ಟು ಏರಿಕೆಯಾಗಿದೆ.

ಈ ಬಾರಿಯ ವಿಂಬಲ್ಡನ್ ಚಾಂಪಿಯನ್‌ಷಿಪ್ ಜೂನ್ 30ರಂದು ಆರಂಭವಾಗಲಿದ್ದು ಜುಲೈ 13ರವರೆಗೆ ನಡೆಯಲಿದೆ. ಅತ್ಯಂತ ಹಳೆಯ ಈ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಈ ವರ್ಷ ಮೊದಲ ಬಾರಿಗೆ ಲೈನ್ ಜಜ್‌ಗಳ ಬದಲು ಎಲೆಕ್ಟ್ರಾನಿಕ್ ಲೈನ್ ಕಾಲಿಂಗ್ ವ್ಯವಸ್ಥೆ ಇರಲಿದೆ.

ಹ್ಯಾಂಪ್‌ಶೈರ್ ತಂಡಕ್ಕೆ ತಿಲಕ್ ವರ್ಮಾ

ಹೈದರಾಬಾದ್ (ಪಿಟಿಐ): ಎಡಗೈ ಬ್ಯಾಟರ್ ತಿಲಕ್ ವರ್ಮಾ ಅವರು ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಹ್ಯಾಂಪ್‌ಶೈರ್ ತಂಡದ ಪರ ಆಡಲಿದ್ದಾರೆ ಎಂದು ಹೈದರಾಬಾದ್ ಕ್ರಿಕೆಟ್ ಸಂಸ್ಥೆ (ಎಚ್‌ಸಿಎ) ಬುಧವಾರ ತಿಳಿಸಿದೆ.

22 ವರ್ಷ ವಯಸ್ಸಿನ ವರ್ಮಾ ಐಪಿಎಲ್‌ನಲ್ಲಿ ಮುಂಬೈ ಇಂಡಿಯಾ ತಂಡಕ್ಕೆ ಆಡಿದ್ದರು. ಭಾರತ ತಂಡದ ಪರ 25 ಟಿ20 ಮತ್ತು ನಾಲ್ಕು ಏಕದಿನ ಪಂದ್ಯಗಳಲ್ಲಿ ಆಡಿದ್ದಾರೆ. ಕ್ರಮವಾಗಿ 749 ಮತ್ತು 68 ರನ್ ಗಳಿಸಿದ್ದಾರೆ.

18 ಮೊದಲ ದರ್ಜೆ ಪಂದ್ಯಗಳಲ್ಲಿ ಆಡಿದ್ದು 50.16 ಸರಾಸರಿಯಲ್ಲಿ 1,204 ರನ್ ಗಳಿಸಿದ್ದಾರೆ. ಇದರಲ್ಲಿ ಐದು ಶತಕ, ನಾಲ್ಕು ಅರ್ಧ ಶತಕಗಳು ಸೇರಿವೆ.

'ಅವಿಸ್ಮರಣೀಯ ಪ್ರವಾಸದ ಆಶಯ'

ಬೆಕೆನ್‌ಹ್ಯಾಮ್, ಇಂಗ್ಲೆಂಡ್ (ಪಿಟಿಐ): ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ಆರ್. ಅಶ್ವಿನ್ ಅವರಂತಹ ಅನುಭವಿ ಆಟಗಾರರಿಲ್ಲದೇ ಕಣಕ್ಕಿಳಿಯಲಿರುವ ಭಾರತ ತಂಡವು, ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ 'ಸ್ಮರಣೀಯ ಸಾಧನೆ' ಮಾಡಲಿದೆ ಎಂದು ಮುಖ್ಯ ಕೋಚ್ ಗೌತಮ್ ಗಂಭೀರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಗೌತಮ್ ಗಂಭೀರ್

'ಈ ಸರಣಿಯನ್ನು ನಾವು ಎರಡು ಆಯಾಮಗಳಲ್ಲಿ ನೋಡಬಹುದು. ಮೊದಲನೆಯದು; ಮೂವರು ಅತ್ಯಂತ ಅನುಭವಿ ಆಟಗಾರರಿಲ್ಲದೇ ಆಡುತ್ತಿರುವ ಪಂದ್ಯ, ಎರಡನೆಯದು; ಪ್ರಸ್ತುತ ತಂಡದಲ್ಲಿರುವ ಆಟಗಾರರಿಗೆ ಗಮನ ಸೆಳೆಯುವಂತಹ ಸಾಧನೆ ಮಾಡುವ ಅವಕಾಶ ಎಂದು ಕೊಂಡು ಕಣಕ್ಕಿಳಿಯುವುದಾಗಿದೆ. ಆ ಮೂಲಕ ದೇಶಕ್ಕೆ ವಿಶೇಷ ಕಾಣಿಕೆ ನೀಡುವುದು' ಎಂದು ಗಂಭೀರ್ ಅವರು ಬಿಸಿಸಿಐ ಡಾಟ್ ಟಿವಿಗೆ ತಿಳಿಸಿದ್ದಾರೆ.

'ನಾನು ಗಮನಿಸಿದಂತೆ; ಈ ತಂಡದಲ್ಲಿರುವವರಿಗೆ ಸಾಧನೆಯ ಹಸಿವು ಅಪಾರವಾಗಿದೆ. ಈ ಆಟಗಾರರಲ್ಲಿ ಬದ್ಧತೆ ಮತ್ತು ಅಪಾರ ಆಸಕ್ತಿ ತುಂಬಿದೆ. ಆದರೆ 'ಆರಾಮ ವಲಯ'ದಿಂದ ಹೊರಬರಬೇಕು. ಕಠಿಣ ಶ್ರಮಪಡಬೇಕು. ಆ ಮೂಲಕ ಈ ಪ್ರವಾಸವನ್ನು ಅವಿಸ್ಮರಣೀಯಗೊಳಿಸಬಹುದು' ಎಂದು ಹೇಳಿದರು.

ಮೆಕಿಂತೋಷ್ ಮತ್ತೊಂದು ವಿಶ್ವದಾಖಲೆ

ಮಾಂಟ್ರಿಯಲ್ (ಎಎಫ್‌ಪಿ): ಈಜು ತಾರೆ ಸಮ್ಮರ್ ಮೆಕಿಂತೋಷ್ ಅವರು ಆರು ದಿನಗಳಲ್ಲಿ ಮೂರನೇ ವಿಶ್ವದಾಖಲೆ ಸ್ಥಾಪಿಸಿದರು. ವಿಕ್ಟೋರಿಯಾದಲ್ಲಿ ನಡೆಯುತ್ತಿರುವ ಕೆನಡಿಯನ್ ಈಜು ಟ್ರಯಲ್ಸ್‌ನ 400 ಮೀ. ಮೆಡ್ಲೆ ಸ್ಪರ್ಧೆಯನ್ನು ಅವರು 4ನಿ.23.65 ಸೆ.ಗಳಲ್ಲಿ ಕ್ರಮಿಸಿ ತಮ್ಮದೇ ದಾಖಲೆಯನ್ನು ಸುಧಾರಿಸಿದರು.


ಮೆಕಿಂತೋಷ್

ಮೂರು ಬಾರಿ ಒಲಿಂಪಿಕ್ ಸ್ವರ್ಣ ಗೆದ್ದಿರುವ 18 ವರ್ಷ ವಯಸ್ಸಿನ ಈ ಪ್ರತಿಭಾನ್ವಿತೆ, ಮುಂದಿನ ತಿಂಗಳು ಸಿಂಗಪುರದಲ್ಲಿ ನಡೆಯಲಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ಗೆ ಭರ್ಜರಿಯಾಗಿ ಸಜ್ಜಾಗಿದ್ದಾರೆ.

ಸಮ್ಮರ್ ಈ ಹಿಂದಿನ (4:24.38) ದಾಖಲೆಯನ್ನು 2024ರ ಮೇ ತಿಂಗಳಲ್ಲಿ ಟೊರಾಂಟೊದಲ್ಲಿ ನಡೆದ ಕೆನಡಿಯನ್ ಒಲಿಂಪಿಕ್ ಟ್ರಯಲ್ಸ್‌ನಲ್ಲಿ ಸ್ಥಾಪಿಸಿದ್ದರು.

ಅವರು ಸರಾಗವಾಗಿ ಈಜಿದರು. ಮೆಡ್ಲೆ ಸ್ಪರ್ಧೆಯ ಮೊದಲ ಭಾಗವಾದ ಬಟರ್‌ಫ್ಲೈ ಲೆಗ್‌ಅನ್ನು ವಿಶ್ವದಾಖಲೆ ಅವಧಿಯಲ್ಲಿ ಪೂರೈಸಿದರು. ಸ್ಪರ್ಧೆಯ ಅರ್ಧಭಾಗ ಮುಗಿದಾಗ ವಿಶ್ವದಾಖಲೆಗಿಂತ ಒಂದು ಸೆಕೆಂಡಿಗಿಂತ ಮುನ್ನಡೆ ಸಾಧಿಸಿದ್ದರು. ಕೊನೆಯ ಭಾಗವಾದ ಫ್ರೀಸ್ಟೈಲ್ ಈಜನ್ನು ಶರವೇಗದಲ್ಲಿ ಮುಗಿಸಿದರು.

ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಅಭಿನವ್, ವೇದಲಕ್ಷ್ಮಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿನವ್ ಕೆ.ಮೂರ್ತಿ ಅವರು ತೀವ್ರ ಹೋರಾಟದ ಪಂದ್ಯದಲ್ಲಿ ವಿಭಾಸ್ ವಿ.ಜಿ. ಅವರನ್ನು ಸೋಲಿಸಿ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಗುರುವಾರ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ವೇದಲಕ್ಷ್ಮಿ ಡಿ.ಕೆ. ಅವರ ಪಾಲಾಯಿತು.

19 ವರ್ಷದೊಳಗಿನವ ಸಿಂಗಲ್ಸ್‌ನಲ್ಲಿ ಬುಧವಾರ ಚಾಂಪಿಯನ್ ಆಗಿದ್ದ ಅಭಿನವ್, ವಿ.ವಿ.ಪುರಂನ ಮ್ಯಾಚ್ ಪಾಯಿಂಟ್ ಅಕಾಡೆಮಿಯಲ್ಲಿ ನಡೆದ

ವೇದಲಕ್ಷ್ಮಿ ಡಿ.ಕೆ.

ಅಭಿನವ್ ಕೆ.ಎಂ.

ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ವಿಭಾಸ್ ಅವರನ್ನು 9-11, 11-7, 9-11, 9-11, 11-9, 11-7, 13-11 ರಿಂದ ಸೋಲಿಸಿದರು.

ಸೆಮಿಫೈನಲ್‌ನಲ್ಲಿ ಪಂದ್ಯಗಳಲ್ಲಿ ವಿಭಾಸ್ 11-7, 10-12, 6-11, 11-7, 7-11, 11-7, 13-11 ರಿಂದ ಆಕಾಶ್ ಕೆ.ಜೆ. ಅವರನ್ನು ಸೋಲಿಸಿದರೆ, ಅಭಿನವ್ 11-5, 11-5, 11-9, 11-7 ರಿಂದ ಕೆ.ಕಲೈವಣ್ಣನ್ ಅವರನ್ನು ಹಿಮ್ಮೆಟ್ಟಿಸಿದರು.

ಮಹಿಳೆಯ ಸಿಂಗಲ್ಸ್ ಫೈನಲ್‌ನಲ್ಲಿ ವೇದಲಕ್ಷ್ಮಿ 9-11, 14-12, 12-10, 11-5, 11-9 ರಿಂದ ಖುಷಿ ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ವೇದಲಕ್ಷ್ಮಿ 11-7, 7-11, 11-9, 3-11, 11-4, 11-5 ರಿಂದ ಹಿಮಾನ್ವಿ ಚೌಧರಿ ವಿರುದ್ಧ; ಖುಷಿ 8-11, 10-12, 6-11, 11-9, 12-10, 11-9, 11-8 ರಿಂದ ನೀತಿ ಅಗರವಾಲ್ ವಿರುದ್ಧ ಜಯಗಳಿಸಿದ್ದರು.

ಐಎಸ್‌ಎಸ್‌ಎಫ್ ವಿಶ್ವಕಪ್: ಅಶಿ ಚೋಕ್ಸಿಗೆ 11ನೇ ಸ್ಥಾನ

ರೈಫಲ್ 3ಪಿ: ಸಿಫ್ತ್ ಕೌರ್‌ಗೆ ಕಂಚು

ಮ್ಯೂನಿಕ್ (ಪಿಟಿಐ): ಭಾರತದ ಶೂಟಿಂಗ್ ತಾರೆ ಸಿಫ್ತ್ ಕೌರ್ ಸಮ್ರಾ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಗುರುವಾರ ಕಂಚಿನ ಪದಕ ಗೆದ್ದುಕೊಂಡರು.

ಎಂಟು ಶೂಟರ್‌ಗಳಿದ್ದ ಪ್ರಬಲ ಫೈನಲ್ ಕಣದಲ್ಲಿ 23 ವರ್ಷ ವಯಸ್ಸಿನ ಸಮ್ರಾ 453.1 ಸ್ಕೋರ್ ಮಾಡಿದರು. ಈ ಸ್ಪರ್ಧೆಯ ವಿಶ್ವದಾಖಲೆ, ಪಂಜಾಬ್‌ನ ಫರೀದ್‌ಕೋಟ್‌ನವರಾದ ಸಿಫ್ತ್ ಅವರ ಹೆಸರಿನಲ್ಲೇ ಇದೆ. 2022ರ ಏಷ್ಯನ್ ಕ್ರೀಡೆಗಳಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ ಅವರು ಈ ವಿಶ್ವದಾಖಲೆ ಸ್ಥಾಪಿಸಿದ್ದರು.

ಸಿಫ್ತ್ ಕೌರ್ ಸಮ್ರಾ

ನಾರ್ವೆಯ ಜೆನೆಟ್ ಹೆಗ್ ದುಸ್ತಾದ್ 466.9 ಸ್ಕೋರ್‌ನೊಡನೆ ಚಿನ್ನದ ಪದಕ ಗೆದ್ದರೆ, ಸ್ವಿಜರ್ಲೆಂಡ್‌ನ ಎಮಿಲಿ ಜೇಗ್ಗಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಎಮಿಲಿ ಕ್ವಾಲಿಫಿಕೇಷನ್ ಸುತ್ತಿನಲ್ಲಿ 9ನೇ ಸ್ಥಾನ ಪಡೆದಿದ್ದರು. ಆದರೆ ಅಗ್ರ ಎಂಟರಲ್ಲಿದ್ದ ಇಬ್ಬರು ಶೂಟರ್‌ಗಳು ರ‍್ಯಾಂಕಿಂಗ್ ಪಾಯಿಂಟ್‌ಗಾಗಿ ಮಾತ್ರ ಕಣದಲ್ಲಿರುವುದಾಗಿ ತಿಳಿಸಿದ ಕಾರಣ ಅವರಿಗೆ ಅವಕಾಶವಾಯಿತು. ಕ್ವಾಲಿಫಿಕೇಷನ್‌ನಲ್ಲಿ ಸಿಫ್ತ್ ಅವರು 592 ಸ್ಕೋರ್ ಗಳಿಸಿ ಎರಡನೇ ಸ್ಥಾನದಲ್ಲಿದ್ದರು. ಕರಾರುವಾಕ್ ಶೂಟ್ ಮಾಡಿದ್ದ ಫ್ರಾನ್ಸ್‌ನ ಅಗಾಥ ಸಿಸಿಲ್ ಕ್ಯಾಮಿಲೆ ಗಿರಾರ್ಡ್ ಅಗ್ರಸ್ಥಾನ ಪಡೆದಿದ್ದರು.

2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಿರಾಸೆ ಅನುಭವಿಸಿದ್ದ ಸಿಫ್ತ್ ಕೌರ್ ಅವರು ಈ ವರ್ಷದ ಆರಂಭದಲ್ಲಿ ಬ್ಯೂನೊ ಏರ್ಸ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗೆದ್ದು ಋತುವನ್ನು ಉತ್ತಮ ರೀತಿ ಆರಂಭಿಸಿದ್ದರು.

ಕಣದಲ್ಲಿದ್ದ ಭಾರತದ ಅಶಿ ಚೋಕ್ಸಿ (589) ಅವರು 11ನೇ ಸ್ಥಾನ ಪಡೆದರೆ, ಅಂಜುಮ್ ಮೌದ್ಗಿಲ್ (586) 27ನೇ ಸ್ಥಾನ ಮತ್ತು ಶ್ರೀಯಾಂಕ ಸದಂಗಿ (582) 53ನೇ ಸ್ಥಾನ ಗಳಿಸಿದರು.